ಶನಿವಾರ, ಜನವರಿ 24, 2026 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗಾಫ್ ಮುನ್ನಡೆ

ಅಮೆರಿಕದ ಕೊಕೊ ಗಾಫ್ 3–6, 6–0, 6–3ರಿಂದ ಸ್ವದೇಶದ ಹೇಲ್ಲಿ ಬ್ಯಾಪ್ಟಿಸ್ಟ್ ಅವರನ್ನು ಮಣಿಸಿ, ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿದರು

ಪ್ರತಿಭಟನೆ

ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳ ನೇಮಕವನ್ನು ಹಿಂಪಡೆದು ಹಾಲಿ ಇರುವ ಆಡಳಿತ ಮಂಡಳಿಯನ್ನು ಮುಂದುವರಿಸುವಂತೆ ಕೋರಿ ಮೈಸೂರಿನಲ್ಲಿ ಪ್ರತಿಭಟನೆ ನಡೆಯಿತು

ಸಾಧಕರಿಗೆ 'ಡಿ.ಎಚ್ ಚೇಂಜ್ ಮೇಕರ್ಸ್' ಪ್ರಶಸ್ತಿ

ಪ್ರಶಸ್ತಿಗೆ ಎಲೆಮರೆ ಕಾಯಿಯಂತಿದ್ದವರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ 15 ಸಾಧಕರಿಗೆ 'ಡೆಕ್ಕನ್ ಹೆರಾಲ್ಡ್ (ಡಿಎಚ್) ಚೇಂಜ್‌ಮೇಕರ್ಸ್ 2026' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಿಕ್ಷಣ, ರಂಗಭೂಮಿ, ಗ್ರಾಮೀಣಾಭಿವೃದ್ಧಿ, ಕ್ರೀಡೆ, ಆರೋಗ್ಯ, ಸಿನಿಮಾ ಸೇರಿ ವಿವಿಧ ಕ್ಷೇತ್ರಗಳ ಸಾಧಕರು ಡೆಕ್ಕನ್ ಹೆರಾಲ್ಡ್ ಚೇಂಜ್‌ಮೇಕರ್ಸ್ ಎಂಟನೇ ಆವೃತ್ತಿಯ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿಯು ಬೆಳ್ಳಿ ಫಲಕ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಸಮಸ್ಯೆ, ಸವಾಲುಗಳ ಮೀರಿ ನಿಂತು ತಮ್ಮ ಕ್ಷೇತ್ರದಲ್ಲಿ ಮಾಡಿರುವ ಕೆಲಸದ ಬಗ್ಗೆ ಸಾಧಕರು ತಮ್ಮ ಮನದಾಳದ ಭಾವನೆಗಳನ್ನು ಹಂಚಿಕೊಂಡರು. ಎಲೆಮರೆಯ ಕಾಯಿಯಂತೆ ಇದ್ದೂ ಪುರಸ್ಕೃತರಾದವರ ಸಾಧನೆಗೆ ಅವರ ಸ್ನೇಹಿತರು, ಕುಟುಂಬ ಸದಸ್ಯರು ಮತ್ತು ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಾಕದಂಬ ಆರ್ಟ್ ಸೆಂಟರ್‌ನ ವಿದ್ಯಾರ್ಥಿಗಳ ಯಕ್ಷಗಾನ ಪ್ರದರ್ಶನ ಸಮಾರಂಭದ ಮೆರುಗು ಹೆಚ್ಚಿಸಿತು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕಿ ವಿಜಯಲಕ್ಷ್ಮೀ ದೇಶಮಾನೆ ಮಾತನಾಡಿ, 'ಬಹಳಷ್ಟು ಜನರು ತಾವಿರುವ ಸ್ಥಳದಲ್ಲೇ ಅತ್ಯುತ್ತಮ ಕೆಲಸ ಮಾಡುತ್ತಿರುತ್ತಾರೆ. ಇಂತಹವರಿಂದಲೇ ಜಗತ್ತು ಸುಂದರವಾಗಿದೆ' ಎಂದು ಅಭಿಪ್ರಾಯಪಟ್ಟರು.

'ನಾವು ವೈದ್ಯ ವೃತ್ತಿಯಲ್ಲಿ ಬಡ್ತಿ ಮತ್ತು ಇತರೆ ಸೌಲಭ್ಯ ಬಯಸುತ್ತೇವೆ. ಆದರೆ, ನಮ್ಮ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಶುಶ್ರೂಷಕರು ಹಾಗೂ ಮತ್ತಿತರರು ದೀರ್ಘಕಾಲ ಕೆಲಸ ಮಾಡಿದರೂ ಬಡ್ತಿ, ಸೌಲಭ್ಯ ಇರುವುದಿಲ್ಲ. ಆದರೂ ತಮ್ಮ ಕೆಲಸವನ್ನು ತತ್ಪರತೆಯಿಂದ ಮಾಡುತ್ತಿದ್ದಾರೆ' ಎಂಬುದನ್ನು ನೆನಪಿಸಿಕೊಂಡರು.

ಬಿಬಿಸಿ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಅಧ್ಯಕ್ಷರೂ ಆದ ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್, 'ಬಡ ಕುಟುಂಬದಲ್ಲಿ ಹುಟ್ಟಿ, ಹೊರಗಿನ ಜಗತ್ತಿಗೆ ತೋರಿಸಿಕೊಳ್ಳದಂತೆ ತಮ್ಮ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ನೆರೆಹೊರೆಯವರಿಗೂ ಪ್ರತಿಫಲಾಪೇಕ್ಷೆ ಇಲ್ಲದೆ ಸಹಾಯ ಮಾಡಿದ್ದಾರೆ. ಕಠಿಣ ಹಾದಿಯಲ್ಲಿ ಸಾಗಿ ಬಂದು ತಮ್ಮ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಸಾಧಕರು, ಮತ್ತೊಬ್ಬರಿಗೆ ಪ್ರೇರಣೆಯಾಗಿದ್ದಾರೆ' ಎಂದರು.

ಚೇಂಜ್ ಮೇಕರ್ಸ್ ಯಾರು?

ಅದಿತಿ ಸೌಮ್ಯಾನಾರಾಯಣ್, ಅನುಪಮಾ ಬೆಣಚಿನಮರಡಿ, ಕೆ.ಆರ್.ಅರ್ಚನಾ, ಆರ್ಶಿಯಾ ಬೋಸ್, ಅರುಂಧತಿ ಮಂಡ್ಯ, ರೋಹನ್ ಆರ್.ಸುವರ್ಣ–ತನ್ವಿ ಜಗದೀಶ್, ಭುವನೇಶ್ವರಿ ಕಾಂಬಳೆ, ಜಬಿನಾ ಖಾನಂ, ಕಾರ್ತಿಕ್ ಸುನಗಾರ್, ಕೆ.ಎಸ್. ಮಧುಸೂದನ್, ನವೀನ್ ತೇಜಸ್ವಿ, ಜಿ.ಬೇಬಿ, ಸದಾಶಿವ ಹೈದ್ರ, ಶಕೀಲ್ ಅಹಮದ್, ಎಸ್.ಆರ್.ಅಯಾನ್

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಸಾಧಕರಿಗೆ ಡೆಕ್ಕನ್ ಹೆರಾಲ್ಡ್ ಚೇಂಜ್ ಮೇಕರ್ಸ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ವನಮಾಲಾ ವಿಶ್ವನಾಥ್, ಎಲ್.ಕೆ.ಅತೀಕ್, ಕ್ರಿಸ್ ಗೋಪಾಲಕೃಷ್ಣನ್, ಎಂ.ಎಸ್.ಶ್ರೀರಾಮ್, ವಿಜಯಲಕ್ಷ್ಮೀ ದೇಶಮಾನೆ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

> **ಡಿ.ಎಚ್.ಚೇಂಜ್ ಮೇಕರ್ಸ್ ಪ್ರಶಸ್ತಿ ಬಂದಿದೆ ಎಂದರೆ ನಾನು ಮಾಡುವ ಕೆಲಸ ಸರಿ ಇದೆ ಎಂದರ್ಥ. ಪ್ರಶಸ್ತಿಯು ಸಂತೋಷದ ಜತೆಗೆ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ**
> **ನವೀನ್ ತೇಜಸ್ವಿ,** ನಿರ್ದೇಶಕ

> **ನಾವು ಯಾವ ಕೆಲಸವನ್ನು ಶ್ರದ್ಧೆ, ಪ್ರಾಮಾಣಿಕವಾಗಿ ಮಾಡುತ್ತೇವೆಯೋ ಅದೇ ನಿಜವಾದ ಕ್ರಾಂತಿ. ಸಾಧಕರು ತಮ್ಮ ಕೆಲಸದ ಮೂಲಕ ಕ್ರಾಂತಿ ಮಾಡಿದ್ದಾರೆ**
> **ಶಕೀಲ್ ಅಹಮದ್,** ಕಲಾವಿದ

> **ಪ್ರತಿ ಮಗುವಿಗೂ ಉತ್ತಮ ಶಿಕ್ಷಣ ದೊರಕಬೇಕು. ಹಣವಿದ್ದವರಿಗೆ ಒಂದು ಶಿಕ್ಷಣ, ಹಣವಿಲ್ಲದವರಿಗೆ ಒಂದು ಶಿಕ್ಷಣ ದೊರೆಯುತ್ತಿರುವುದು ಸರಿಯಲ್ಲ**
> **ಕೆ.ಎಸ್.ಮಧುಸೂದನ್,** ಶಿಕ್ಷಕ

> **ಕಾಡಿನಿಂದ ನಾಡಿಗೆ ಬಂದು ಶಿಕ್ಷಣ ಕಲಿತ ಪರಿಣಾಮ ಇಂದು ನಮ್ಮ ಸಮುದಾಯ (ಸೋಲಿಗ) ಜನರಿಗೆ ಆರೋಗ್ಯ ಸೇವೆ ಒದಗಿಸಲು ಸಾಧ್ಯವಾಗಿದೆ**
> **ಜಿ.ಬೇಬಿ,** ಶುಶ್ರೂಷಕಿ

ತೀರ್ಪುಗಾರರಾದ ಪ್ರಾಧ್ಯಾಪಕ ಎಂ.ಎಸ್.ಶ್ರೀರಾಮ್, ಅನುವಾದಕಿ ವನಮಾಲಾ ವಿಶ್ವನಾಥ್, ಎಲ್.ಕೆ.ಅತೀಕ್, ವಿಜಯಲಕ್ಷ್ಮೀ ದೇಶಮಾನೆ ಅವರೊಂದಿಗೆ 'ಡೆಕ್ಕನ್ ಹೆರಾಲ್ಡ್' ಸಹ ಸಂಪಾದಕ ಎಸ್.ಆರ್.ರಾಮಕೃಷ್ಣ, ಸುದ್ದಿ ಸಂಪಾದಕಿ ಅನಿತಾ ಪೈಲೂರು ಅವರು ಸಂವಾದ ನಡೆಸಿದರು.

ಮುಖ್ಯ ಅತಿಥಿಯಾಗಿದ್ದ ಉದ್ಯಮಿ ಕ್ರಿಸ್ ಗೋಪಾಲಕೃಷ್ಣನ್ ಮಾತನಾಡಿ, 'ಸಾಧನೆ ಮೂಲಕ 'ಡೆಕ್ಕನ್ ಹೆರಾಲ್ಡ್ ಚೇಂಜ್ ಮೇಕರ್ಸ್' ಪ್ರಶಸ್ತಿ ಪಡೆದಿರುವ ಸಾಧಕರು, ಯುವ ಜನರಿಗೆ ಪ್ರೇರಣೆಯಾಗಿದ್ದಾರೆ. ಸವಾಲು, ಸಮಸ್ಯೆಗಳ ನಡುವೆಯೂ ತಮ್ಮ ಕೆಲಸವನ್ನು ಮುಂದುವರೆಸಿ, ಯಶಸ್ಸು ಸಾಧಿಸಬೇಕು' ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ನಿರ್ದೇಶಕರಾದ ಕೆ.ಎನ್. ಶಾಂತಕುಮಾರ್, ಚೈತನ್ಯ ನೆಟ್ಟಕಲ್ಲಪ್ಪ, ಸೌಭಾಗ್ಯಲಕ್ಷ್ಮಿ ಕೆ.ಟಿ, 'ಡೆಕ್ಕನ್ ಹೆರಾಲ್ಡ್' ಕಾರ್ಯನಿರ್ವಾಹಕ ಸಂಪಾದಕ ಸುಬ್ರಹ್ಮಣ್ಯ, 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪಾಲ್ಗೊಂಡಿದ್ದರು.

ಸುದ್ದಿ 2 ನಿಮಿಷ

'ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಆತುರದ ಕ್ರಮ ಬೇಡ'

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಉಪ್ಪಳಿಗೆಯಲ್ಲಿ ನಡೆದ ದೀಪೋತ್ಸವ ಕಾರ್ಯಕ್ರಮದಲ್ಲಿ ಕೋಮು ದ್ವೇಷದ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಡಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಆತುರದ ಕ್ರಮ ಕೈಗೊಳ್ಳಬಾರದು ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ನೀಡಲಾಗಿರುವ ದೂರು ಹಾಗೂ ಪುತ್ತೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಡಾ.ಪ್ರಭಾಕರ ಭಟ್ (83) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ಕಲ್ಲಡ್ಕ ಪ್ರಭಾಕರ ಭಟ್ ಮಾತನಾಡಿದ್ದಾರೆ ಎನ್ನಲಾದ ಸಂಪೂರ್ಣ ಭಾಷಣದ ಪ್ರತಿಲಿಪಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದಕ್ಕೆ ಪ್ರತಿಯಾಗಿ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಆಸ್ಮಾ ಕೌಸರ್ ಕೂಡಾ 42 ನಿಮಿಷಗಳ ಭಾಷಣದ ವಿಡಿಯೊ ಒಳಗೊಂಡ ಪೆನ್ ಡ್ರೈವ್ ಅನ್ನು ನ್ಯಾಯಪೀಠಕ್ಕೆ ಒದಗಿಸಿದರು.



ಎರಡನ್ನೂ ಸ್ವೀಕರಿಸಿದ ನ್ಯಾಯಪೀಠ, ಭಾಷಣವನ್ನು ಪರಿಶೀಲಿಸಿದ ಬಳಿಕ ಅರ್ಜಿ ವಿಚಾರಣೆ ನಡೆಸುವುದಾಗಿ ತಿಳಿಸಿ, ವಿಚಾರಣೆಯನ್ನು ಫೆಬ್ರುವರಿ 5ಕ್ಕೆ ಮುಂದೂಡಿತು. ಅಂತೆಯೇ, 'ಅಲ್ಲಿಯವರೆಗೂ ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದು' ಎಂದು ಪುತ್ತೂರು ಗ್ರಾಮೀಣ ಪೊಲೀಸರಿಗೆ ನಿರ್ದೇಶಿಸಿತು.

ಚಂದನದಲ್ಲಿ 'ಮತದಾರ ಪ್ರಭುಗಳು' ಪ್ರಸಾರ ನಾಳೆ

ಬೆಂಗಳೂರು: ರಾಷ್ಟ್ರೀಯ ಮತದಾರರ ದಿನಾಚರಣೆಯ ಪ್ರಯುಕ್ತ ಸಮಾಜ ಕಲ್ಯಾಣ ಇಲಾಖೆ ಪ್ರಾಯೋಜಿಸಿರುವ 'ಮತದಾರ ಪ್ರಭುಗಳು' ಎಂಬ ಕನ್ನಡ ಸಿನಿಮಾ ಜ. 25ರಂದು ಮಧ್ಯಾಹ್ನ 2ರಿಂದ 4.30ರವರೆಗೆ ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾಗಲಿದೆ.

'ಈ ಸಿನಿಮಾವು ಮತದಾರರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಿರ್ಮಾಣಗೊಂಡಿರುವುದರಿಂದ ಇಲಾಖೆಯ ವತಿಯಿಂದ ಪ್ರಸಾರ ಮಾಡಲಾಗುತ್ತಿದೆ' ಎಂದು ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನ್ಯಾಯಸಮ್ಮತ ಚುನಾವಣೆಗಳ ಕುರಿತಂತೆ ಸಂವಿಧಾನ ವ್ಯಕ್ತಪಡಿಸಿರುವ ಆಶಯಗಳ ಮೇಲೆ ಈ ಸಿನಿಮಾ ಬೆಳಕು ಚೆಲ್ಲಿದೆ. ಅಲ್ಲದೆ, ಹದಗೆಟ್ಟಿರುವ ರಾಜಕೀಯ ವ್ಯವಸ್ಥೆಯನ್ನು ಪರಿಶುದ್ಧಗೊಳಿಸಬೇಕಾದ ಜವಾಬ್ದಾರಿ ಯಾರ ಮೇಲಿದೆ? ಹೇಗೆ ಸ್ವಚ್ಛಗೊಳಿಸಬೇಕು ಎಂಬ ಅಂಶಗಳ ಬಗ್ಗೆಯೂ ಸಿನಿಮಾದಲ್ಲಿ ಚರ್ಚಿಸಲಾಗಿದೆ' ಎಂದು ನಿರ್ದೇಶಕ ಎಚ್. ಅನಂತರಾಯಪ್ಪ ಹೇಳಿದ್ದಾರೆ.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನೆ

'ಅಗೌರವ ತೋರಿದವರ ವಿರುದ್ಧ ಏನು ಕ್ರಮ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಪಾಲರಿಗೆ ಅಗೌರವ ತೋರಿಸಿರುವ ಕಾಂಗ್ರೆಸ್ ಸದಸ್ಯರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು. ಈ ಹಿಂದೆ ನಮ್ಮ 18 ಶಾಸಕರು ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿಸಿದರೆಂದು ಅಮಾನತು ಮಾಡಲಾಗಿತ್ತು. ಈಗ ರಾಜ್ಯಪಾಲರಿಗೆ ಅಗೌರವ ತೋರಿದವರ ವಿರುದ್ಧ ಏನು ಕ್ರಮ? ಸಭಾಧ್ಯಕ್ಷರು ಇಂದೇ ರೂಲಿಂಗ್ ನೀಡಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ರಾಜ್ಯಪಾಲರು ವಿವೇಚನೆಯಿಂದಲೇ ಭಾಷಣ ಮಾಡಿದ್ದಾರೆ. ಆದರೆ, ಎಚ್.ಕೆ. ಪಾಟೀಲರು, 'ರಾಜ್ಯಪಾಲರು ಓಡಿ ಹೋದರು' ಎಂದಿದ್ದು ಸರಿಯಲ್ಲ. ರಾಷ್ಟ್ರಗೀತೆ ಆರಂಭವಾಗುತ್ತಿದ್ದರೆ ಅವರು ಸದನದಲ್ಲಿ ಇರುತ್ತಿದ್ದರು' ಎಂದೂ ಸಮರ್ಥಿಸಿದರು.

'ಅಧಿಕಾರದಲ್ಲಿರುವ ಯಾರೂ ಶಾಶ್ವತವಲ್ಲ. ತಪ್ಪು ಮಾಡಿದವರ ವಿರುದ್ಧ ಕ್ರಮ ಆಗಿಲ್ಲವೆಂದರೆ ಅಪರಾಧ ಆಗುತ್ತದೆ. ಸಭಾಧ್ಯಕ್ಷರೇ, ನೀವು ಅಪರಾಧಿ ಆಗಬೇಕಾಗುತ್ತದೆ. ಈ ಘಟನೆಯನ್ನು ಇಡೀ ಸದನ ಖಂಡಿಸಿ, ವಿಷಾದ ವ್ಯಕ್ತಪಡಿಸಬೇಕು' ಎಂದೂ ಒತ್ತಾಯಿಸಿದರು.

ಬಿಜೆಪಿಯ ಸಿ.ಎನ್. ಅಶ್ವತ್ಥ ನಾರಾಯಣ, ಸುನಿಲ್ ಕುಮಾರ್, ಎಸ್. ಸುರೇಶ್ ಕುಮಾರ್, ಆರಗ ಜ್ಞಾನೇಂದ್ರ, ಅರವಿಂದ ಬೆಲ್ಲದ, ಸುರೇಶ್ ಗೌಡ ಮತ್ತಿತರರೂ ದನಿಗೂಡಿಸಿದರು. 'ಅನುಚಿತ ವರ್ತನೆ ತೋರಿಸಿದ ಸದಸ್ಯರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು. ಮಾತಿನ ಭರದಲ್ಲಿ ಸುನೀಲ್ ಕುಮಾರ್, 'ಇದು ಗೂಂಡಾ ಸರ್ಕಾರ' ಎಂದಿದ್ದು ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು. ಈ ವೇಳೆ ಸದನದಲ್ಲಿ ಜಟಾಪಟಿ ಹೆಚ್ಚಾಯಿತು.

ವಿಧಾನ ಪರಿಷತ್ ಕಲಾಪದಲ್ಲಿ ವಿರೋಧ ಪಕ್ಷದ ಸದಸ್ಯರು ಸಚಿವ ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಘೋಷಣೆ ಕೂಗಿದರು

ವಿಧಾನಮಂಡಲ ಅಧಿವೇಶನ

ಕಾಂಗ್ರೆಸ್‌ನ ಶಿವಲಿಂಗೇಗೌಡ, 'ರಾಜ್ಯಪಾಲರು ಪೂರ್ಣ ಭಾಷಣ ಓದಲಿಲ್ಲ ಹೋಗಲಿ, ರಾಷ್ಟ್ರಗೀತೆ ಹಾಡುವುದಕ್ಕೂ ಮೊದಲೇ ಹೋದರು. ರಾಜ್ಯಪಾಲರ ಮೇಲೆ ಮೊದಲು ಕ್ರಮ ಆಗಬೇಕು' ಎಂದರು. 'ರಾಜ್ಯಪಾಲರು ನಡೆದುಕೊಂಡಿದ್ದು ಸರಿಯೇ' ಎಂದು ಕಾಂಗ್ರೆಸ್‌ನ ಎಚ್.ಸಿ. ಬಾಲಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲರ ಕುರಿತ ತಮ್ಮ ಮಾತನ್ನು ಸಮರ್ಥಿಸಿಕೊಂಡ ಎಚ್.ಕೆ. ಪಾಟೀಲ, 'ಸಂವಿಧಾನ ಮತ್ತು ಕಾನೂನಿಗಿಂತ ರಾಜ್ಯಪಾಲರೂ ಮೇಲಲ್ಲ. ರಾಜ್ಯಪಾಲರು ಭಾಷಣ ಓದದೇ ಸಂವಿಧಾನದ 176(1)ನೇ ವಿಧಿ ಉಲ್ಲಂಘಿಸಿದ್ದಾರೆ. ರಾಷ್ಟ್ರಗೀತೆಗೂ ಮೊದಲೇ ಸದನದಿಂದ ತೆರಳಿ ಅವಮಾನ ಮಾಡಿದ್ದಾರೆ. ನಾನು ಅವರನ್ನು ತಡೆದಿಲ್ಲ. ರಾಜ್ಯಪಾಲರಿಗೆ ನಾನೂ ಅಡ್ಡಿ ಮಾಡಿದ್ದೇನೆ ಎನ್ನುವ ಅಶೋಕ ಆರೋಪ ಸರಿಯಲ್ಲ' ಎಂದರು.

'ರಾಜ್ಯಪಾಲರ ನಡೆ ಇಡೀ ದೇಶದಲ್ಲಿ ಚರ್ಚೆಯಾಗುತ್ತಿದೆ. ಬಿಜೆಪಿಯೇತರ ಆಡಳಿತವಿರುವ ಸರ್ಕಾರಗಳಲ್ಲಿ ಈ ರೀತಿ ಆಗುತ್ತಿದೆ. ರಾಜ್ಯಪಾಲರು ಹೇಗೆ ಸಂವಿಧಾನ ಉಲ್ಲಂಘಿಸಿದ್ದಾರೆ, ರಾಜ್ಯಪಾಲರ ಕಚೇರಿಗೆ ಕೇಂದ್ರ ದಿಂದ ಎಷ್ಟು ಕರೆ ಬಂದಿದೆ ಎಂದೂ ನಾನು ಮಾತನಾಡಬಲ್ಲೆ. ರಾಜಭವನ, ರಾಜ್ಯಪಾಲರನ್ನು ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದೂ ಗೊತ್ತಿದೆ. ಸತ್ಯ ಬಿಚ್ಚಿಟ್ಟರೆ ಬಿಜೆಪಿಯವರಿಗೆ ನೋವಾಗುತ್ತದೆ' ಎಂದರು.

ಆಕ್ಷೇಪ ವ್ಯಕ್ತಪಡಿಸಿದ ಎಸ್. ಸುರೇಶ್ ಕುಮಾರ್, 'ರಾಜಭವನಕ್ಕೆ ಫೋನ್ ಕರೆ ಬರುತ್ತಿದೆ ಎಂದು ಪಾಟೀಲರು ಹೇಳಿದ್ದಾರೆ. ಹಿಂದೆ ಎಚ್.ಆರ್. ಭಾರದ್ವಾಜ್ ರಾಜ್ಯಪಾಲರಾಗಿದ್ದಾಗ ಬಂದಿದ್ದ ಫೋನ್ ಕರೆಗಳೂ ಒಳಗೊಂಡಿವೆಯೇ? ಎಂದು ಪ್ರಶ್ನಿಸಿದರು.

'ರಾಜ್ಯಪಾಲರು ಮಾಡಿರುವ ಸಂವಿಧಾನ ಉಲ್ಲಂಘನೆಯನ್ನು ಮನ್ನಿಸಲು ಸಾಧ್ಯವಿಲ್ಲ. ನಾವು ರಾಜ್ಯ ಸರ್ಕಾರದವರು, ನಮ್ಮ ನೀತಿಗಳೇನು?, ಏನು ಮಾಡುತ್ತಿದ್ದೇವೆಂದು ರಾಜ್ಯಪಾಲರ ಮೂಲಕ ಕೇಂದ್ರಕ್ಕೆ ತಿಳಿಸುವ ಮಾರ್ಗವನ್ನು ಬಳಸಿಕೊಂಡಿದ್ದೇವೆ. ರಾಜ್ಯಪಾಲರನ್ನು ಮೆಚ್ಚಿಸಲು ಭಾಷಣ ಸಿದ್ಧ ಮಾಡಿಲ್ಲ. ರಾಜ್ಯಪಾಲರ ವಿರುದ್ಧ ನಾವು ಆರೋಪ ಮಾಡಿದ್ದೇವೆಯೇ, ವೈಯಕ್ತಿಕ ನಿಂದನೆ ಮಾಡಿದ್ದೇವೆಯೇ' ಎಂದು ಪ್ರಶ್ನಿಸಿದರು.

ಸಚಿವ ಬೈರತಿ ಕುರಿತ ಮಾತು: ಕಲಹಕ್ಕೆ ದಾರಿ

ಆರೋಪ – ಪ್ರತ್ಯಾರೋಪದ ನಡುವೆ ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರು ಮಾತಿನ ಭರದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರನ್ನು ಉದ್ದೇಶಿಸಿ ಆಡಿದ ಮಾತೊಂದು ಕಲಹಕ್ಕೆ ಕಾರಣವಾಯಿತು.

ಸುರೇಶ್ ಕುಮಾರ್ ಮಾತಿನಿಂದ ಕೆರಳಿದ ಬೈರತಿ ಸುರೇಶ್, ಪ್ರಿಯಾಂಕ್ ಖರ್ಗೆ ಹಾಗೂ ಕಾಂಗ್ರೆಸ್ ಸದಸ್ಯರು, ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ, 'ರಾಜ್ಯಪಾಲರ ಕುರಿತಾಗಿ ಸುರೇಶ್ ಕುಮಾರ್ ಆಡಿದ ಮಾತಿಗೆ ತಕರಾರು ಇಲ್ಲ. ಬೈರತಿ ಸುರೇಶ್ ಅವರನ್ನು ಉದ್ದೇಶಿಸಿ ಅವರು ಬಳಸಿರುವ ಪದಗಳು ಸರಿಯಲ್ಲ. ಅದನ್ನು ಕಡತದಿಂದ ತೆಗೆಯಬೇಕು. ಈ ವಿಷಯದಲ್ಲಿ ಚರ್ಚೆ ಮುಂದುವರಿಸುವುದು ಬೇಡ' ಎಂದು ಸಲಹೆ ನೀಡಿದರು. ಆ ಪದವನ್ನು ಕಡತದಿಂದ ತೆಗೆಯಲು ಸಭಾಧ್ಯಕ್ಷರು ಸೂಚಿಸಿದರು.

ಹಳಿ ತಪ್ಪಿದ ರೈಲು

ಭುವನೇಶ್ವರ (ಪಿಟಿಐ): ಗೂಡ್ಸ್ ರೈಲೊಂದರ ಮೂರು ಬೋಗಿಗಳು ಹಳಿ ತಪ್ಪಿರುವ ಘಟನೆ ಒಡಿಶಾದ ಬಾಲೇಶ್ವರದಲ್ಲಿ ಶುಕ್ರವಾರ ನಡೆದಿದೆ.

'ರುಪ್ಸಾ ರೈಲು ನಿಲ್ದಾಣದಲ್ಲಿ ಸಿಮೆಂಟ್, ರಸಗೊಬ್ಬರವನ್ನು ಇಳಿಸಿ ಹೊರಟಿದ್ದ ರೈಲಿನ 3 ಬೋಗಿಗಳು ಹಳಿ ತಪ್ಪಿವೆ. ಯಾರಿಗೂ ಗಾಯಗಳಾಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರಿಷತ್: ಪರಸ್ಪರ ಬೈದಾಡಿಕೊಂಡ ಆಡಳಿತ– ವಿಪಕ್ಷ ಸದಸ್ಯರು

ರೌಡಿ, ಬಲತ್ಕಾರಿ ಪದ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದುಂಡಾವರ್ತಿ, ಗೂಂಡಾಗಿರಿ, ಅತ್ಯಾಚಾರ, ಪೋಕ್ಸೊ, ರೌಡಿ, ಬಲತ್ಕಾರಿ ಪಾರ್ಟಿ...' ಇವುಗಳು ವಿಧಾನ ಪರಿಷತ್ತಿನ ಕಲಾಪದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಸದಸ್ಯರು ಪರಸ್ಪರರನ್ನು ಬೈದುಕೊಂಡ ಪರಿ ಇದು.

ಶುಕ್ರವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ರಾಜ್ಯಪಾಲರಿಗೆ ಕಾಂಗ್ರೆಸ್ ಸದಸ್ಯರು ಅಡ್ಡಿಪಡಿಸಿದ ವಿಷಯ ಪ್ರಸ್ತಾಪಿಸಿದರು. 'ನಮ್ಮ ಮನವಿಯನ್ನು ನಿಮಗೆ ನೀಡಿದ್ದೇವೆ. ಅದನ್ನು ಪರಿಗಣಿಸಿ' ಎಂದು ಸಭಾಪತಿ ಅವರನ್ನು ಉದ್ದೇಶಿಸಿ ಹೇಳಿದರು.

ಸಭಾಪತಿ ಬಸವರಾಜ ಹೊರಟ್ಟಿ, 'ನೀವು ಮೊದಲು ನೋಟಿಸ್ ನೀಡಿ, ಆನಂತರ ಪತ್ರ ನೀಡಿದ್ದೀರಿ. ಹೀಗಾಗಿ ನೋಟಿಸ್ ಅನ್ನು ಪರಿಗಣಿಸಲು ಸಾಧ್ಯವಿಲ್ಲ. ಪತ್ರದಲ್ಲಿರುವ ವಿಷಯವನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ' ಎಂದರು.

ಇದೇ ವೇಳೆ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರು ಕ್ರಿಯಾಲೋಪ ಪ್ರಸ್ತಾಪಿಸಿದರು. ಆಗ ನಾರಾಯಣಸ್ವಾಮಿ ಅವರು, 'ಈ ದುಂಡಾವರ್ತಿ ಇಲ್ಲಿ ನಡೆಯುವುದಿಲ್ಲ' ಎಂದು ಕೂಗಿದರು. ಬಿಜೆಪಿ ಮತ್ತು ಜೆಡಿಎಸ್ ಸದಸ್ಯರೆಲ್ಲರೂ ಎದ್ದು ನಿಂತು, 'ರೌಡಿ ಶಾಸಕರನ್ನು ಅಮಾನತು ಮಾಡಿ. ಅಲ್ಲಿಯವರೆಗೆ ಕಲಾಪ ನಡೆಯಲು ಬಿಡುವುದಿಲ್ಲ' ಎಂದರು.

ಕಾಂಗ್ರೆಸ್‌ನ ಸದಸ್ಯರು, 'ಸದನ, ಸಂವಿಧಾನ ಮತ್ತು ರಾಷ್ಟ್ರಗೀತೆಗೆ ರಾಜ್ಯಪಾಲರು ಅವಮಾನ ಮಾಡಿದ್ದು, ಈ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು. ಈ ವೇಳೆಗೆ ಎರಡೂ ಕಡೆಯ ಎಲ್ಲ ಸದಸ್ಯರು ನಿಂತು ಪರಸ್ಪರ ಬೈದುಕೊಂಡರು.

ಛಲವಾದಿ ನಾರಾಯಣಸ್ವಾಮಿ ಅವರು, 'ಈ ಗೂಂಡಾಗಿರಿಯನ್ನು ನಾವು ಸಹಿಸಿಕೊಳ್ಳುವುದಿಲ್ಲ. ಅಂತಹ ರೌಡಿ ಶಾಸಕರನ್ನು ಅಮಾನತು ಮಾಡಿ' ಎಂದು ಪಟ್ಟು ಹಿಡಿದರು. ಇದಕ್ಕೆ ಬಿಜೆಪಿ–ಜೆಡಿಎಸ್ ಸದಸ್ಯರು ದನಿಗೂಡಿಸಿದರು. 'ಯಾರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನೀವು ಪತ್ರದಲ್ಲಿ ಬರೆದಿಲ್ಲ. ಹೆಸರು ಬರೆದು ತಿಳಿಸಿ' ಎಂದು ಸಭಾಪತಿ ಅವರು ಛಲವಾದಿ ನಾರಾಯಣಸ್ವಾಮಿ ಅವರಿಗೆ ಸೂಚಿಸಿದರು.

ಬಿಜೆಪಿ ಸದಸ್ಯರು ಪದೇ–ಪದೇ 'ಗೂಂಡಾಗಿರಿ' ಎಂದು ಪ್ರಸ್ತಾಪಿಸಿದಕ್ಕೆ ಹರಿಪ್ರಸಾದ್ ಆಕ್ಷೇಪ ವ್ಯಕ್ತಪಡಿಸಿದರು. 'ಗೂಂಡಾಗಿರಿ ಮಾಡುತ್ತಿರುವವರು ನೀವು. ಪೋಕ್ಸೊ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ತಡೆ ತಂದವರು ನೀವು. ತಲೆ ಮೇಲೆ ಆರ್‌ಎಸ್‌ಎಸ್ ಚಡ್ಡಿ ಹೊತ್ತವರು ನೀವು. ನಿಮ್ಮದು ಅತ್ಯಾಚಾರಿಗಳ, ಬಲತ್ಕಾರಿಗಳ ಪಕ್ಷ' ಎಂದು ತಿರುಗೇಟು ನೀಡಿದರು.

ಈ ವೇಳೆಗೆ ಗದ್ದಲ ಜೋರಾಯಿತು. ಪದೇ ಪದೇ ತಾಕೀತು ಮಾಡಿದರೂ, ಸದಸ್ಯರು ಗದ್ದಲ ನಿಲ್ಲಿಸದ ಕಾರಣ ಸಭಾಪತಿ ಅವರು ಕಲಾಪವನ್ನು 10 ನಿಮಿಷ ಮುಂದೂಡಿದರು. ಆಡಳಿತ ಪಕ್ಷದ ಸದಸ್ಯರು ಸಭಾಪತಿ ಅವರ ಕೊಠಡಿಗೆ ತೆರಳಿ, 'ರಾಜ್ಯಪಾಲರ ನಡೆಯ ವಿರುದ್ಧ ಚರ್ಚೆಗೆ ಅವಕಾಶ ನೀಡಬೇಕು' ಎಂದು ಮನವಿ ಸಲ್ಲಿಸಿದರು. ವಿರೋಧ ಪಕ್ಷಗಳ ಸದಸ್ಯರು, 'ಕಾಂಗ್ರೆಸ್ ಸದಸ್ಯರನ್ನು ಅಮಾನತು ಮಾಡಿ' ಎಂದು ಮತ್ತೊಮ್ಮೆ ಮನವಿ ಸಲ್ಲಿಸಿದರು.

ಒಂದು ತಾಸಿನ ನಂತರ ಕಲಾಪ ಆರಂಭವಾಯಿತು. ಆಗಲೂ ಎರಡು ಕಡೆಯವರು ಪರಸ್ಪರ ಬೈದುಕೊಳ್ಳಲಾರಂಭಿಸಿದರು. ಈ ಮಾತುಗಳು ಯಾವುವೂ ಕಡತಕ್ಕೆ ಹೋಗಬಾರದು ಎಂದು ಸಭಾಪತಿ ಸೂಚಿಸಿದರು. ಕಾಂಗ್ರೆಸ್‌ನವರು, 'ಗೋ ಬ್ಯಾಕ್ ಗವರ್ನರ್ (ರಾಜ್ಯಪಾಲರೆ, ವಾಪಸ್ ಹೋಗಿ)' ಎಂದು ಘೋಷಣೆ ಕೂಗಿದರು. ಬಿಜೆಪಿ ಮತ್ತು ಜೆಡಿಎಸ್‌ನವರು, 'ಕಾಂಗ್ರೆಸ್‌ಗೆ ಧಿಕ್ಕಾರ' ಕೂಗಿದರು. ಗದ್ದಲ ತೀವ್ರವಾದ ಕಾರಣ ಸಭಾಪತಿ ಅವರು ಕಲಾಪ ಮುಂದೂಡಿದರು.

ಬೈಕ್ ಟ್ಯಾಕ್ಸಿ ಬಳಕೆಗೆ ಹೈಕೋರ್ಟ್ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಹ ಮೋಟಾರ್ ಸೈಕಲ್‌ಗಳನ್ನು, ಬೈಕ್ ಟ್ಯಾಕ್ಸಿಗಳನ್ನಾಗಿ ಬಳಸಬಹುದು' ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಈ ಕುರಿತಂತೆ ಆದೇಶಿಸಿದೆ.

'ಬೈಕ್ ಟ್ಯಾಕ್ಸಿ ಸೇವೆಗಳಿಗೆ ಬಳಸುವ ಮೋಟಾರ್ ಸೈಕಲ್‌ಗಳು, ಮೋಟಾರು ವಾಹನ ಕಾಯ್ದೆ–1988ರ ಅಡಿಯಲ್ಲಿ ಸಾರಿಗೆ ವಾಹನಗಳ ವ್ಯಾಖ್ಯಾನಕ್ಕೆ ಒಳಪಡುತ್ತವೆ' ಎಂದು ನ್ಯಾಯಪೀಠ ಅಭಿಪ್ರಾಯ ವ್ಯಕ್ತಪಡಿಸಿದೆ. 'ಕಾನೂನಿನ ಪ್ರಕಾರ ಅರ್ಜಿಗಳನ್ನು ಸಲ್ಲಿಸಿದ ನಂತರ ಅರ್ಹ ಮೋಟಾರ್ ಸೈಕಲ್‌ಗಳಿಗೆ 1988ರ ಮೋಟಾರು ವಾಹನ ಕಾಯ್ದೆಯ ಕಲಂ 74ರ ಅಡಿಯಲ್ಲಿ ಒಪ್ಪಂದದ ಸಾಗಣೆ ಪರವಾನಗಿ ನೀಡಬೇಕಾಗುತ್ತದೆ' ಎಂದು ಸ್ಪಷ್ಟಪಡಿಸಿದೆ.

'ಮೋಟಾರು ವಾಹನಗಳ ಕಾಯ್ದೆ–1988ರ ಅನ್ವಯ ಮಾರ್ಗಸೂಚಿ ಮತ್ತು ನಿಯಮಗಳನ್ನು ರೂಪಿಸುವವರೆಗೆ ಬೈಕ್ ಟ್ಯಾಕ್ಸಿಗಳು ಕಾರ್ಯಾಚರಣೆ ನಡೆಸುವಂತಿಲ್ಲ' ಎಂದು ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ, ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ವರೀಕೃತಿ ಮಹೇಂದ್ರ ರೆಡ್ಡಿ, ಮಧು ಕಿರಣ್, ರೊಪ್ಪೇನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಪ್ರತಿನಿಧಿಗಳು ಈ ರಿಟ್ ಮೇಲ್ಮನವಿ ಸಲ್ಲಿಸಿದ್ದರು.

ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ರ್‍ಯಾಪಿಡೊ ಪರ ಪದಾಂಕಿತ ಹಿರಿಯ ವಕೀಲರಾದ ಉದಯ ಹೊಳ್ಳ, ಎ.ವಿ.ನಿಶಾಂತ್, ಊಬರ್ ಪರ ಶ್ರೀನಿವಾಸ ರಾಘವನ್, ಓಲಾ ಪರ ಅರುಣ್ ಕುಮಾರ್, ಬೈಕ್ ಟ್ಯಾಕ್ಸಿ ಚಾಲಕರ ಪರ ಧ್ಯಾನ್ ಚಿನ್ನಪ್ಪ, ಶಶಾಂಕ ಗರ್ಗ್, ಬೈಕ್ ಟ್ಯಾಕ್ಸಿ ಅಸೋಸಿಯೇಷನ್ ಪರ ಬಿ.ಎಂ.ಗಿರೀಶ್ ಕುಮಾರ್ ವಾದ ಮಂಡಿಸಿದ್ದರು.

ಜಮ್ಮು–ಕಾಶ್ಮೀರ ಉಗ್ರನ ಹತ್ಯೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಜೈಶ್‌-ಎ-ಮೊಹಮ್ಮದ್ ಸಂಘಟನೆಗೆ ಸೇರಿದ ಉಗ್ರನನ್ನು ಭದ್ರತಾ ಪಡೆಗಳು ಶುಕ್ರವಾರ ಗುಂಡಿಕ್ಕಿ ಹತ್ಯೆಗೈದಿವೆ.

ಸೇನೆ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ ಜಂಟಿ ಕಾರ್ಯಾಚರಣೆ ನಡೆಸಿದ್ದವು. ಮೃತನನ್ನು ಜೈಶ್‌-ಎ-ಮೊಹಮ್ಮದ್ ಸಂಘಟನೆಯ ಕಮಾಂಡರ್ ಉಸ್ಮಾನ್ ಎಂದು ಗುರುತಿಸ ಲಾಗಿದ್ದು, ಆತನಿಂದ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

'ವಿಬಿ ಜಿ ರಾಮ್ ಜಿ'ಗೆ ತೆಲುಗುದೇಶಂ ಅಪಸ್ವರ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 'ವಿಬಿ ಜಿ ರಾಮ್ ಜಿ' ಕಾಯ್ದೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಯೋಜನೆ ಜಾರಿಗೆ ರಾಜ್ಯಗಳ ಮೇಲೆ ಆರ್ಥಿಕ ಹೊರೆ ಹೊರಿಸಿರುವುದನ್ನು ಅವರು ಪ್ರಸ್ತಾಪಿಸಿದ್ದಾರೆ. ಆದ್ದರಿಂದ ನಾಯ್ಡು ಹೇಳಿಕೆ ರಾಜಕೀಯವಾಗಿ ಮಹತ್ವದ್ದು ಮತ್ತು ಕೇಂದ್ರ, ರಾಜ್ಯಗಳ ಸಂಬಂಧಗಳ ಮೇಲೆ ಪರಿಣಾಮ ಬೀರುವಂತಹದ್ದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಚಂದ್ರಬಾಬು ನಾಯ್ಡು ಅವರ ಹೇಳಿಕೆಯನ್ನು ಉಲ್ಲೇಖಿಸಿ ಸಿದ್ದರಾಮಯ್ಯ 'ಎಕ್ಸ್'ನಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಾಯ್ಡು ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ, ತಮ್ಮದು ಹೊಸ ರಾಜ್ಯವಾಗಿರುವುದರಿಂದ ಈ ಯೋಜನೆ ಜಾರಿಗೆ ಹೆಚ್ಚಿನ ಅನುದಾನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

'ಕೇಂದ್ರದ ಎನ್‌ಡಿಎ ಸರ್ಕಾರದ ಭಾಗವಾಗಿರುವ ತೆಲುಗು ದೇಶಂ ಪಕ್ಷ ಯೋಜನೆ ಕುರಿತು ಕಳವಳ ವ್ಯಕ್ತಪಡಿಸಿರುವುದು ಮಹತ್ವದ ಸಂಗತಿ. ಕಾಂಗ್ರೆಸ್ ಮತ್ತು ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳು ಈ ಕಾಯ್ದೆಯನ್ನು ವಿರೋಧಿಸುತ್ತಲೇ ಬಂದಿವೆ. ಯೋಜನೆಗೆ ಹಣಕಾಸು ಒದಗಿಸುವ ಹೊಣೆಗಾರಿಕೆ ರಾಜ್ಯಗಳಿಗೆ ವರ್ಗಾಯಿಸಿರುವುದರಿಂದ ಒಕ್ಕೂಟ ವ್ಯವಸ್ಥೆ ಬಲಹೀನಗೊಂಡಿದೆ. ಈ ಯೋಜನೆಯ ಕುರಿತು ಎನ್‌ಡಿಎ ಒಕ್ಕೂಟದಲ್ಲೇ ಒಮ್ಮತವಿಲ್ಲ ಎಂಬುದು ಬಯಲಿಗೆ ಬಂದಿದೆ' ಎಂದು ಹೇಳಿದ್ದಾರೆ.

ಗುಡ್‌ಲೈಫ್ ತುಪ್ಪ, ಮಾವು, ಸ್ಟ್ರಾಬೆರಿ ಲಸ್ಸಿ ಪರಿಚಯ, ತುಪ್ಪ ಸುರಕ್ಷತೆಗೆ ಕ್ಯೂಆರ್ ಕೋಡ್

ನಂದಿನಿ: 10 ಉತ್ಪನ್ನಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಲವು (ಕೆಎಂಎಫ್) ಗುಡ್‌ಲೈಫ್ ತುಪ್ಪ, ಪ್ರೊಬಯಾಟಿಕ್ ಮೊಸರು, ಮೀಡಿಯಂ ಫ್ಯಾಟ್ ಪನೀರ್, ಮಾವು–ಸ್ಟ್ರಾಬೆರಿ ಲಸ್ಸಿ ಸಹಿತ ನಂದಿನಿಯ 10 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸ ಉತ್ಪನ್ನಗಳನ್ನು ಶುಕ್ರವಾರ ಬಿಡುಗಡೆ ಮಾಡಿದರು.

ಗುಡ್‌ಲೈಫ್ ಹೈ ಅರೊಮಾ ಶುದ್ಧ ತುಪ್ಪ ಪರಿಚಯಿಸಲಾಗಿದೆ. ಲೀಟರ್ ತುಪ್ಪಕ್ಕೆ ₹ 760, ಅರ್ಧ ಲೀಟರ್‌ಗೆ ₹360 ನಿಗದಿಪಡಿಸಲಾಗಿದೆ. ನಂದಿನಿ ಶುದ್ಧ ತುಪ್ಪವನ್ನು ಒಂದು, ಅರ್ಧ ಲೀಟರ್ ಹಾಗೂ 200 ಮಿಲಿ ಜಾರ್‌ನಲ್ಲಿ ಪರಿಚಯಿಸಲಾಗಿದೆ. ಇದು ಒಂದು ಲೀಟರ್‌ಗೆ ₹720, ಅರ್ಧ ಲೀಟರ್‌ಗೆ ₹360, 200 ಮಿಲಿಗೆ ₹165 ದರ ಇರಲಿದೆ.

ನಂದಿನಿ ಬ್ರ್ಯಾಂಡ್‌ನ ನೂತನ ಉತ್ಪನ್ನಗಳನ್ನು ಬಿಡುಗಡೆ ಕಾರ್ಯಕ್ರಮದಲ್ಲಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರು ಸಿದ್ದರಾಮಯ್ಯ ಅವರಿಗೆ ಮಾಹಿತಿ ನೀಡಿದರು. ಕೋಲಾರ ಹಾಲು ಒಕ್ಕೂಟದ ಅಧ್ಯಕ್ಷ ಕೆ.ವೈ.ನಂಜೇಗೌಡ, ಶಾಸಕ ಅಶೋಕಕುಮಾರ್ ರೈ, ಕೆಎಂಎಫ್ ಆಡಳಿತಾಧಿಕಾರಿ ಟಿ.ಎಚ್.ಎಂ.ಕುಮಾರ್ ಉಪಸ್ಥಿತರಿದ್ದರು

ಸಾಮಾನ್ಯ ಹಾಲಿಗಿಂತ ಶೇ 18 ರಷ್ಟು ಪ್ರೊಟೀನ್ ಪ್ರಮಾಣ ಹೆಚ್ಚಿರುವ ಎನ್ ಪ್ರೊ ಅರ್ಧ ಲೀಟರ್ ಹಾಲು (₹27), ಪ್ರೊ ಬಯಾಟಿಕ್ 200 ಗ್ರಾಂ ಪ್ಯಾಕ್ ಮೊಸರು (₹35), ಪ್ರೊಬಯಾಟಿಕ್ ಮಾವು ಹಾಗೂ ಸ್ಟ್ರಾಬೆರಿ ಲಸ್ಸಿ (160 ಮಿಲಿಗೆ ₹15), ಮೀಡಿಯಂ ಫ್ಯಾಟ್ ಪನೀರ್ 200 ಗ್ರಾಂ (₹90) ಪರಿಚಯಿಸಲಾಗಿದೆ.

ಸಕ್ಕರೆ ಸೇರಿಸಿದ, ತಾಜಾ ಹಾಲಿಗೆ ಪರ್ಯಾಯವಾದ ಡೇರಿ ವೈಟ್ನರ್ ಹಾಲಿನ ಪುಡಿ 200 ಗ್ರಾಂ(₹5), 500 ಗ್ರಾಂ(₹90), 1 ಕೆ.ಜಿ (₹355) ಹಾಗೂ 10 ಕೆ.ಜಿ(₹3,400) ಪ್ಯಾಕ್‌ಗಳಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಕಡಿಮೆ ಆದಾಯ ಇರುವವರಿಗೂ ಹಾಲಿನ ಉತ್ಪನ್ನ ಸಿಗಲೆಂದು ಹಸುವಿನ ಹಾಲು 160 ಮಿಲಿ (₹10), ಮೊಸರು 140 ಮಿಲಿ (₹10) ಪರಿಚಯಿಸಲಾಗಿದೆ.

'ತುಪ್ಪದ ಗುಣಮಟ್ಟವನ್ನು ಖಾತ್ರಿಪಡಿಸುವ ಉದ್ದೇಶದಿಂದ ಮೊದಲ ಬಾರಿಗೆ ನಂದಿನಿ ತುಪ್ಪದ ಜಾರ್, ಕವರ್ ಮೇಲೆ ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಹಂತ ಹಂತವಾಗಿ ಇತರೆ ಉತ್ಪನ್ನಗಳ ಮೇಲೂ ಈ ವ್ಯವಸ್ಥೆ ಜಾರಿಯಾಗಲಿದೆ' ಎಂದು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದ್ದಾರೆ.

ಧ್ವಜ ಕಂಬ: ಮಕ್ಕಳ ಬಳಕೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಧ್ವಜಾರೋಹಣದ ಸಮಯದಲ್ಲಿ ಕಂಬ ಏರಲು ಮಕ್ಕಳನ್ನು ಬಳಕೆ ಮಾಡಿಕೊಳ್ಳುವುದಕ್ಕೆ ನಿರ್ಬಂಧ ವಿಧಿಸಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಹಿಂದೆ ಕೆಲವು ಶಾಲೆಗಳಲ್ಲಿನ ಧ್ವಜಸ್ತಂಭಗಳಲ್ಲಿ ಧ್ವಜ ಸಿಕ್ಕಿಹಾಕಿಕೊಂಡ ಸಮಯದಲ್ಲಿ ಮಕ್ಕಳನ್ನು ಕಂಬ ಏರಲು ಬಳಸಿಕೊಂಡು ಅನಾಹುತಗಳಾಗಿವೆ. ವಿದ್ಯುತ್ ತಂತಿಗಳಿಂದ ಪ್ರಾಣಕ್ಕೆ ಅಪಾಯ ಒದಗಿವೆ. ಇಂತಹ ಅವಘಡಗಳಿಗೆ ಅವಕಾಶ ನೀಡಬಾರದು. ಧ್ವಜ ಕಂಬ ಏರಲು ಮಕ್ಕಳಿಗೆ ಅವಕಾಶ ನೀಡಬಾರದು. ವಿದ್ಯುತ್ ಸಂಪರ್ಕಗಳನ್ನು ಸರಿಯಾಗಿ ಪರಿಶೀಲಿಸಬೇಕು. ಮಕ್ಕಳ ಕವಾಯತು, ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಗಳಲ್ಲಿ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿವರಿಸಲಾಗಿದೆ.

ಸುವ್ಯವಸ್ಥಿತ ವಾಹನಗಳನ್ನು ಬಳಸಬೇಕು. ಚಾಲಕರು ಮದ್ಯಪಾನ ಮಾಡಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ವೇಗ ಮಿತಿಯ ಮೇಲೆ ನಿಗಾವಹಿಸಬೇಕು. ಕಾರ್ಯಕ್ರಮ ನಡೆಯುವ ಸ್ಥಳದಿಂದ 100 ಮೀಟರ್ ಅಂತರದಲ್ಲಿ ವಾಹನಗಳ ನಿಲುಗಡೆ ಮಾಡಬೇಕು. ತುರ್ತು ಪರಿಸ್ಥಿತಿ ಎದುರಿಸಲು ಮಕ್ಕಳಿಗೆ ಅಗತ್ಯ ತರಬೇತಿ, ಜಾಗೃತಿ ಮೂಡಿಸಬೇಕು. ಮಕ್ಕಳ ಕಾರ್ಯಕ್ರಮ ಕುರಿತು ಸ್ಥಳೀಯ ಸಂಸ್ಥೆಗಳು, ಪೊಲೀಸ್, ವೈದ್ಯಕೀಯ, ಅಗ್ನಿಶಾಮಕ ಸೇವೆಗಳಿಗೆ ಮಾಹಿತಿ ನೀಡಬೇಕು. ಮಕ್ಕಳಿಗೆ ನೀಡುವ ಆಹಾರ ಪದಾರ್ಥಗಳನ್ನು ಪರಿಶೀಲನೆಗೆ ಒಳಪಡಿಸಬೇಕು. ಶಾಲಾಭಿವೃದ್ಧಿ ಸಮಿತಿಯ ಸದಸ್ಯರನ್ನು ಬಳಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

758 ಮಕ್ಕಳಿಗೆ ತಲಾ ₹50 ಸಾವಿರ

ಪ್ರತಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸರ್ಕಾರಿ ಶಾಲೆಗಳ ಮೂವರು ವಿದ್ಯಾರ್ಥಿಗಳಿಗೆ ತಲಾ ₹50,000 ನಗದು ಬಹುಮಾನ ನೀಡಲು ಶಾಲಾ ಶಿಕ್ಷಣ ಇಲಾಖೆ ₹3.25 ಕೋಟಿ ಮೊತ್ತ ನೀಡಿದೆ.

ಗುಣಮಟ್ಟದ ಭರವಸೆ ಮತ್ತು ವಿದ್ಯಾರ್ಥಿ ಪ್ರೇರಣಾ ಉಪಕ್ರಮದ ಅಡಿ ಲ್ಯಾಪ್‌ಟಾಪ್ ವಿತರಿಸಲು ಮೀಸಲಿಡಲಾಗಿದ್ದ ಅನುದಾನದಲ್ಲಿ ಮಕ್ಕಳಿಗೆ ಪ್ರೋತ್ಸಾಹ ಧನ ನೀಡಲು ಇಲಾಖೆ ನಿರ್ಧರಿಸಿದ್ದು, 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 758 ಮಕ್ಕಳಿಗೆ ಈ ಸೌಲಭ್ಯ ಸಿಗಲಿದೆ.

ಶನಿವಾರ, ಜನವರಿ 24, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹೂವಿನಲ್ಲಿ ವಿಶ್ವಕಪ್

ಮಂಡ್ಯದಲ್ಲಿ ಶುಕ್ರವಾರದಿಂದ ಶುರುವಾದ ತೋಟಗಾರಿಕೆ ಫಲಪುಷ್ಪ ಪ್ರದರ್ಶನದಲ್ಲಿ ಗಮನ ಸೆಳೆದ 'ಹೂವಿನ ವಿಶ್ವಕಪ್' ಕಲಾಕೃತಿ

ಕುಲದೀಪ್ ಮಿಂಚು

ಭಾರತದ ಕುಲದೀಪ್ ಯಾದವ್ ಶುಕ್ರವಾರ ರಾಯಪುರದಲ್ಲಿ ನಡೆದ ನ್ಯೂಜಿಲೆಂಡ್ ವಿರುದ್ಧದ ಟಿ20 ಪಂದ್ಯದಲ್ಲಿ ಎರಡು ವಿಕೆಟ್ ಪಡೆದರು. ಭಾರತ ಏಳು ವಿಕೆಟ್‌ಗಳಿಂದ ಜಯ ಸಾಧಿಸಿತು

ನಿಮಗೂ ಉಂಟಾ ಶಾಪಿಂಗ್ ಮೇನಿಯಾ?!

ಅಗತ್ಯ ಹಾಗೂ ಅನಿವಾರ್ಯದ ವ್ಯಾಪ್ತಿಯನ್ನು ಮೀರಿ ಮಾಡುವ ಬಹುತೇಕ ಶಾಪಿಂಗ್‌ಗಳು ಗೀಳಿಗೆ ದಾರಿ ಮಾಡುವ ಸಾಧ್ಯತೆಯೇ ಹೆಚ್ಚು

• ಕಾವ್ಯಾ ಭಾರದ್ವಾಜ್

‘ಅಯ್ಯೋ ಇದೇ ಬಣ್ಣ, ಇದೇ ಡಿಸೈನ್‌ನ ಸೀರೆ ನನ್ನ ವಾರಗಿತ್ತಿ ಹತ್ರಾನೂ ಇದೆ. ಇನ್ಮುಂದೆ ನಾನು ಇದನ್ನ ಉಡಲ್ಲ ಕಣೇ’.

‘ಜಾಮದಾನಿ, ಪೋಚಂಪಲ್ಲಿ, ಬಾಂದಿನಿ, ಕಂಚಿ, ಬನಾರಸಿ, ಮೈಸೂರು ಸಿಲ್ಕ್ ಎಲ್ಲವೂ ಇವೆ. ಆದರೆ, ಇನ್‌ಸ್ಟಾದಲ್ಲಿ ಟ್ರೆಂಡಿಂಗ್ ಆಗಿರೊ ‘ಪರ್ಪಲ್ ಅಜ್ರಕ್’ ಒಂದನ್ನ ಈ ತಿಂಗಳು ಖರೀದಿಸಲೇಬೇಕು’.

‘ಎಲ್ಲ ಶೇಡ್‌ನ ಜೀನ್ಸ್‌ಗಳಿವೆ. ಆದರೆ, ಬಿಳಿ ಮತ್ತು ಕ್ರೀಂ ಬಣ್ಣ ಮಿಕ್ಸ್ ಆಗಿರೊ ‘ಟೋರ್ನ್’ ಜೀನ್ಸ್ ಒಂದಿಲ್ಲ. ಯಾವಾಗ ಕೊಳ್ಳಲಿ?’

–ಹೀಗೆ, ವಾರ್ಡ್‌ರೋಬ್ ನೋಡ್ತಿದ್ದ ಹಾಗೇ ‘ಶಾಪಿಂಗ್’ ಮಾಡಲು ಹೆಣ್ಣುಮಕ್ಕಳಿಗೆ ಹಲವಾರು ಕಾರಣಗಳು ಹುಟ್ಟಿಕೊಳ್ಳುತ್ತವೆ. ಶಾಪಿಂಗ್ ಮೇನಿಯಾಗೆ ಒಳಗಾದವರಿಗೆ ಬೇಕಾದ್ದು, ಬೇಡದ್ದು ಎಲ್ಲವನ್ನೂ ಕೊಳ್ಳುವಾಗ ಕಿಕ್ ಹೊಡೆದಂತೆ ಆಗುತ್ತದಾದರೂ ಕ್ರಮೇಣ ಅದು ಆರ್ಥಿಕ ಹೊರೆಯಷ್ಟೇ ಅಲ್ಲ ಮಾನಸಿಕ ಒತ್ತಡವನ್ನೂ ತರುತ್ತದೆ ಎಂಬ ಸಣ್ಣ ಅಂದಾಜೂ ಇರುವುದಿಲ್ಲ.

ಕೈಬೆರಳ ತುದಿಯಲ್ಲಿಯೇ ಆನ್‌ಲೈನ್ ಶಾಪಿಂಗ್‌ಗೆ ಅವಕಾಶ ಇರುವುದರಿಂದ ಬೇಕಾದ್ದನ್ನು ‘ಗೋ ಕಾರ್ಟ್’ಗೆ ಹಾಕಿಕೊಂಡು, ಕ್ಯಾಷ್ ಆನ್ ಡೆಲಿವರಿಯೋ ರಿಟರ್ನ್ ಪಾಲಿಸಿಯೋ ಒಟ್ಟಿನಲ್ಲಿ ಆ ಕ್ಷಣಕ್ಕೆ ಚಂದ ಎನಿಸಿದ್ದನ್ನು ಖರೀದಿಸಬಹುದು. ಇನ್ನು ಕ್ರೆಡಿಟ್ ಕಾರ್ಡ್ ಉಜ್ಜಿದರೆ ಸಿಗುವ ಕೂಪನ್ ಪಾಯಿಂಟ್ಸ್, ಡಿಸ್ಕೌಂಟ್ಸ್, ಈಝಿ ಪೇಮೆಂಟ್... ಹೀಗೆ ಶಾಪಿಂಗ್ ಮೇನಿಯಾವನ್ನು ಹೆಚ್ಚಿಸಲು ಎಷ್ಟೊಂದು ಆಕರ್ಷಕ ಉಡುಗೊರೆಗಳು ಅಂತೀರಾ!

ಕಾಸ್ಮೆಟಿಕ್ಸ್, ಬ್ಯಾಗ್ಸ್, ಕಿಡ್ಸ್‌ವೇರ್, ಫುಟ್‌ವೇರ್... ಹೀಗೆ ಎಲ್ಲದಕ್ಕೂ ಪ್ರತ್ಯೇಕ ಷೋರೂಂಗಳು. ಅಗತ್ಯ ಮೀರಿ ಒಂದಕ್ಕಿಂತ ಒಂದು ಶೈಲಿ, ವಿನ್ಯಾಸ, ಬಣ್ಣ ಹೀಗೆ ಹಲವು ನೆಪಗಳಲ್ಲಿ ಮೂರರಿಂದ ನಾಲ್ಕು ಬಟ್ಟೆಗಳನ್ನು ಒಟ್ಟೊಟ್ಟಿಗೇ ಖರೀದಿಸುವ ವರಸೆ ಶುರುವಾಗಿದೆ. ದಿಢೀರ್ ಕೊಳ್ಳುವ ‘ಇಂಪಲ್ಸಿವ್ ಶಾಪಿಂಗ್’ ಈಗ ಆಧುನಿಕ ಜೀವನಶೈಲಿಯ ಭಾಗವೇ ಆಗಿಹೋಗಿದೆ. ಈ ಬಗೆಯ ಶಾಪಿಂಗ್ ಮೊದಲಿಗೆ, ಬೇಕೋ ಬೇಡವೋ ಎಂದು ನಿರ್ಧರಿಸುವ ನಮ್ಮ ವಿವೇಚನಾ ಶಕ್ತಿಯನ್ನೇ ಬೇಟೆಯಾಡುತ್ತದೆ. ‘ಮೊದಲು ಖರೀದಿಸುವ, ಆಮೇಲೆ ಸಾಲ ತೀರಿಸುವ’ ಎಂಬ ಆಲೋಚನೆಗೆ ಕ್ರೆಡಿಟ್ ಕಾರ್ಡ್ ಇಂಬು ನೀಡುತ್ತದೆ. ಕಂಡಿದ್ದೆಲ್ಲವನ್ನೂ ಖರೀದಿಸುವ ಚಟ ಹತ್ತಿದರೆ ಸಾಲದ ಸುಳಿಯಲ್ಲಿ ಸಿಲುಕುವುದು ನಿಶ್ಚಿತ.

ಹಿಂದೆಲ್ಲ ಮಧ್ಯಮ ವರ್ಗದವರದ್ದು ವ್ಯವಸ್ಥಿತ ಶಾಪಿಂಗ್ ಆಗಿತ್ತು. ವರ್ಷಕ್ಕೊಮ್ಮೆ ಎರಡು ಜತೆ ಬಟ್ಟೆ ಹೊಲಿಸಿಕೊಂಡು, ಅದನ್ನೇ ವರ್ಷವಿಡೀ ಬಳಸುತ್ತಿದ್ದರು. ಕ್ರಮೇಣ, ಪ್ರಮುಖ ಹಬ್ಬಗಳಲ್ಲಷ್ಟೇ ಬಟ್ಟೆ ಖರೀದಿಸುವ ಸಂಪ್ರದಾಯ ಬಂತು. ಅಮ್ಮ, ಅಜ್ಜಿಯ ಸೀರೆ, ಕುಪ್ಪಸಗಳು, ಅಕ್ಕನ ಕುರ್ತಾ, ಅಣ್ಣನ ಶರ್ಟ್, ಚಡ್ಡಿಯೂ ಮನೆಯ ಕಿರಿಯ ಸದಸ್ಯರ ಪಾಲಾಗುತ್ತಿದ್ದವು. ಉಡುಗೆ ದೊಡ್ಡ ಸೈಜಿನದಾಗಿದ್ದರೆ, ಅದಕ್ಕೆ ಹೊಲಿಗೆ ಹಾಕಿಸಿ ತೊಡಲಾಗುತ್ತಿತ್ತು. ಮದುವೆ, ಮುಂಜಿಯಂಥ ಸಮಾರಂಭಗಳಲ್ಲಿ ಮನೆಯ ಮಕ್ಕಳಿಗೆ ಅಗತ್ಯವಾದ ಪ್ರಾಶಸ್ತ್ಯ ಕೊಟ್ಟು ಬಟ್ಟೆ ಖರೀದಿಸಲಾಗುತ್ತಿತ್ತು. ಎಲ್ಲಾದರೂ ಪ್ರವಾಸಕ್ಕೆ ಹೋದರೆ, ಆ ಪ್ರದೇಶದ ವಿಶೇಷ ಶೈಲಿಯ ಬಟ್ಟೆ ಕೈಗೆಟುಕುವ ದರದಲ್ಲಿ ಇದ್ದರೆ ಮಾತ್ರ ಕೊಳ್ಳಲಾಗುತ್ತಿತ್ತು.

ಖಯಾಲಿಯೇ ಬಂಡವಾಳ!

ಯಾವುದೇ ವಸ್ತುವನ್ನು ಖರೀದಿಸುವಾಗ ಹೆಣ್ಣುಮಕ್ಕಳದ್ದು ಬಹಳ ನಾಜೂಕಿನ, ಅಷ್ಟೇ ನಿರ್ದಿಷ್ಟವಾದದ್ದನ್ನು ಬೇಡುವ ಖಯಾಲಿ. ಅವರ ಈ ‘ದೌರ್ಬಲ್ಯ’ವೇ ಚಿನ್ನ ಹಾಗೂ ಉಡುಪು ಉದ್ಯಮಗಳ ಮೂಲ ಬಂಡವಾಳ. ‘ಈ ಬಣ್ಣದ ಬೇರೆ ವಿನ್ಯಾಸವಿದ್ದರೆ ತೋರಿಸಿ, ಇದೇ ವಿನ್ಯಾಸದ್ದು ಬೇರೆ ಬಣ್ಣವಿದೆಯೇ ನೋಡಿ’ ಎಂದು, ಶಾಪಿಂಗ್‌ಪ್ರಿಯ ಹೆಣ್ಣುಮಕ್ಕಳನ್ನು ಕೆಲವು ಪುರುಷರು ಗೇಲಿ ಮಾಡುವುದುಂಟು.

ಇರುವ ಇತಿಮಿತಿಗಳಲ್ಲಿಯೇ, ಖರೀದಿಸುವಾಗ ಖರೀದಿಸಿ, ಬೇಡ ಎನಿಸಿದಾಗ ಸುಮ್ಮನಿರುವುದು ಒಂದು ಕೌಶಲ. ಇದನ್ನು ಅರಿತು ಮುನ್ನಡೆದರೆ ಬದುಕು ಹೊರೆ ಎನಿಸದೆ ಸರಾಗವಾಗಿ ಸಾಗುತ್ತದೆ.

ಅದೃಷ್ಟ ಹೋಗುತ್ತದಂತೆ!

‘ನಿಮ್ಮ ಬಟ್ಟೆಯನ್ನು ತೊಡಲು ಯಾರಿಗೂ ಅವಕಾಶ ಕೊಡಬೇಡಿ. ಅವರು ಸಂಬಂಧಿಕರೇ ಆಗಿರಲಿ ಆಪ್ತರೇ ಆಗಿರಲಿ. ಹಾಗೊಮ್ಮೆ ಮಾಡಿದರೆ ನಿಮ್ಮ ಅದೃಷ್ಟವೆಲ್ಲ ಸೋರಿ ಹೋಗುತ್ತದೆ. ಅಷ್ಟೇ ಅಲ್ಲ ಅದರಿಂದ ನಿಮ್ಮೊಳಗಿನ ಸಕಾರಾತ್ಮಕ ಧೋರಣೆಯನ್ನು ಬೇರೆಯವರಿಗೆ ಕೊಟ್ಟಂತೆ’ ಎಂದು ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಒಬ್ಬರು ಬಹಳ ಗಂಭೀರವಾಗಿ ಹೇಳುತ್ತಿದ್ದ ಮಾತು ಇನ್‌ಸ್ಟಾದ ಫೀಡ್‌ನಲ್ಲಿ ಕಾಣಿಸಿಕೊಂಡಿತ್ತು.

ಅಕ್ಕನ, ಅಮ್ಮನ ಸೀರೆ ಉಡುವಾಗ ಸಿಗುವ ತೃಪ್ತ ಭಾವವನ್ನು ವರ್ಣಿಸುವುದು ಹೇಗೆ? ಅಜ್ಜಿ–ಅಮ್ಮನ ಹರಿದ ಸೀರೆಗಳೇ ಕೌದಿಗಳಾಗಿ ಮನೆಮಕ್ಕಳ ಮೈ ಮನಸ್ಸನ್ನು ಬೆಚ್ಚಗಿಡುತ್ತವಲ್ಲದೆ, ಸಂಬಂಧಗಳ ಬಿಸುಪನ್ನೂ ಉಳಿಸುತ್ತವೆ ಎಂಬುದನ್ನು ಈ ಇನ್‌ಸ್ಟಾ ಕೂಸುಗಳಿಗೆ ಹೇಳುವವರು ಯಾರು?

ಸರಳ ಸೂತ್ರ ಪಾಲಿಸಿ

ತಮಗಾಗಿಯೋ ಬೇರೆಯವರ ಖುಷಿಗಾಗಿಯೋ ಅನಗತ್ಯವಾಗಿ ಶಾಪಿಂಗ್ ಮಾಡಿ ತಲೆನೋವು ತಂದುಕೊಳ್ಳುವುದಕ್ಕಿಂತ, ಶಾಪಿಂಗ್ ಮಾಡಬೇಕು ಎಂದುಕೊಂಡಾಗೆಲ್ಲ ಈ ಸರಳ ಸೂತ್ರಗಳನ್ನು ಪಾಲಿಸುವುದು ಒಳಿತು:

- ಮೊದಲಿಗೆ ಗಳಿಸಿ. ಗಳಿಸಿದ್ದರಲ್ಲಿ ಸ್ವಲ್ಪವಾದರೂ ಉಳಿಸಿ. ದಿನನಿತ್ಯದ ಅಗತ್ಯಗಳಿಗೆ ಖರ್ಚು ಮಾಡಿದ ನಂತರ, ಯಾವುದೇ ಹೊರೆ ಆಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಶಾಪಿಂಗ್ ಮಾಡಿ.
- ಆರ್ಥಿಕ ಶಿಸ್ತು ಇಲ್ಲದವರು ಬಹುಬೇಗ ಅಧಃಪತನಕ್ಕೆ ಒಳಗಾಗುತ್ತಾರೆ ಎಂಬುದನ್ನು ಮರೆಯಬೇಡಿ.
- ಪರಸ್ಪರ ಹೋಲಿಕೆ ಮಾಡಿಕೊಳ್ಳುವುದರಿಂದ ಆಗಾಗ್ಗೆ ಶಾಪಿಂಗ್ ಮಾಡಬೇಕು ಎಂಬ ತಹತಹ ಉಂಟಾಗುತ್ತದೆ. ಹೋಲಿಕೆಯನ್ನು ಬಿಡಿ, ನಿಮಗೆ ಅಗತ್ಯ ಎನಿಸಿದರೆ ಮಾತ್ರ ಖರೀದಿಸಿ.
- ಹೊಸ ಕಲಿಕೆ, ಹೊಸ ತಾಣಕ್ಕೆ ಭೇಟಿ, ಪ್ರಯಾಣದ ಅನುಭವ, ಕೌಶಲ ಹೆಚ್ಚಿಸಿಕೊಳ್ಳುವಂತಹ ವಿಷಯಗಳಿಗೆ ಹಣ ವಿನಿಯೋಗಿಸುವುದಕ್ಕೆ ಹೆಚ್ಚು ಯೋಚಿಸುವ ಅಗತ್ಯವಿಲ್ಲ.
- ನಿರೀಕ್ಷಿತ/ಭವಿಷ್ಯದ ಖರ್ಚುಗಳಿಗಾಗಿ ಉಳಿಸಲು ಪ್ರಾರಂಭಿಸಿ. ಹಬ್ಬ, ಇಎಂಐ, ಇನ್ಶೂರೆನ್ಸ್, ಸ್ಕೂಲ್ ಫೀಸ್‌ನಂತಹ ಕಾರಣಗಳಿಗೆ ಹಾಗೂ ಸಣ್ಣದಾದ ತುರ್ತು ನಿಧಿಗಾಗಿ ಒಂದು ಎಸ್‌ಐಪಿಯಲ್ಲಿ ಹೂಡಿಕೆ ಮಾಡಬಹುದು. ಇದರಿಂದ ಶಾಪಿಂಗ್‌ನ ತಹತಹ ಕಡಿಮೆಯಾಗುತ್ತದೆ. ಸ್ವಲ್ಪಮಟ್ಟಿಗೆ ಹಣವೂ ಉಳಿತಾಯ ಆಗುತ್ತದೆ.
- ಎಂದಾದರೂ ಒಮ್ಮೆ, ಅತಿಯಾಗಿ ಯೋಚಿಸದೆ ಧಾರಾಳವಾಗಿ ಖರ್ಚು ಮಾಡಿ ತೃಪ್ತ ಭಾವ ಹೊಂದುವುದರಲ್ಲಿ ತಪ್ಪಿಲ್ಲ.
- ನಮ್ಮ ಮನಸ್ಸಿನ ಮೇಲೆ ನಿಯಂತ್ರಣ ಇಟ್ಟುಕೊಳ್ಳುವುದು ಶಾಪಿಂಗ್ ಗೀಳಿಗೆ ಒಳಗಾಗದಂತೆ ನಮ್ಮನ್ನು ತಡೆಯುತ್ತದೆ.

ವ್ಯಕ್ತಿ ಟ್ರೆಂಡಿಂಗ್

ಚಂದನಾ ಚಂದದ ನಡೆ

2022ರಲ್ಲಿ, ನವದೆಹಲಿಯ ರೈಲು ನಿಲ್ದಾಣಕ್ಕೆ ಸಮೀಪ ಗಿಜಿಗುಡುತ್ತಿದ್ದ ಪ್ರದೇಶವೊಂದರ ಛತ್ ಪೂಜೆಯ ಗೌಜಿಯಲ್ಲಿ ಮಹಿಳೆಯೊಬ್ಬರು ಮಗುವಿನೊಂದಿಗೆ ತಪ್ಪಿಸಿಕೊಳ್ಳುತ್ತಾರೆ. ಅವರನ್ನು ಹುಡುಕುವ ಹೊಣೆ ಆರ್‌ಪಿಎಫ್ (ರೈಲ್ವೆ ಪ್ರೊಟೆಕ್ಷನ್ ಫೋರ್ಸ್) ಅಧಿಕಾರಿ ಚಂದನಾ ಸಿನ್ಹಾ ಅವರ ಹೆಗಲೇರುತ್ತದೆ. ಛಲ ಬಿಡದ ತ್ರಿವಿಕ್ರಮನಂತೆ ಗಂಟೆಗಟ್ಟಲೆ ಆ ಜನದಟ್ಟಣೆಯ ಪ್ರದೇಶವನ್ನು ಜಾಲಾಡಿದ ಚಂದನಾ ಅವರಿಗೆ, ಕೊನೆಗೂ ರೈಲು ನಿಲ್ದಾಣದ ಯಾವುದೋ ಮೂಲೆಯಲ್ಲಿ ದಿಕ್ಕೆಟ್ಟು ಕುಳಿತಿದ್ದ ಆ ತಾಯಿ– ಮಗು ಕಾಣಸಿಗುತ್ತಾರೆ.

ಅದಾದ ಬಳಿಕ, ಉತ್ತರಪ್ರದೇಶದಲ್ಲಿ ರೈಲುಗಳ ಮೂಲಕ ಮಕ್ಕಳ ಕಳ್ಳಸಾಗಣೆಯನ್ನು ಪತ್ತೆ ಹಚ್ಚುವ ಭಾರತೀಯ ರೈಲ್ವೆಯ ‘ಆಪರೇಷನ್ ನನ್ಹೆ ಫರಿಷ್ತೆ’ ತಂಡಕ್ಕೆ ಚಂದನಾ ಅವರನ್ನು ನಿಯೋಜಿಸಲಾಗುತ್ತದೆ. ಅಲ್ಲಿ ಹೊಸದೊಂದು ಪಾತಕ ಲೋಕವೇ ಅವರೆದುರು ತೆರೆದುಕೊಳ್ಳುತ್ತದೆ. ಎಲ್ಲಿಂದಲೋ ತಪ್ಪಿಸಿಕೊಂಡು ಬರುವ, ಅನಾಥರಾಗಿ ಅಂಡಲೆಯುವ, ದುಷ್ಟರ ಆಮಿಷಕ್ಕೆ ಮರುಳಾಗಿ ಮನೆ ಬಿಟ್ಟು ಓಡಿ ಬರುವ ಒಂದೊಂದು ಮಗುವಿನಲ್ಲೂ ತಾಯಿ–ಮಗುವಿನ ಆ ಅಸಹಾಯಕ ನೋಟವನ್ನೇ ಕಾಣುವ ಚಂದನಾ, ಅಂತಹವರ ರಕ್ಷಣೆಗೆ ಪಣ ತೊಡುತ್ತಾರೆ. ಈ ಮೂರು ವರ್ಷಗಳಲ್ಲಿ ಸುಮಾರು ಒಂದೂವರೆ ಸಾವಿರ ಮಕ್ಕಳನ್ನು ಅವರು ರಕ್ಷಿಸಿದ್ದಾರೆ.

ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ಚಾಣಾಕ್ಷತನದಿಂದ ಮಕ್ಕಳನ್ನು ಕರೆದೊಯ್ಯುವ ಕಿರಾತಕರ ಪತ್ತೆಗೆ ಎನ್‌ಜಿಒಗಳ ಸಹಯೋಗದಲ್ಲಿ ವಿಶೇಷ ತಂಡವನ್ನೇ ಚಂದನಾ ಸಜ್ಜುಗೊಳಿಸಿದ್ದಾರೆ. ಅಸಲಿಗೆ ಯಾವ ತಪಾಸಣೆಯನ್ನೂ ನಡೆಸದ ಈ ತಂಡದ ಸದಸ್ಯರು, ಪ್ರಯಾಣಿಕರಂತೆ ಸಂಚರಿಸುತ್ತಾರೆ. ಆದರೆ, ಮಕ್ಕಳ ಕಣ್ಣಿನಲ್ಲಿನ ಭಯ, ಅಸಹಾಯಕತೆ, ಅಪರಿಚಿತರೊಟ್ಟಿಗೆ ಕುಳಿತ ಭಂಗಿ, ಚಲನವಲನದ ಮೇಲೆ ಹದ್ದಿನ ಕಣ್ಣಿಟ್ಟಿರುತ್ತಾರೆ. ಅನುಮಾನ ಬಂದ ಕೂಡಲೇ ಕಾರ್ಯಾಚರಣೆಗೆ ಇಳಿಯುತ್ತಾರೆ. ಹೀಗೆ ಕೊನೇ ಕ್ಷಣದಲ್ಲಿ ದುಷ್ಟರಿಂದ ಪಾರಾದ ಎಷ್ಟೋ ಮಕ್ಕಳು ಮರಳಿ ಅಪ್ಪ–ಅಮ್ಮನ ಮಡಿಲು ಸೇರಿದ್ದಾರೆ, ಹದಿಹರೆಯದ ಹೆಣ್ಣುಮಕ್ಕಳು ವೇಶ್ಯಾವಾಟಿಕೆಯ ಜಾಲಕ್ಕೆ ಸಿಲುಕುವುದರಿಂದ ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದ್ದಾರೆ.

ಚಂದನಾ ಅವರ ಈ ವಿಶಿಷ್ಟ ಕಾರ್ಯವನ್ನು ಗುರುತಿಸಿರುವ ರೈಲ್ವೆ ಇಲಾಖೆಯು ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ‘ಅತಿ ವಿಶಿಷ್ಟ ರೈಲು ಸೇವಾ ಪುರಸ್ಕಾರ’ವನ್ನು ನೀಡಿ ಗೌರವಿಸಿದೆ.

41 ವರ್ಷದ ಚಂದನಾ 11 ವರ್ಷದ ಹೆಣ್ಣುಮಗುವಿನ ತಾಯಿ. ಅಂದಹಾಗೆ, ಆರ್‌ಪಿಎಫ್ ಸೇರಲು ತಮಗೆ ಪ್ರೇರಣೆಯಾಗಿದ್ದು, ಬಾಲ್ಯದಲ್ಲಿದ್ದಾಗ ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ, ಐಪಿಎಸ್ ಅಧಿಕಾರಿ ಕಂಚನ್ ಚೌಧರಿ ಅವರ ಜೀವನವನ್ನು ಆಧರಿಸಿದ ಧಾರಾವಾಹಿ ‘ಉಡಾನ್’ ಎಂದು ಚಂದನಾ ಹೇಳಿದ್ದಾರೆ.

ಏನಿವರ ಬ್ಯೂಟಿ ಸೀಕ್ರೆಟ್?

ಯಮುನಾ ಶ್ರೀನಿಧಿ, ನಟಿ

ಕೂದಲಿಗೆ, ಚರ್ಮಕ್ಕೆ ಅಂಥ ವಿಶೇಷ ಆರೈಕೆಯನ್ನೇನೂ ಮಾಡುವುದಿಲ್ಲ. ಮೊದಲಿನಿಂದಲೂ ನನಗೆ ತಾಯಿ ಅಭ್ಯಾಸ ಮಾಡಿಸಿರುವುದು ಹೀಗೆ: ವಾರಕ್ಕೆ ಎರಡು ಬಾರಿ ಕೊಬ್ಬರಿ ಎಣ್ಣೆಯನ್ನು ಕೂದಲಿಗೆ ಹಚ್ಚುತ್ತೇನೆ. ಬೇಸಿಗೆಯಲ್ಲಿ ಹರಳೆಣ್ಣೆ ಹಾಕಿ ಕೂದಲನ್ನು ಮಸಾಜ್ ಮಾಡಿಕೊಳ್ಳುತ್ತೇನೆ. ಶ್ಯಾಂಪೂ ಬಳಸುವುದಿಲ್ಲ. ಸೀಗೆಪುಡಿಯನ್ನು ಹಚ್ಚಿಯೇ ತಲೆಸ್ನಾನ ಮಾಡುತ್ತೇನೆ. ಹುಟ್ಟಿದಾಗಿನಿಂದಲೂ ಸೀಗೆಪುಡಿಯನ್ನೇ ಬಳಸುತ್ತಿದ್ದೇನೆ. ಈವರೆಗೆ ಬ್ಯೂಟಿಪಾರ್ಲರ್‌ಗೆ ಕಾಲಿಟ್ಟಿಲ್ಲ. ಹುಬ್ಬಿಗೆ ನಾನೇ ಶೇಪ್ ಮಾಡಿಕೊಳ್ಳುತ್ತೇನೆ.

ಚರ್ಮ ಆರೋಗ್ಯದಿಂದ ಇರಲು ಚೆನ್ನಾಗಿ ನೀರು ಕುಡಿಯುತ್ತೇನೆ. ಬೆಳಿಗ್ಗೆ ಖಾಲಿ ಹೊಟ್ಟೆಗೆ ಲಿಂಬೆರಸ ಬೆರೆಸಿದ ಜೇನಿನ ಮಿಶ್ರಣವಿರುವ ನೀರನ್ನು ಕುಡಿಯುತ್ತೇನೆ. ಇದು ರಕ್ತವನ್ನು ಶುದ್ಧಿ ಮಾಡುತ್ತದೆ. ಇದರ ಜತೆಗೆ ದಿನವಿಡೀ ಚೆನ್ನಾಗಿ ಡ್ರೈಫ್ರೂಟ್ಸ್ ತಿನ್ನುತ್ತೇನೆ. ರಾತ್ರಿಯೇ ಅದನ್ನು ನೆನೆಸಿಟ್ಟಿರುತ್ತೇನೆ. ಕೆಲವೊಮ್ಮೆ ಡ್ರೈಫ್ರೂಟ್ಸ್‌ನ ಮಿಲ್ಕ್ ಶೇಕ್ ಮಾಡಿಕೊಂಡು ಕುಡಿಯುತ್ತೇನೆ. ಡಯಟ್ ಅಂತ ಏನೂ ಮಾಡುವುದಿಲ್ಲ. ಸಿಕ್ಕಾಪಟ್ಟೆ ಸಿಹಿ ಪದಾರ್ಥಗಳನ್ನು ತಿನ್ನುತ್ತೇನೆ.

ದಿನವಿಡೀ ಕ್ರಿಯಾಶೀಲಳಾಗಿರುತ್ತೇನೆ. ಅದೇ ನನ್ನ ಫಿಟ್‌ನೆಸ್‌ನ ಗುಟ್ಟು. ಮನೆ ಸುತ್ತ ಜಾಗ ಇದೆ. ಎಲ್ಲ ಕಡೆ ತರಹೇವಾರಿ ಗಿಡಗಳನ್ನು ಹಾಕಿದ್ದೇನೆ. ಆದರೆ, ಗಾರ್ಡನರ್ ಅನ್ನು ಇಟ್ಟುಕೊಂಡಿಲ್ಲ. ಗಿಡಗಳಿಗೆ ನೀರು ಹಾಕುವುದು, ಪಾತಿ ಮಾಡುವುದು ಎಲ್ಲವನ್ನೂ ಮಾಡುತ್ತೇನೆ. ಮನೆಗೆಲಸಕ್ಕೂ ಸಹಾಯಕರನ್ನು ಇಟ್ಟುಕೊಂಡಿಲ್ಲ. ಮನೆ ತುಸು ದೊಡ್ಡದಾಗಿಯೇ ಇದ್ದರೂ ಗುಡಿಸುವುದು, ಒರೆಸುವುದು, ಸ್ವಚ್ಛ ಮಾಡುವುದು ಸೇರಿ ಎಲ್ಲಾ ಕೆಲಸವನ್ನು ನಾನೇ ಖುದ್ದು ಮಾಡುತ್ತೇನೆ. ನಮ್ಮ ಮನೆಯಲ್ಲಿ ಐದು ಬಾತ್ ರೂಂಗಳಿವೆ. ಎಲ್ಲವನ್ನೂ ನಾನೇ ಸ್ವಚ್ಛ ಮಾಡುತ್ತೇನೆ.

ಒತ್ತಡದಿಂದ ತೂಕ ಹೆಚ್ಚುತ್ತದೆ. ಇರುವುದರಲ್ಲಿ ಖುಷಿಯಾಗಿದ್ದರೆ ಒತ್ತಡ ಇರದು. ಮನಸ್ಸು ಕುಗ್ಗಿದಾಗ ಶಾಸ್ತ್ರೀಯ ಸಂಗೀತವನ್ನು ಹೆಚ್ಚು ಕೇಳುತ್ತೇನೆ. ಆಹಾರಪ್ರಿಯೆ. ಊಟದಲ್ಲಿ ನಿಯಂತ್ರಣವಿಲ್ಲ. ದೇಹಕ್ಕೆ ಬೇಕಾದಾಗ ತಿನ್ನುವ ಆಸೆ ಬರುತ್ತದೆ ಎಂದು ನಂಬಿದ್ದೇನೆ. ಹಾಗಾಗಿ, ಡಯಟ್ ಅಲ್ಲಿ ಆಸಕ್ತಿ ಇಲ್ಲ. ತಿನ್ನಬೇಕು ಅನ್ನಿಸಿದ್ದೆಲ್ಲವನ್ನೂ ತಿನ್ನುತ್ತೇನೆ. ಮಾಡುವ ಕೆಲಸಗಳಿಂದ ನನ್ನ ದೇಹ ಟೋನ್ಡ್ ಆಗಿ ಇದೆ. ಹುಟ್ಟಿದ್ದು ಬೆಳೆದಿದ್ದೆಲ್ಲ ಮೈಸೂರಿನಲ್ಲಿ. 17 ವರ್ಷ ಅಮೆರಿಕದಲ್ಲಿದ್ದೆ. ವಾಪಸ್ ಬಂದು ಹದಿನೈದು ವರ್ಷಗಳಾಯಿತು. ಭರತನಾಟ್ಯದಿಂದ ನನ್ನ ಫಿಟ್‌ನೆಸ್‌ಗೆ ಸಹಾಯವಾಗಿದೆ. ಜತೆಗೆ ಯೋಗ ಮಾಡುತ್ತೇನೆ. ವ್ಯಕ್ತಿತ್ವ ಮತ್ತು ಆತ್ಮವಿಶ್ವಾಸವೇ ಸೌಂದರ್ಯ. ಕೌಶಲಗಳನ್ನು ಕಲಿತರೆ ಆತ್ಮವಿಶ್ವಾಸ ತನ್ನಿಂದತಾನೇ ಬರುತ್ತದೆ. ಸರಳವಾಗಿ ಇರುವುದು ಮುಖ್ಯ.

ದನಿ ಎತ್ತುವುದರಲ್ಲಿ ತಪ್ಪೇನಿದೆ?

• ಸಿಂಧು ಕೆ.ಟಿ.

ಭಾವಯಾನ

ಬೆಂಗಳೂರಿನಿಂದ ಸಾಗರಕ್ಕೆ ಹೊರಟಿದ್ದ ರಾತ್ರಿ ಪ್ರಯಾಣದ ಸರ್ಕಾರಿ ಬಸ್ ಇನ್ನೇನು ಹೊರಡುವುದರಲ್ಲಿತ್ತು. ಒಳಗೆ ಬಂದ ಸುಮಾರು 20 ವರ್ಷದ ಹುಡುಗಿಯೊಬ್ಬಳು, ಮಹಿಳೆಯರ ಪಕ್ಕ ಖಾಲಿಯಿದ್ದ ಸೀಟಿಗಾಗಿ ಹುಡುಕಾಡಿದಳು. ಕೊನೆಗೂ ಅವಳ ಬಯಕೆಯ ಸೀಟು ಸಿಗದೆ, ಪುರುಷರೊಬ್ಬರ ಪಕ್ಕ ಸಿಕ್ಕಿದ ಸೀಟಿನ ಅರ್ಧಭಾಗದಲ್ಲಿ ನಿರಾಸೆಯಿಂದಲೇ ಕುಳಿತು, ಇನ್ನುಳಿದ ಜಾಗದಲ್ಲಿ ತನ್ನ ಬ್ಯಾಗ್ ಇಟ್ಟಿದ್ದಳು.

ಬಸ್ ಹೊರಟರೂ ಅವಳ ಇರುಸುಮುರುಸು ಮಾತ್ರ ಕಡಿಮೆಯಾಗಲಿಲ್ಲ. ಪ್ರತಿ ಸ್ಟಾಪ್ ಬಂದಾಗಲೂ ಯಾರಾದರೂ ಮಹಿಳೆಯ ಪಕ್ಕದ ಸೀಟು ಖಾಲಿಯಾಯಿತೇ ಎಂದು ನೋಡುವುದರಲ್ಲೇ ಅವಳ ಅರ್ಧ ಪ್ರಯಾಣ ಮುಗಿದಿತ್ತು. ಅಂತೂ ಅರಸೀಕೆರೆ ಬರುತ್ತಿದ್ದಂತೆ, ನನ್ನ ಪಕ್ಕ ಖಾಲಿಯಾದ ಸೀಟಿಗೆ ಬಂದು ಕುಳಿತಳು. ಆಗ ಅವಳು ಸ್ವಲ್ಪ ನಿರಾಳವಾದಂತೆ ಕಂಡುಬಂತು.

ಆಕೆಯ ಹೆಸರು ಪ್ರಿಯಾ. ಅವಳೊಂದಿಗೆ ಮಾತನಾಡಿದಾಗ ನನಗೆ ತಿಳಿದುಬಂದದ್ದು, ಈ ಹಿಂದೆ ಬಸ್ ಪ್ರಯಾಣಗಳಲ್ಲಿ ಅವಳಿಗಾಗಿದ್ದ ಕೆಟ್ಟ ಅನುಭವಗಳು ಪುರುಷರ ಪಕ್ಕ ಕುಳಿತುಕೊಳ್ಳಲು ಅವಳು ಭಯಪಡುವಂತೆ ಮಾಡಿದ್ದವು. ಜೋರಾಗಿ ವಿರೋಧಿಸಿದರೆ ಬೇರೆಯವರು ತನ್ನ ಬಗ್ಗೆ ತಪ್ಪು ತಿಳಿಯಬಹುದೇನೋ ಎಂಬ ಕಾರಣಕ್ಕೆ ಎಷ್ಟೋ ಬಾರಿ ಮೌನವಾಗಿಯೇ ಪ್ರತಿಭಟಿಸುತ್ತಿದ್ದಳಂತೆ.

ಕೆಲವೊಮ್ಮೆ ಬೇರೆ ಸೀಟಿಗೆ ಬೇಡಿಕೆಯಿಟ್ಟರೆ, ‘ಹೋಗ್ತಾ ಇರೋದೇ ಫ್ರೀಯಾಗಿ, ಸಿಕ್ಕ ಸೀಟಲ್ಲಿ ಸುಮ್ನೆ ಕೂತ್ಕೊಳಮ್ಮ’ ಎಂಬ ತಾತ್ಸಾರದ ಮಾತನ್ನು ಕೇಳಿ ರೋಸಿಹೋಗಿರುವುದಾಗಿ ಹೇಳಿದಳು. ನಂತರ ನಿದ್ದೆಗೆ ಜಾರಿದ ಅವಳು ಎಚ್ಚರಗೊಂಡಿದ್ದು ಶಿವಮೊಗ್ಗ ಬಸ್ ನಿಲ್ದಾಣದಲ್ಲಿಯೇ. ‘ಆ ಸೀಟಿನಲ್ಲಿ ಕುಳಿತಾಗಲೂ ಇಷ್ಟೇ ಆರಾಮದಾಯಕವಾಗಿ ಮಲಗುವುದು ಯಾವಾಗ?’ ಎಂಬ ನನ್ನ ಪ್ರಶ್ನೆಗೆ ‘ಎಂದಿಗೂ ಸಾಧ್ಯವಿಲ್ಲ’ ಎಂಬುದೇ ಆಕೆಯ ಉತ್ತರವಾಗಿತ್ತು. ಇದು ಬರೀ ಪ್ರಿಯಾ ಒಬ್ಬಳ ಕಥೆಯಲ್ಲ. ರಾತ್ರಿ ಒಬ್ಬಂಟಿಯಾಗಿ ಪ್ರಯಾಣಿಸುವ ನೂರಾರು ಮಹಿಳೆಯರ ವ್ಯಥೆಯೂ ಹೌದು. ಎಷ್ಟೋ ಮಹಿಳೆಯರು ಇಂದಿಗೂ ರಾತ್ರಿ ವೇಳೆ ರೈಲು ಅಥವಾ ಬಸ್‌ನಲ್ಲಿ ಒಬ್ಬರೇ ಪ್ರಯಾಣಿಸಲು ಹೆದರುತ್ತಾರೆ.

ಇಂತಹ ಅನುಭವಗಳು ರಾತ್ರಿ ಪ್ರಯಾಣಕ್ಕಷ್ಟೇ ಸೀಮಿತವಾಗಿಲ್ಲ. ಹಾಡಹಗಲೇ ಒಂಟಿ ಹೆಣ್ಣುಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸುವ ನೀಚ ಮನಃಸ್ಥಿತಿಗಳೂ ನಮ್ಮ ನಡುವೆ ಇವೆ. ಬೆಂಗಳೂರಿನ ಮೆಟ್ರೊ ರೈಲಿನಲ್ಲಿ ಸಹ ಮಹಿಳೆಯೊಬ್ಬರ ಜೊತೆ ವ್ಯಕ್ತಿಯೊಬ್ಬ ಅನುಚಿತವಾಗಿ ವರ್ತಿಸಿದ್ದು ಇತ್ತೀಚೆಗೆ ವರದಿಯಾಗಿತ್ತು. ಜನ ತುಂಬಿರುವ ಬಸ್‌ಗಳಲ್ಲಂತೂ ಇಂಥ ದುರುಳರ ದಂಡೇ ಇರುತ್ತದೆ.

ಕೆಲವು ಪುಂಡರಿಗೆ ಪಾಠ ಕಲಿಸಿದ ಘಟನೆಗಳ ಬಗ್ಗೆ ಎಷ್ಟು ಕೇಳುತ್ತೇವೆಯೋ ಕೇಳದೇ ಉಳಿದುಹೋಗುವ ಕಥೆಗಳೂ ಅಷ್ಟೇ ಪ್ರಮಾಣದಲ್ಲಿ ಇರುತ್ತವೆ. ತಮಗಾಗುವ ಇಂತಹ ನರಕಸದೃಶ ಅನುಭವವನ್ನು ಹೆಚ್ಚಿನ ಹೆಣ್ಣುಮಕ್ಕಳು ಒಡಲೊಳಗೇ ಬಚ್ಚಿಟ್ಟುಕೊಂಡಿರುತ್ತಾರೆ.

ನೋಡಿದವರು ಏನೆಂದುಕೊಳ್ಳುವರೋ ಎಂಬ ಭಯದಲ್ಲಿ ದೌರ್ಜನ್ಯವನ್ನು ಸಹಿಸಿಕೊಂಡು ಸುಮ್ಮನಾಗುವ ಪ್ರಿಯಾ ಅಂಥವರು ತಮ್ಮ ಪರವಾಗಿ ದನಿ ಎತ್ತುವುದು ಯಾವಾಗ? ಹೀಗೆ ದನಿ ಎತ್ತುವುದರಲ್ಲಿ ತಪ್ಪೇನಿದೆ? ಅವರ ದನಿ ಗಟ್ಟಿಗೊಳಿಸಬೇಕಾದವರು ಮತ್ತು ಸ್ಪಂದಿಸಬೇಕಾದವರು ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿದ್ದಾರೆಯೇ ಎಂಬ ಪ್ರಶ್ನೆಗಳು ಮೂಡುತ್ತವೆ. ಹೆಣ್ಣುಮಕ್ಕಳೊಂದಿಗೆ ಕೆಟ್ಟದಾಗಿ ವರ್ತಿಸುವವರಿಗೆ ಕಾನೂನಿನ ಭಯವೂ ಇರುವುದಿಲ್ಲವೇ? ಹಾಗಿದ್ದರೆ, ಸಾರ್ವಜನಿಕ ಸಾರಿಗೆಯಲ್ಲಿ ಮಹಿಳೆಯರ ಸುರಕ್ಷತೆ ಮರೀಚಿಕೆಯಾಗಿಯೇ ಉಳಿಯದಂತೆ ಮಾಡುವುದಾದರೂ ಹೇಗೆ?

ಹಪ್ಪಳ ಶುರುವಾಗಿದೆ ಸಪ್ಪಳ

ಹಪ್ಪಳ ತಯಾರಿಯಲ್ಲಿ ರಶ್ಮಿ ಆನಂದ್

ರಸಾಸ್ವಾದ

ಹಪ್ಪಳದ ಸಪ್ಪಳ ಮೆಲ್ಲಗೆ ಶುರುವಾಗುತ್ತಿದೆ. ಮಾಗಿಯ ಚಳಿ ತುಸು ಕಡಿಮೆಯಾಗುತ್ತಿದ್ದಂತೆ ಗ್ರಾಮೀಣ ಭಾಗದ ಮನೆ ಮನೆಗಳಲ್ಲಿ ಹಪ್ಪಳವೆಂಬೋ ಘಮ ಏಳುತ್ತದೆ. ವರ್ಷಕ್ಕಾಗುವಷ್ಟು ತರಹೇವಾರಿ ಹಪ್ಪಳಗಳು ತಯಾರಾಗುತ್ತವೆ.

ಒತ್ತಡದ ಈ ದಿನಗಳಲ್ಲಿ ಹಪ್ಪಳ ಮಾಡುವಷ್ಟು ಸಮಯವೆಲ್ಲಿದೆ ಎಂದು ಮೂಗು ಮುರಿಯುವವರೇ ಹೆಚ್ಚು. ಅಂತಹವರು ಅಂಗಡಿಯಲ್ಲಿ ಸಿಗುವ ಹಪ್ಪಳಗಳನ್ನೇ ಅಷ್ಟೋ ಇಷ್ಟೋ ತಂದು ಎಣ್ಣೆಯಲ್ಲಿ ಮುಳುಗೇಳಿಸಿ ತೃಪ್ತಿಪಟ್ಟುಕೊಳ್ಳುತ್ತಾರೆ. ಆಗ, ಅಮ್ಮ ಮಾಡುತ್ತಿದ್ದ ಡಬ್ಬಗಟ್ಟಲೆ ಹಪ್ಪಳದ ನೆನಪಿನ ಸುರುಳಿ ಬಿಚ್ಚಿಕೊಳ್ಳದೇ ಇರಲಾರದು.

ಮೂರ್ನಾಲ್ಕು ದಿನ ಅಕ್ಕಿ ನೆನೆ ಹಾಕಿ, ತೊಳೆದು, ಬಸಿದು, ರುಬ್ಬಿ ಮಾಡುತ್ತಿದ್ದ ಹಪ್ಪಳ ಮಾಡಲು ಸಮಯವಿಲ್ಲವೇ? ಯೋಚಿಸಬೇಡಿ, ಇನ್‌ಸ್ಟಂಟ್ ಆಗಿ ಕಡಿಮೆ ಸಮಯದಲ್ಲೇ ಮಾಡಿ ರುಚಿಕರ ಹಪ್ಪಳ ಎನ್ನುತ್ತಾರೆ ‘ಶ್ರಾವಣಿ ಅಡುಗೆ ಮನೆ’ ಯೂಟ್ಯೂಬ್ ಚಾನೆಲ್‌ನ ರಶ್ಮಿ ಆನಂದ್ ಚೊಳಚಗುಡ್ಡ.

‘ನಾದೋದು ಬ್ಯಾಡ, ಲಟ್ಟಿಸೋದ್ ಬ್ಯಾಡ. ಅಗ್ದಿ ಹಗೂರಕ್ಕೆ ಮಾಡಿ ಈ ಹಪ್ಳ’ ಎನ್ನುತ್ತಾ ಉತ್ತರ ಕರ್ನಾಟಕ ಭಾಷೆಯಲ್ಲಿ ತಮ್ಮ ಅಡುಗೆ ಮನೆಗೆ ಆಹ್ವಾನವೀಯುವ ರಶ್ಮಿ, ಕಡಿಮೆ ಅಳತೆಯಲ್ಲಿ, ಸುಲಭವಾಗಿ ಹಪ್ಪಳ ಮಾಡುವುದನ್ನು ಕಲಿಸುತ್ತಾರೆ. ಆಧುನಿಕ ಜೀವನಶೈಲಿಯಲ್ಲಿ ಹಿಂದಿನಂತೆ ವರ್ಷಕ್ಕಾಗುವಷ್ಟು ಹಪ್ಪಳ ಮಾಡಿಟ್ಟುಕೊಳ್ಳುವಷ್ಟು ಸಮಯ ಇಲ್ಲವೇ ಇಲ್ಲ. ಅಲ್ಲದೆ ಹಪ್ಪಳ ಮಾಡಿದರೂ ಒಣಗಿಸಲು ಜಾಗವಿಲ್ಲ. ಇದನ್ನರಿತ ರಶ್ಮಿ ಉದ್ಯೋಗಸ್ಥ ಮಹಿಳೆಯರಿಗೆ, ನಗರ ಪ್ರದೇಶದ ಗೃಹಿಣಿಯರಿಗೆ ಬಿಸಿಲು ಇಲ್ಲದಿದ್ದರೂ ಅತಿ ಸುಲಭದಲ್ಲಿ ಒಣಗುವ, ಒಲೆ ಹಚ್ಚದೆ ಮಾಡುವ, 10 ನಿಮಿಷದಲ್ಲೇ ತಯಾರಾಗುವ ಬಗೆಬಗೆಯ ಹಪ್ಪಳದ ವಿಧಾನಗಳನ್ನು ಹೇಳಿಕೊಡುತ್ತಾರೆ.

ಮೂರು ವರ್ಷಗಳ ಹಿಂದೆ ಬೇಸಿಗೆಯಲ್ಲಿ ಹಾಕಿದ್ದ ಹುರುಳಿ ಹಪ್ಪಳದ ರೆಸಿಪಿಯನ್ನು ಹಪ್ಪಳಪ್ರಿಯರು ಮೆಚ್ಚಿಕೊಂಡರು. ಇದರಿಂದ ಪ್ರೇರಣೆಗೊಂಡ ರಶ್ಮಿ, ಬಗೆಬಗೆ ಹಪ್ಪಳ ತಯಾರಿಯ ಬೆನ್ನು ಹತ್ತಿದರು. ಅಮ್ಮ ತಯಾರಿಸುತ್ತಿದ್ದ ಹಪ್ಪಳದ ಬಗೆಯನ್ನೇ ಮೂಲವಾಗಿರಿಸಿಕೊಂಡು ಹಲವು ಪ್ರಯೋಗಗಳನ್ನು ಮಾಡುತ್ತಾ ಬಂದರು.

ಉಳಿದ ಅಡುಗೆಯಲ್ಲೇ ಬಗೆ ಬಗೆಯ ಖಾದ್ಯ ತಯಾರಿಸುವುದು ರಶ್ಮಿ ಅವರ ಮತ್ತೊಂದು ವಿಶೇಷ. ಉಳಿದ ಇಡ್ಲಿಹಿಟ್ಟಿನಿಂದ ಮಾಡಿದ ಚಕ್ಕುಲಿ, ಉಳಿದ ಚಪಾತಿಯಲ್ಲಿ ಬಗೆ ಬಗೆ ಸ್ನ್ಯಾಕ್ಸ್ ತಯಾರಿಯಲ್ಲಿ ಅವರು ಸಿದ್ಧಹಸ್ತರು.

ಸುಮಾ ಬಿ.

ಖಿಚಿಯಾ ಪಾಪಡ್

ರಾಜಸ್ಥಾನದ ಜನಪ್ರಿಯ ಹಪ್ಪಳ ‘ಖಿಚಿಯಾ ಪಾಪಡ್’ ಅನ್ನು ಪರ್ಫೆಕ್ಟ್ ಆಗಿ ಬರುವಂತೆ ಹೇಳಿಕೊಟ್ಟಿದ್ದಾರೆ ರಶ್ಮಿ. ಈ ಬೇಸಿಗೆಯಲ್ಲಿ ನೀವೂ ಮಾಡಿ ಸವಿಯಬಹುದು.

ಏನೇನು ಬೇಕು? : ಎರಡು ಕಪ್ ಅಕ್ಕಿಹಿಟ್ಟು, ಒಂದು ಚಮಚ ಜೀರಿಗೆ, ಖಾರಕ್ಕೆ ಅಗತ್ಯದಷ್ಟು ಹಸಿಮೆಣಸಿನಕಾಯಿ ಜಜ್ಜಿದ್ದು ಅಥವಾ ಒಣಮೆಣಸಿನಕಾಯಿ, 1 ಚಮಚ ಹಪ್ಪಳದ ಖಾರ, 1 ಚಮಚ ಅಜ್ವಾನ, ರುಚಿಗೆ ಉಪ್ಪು.

ಹೀಗೆ ಮಾಡಿ: ದಪ್ಪ ತಳದ ದೊಡ್ಡ ಪಾತ್ರೆಯಲ್ಲಿ ನಾಲ್ಕು ಲೋಟ ನೀರು ಹಾಕಿ ಬಿಸಿ ಮಾಡಿ (ಅಕ್ಕಿಹಿಟ್ಟು ತೆಗೆದುಕೊಂಡ ಅಳತೆಯ ಕಪ್‌ನಲ್ಲೇ ನೀರು ತೆಗೆದುಕೊಳ್ಳಬೇಕು). ಕುದಿ ಬಂದ ಬಳಿಕ ಅದಕ್ಕೆ ಜೀರಿಗೆ, ಹಸಿಮೆಣಸಿನಕಾಯಿ, ಹಪ್ಪಳದ ಖಾರ, ಅಜ್ವಾನ, ಉಪ್ಪು ಹಾಕಿ ಮಿಕ್ಸ್ ಮಾಡಿ ಒಂದು ಕುದಿ ಕುದಿಸಬೇಕು. ಬಳಿಕ ಕುದಿಯುತ್ತಿರುವ ನೀರನ್ನು ಸೌಟಿನಿಂದ ಅಥವಾ ಕೋಲಿನಿಂದ ತಿರುಗಿಸುತ್ತ ಮತ್ತೊಂದು ಕೈಯಲ್ಲಿ ಅಕ್ಕಿಹಿಟ್ಟನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತ ಕಲೆಸಬೇಕು. ಕಡಿಮೆ ಉರಿ ಇಟ್ಟುಕೊಂಡು ಗಂಟಾಗದಂತೆ ಹಿಟ್ಟು ಕೂಡಿಸಬೇಕು. ನಂತರ ತಾಟು ಮುಚ್ಚಿ ಹಿಟ್ಟನ್ನು ಅರ್ಧ ನಿಮಿಷ ಬೇಯಿಸಿಕೊಳ್ಳಬೇಕು. ಅಂಗೈಗೆ ಎಣ್ಣೆ ಸವರಿಕೊಂಡು ಪಾತ್ರೆಯಲ್ಲಿರುವ ಹಿಟ್ಟನ್ನು ಸ್ವಲ್ಪ ಸ್ವಲ್ಪವೇ ತೆಗೆದುಕೊಂಡು ಉದ್ದಿನವಡೆ ಆಕಾರ ಮಾಡಿಟ್ಟುಕೊಳ್ಳಬೇಕು. ಎಲ್ಲವನ್ನೂ 15ರಿಂದ 20 ನಿಮಿಷ ಹಬೆಯಲ್ಲಿ ಬೇಯಿಸಬೇಕು (ಹಪ್ಪಳ ಹಗುರವಾಗಿ, ಅರಳಿನಂತೆ ಬರಲು, ಮುರಿಯದಿರಲು ಈ ಹಂತ ಬಲು ಮುಖ್ಯ). ಬಳಿಕ ಬೆಂದ ಹಿಟ್ಟನ್ನು ಬಿಸಿ ಇರುವಾಗಲೇ ಚೆನ್ನಾಗಿ ನಾದಿಕೊಳ್ಳಬೇಕು. ನಂತರ ಎರಡೂ ಬದಿಯಲ್ಲಿ ಪ್ಲಾಸ್ಟಿಕ್ ಶೀಟ್ ಇಟ್ಟು ತೆಳ್ಳಗೆ ಲಟ್ಟಿಸಿ, ಎಣ್ಣೆ ಹಚ್ಚಿದ ಕವರ್ ಮೇಲೆ ಒಣಗಲು ಹಾಕಬೇಕು. ಖಡಕ್ ಬಿಸಿಲು ಇದ್ದರೆ ಒಂದು ದಿನ ಒಣಗಿಸಿ ವರ್ಷದವರೆಗೂ ಸಂಗ್ರಹಿಸಿ ಇಟ್ಟುಕೊಳ್ಳಬಹುದು. ಎಣ್ಣೆಯಲ್ಲಿ ಕರಿದರೆ ಹಪ್ಪಳದ ಅಳತೆಗಿಂತ ಒಂದು ಪಟ್ಟು ಹೆಚ್ಚು ಅರಳುತ್ತದೆ.

ಬಾಬಿ, ನೆಲ್ಲಿ, ಪೇಪರ್, ಗಾಜು!

ಅಕ್ಕಿಹಿಟ್ಟಿನಲ್ಲಿ ಮಾಡುವ ಬಾಬಿ ಹಪ್ಪಳ, ಒಲೆ ಹಚ್ಚದೆ ಐದೇ ನಿಮಿಷದಲ್ಲಿ ಮಾಡುವ ಮಾವಿನಹಣ್ಣಿನ ಹಪ್ಪಳ, ಹಲಸಿನ ಹಪ್ಪಳ, ಗೋಧಿ ನೆನೆಸದೆ ಮಾಡುವ ಹಪ್ಪಳ, ಆಲೂಗಡ್ಡೆ ಹಪ್ಪಳ, ಜೋಳದ ಹಪ್ಪಳ, ಅವಲಕ್ಕಿ ಹಪ್ಪಳ, ಕಡ್ಲೆಹಿಟ್ಟಿನ ಹಪ್ಪಳ, ಹುರುಳಿ ಹಪ್ಪಳ, ನೆಲ್ಲಿಕಾಯಿ ಹಪ್ಪಳ, ಪೇಪರ್ ಹಪ್ಪಳ, ಗೆಣಸಿನ ಹಪ್ಪಳ, ಹೆಸರುಬೇಳೆ ಹಪ್ಪಳ, ಅಲಸಂದೆ ಹಪ್ಪಳ, ಗಾಜಿನ ಹಪ್ಪಳ, ಉದ್ದಿನಬೇಳೆ ಹಪ್ಪಳ, ಅವಲಕ್ಕಿ–ಆಲೂಗಡ್ಡೆ ಹಪ್ಪಳ, ಕೇರಳದ ರುಪ್ಪಳ ಹಪ್ಪಳ... ಹೀಗೆ 62 ಬಗೆಯ ಹಪ್ಪಳದ ರೆಸಿಪಿಗಳು ರಶ್ಮಿ ಅವರ ಚಾನೆಲ್‌ನ ಅಂಗಳದಲ್ಲಿವೆ.

ಡೇಟಾ ಹಿಂದೆ ಹೋಗಿ...

ಇನ್‌ಸ್ಟಂಟ್ ರೆಸಿಪಿಗಳನ್ನು ಹೆಚ್ಚು ಹೇಳಿಕೊಡುವ ‘ಶ್ರಾವಣಿ ಅಡುಗೆ ಮನೆ’ 4.67 ಲಕ್ಷ ಸಬ್‌ಸ್ಕ್ರೈಬರ್‌ಗಳನ್ನು ಹೊಂದಿದ್ದು, ಈವರೆಗೆ 12 ಕೋಟಿ ವೀಕ್ಷಣೆ ಪಡೆದಿದೆ. 988 ಖಾದ್ಯದ ರೆಸಿಪಿಗಳನ್ನು ಈ ಚಾನೆಲ್ ಮೂಲಕ ಹಂಚಿಕೊಂಡಿದ್ದಾರೆ ರಶ್ಮಿ. ಐದು ವರ್ಷಗಳ ಹಿಂದಷ್ಟೇ ಕೀಪ್ಯಾಡ್ ಫೋನ್ ಬಳಸುತ್ತಿದ್ದ ಅವರು, ಯೂಟ್ಯೂಬ್ ಚಾನೆಲ್‌ಗೆ ತೆರೆದುಕೊಂಡದ್ದು ಅಚ್ಚರಿಯೇ. ಕೋವಿಡ್ ಸಮಯದಲ್ಲಿ ಮಗನ ಆನ್‌ಲೈನ್ ಪಾಠದಿಂದಾಗಿ ಸ್ಮಾರ್ಟ್‌ಫೋನ್ ಸಖ್ಯ ಬೆಳೆಯಿತು. ಪಾಠ ಮುಗಿದ ಬಳಿಕ ಆ ದಿನದ 2 ಜಿಬಿ ಡೇಟಾ ಖಾಲಿ ಮಾಡುವ ಉಮೇದು ರಶ್ಮಿ ಅವರದ್ದು. ಅದಕ್ಕಾಗಿ ಟಿಕ್‌ಟಾಕ್ ಮಾಡುತ್ತಿದ್ದರು. ಟಿಕ್‌ಟಾಕ್ ರದ್ದಾದ ಬಳಿಕ ಯೂಟ್ಯೂಬ್‌ಗೆ ಅಡುಗೆ ರೆಸಿಪಿಯ ವಿಡಿಯೊಗಳನ್ನು ಹಾಕಲು ಶುರುವಿಟ್ಟರು. ಹೀಗೆ ಶುರುವಾದ ಖಯಾಲಿ ಈಗ ರಶ್ಮಿ ಅವರನ್ನು ಸ್ವಾವಲಂಬಿಯನ್ನಾಗಿಸಿದೆ. ಪತಿಯ ಸಹಕಾರವೂ ಅವರ ಬೆನ್ನಿಗಿದೆ.

prajavani.net prajavani
ಶನಿವಾರ, ಜನವರಿ 24, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 24 | ಪುಟ 24
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಾಂಪ್ರದಾಯಿಕ ಧಿರಿಸು

ಮಂಗಳೂರಿನಲ್ಲಿ ನಡೆದ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಹಾಲಕ್ಕಿ ಸಾಂಪ್ರದಾಯಿಕ ಉಡುಗೆ ಧರಿಸಿದ್ದ ಮಹಿಳೆ ಗಮನ ಸೆಳೆದರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 81,537 | ನಿಫ್ಟಿ 25,048 | $/₹ 91.90 | ಚಿನ್ನ (Std. 10g) ₹1,64,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,34,700 (ಬೆಂಗಳೂರು)

ಜನಾರ್ದನ ರೆಡ್ಡಿ 'ಮಾಡೆಲ್ ಹೌಸ್'ಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರ ಹೊರವಲಯದ ರುಕ್ಮಣಮ್ಮ ಚೆಂಗಾರೆಡ್ಡಿ (ಜಿ-ಸ್ಕ್ವೇರ್) ಬಡಾವಣೆಯಲ್ಲಿರುವ ಶಾಸಕ ಗಾಲಿ ಜನಾರ್ದನ ರೆಡ್ಡಿ ನಿವಾಸಕ್ಕೆ ಶುಕ್ರವಾರ ಸಂಜೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ. ಕಿಟಕಿ ಮತ್ತು ಬಾಗಿಲುಗಳಿಗೆ ಹಾನಿಯಾಗಿದೆ.

ಸುಮಾರು 80 ಎಕರೆ ವ್ಯಾಪ್ತಿಯ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರ ಜಂಟಿ ಒಡೆತನದ ಬಡಾವಣೆಯಲ್ಲಿ ಒಟ್ಟು 9,400 ಚದರಡಿಯ 60x50 ವಿಸ್ತೀರ್ಣದ ವಿಲ್ಲಾ ಮಾದರಿ ಮನೆಯನ್ನು ಜನಾರ್ದನ ರೆಡ್ಡಿ 2011ರಲ್ಲಿ ₹4 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದರು. ಮನೆಯಲ್ಲಿ ಯಾರೂ ವಾಸಿಸುತ್ತಿರಲಿಲ್ಲ. ಬಡಾವಣೆಯಲ್ಲಿ ನಿವೇಶನ ಕೊಳ್ಳುವ ಗ್ರಾಹಕರಿಗೆ ಈ ಮನೆಯನ್ನು ಮಾದರಿಯಾಗಿ ತೋರಿಸಲಾಗುತಿತ್ತು.

ಬೆಂಕಿ ಕಾಣಿಸುತ್ತಲೇ ಬಡಾವಣೆಯ ಭದ್ರತಾ ಸಿಬ್ಬಂದಿ ಮತ್ತು ಸ್ಥಳೀಯರು ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ಆರಿಸಿದ್ದಾರೆ. ಅಷ್ಟರಲ್ಲಿ ಮನೆಯೊಳಗಿನ ಮರದ ಪರಿಕರಗಳು, ಕಿಟಕಿ, ಕಂಬಗಳು ಅಗ್ನಿಗೆ ಆಹುತಿಯಾಗಿದ್ದವು.

▶8

ಚಿನಕುರುಳಿ – ಪ್ರಕಾಶ್ ಶೆಟ್ಟಿ

ಅಪೂರ್ಣ ಭಾಷಣ: ಕಲಾಪ ಹರಣ

ಸರ್ಕಾರ ಸಿದ್ಧಪಡಿಸಿದ್ದ ಭಾಷಣವನ್ನು ಪೂರ್ಣ ಪ್ರಮಾಣದಲ್ಲಿ ಓದದೇ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸದನದಿಂದ ತೆರಳುವ ವೇಳೆ ನಡೆದ ಕೋಲಾಹಲ ಶುಕ್ರವಾರ ಎರಡೂ ಸದನಗಳಲ್ಲಿ ಕಲಹಕ್ಕೆ ಎಡೆ ಮಾಡಿಕೊಟ್ಟಿತು

'ಅಗೌರವ'ಕ್ಕೆ ಅರ್ಧ ದಿನ ಬಲಿ

ಬೆಂಗಳೂರು: 'ರಾಜ್ಯಪಾಲರಿಗೆ ಅಗೌರವ ತೋರಿದ ಸಚಿವ ಎಚ್.ಕೆ. ಪಾಟೀಲ ಮತ್ತು ಇತರ ಸದಸ್ಯರನ್ನು ಅಮಾನತು ಮಾಡಬೇಕು' ಎಂದು ಬಿಜೆಪಿ ಸದಸ್ಯರು ಹಟ ಹಿಡಿದರೆ, 'ಸಂವಿಧಾನಕ್ಕೆ, ರಾಷ್ಟ್ರ ಗೀತೆಗೆ ಅವಮಾನ ಮಾಡಿರುವ ರಾಜ್ಯಪಾಲರು ನಾಡಿನ ಜನರ ಕ್ಷಮೆ ಕೇಳಬೇಕು' ಎಂದು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು.

ಆಡಳಿತ–ವಿರೋಧ ಪಕ್ಷದ ಸದಸ್ಯರ ವಾಕ್ಸಮರದಿಂದಾಗಿ ಶುಕ್ರವಾರ ವಿಧಾನಸಭೆಯ ಅರ್ಧ ದಿನದ ಕಲಾಪ ಕೋಲಾಹಲಕ್ಕೆ ಬಲಿಯಾಯಿತು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ರಾಜ್ಯಪಾಲರನ್ನು ಗೌರವಯುತವಾಗಿ ಸದನಕ್ಕೆ ಕರೆತಂದು ನಿರ್ಗಮಿಸುವಾಗ ಅಗೌರವ ತೋರಿದ್ದು ಸರಿಯಲ್ಲ. ರಾಜ್ಯಪಾಲರಿಗೆ ಅಗೌರವ ತೋರಿದವರನ್ನು ಅಮಾನತುಪಡಿಸಿ ಮೇಲ್ಪಂಕ್ತಿ ಹಾಕಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ ಎಸ್.ಸುರೇಶ್ ಕುಮಾರ್, 'ಬಿ.ಕೆ.ಹರಿಪ್ರಸಾದ್, ಎಚ್.ಸಿ.ಬಾಲಕೃಷ್ಣ ಅವರು ರಾಜ್ಯಪಾಲರನ್ನು ಅಡ್ಡಗಟ್ಟಲು ಯತ್ನಿಸಿದರು. ಒಂದೊಮ್ಮೆ ರಾಜ್ಯಪಾಲರು ಬಿದ್ದಿದ್ದರೆ ಸದನದ ಸ್ಥಿತಿ ಏನಾಗುತ್ತಿತ್ತು' ಎಂದು ಪ್ರಶ್ನಿಸಿದರು.

ಕಾನೂನು ಸಚಿವ ಎಚ್.ಕೆ. ಪಾಟೀಲ, 'ನಾನು ರಾಜ್ಯಪಾಲರು ಓಡಿ ಹೋದರು ಎಂದಿದ್ದನ್ನು ಇಲ್ಲ ಎನ್ನುವುದಿಲ್ಲ. ರಾಷ್ಟ್ರ ಗೀತೆ ನುಡಿಸುವವರೆಗೆ ನಿಲ್ಲದ ರಾಜ್ಯಪಾಲರು ನಾಡಿನ ಜನ, ಸದನದ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು. 'ಎಲ್ಲ ವಿಷಯಗಳನ್ನು ಪರಿಶೀಲಿಸಿ ಸೂಕ್ತ ರೂಲಿಂಗ್ ನೀಡಲಾಗುವುದು' ಎಂದ ಸಭಾಧ್ಯಕ್ಷ ಯು.ಟಿ. ಖಾದರ್, ಚರ್ಚೆಗೆ ಅಂತ್ಯ ಹಾಡಿದರು.

ಗದ್ದಲದಲ್ಲೆ ಕಳೆದ ಕಲಾಪ

'ರಾಜ್ಯಪಾಲರಿಗೆ ಅಡ್ಡಿಪಡಿಸಿದ ಸದಸ್ಯರನ್ನು ಅಮಾನತು ಮಾಡಬೇಕು' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿಯವರ ಪಟ್ಟು, ಅದಕ್ಕೆ ಕಾಂಗ್ರೆಸ್ ಸದಸ್ಯರ ಆಕ್ಷೇಪದಿಂದಾಗಿ ಉಂಟಾದ ಗದ್ದಲದಲ್ಲಿಯೇ ಪರಿಷತ್ತಿನ ಶುಕ್ರವಾರದ ಕಲಾಪ ಕೊನೆಗೊಂಡಿತು.

ಒಂದು ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು, 'ಗೂಂಡಾಗಿರಿ ಕಾಂಗ್ರೆಸ್‌ಗೆ ಧಿಕ್ಕಾರ' ಕೂಗಿದರು. ಕಾಂಗ್ರೆಸ್ ಸದಸ್ಯರು, 'ರಾಷ್ಟ್ರ ಗೀತೆಗೆ ಅವಮಾನ ಮಾಡಿದ ರಾಜ್ಯಪಾಲರಿಗೆ ಧಿಕ್ಕಾರ' ಎಂದರು. ಘೋಷಣೆಗಳಿಂದ ಆರಂಭವಾದ ಗದ್ದಲವು ಅವಾಚ್ಯ ಪದಗಳ ಬಳಕೆಗೆ ದಾರಿಮಾಡಿಕೊಟ್ಟಿತು. ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮ ಪೀಠದಿಂದ ಪದೇ–ಪದೇ ಎದ್ದುನಿಂತು ಗದ್ದಲ ನಿಲ್ಲಿಸಬೇಕಾಯಿತು.

'ಕಾಂಗ್ರೆಸ್‌ನ ಎಸ್.ರವಿ ಮತ್ತು ಬಿ.ಕೆ.ಹರಿಪ್ರಸಾದ್ ಅವರು ರಾಜ್ಯಪಾಲರಿಗೆ ಅಡ್ಡಿಪಡಿಸಿದರು. ಅವರನ್ನು ಅಮಾನತು ಮಾಡಬೇಕು' ಎಂದು ಇಬ್ಬರ ಹೆಸರನ್ನೂ ಉಲ್ಲೇಖಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಹೊರಟ್ಟಿ ಅವರಿಗೆ ಶುಕ್ರವಾರ ಮಧ್ಯಾಹ್ನ ಎರಡನೇ ಮನವಿ ಸಲ್ಲಿಸಿದರು.

ಮನವಿಯನ್ನು ಸದನದ ನೀತಿ ನಿರೂಪಣಾ ಸಮಿತಿಯ ಪರಿಶೀಲನೆಗೆ ವಹಿಸಿದ ಸಭಾಪತಿ ನಿರ್ಧಾರವನ್ನು ಕಾಂಗ್ರೆಸ್ ಸದಸ್ಯರು ತೀವ್ರವಾಗಿ ವಿರೋಧಿಸಿದರು. ನಿರ್ಧಾರವನ್ನು ಮರು-ಪರಿಶೀಲಿಸುವಂತೆ ಕಾಂಗ್ರೆಸ್ ಸದಸ್ಯರ ಮನವಿ ಪತ್ರ ಓದಿದ ಹೊರಟ್ಟಿ, ಪರಿಶೀಲನೆ ನಡೆಸಿ ನಿರ್ಧಾರ ತೆಗೆದುಕೊಳ್ಳುವವರೆಗೂ ತಾವು ನೀಡಿದ್ದ ರೂಲಿಂಗ್ ಅನ್ನು ಕಾಯ್ದಿರಿಸಿದರು.

ತಿಮ್ಮಾಪುರ ರಾಜೀನಾಮೆಗೆ ವಿಪಕ್ಷ ಪಟ್ಟು

'ಮದ್ಯ ಮಾರಾಟ ಸನ್ನದು ನೀಡಲು ಲಂಚದ ರೂಪದಲ್ಲಿ ಸುಮಾರು ₹4,000 ಕೋಟಿಗೂ ಹೆಚ್ಚು ಹಣ ಸಂಗ್ರಹಿಸಲು ಮುಂದಾಗಿರುವ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರ ರಾಜೀನಾಮೆ ಪಡೆದು, ನಂತರ ತನಿಖೆ ಆರಂಭಿಸಬೇಕು' ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಉಭಯ ಸದನಗಳಲ್ಲಿ ಆಗ್ರಹಿಸಿದ್ದು ಕಲಾಪ ಕಲಹಕ್ಕೆ ನಾಂದಿ ಹಾಡಿತು.

ವಿಧಾನಸಭೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಗದ್ದಲ ಮತ್ತು ಕೂಗಾಟ ಹೆಚ್ಚಾದ ಕಾರಣ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು. ಆದರೂ ವಿರೋಧ ಪಕ್ಷದ ಶಾಸಕರು ಧರಣಿ ಬಿಟ್ಟು ಕದಲದೇ ಇದ್ದುದರಿಂದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಲಾಪವನ್ನು ಜ.27ಕ್ಕೆ ಮುಂದೂಡಿದರು.

ನಿಲುವಳಿ ಸೂಚನೆಯಡಿ ವಿಷಯವನ್ನು ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸಭಾಧ್ಯಕ್ಷರನ್ನು ಕೋರಿದರು.

▶4D

'ರಾಷ್ಟ್ರಗೀತೆಗೆ ಅವಮಾನ ಅಲ್ಲವೇ?'

'ರಾಜ್ಯಪಾಲರು ಭಾಷಣವನ್ನು ಎಷ್ಟಾದರೂ ಓದಲಿ. ರಾಷ್ಟ್ರ ಗೀತೆ ಮುಗಿಯುವವರೆಗೆ ಇರಬೇಕಲ್ಲವೇ? ಅದಕ್ಕೂ ಮೊದಲೇ ನಿರ್ಗಮಿಸಿರುವುದು ರಾಷ್ಟ್ರ ಗೀತೆಗೆ ಅವಮಾನ ಮಾಡಿದಂತೆ ಅಲ್ಲವೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಮಧ್ಯ ಪ್ರವೇಶಿಸಿದ ಅವರು, 'ನನ್ನ ಸರ್ಕಾರ ಎಂದು ರಾಜ್ಯಪಾಲರು ಹೇಳುವುದು ತಪ್ಪೇನೂ ಅಲ್ಲ. ಅವರು ಸರ್ಕಾರದ ಮುಖ್ಯಸ್ಥರು. ಆದರೆ, ಅವರು ರಾಷ್ಟ್ರ ಗೀತೆಯ ಬಳಿಕ ಸದನದಿಂದ ತೆರಳಬೇಕಿತ್ತು' ಎಂದರು.

'ರಾಜ್ಯಪಾಲರು ಓಡಿ ಹೋಗಲಿಲ್ಲ. ವೇಗವಾಗಿ ಹೋದರು ಅಷ್ಟೆ. ಅವರು ರಾಜ್ಯದ ರಾಜ್ಯಪಾಲರೇ ಹೊರತು ನಿಮ್ಮ ರಾಜ್ಯಪಾಲರೂ ಅಲ್ಲ, ನಮ್ಮ ರಾಜ್ಯಪಾಲರೂ ಅಲ್ಲ' ಎಂದು ವಿರೋಧ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಹೇಳಿದರು.

'ರಾಜ್ಯಪಾಲರು ಹೊರಟು ಹೋಗುತ್ತಿದ್ದಂತೆಯೇ ನಾನು ಅವರ ಹಿಂದೆ ಓಡಿ ಹೋಗಿ ಕಳುಹಿಸಿಕೊಟ್ಟೆ' ಎಂದೂ ಮುಖ್ಯಮಂತ್ರಿ ಹೇಳಿದರು.

ಸುಲಿಗೆ ₹312 ಕೋಟಿ ಸಿಕ್ಕಿದ್ದು ₹24 ಕೋಟಿ

● ಆದಿತ್ಯ ಕೆ.ಎ.

ಬೆಂಗಳೂರು: ಸಾರ್ವಜನಿಕರನ್ನು ಬೆದರಿಸಿ ಹಣ ದೋಚಲು ಹೆಚ್ಚಾಗಿ ಬಳಸುತ್ತಿರುವ 'ಡಿಜಿಟಲ್ ಅರೆಸ್ಟ್' ವಂಚನೆಯ ತಂತ್ರದ ಮೂಲಕವೇ ಸೈಬರ್ ವಂಚಕರು, ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ₹312.47 ಕೋಟಿ ದೋಚಿದ್ದಾರೆ.



ಈ ಪ್ರಕರಣಗಳ ತನಿಖೆ ನಡೆಸಿರುವ ಸೈಬರ್ ಅಪರಾಧ ಠಾಣೆಯ ಪೊಲೀಸರಿಗೆ ಸಿಕ್ಕಿದ್ದು ಮಾತ್ರ ₹24.85 ಕೋಟಿ. ಉಳಿದ ₹287.62 ಕೋಟಿ ಎಲ್ಲಿ ಹೋಗಿದೆ ಎಂಬುದು ಪತ್ತೆಯೇ ಆಗಿಲ್ಲ.

ಅಷ್ಟೊಂದು ಪ್ರಮಾಣದ ಹಣ ಯಾವ ಯಾವ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಆಗಿದೆ ಎಂಬುದಕ್ಕೆ ಪುರಾವೆಯೇ ಸಿಕ್ಕಿಲ್ಲ. ಈಗಲೂ ಸೈಬರ್ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. 'ಡಿಜಿಟಲ್ ಅರೆಸ್ಟ್'ಗೆ ಹೆದರಿ ಸೈಬರ್ ವಂಚಕರು ನೀಡಿದ್ದ ವಿವಿಧ ಬ್ಯಾಂಕ್‌ಗಳ ಖಾತೆಗಳಿಗೆ ಲಕ್ಷ ಲಕ್ಷ ಹಣ ವರ್ಗಾವಣೆ ಮಾಡಿದ್ದ ನೂರಾರು ಮಂದಿ ಹಣ ಮರಳಿ ಪಡೆಯಲು ಇಂದಿಗೂ ಚಾತಕ ಪಕ್ಷಿಯಂತೆ ಕಾದಿದ್ದಾರೆ.

▶8

ಎಲ್ಲ ಪ್ರಕರಣ ಸಿಬಿಐಗೆ

'ದೇಶದಾದ್ಯಂತ ದಾಖಲಾದ ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸುವಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಸೂಚಿಸಿತ್ತು. ರಾಜ್ಯದ ಎಲ್ಲ ಪ್ರಕರಣಗಳನ್ನು ಒಟ್ಟುಗೂಡಿಸಿ ತನಿಖಾ ಹಂತದ ಮಾಹಿತಿ, ಪ್ರಕರಣಗಳ ಅಂಕಿ ಅಂಶಗಳನ್ನು ಸಿಬಿಐಗೆ ನೀಡಲಾಗುವುದು. ತನಿಖೆಗೆ ಎ.ಐ ನೆರವು ಪಡೆದುಕೊಳ್ಳಲು ಚಿಂತಿಸಲಾಗಿದೆ. ಸೈಬರ್ ಪೊಲೀಸರಿಗೆ ಕಾರ್ಯಾಚರಣೆಯ ತರಬೇತಿ ನೀಡ ಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

809 ಗ್ರೂಪ್, ಆ್ಯಪ್ ನಿಷ್ಕ್ರಿಯ

ವಂಚನೆಗೆ ನಕಲಿ ಸಿಮ್ ಕಾರ್ಡ್, ಬ್ಯಾಂಕ್‌ನ ನಕಲಿ ಖಾತೆ ಬಳಸಲಾಗುತ್ತಿದೆ. ನಕಲಿ ಖಾತೆಗಳ ವಿವರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆ ರೀತಿಯ ವಿವರ ಹಂಚಿಕೊಂಡ 268 ಫೇಸ್‌ಬುಕ್ ಗುಂಪುಗಳು, 465 ಟೆಲಿಗ್ರಾಂ ಗುಂಪುಗಳು, 15 ಇನ್‌ಸ್ಟಾಗ್ರಾಂ ಖಾತೆಗಳು, 61 ವಾಟ್ಸ್‌ಆ್ಯಪ್‌ಗಳನ್ನು ಇದುವರೆಗೂ ನಿಷ್ಕ್ರಿಯಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂಧನ ಘಟಕ: ಸ್ವಯಂಚಾಲಿತ ಭೂಪರಿವರ್ತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಿಸಬಹುದಾದ ಇಂಧನ ಘಟಕಗಳ ಸ್ಥಾಪನೆಗೆ ಕೃಷಿ ಭೂಮಿಯನ್ನು ಸ್ವಯಂಚಾಲಿತವಾಗಿ ಪರಿವರ್ತನೆ ಮಾಡುವ ನೂತನ ತಂತ್ರಾಂಶಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಶುಕ್ರವಾರ ಚಾಲನೆ ನೀಡಿದರು.

ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂತನ ತಂತ್ರಾಂಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ನವೀಕರಿಸಬಹುದಾದ ಇಂಧನ ಘಟಕಗಳ ಸ್ಥಾಪನೆಗಾಗಿ ಭೂಪರಿವರ್ತನೆಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಈ ತಂತ್ರಾಂಶ ಜಾರಿಗೆ ತರಲಾಗಿದೆ. ಈ ಮೂಲಕ ಈ ಕ್ಷೇತ್ರದಲ್ಲಿ ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ' ಎಂದರು.

'ಕರ್ನಾಟಕ ಆರಂಭದಿಂದಲೂ ನವೀಕರಿಸಬಹುದಾದ ಇಂಧನಗಳ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಈ ಘಟಕಗಳ ಸ್ಥಾಪನೆಗೆ ಈ ಹಿಂದೆ ಭೂ ಪರಿವರ್ತನೆ ಕಡ್ಡಾಯವಾಗಿತ್ತು. ಭೂ ಪರಿವರ್ತನೆಗೆ ಕನಿಷ್ಠ 6 ತಿಂಗಳು ಸಮಯ ತೆಗೆದುಕೊಳ್ಳುತ್ತಿತ್ತು.

▶9

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ.

ಚಿಟಿಕೆ ಸುದ್ದಿ

ದೃಷ್ಟಿದೋಷ ಪತ್ತೆ ತಂತ್ರಜ್ಞಾನ: 26ಕ್ಕೆ ಬಿಡುಗಡೆ

ಬೆಂಗಳೂರು: ಕಣ್ಣಿನ ಸಮಸ್ಯೆಯನ್ನು ಸುಲಭದಲ್ಲಿ ಪತ್ತೆ ಹಚ್ಚುವ ಅಡ್ವಾನ್ಸ್ ಪ್ರಿಸ್ಕ್ರೈನ್ ಒಬಿಎಮ್ 12 ತಂತ್ರಜ್ಞಾನ ಹೊಂದಿರುವ ಯಂತ್ರವನ್ನು ಜಮೀನ್ದಾರ್ ಮೈಕ್ರೋಸರ್ಜಿಕಲ್ ಐ ಸೆಂಟರ್ ಜ.26ರಂದು ಬೆಳಿಗ್ಗೆ 11ಕ್ಕೆ ಬಿಡುಗಡೆ ಮಾಡಲಿದೆ.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಸಮೀನಾ ಜಮೀನ್ದಾ ರ್ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಇದರ ವಿವರ ನೀಡಿದರು.

ಕಲ್ಯಾಣ ನಗರದ ಜಮೀನ್ದಾರ್ ಚಿಲ್ಡ್ರನ್ಸ್ ಐ ಸೆಂಟರ್‌ನಲ್ಲಿ ಜರುಗಲಿದೆ. ಈ ವೇಳೆ ಮಕ್ಕಳಿಗೆ ಕಣ್ಣಿನ ಉಚಿತ ತಪಾಸಣೆ ಮತ್ತು ಕನ್ನಡಕಗಳ ವಿತರಣೆ ಮಾಡಲಾಗುವುದು' ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಉಪಾಧ್ಯಕ್ಷ ಕೃಷ್ಣಾರೆಡ್ಡಿ ಉಪಸ್ಥಿತರಿದ್ದರು.

'ಗಾಂಧೀಜಿ ಹಿಂದುತ್ವವಾದಿಯಲ್ಲ, ನೈಜ ಹಿಂದು'

'ಅಂಗಳದಲ್ಲಿ ತಿಂಗಳ ಪುಸ್ತಕ' ಕಾರ್ಯಕ್ರಮದಲ್ಲಿ ಮೀನಾಕ್ಷಿ ಬಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲರ ಏಳಿಗೆ ಬಯಸಿದ ಮಹಾತ್ಮ ಗಾಂಧಿ ನೈಜ ಹಿಂದೂ. ಧರ್ಮದ ಆಧಾರದಲ್ಲಿ ಇನ್ನೊಂದು ಧರ್ಮವನ್ನು ದ್ವೇಷಿಸುವ, ಕೊಲೆ ಮಾಡಬೇಕೆನ್ನುವ ಹಿಂದುತ್ವವಾದಿ ಆಗಿರಲಿಲ್ಲ. ಹಿಂದುತ್ವವಾದಿಗಳು ಎಂದಿಗೂ ಗಾಂಧೀಜಿಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಾಹಿತಿ ಮೀನಾಕ್ಷಿ ಬಾಳಿ ತಿಳಿಸಿದರು.

ಮಹಾತ್ಮ ಗಾಂಧಿ ಅವರ 'ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ' ಕೃತಿಗೆ 100 ವರ್ಷ ತುಂಬಿರುವ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು 'ಎನ್‌ಇಎಸ್ ಆಫ್ ಕರ್ನಾಟಕ' ಇದರ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಅಂಗಳದಲ್ಲಿ ತಿಂಗಳ ಪುಸ್ತಕ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಗಾಂಧೀಜಿಯಿಂದಾಗಿ ದೇಶ ಇಬ್ಭಾಗವಾಯಿತು. ಪಾಕಿಸ್ತಾನದ ಮುಸ್ಲಿಮರ ಪರ ಸತ್ಯಾಗ್ರಹ ಕುಳಿತರು. ಅದಕ್ಕಾಗಿ ಅವರ ಕೊಲೆಯಾಯಿತು ಮುಂತಾದ ಸಂಕಥನಗಳ ಮೂಲಕ ಸುಳ್ಳು ಹರಡಲಾಗಿದೆ. ದೇಶ ಇಬ್ಭಾಗದ ವಿರುದ್ಧ ಗಾಂಧೀಜಿ ಇದ್ದರು. ಎರಡು ದೇಶ ಸಿದ್ಧಾಂತವನ್ನು ಮೊದಲು ಇಟ್ಟವರೇ ಸಾವರ್ಕರ್. ಅಲ್ಲದೇ ಎರಡು ದೇಶ ಸಿದ್ಧಾಂತ ಹುಟ್ಟುವ ಮೊದಲೇ ಆರು ಬಾರಿ ಗಾಂಧೀಜಿಯ ಕೊಲೆಯತ್ನ ನಡೆದಿತ್ತು' ಎಂದು ವಿವರಿಸಿದರು.

'ಸತ್ಯ ಮತ್ತು ಅಹಿಂಸೆಯನ್ನು ಪ್ರತಿಪಾದಿಸಿದ ಗಾಂಧೀಜಿ ಕೊನೆಗೆ ಹಿಂಸೆಗೆ, ಗುಂಡಿಗೆ ಬಲಿಯಾಗಿದ್ದು ವಿಪರ್ಯಾಸ. ಗಾಂಧೀಜಿ ಸಾವನ್ನು ಸಂಭ್ರಮಿಸುವವರ, ಸಮರ್ಥಿಸುವವರ ನಡುವೆ ನಾವು ಬದುಕುತ್ತಿದ್ದೇವೆ' ಎಂದರು.

'ದಕ್ಷಿಣ ಆಫ್ರಿಕಾದಲ್ಲಿ ರೈಲಿನಿಂದ ಹೊರಹಾಕಿದಾಗ, ಕುದುರೆ ಗಾಡಿಯಿಂದ ಹೊಡೆದು ಇಳಿಸಿದಾಗ ಗಾಂಧೀಜಿಯ ಸ್ವಾಭಿಮಾನಕ್ಕೆ ಏಟು ಬಿತ್ತು. ಆದರೆ, ಇಂದು ನಮ್ಮ ಜನರ ಸ್ವಾಭಿಮಾನವನ್ನು ಸುಟ್ಟುಹಾಕಲಾಗಿದೆ. ಸರ್ವನಾಶ ಮಾಡಲಾಗಿದೆ. ಮಹಿಳೆಯರು, ದಲಿತರು ಸೇರಿದಂತೆ ಯಾರ ಮೇಲೆಯಾದರೂ ದಬ್ಬಾಳಿಕೆ, ಪರಂಪರೆಯ ಹೆಸರಲ್ಲಿ ದೌರ್ಜನ್ಯ ನಡೆದರೆ ಅದು ತಪ್ಪು ಎಂದು ಹೇಳದಂತಾಗಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಸ್ಯಾಹಾರಿಯಾಗಿದ್ದ ಅವರು ಎಂದಿಗೂ ತನ್ನ ಆಹಾರ ಕ್ರಮವನ್ನು ಬದಲಾಯಿಸಿಕೊಳ್ಳಲಿಲ್ಲ. ಜೊತೆಗೆ ಮಾಂಸಾಹಾರಿಗಳನ್ನು ಕೀಳಾಗಿ ಕಾಣಲಿಲ್ಲ ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಧ್ಯಕ್ಷತೆ ವಹಿಸಿದ್ದರು. ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷ ಎಚ್.ಎನ್. ಸುಬ್ರಹ್ಮಣ್ಯ, ಪ್ರಾಂಶುಪಾಲ ಪಿ.ಎಲ್. ರಮೇಶ್, ಉಪ ಪ್ರಾಂಶುಪಾಲ ಅಲಕಾನಂದ, ಕನ್ನಡ ವಿಭಾಗದ ಮುಖ್ಯಸ್ಥ ಬಿ. ಪಾಪಣ್ಣ, ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಉಪಸ್ಥಿತರಿದ್ದರು.

'ಅಂಗಳದಲ್ಲಿ ತಿಂಗಳ ಪುಸ್ತಕ' ಕಾರ್ಯಕ್ರಮದಲ್ಲಿ ಎಚ್.ಎನ್. ಸುಬ್ರಹ್ಮಣ್ಯ, ಮೀನಾಕ್ಷಿ ಬಾಳಿ, ಮಾನಸ, ಕೆ.ಬಿ. ಕಿರಣ್ ಸಿಂಗ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನೇತಾಜಿ ಸ್ಮರಣೆ ಅಗತ್ಯ: ಮುರಿಗೆಪ್ಪ

ಬೆಂಗಳೂರು: 'ಸುಭಾಷ್‌ಚಂದ್ರ ಬೋಸ್ ಅಪ್ರತಿಮ ದೇಶಭಕ್ತ, ಸ್ವಾತಂತ್ರ್ಯ ಜ್ಯೋತಿ ಬೆಳಗಿಸಲು ತಮ್ಮ ರಕ್ತವನ್ನೇ ಹರಿಸಿದ ಮಹಾನ್ ಚೇತನ' ಎಂದು ಹಂಪಿ ವಿಶ್ವವಿದ್ಯಾಲಯದ ನಿಕಟಪೂರ್ವ ಕುಲಪತಿ ಮುರಿಗೆಪ್ಪ ಸ್ಮರಿಸಿದರು.

ನೇತಾಜಿ ಸಮಿತಿಯು ಮತ್ತಿಕೆರೆಯ ನೇತಾಜಿ ವೃತ್ತದಲ್ಲಿ ಆಯೋಜಿಸಿದ್ದ ನೇತಾಜಿಯವರ 129ನೇ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನೇತಾಜಿ ಅವರು ಕರ್ನಾಟಕಕ್ಕೆ ಭೇಟಿ ನೀಡುವುದನ್ನು ಕಾಂಗ್ರೆಸ್ಸಿಗರು ಟೀಕಿಸಿದ್ದರು. ಅವರನ್ನು ಎದುರಿಸಿ ಅಂದು ಮೈಲಾರ ಮಹದೇವ ಅವರು ನೇತಾಜಿಯನ್ನು ಬರಮಾಡಿಕೊಂಡಿದ್ದರು' ಎಂದು ನೆನಪು ಮಾಡಿಕೊಂಡರು.

ಸಮಿತಿಯ ಸದಸ್ಯರಾದ ವಿನಯ್ ಸಾರಥಿ, ಕಮಲ್ ಸೇನ್ ಮತ್ತು ಕೃಷ್ಣ ಪಾಲ್ಗೊಂಡಿದ್ದರು.

'ವಿಶ್ವಕರ್ಮ: ವಿಶೇಷ ಪ್ಯಾಕೇಜ್ ಘೋಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವಕರ್ಮ, ಅಕ್ಕಸಾಲಿಗರು ಸಂಕಷ್ಟದಲ್ಲಿದ್ದು ಅವರಿಗೆ ನೆರವಾಗುವ ದೃಷ್ಟಿಯಿಂದ ವಿಶೇಷ ಪ್ಯಾಕೇಜ್ ಪ್ರಕಟಿಸಬೇಕು' ಎಂದು ವಿಶ್ವಕರ್ಮ ಸೇವಾ ಸಮಿತಿ ಅಧ್ಯಕ್ಷ ಆರ್. ಮಧುಸೂದನ್ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಅಗತ್ಯ ಕೌಶಲ ಮತ್ತು ಉಪಕರಣಗಳು ಇದ್ದರೂ ಕಚ್ಚಾ ವಸ್ತುಗಳ ಕೊರತೆಯಿಂದ ಕೆಲಸ ಇಲ್ಲದಂತಾಗಿದೆ. ಬಂಡವಾಳಶಾಹಿಗಳ ಹಾವಳಿಯಿಂದ ಗುಡಿ ಕೈಗಾರಿಗಳು ತೀವ್ರ ನಷ್ಟ ಅನುಭವಿಸುತ್ತಿವೆ' ಎಂದು ಅಳಲು ತೋಡಿಕೊಂಡಿದ್ದಾರೆ.

'ಅವಕಾಶಗಳ ಕೊರತೆಯಿಂದ ಇಡೀ ಸಮುದಾಯ ಸಂಕಷ್ಟಕ್ಕೆ ಒಳಗಾಗಿದೆ. ಆದ್ದರಿಂದ, ನಿವೇಶನಗಳ ಹಂಚಿಕೆ ಮತ್ತು ಮನೆಗಳನ್ನು ಮಂಜೂರು ಮಾಡಲು ಕ್ರಮಕೈಗೊಳ್ಳಬೇಕು. ಹಣಕಾಸಿನ ನೆರವು ನೀಡುವುದರ ಜೊತೆಗೆ, ಈ ಸಮುದಾಯದ ಜೀವನೋಪಾಯವನ್ನು ಬೆಂಬಲಿಸುವ ಯೋಜನೆಗಳನ್ನು ರೂಪಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಕಚ್ಚಾ ವಸ್ತುಗಳ ಖರೀದಿಗೆ ಸಬ್ಸಿಡಿ ಒದಗಿಸಬೇಕು. ಸಾಂಪ್ರದಾಯಿಕ ಕುಶಲಕರ್ಮಿಗಳ ಗುರುತಿಸುವಿಕೆ, ರಕ್ಷಣೆ ಮತ್ತು ಪುನರುಜ್ಜೀವನಕ್ಕೆ ನೆರವು ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ 8ನೇ ಶಾಖೆಯನ್ನು ರುಕ್ಮಿಣಿ ವಸಂತ್, ಟಿ.ಎ. ಶರವಣ ಶುಕ್ರವಾರ ಉದ್ಘಾಟಿಸಿದರು

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ 8ನೇ ಶಾಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ 8ನೇ ಶಾಖೆ ಕನಕಪುರ ರಸ್ತೆಯಲ್ಲಿ ಶುಕ್ರವಾರ ಆರಂಭವಾಯಿತು.

ನಟಿ ರುಕ್ಮಿಣಿ ವಸಂತ್ ಹಾಗೂ ಬಿಗ್‌ಬಾಸ್–12ರ ವಿಜೇತ ಗಿಲ್ಲಿ ನಟರಾಜ್, ಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ. ಶರವಣ ಅವರು ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿ ಶಾಖೆಯನ್ನು ಉದ್ಘಾಟಿಸಿದರು.

ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, 'ಸಾಯಿಬಾಬಾ ಅವರ ಭಕ್ತರಾದ ಶರವಣ ಅವರು ಸಾಯಿ ಗೋಲ್ಡ್ ಪ್ಯಾಲೇಸ್ ಸ್ಥಾಪನೆ ಮಾಡಿದ್ದಾರೆ. ಗ್ರಾಹಕರಿಗೆ ಉತ್ತಮ ಚಿನ್ನಾಭರಣ ಲಭಿಸಬೇಕು ಎಂದು ಇದೀಗ 8ನೇ ಶಾಖೆಯನ್ನು ಪ್ರಾರಂಭಿಸಿದ್ದಾರೆ. 500ಕ್ಕೂ ಹೆಚ್ಚು ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಅವರ ಕುಟುಂಬಗಳಿಗೆ ಆಸರೆಯಾಗಿದ್ದಾರೆ' ಎಂದರು.

ಟಿ.ಎ.ಶರವಣ ಮಾತನಾಡಿ, 'ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಿ ಶಾಪಿಂಗ್ ಮಾಡಲು, ಸಂಚಾರ ದಟ್ಟಣೆಯಿಂದ ಒಂದು ದಿನ ವ್ಯರ್ಥವಾಗುತ್ತದೆ. ಜನರ ಅನುಕೂಲಕ್ಕಾಗಿ ಕನಕಪುರ ರಸ್ತೆಯಲ್ಲಿ ಶಾಖೆ ಆರಂಭಿಸಲಾಗಿದೆ. ಮಂಡ್ಯ, ಚನ್ನಪಟ್ಟಣ, ರಾಮನಗರದ ಜನತೆಗೂ ಇದು ಹತ್ತಿರವಾಗುತ್ತದೆ' ಎಂದರು.

'ಚಿನ್ನದ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದು, ಅಗತ್ಯಕ್ಕೆ ತಕ್ಕಂತೆ ಚಿನ್ನ ಖರೀದಿಸುವುದು ಒಳ್ಳೆಯದು. 10 ಗ್ರಾಂ ಚಿನ್ನದ ಮೇಲೆ ₹5 ಸಾವಿರ ಹಾಗೂ 1 ಕೆ.ಜಿ ಬೆಳ್ಳಿ ಖರೀದಿಗೆ ₹5 ಸಾವಿರ ರಿಯಾಯಿತಿ ನೀಡಲಾಗುತ್ತಿದೆ. ಉಳಿತಾಯ ಯೋಜನೆಯಲ್ಲಿ ಹೂಡಿಕೆ ಮಾಡಿದವರಿಗೆ ಮೇಕಿಂಗ್ ಚಾರ್ಜ್ ಇರುವುದಿಲ್ಲ. ಒಂದು ಕ್ಯಾರೆಟ್ ಡೈಮಂಡ್ ಖರೀದಿಗೆ ₹ 10 ಸಾವಿರ ರಿಯಾಯಿತಿ ಫೆಬ್ರುವರಿ 10ರವರೆಗೆ ಇರುತ್ತದೆ' ಎಂದು ತಿಳಿಸಿದರು.

ಕೇಂದ್ರ ಸಚಿವೆ ಶೋಭಾ ಕರಾಂದ್ಲಾಜೆ, ಬಿಗ್‌ಬಾಸ್ ಸ್ಪರ್ಧಿಗಳಾದ ರಕ್ಷಿತಾ, ಅಶ್ವಿನಿ ಗೌಡ, ಕಾವ್ಯಾ, ರಘು, ಧನುಷ್ ಗೌಡ, ಸ್ಪಂದನ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

'ಹಸಿರಿಗಾಗಿ ಓಡಿ, ಮುಕ್ತವಾಗಿ ಉಸಿರಾಡಿ: ನಾಳೆ 'ಮಾಹೆಥಾನ್'

ಬೆಂಗಳೂರು: 'ಹಸಿರಿಗಾಗಿ ಓಡಿ, ಸ್ವಚ್ಛಂದವಾಗಿ ಉಸಿರಾಡಿ' ಎಂಬ ಧ್ಯೇಯದೊಂದಿಗೆ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯವು ಜ.25ರಂದು 'ಮಾಹೆಥಾನ್ 2026' ಓಟ ಹಮ್ಮಿಕೊಂಡಿದೆ.

ಆಕ್ಸಿಸ್ ಬ್ಯಾಂಕ್ ಸಹಯೋಗದ 'ಮಾಹೆಥಾನ್ 2026'ರಲ್ಲಿ 21.1 ಕಿ.ಮೀ. ಹಾಫ್ ಮ್ಯಾರಥಾನ್, 10 ಕಿ.ಮೀ, 5 ಕಿ.ಮೀ ಮತ್ತು 3 ಕಿ.ಮೀ ಫನ್ ರನ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

ಯಲಹಂಕದಲ್ಲಿರುವ ಮಾಹೆ ಬೆಂಗಳೂರು ಕ್ಯಾಂಪಸ್‌ನಲ್ಲಿ ಆರಂಭವಾಗುವ ಓಟವು ಅಲ್ಲೇ ಮುಕ್ತಾಯಗೊಳ್ಳಲಿದೆ. ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾದ 'ಎಐಎಂಎಸ್ ಪ್ರಮಾಣೀಕೃತ' ಮಾರ್ಗದಲ್ಲಿ ಓಟ ನಡೆಯಲಿದೆ. ನುರಿತ ಓಟಗಾರರು, ಹವ್ಯಾಸಿ ಓಟಗಾರರು ಭಾಗವಹಿಸಲಿದ್ದಾರೆ.

'ಮಾಹೆಥಾನ್ 2026 ಕೇವಲ ಓಟವಷ್ಟೇ ಅಲ್ಲ, ಇದೊಂದು ಆಂದೋಲನ. ಆರೋಗ್ಯ, ಸುಸ್ಥಿರತೆ ಮತ್ತು ಪರಿಸರ ಕಾಳಜಿಯ ಅಡಿ ಸಾವಿರಾರು ಓಟಗಾರರನ್ನು ಒಗ್ಗೂಡಿಸುವ ಮೂಲಕ ಪ್ರಜ್ಞಾವಂತ ಸಮಾಜ ನಿರ್ಮಿಸುವತ್ತ ಅರ್ಥಪೂರ್ಣ ಹೆಜ್ಜೆ ಇಡುತ್ತಿದ್ದೇವೆ ಎಂದು ಸಮ ಕುಲಪತಿ ಮಧು ವೀರರಾಘವನ್ ತಿಳಿಸಿದರು.

ಇದಾದ ಬಳಿಕ ಫೆಬ್ರುವರಿ 8ರಂದು ಮಣಿಪಾಲದ ಕೆಎಂಸಿ ಗ್ರೀನ್ಸ್‌ನಲ್ಲಿ 8ನೇ ಆವೃತ್ತಿಯ ಮಣಿಪಾಲ್ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳೇ ಆಯೋಜಿಸುವ ಭಾರತದ ಅತಿದೊಡ್ಡ ಮ್ಯಾರಥಾನ್ ಇದಾಗಿದೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳು, ಕಾರ್ಪೊರೇಟ್ ಉದ್ಯೋಗಿಗಳು ಸೇರಿ ಆಸಕ್ತರು ನೋಂದಾಯಿಸಿಕೊಳ್ಳಬಹುದು. ವಿವರಗಳು ಮತ್ತು ನೋಂದಣಿಗೆ ವೆಬ್‌ಸೈಟ್ https://www.mahethon.in/ ಭೇಟಿ ನೀಡಬಹುದು.

ನಾಲ್ಕು ಎಕರೆ ಸರ್ಕಾರಿ ಭೂಮಿ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹13.71 ಕೋಟಿ ಮೌಲ್ಯದ 4.04 ಎಕರೆ ಸರ್ಕಾರಿ ಜಮೀನು ವಶಕ್ಕೆ ಪಡೆಯಲಾಗಿದೆ.

ಜಿಲ್ಲೆಯಾದ್ಯಂತ ವಿವಿಧ ತಾಲ್ಲೂಕು ತಹಶೀಲ್ದಾರರು ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಗುಂಡುತೋಪು, ರಾಜಕಾಲುವೆ, ಸ್ಮಶಾನ ಜಾಗಕ್ಕೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ದಾಸನಪುರ ಹೋಬಳಿಯ ಬೈಲುಕೋನೇನ ಹಳ್ಳಿ ಗ್ರಾಮದಲ್ಲಿ ₹5 ಕೋಟಿ ಮೌಲ್ಯದ 1.04 ಎಕರೆ ಗುಂಡುತೋಪು, ವರ್ತೂರು ಹೋಬಳಿಯ ಹರಳೂರು ಗ್ರಾಮದಲ್ಲಿ ₹4.40 ಕೋಟಿ ಮೌಲ್ಯದ 22 ಗುಂಟೆ ಗುಂಡುತೋಪು, ಬಿದರಹಳ್ಳಿ ಹೋಬಳಿ ದೊಡ್ಡಗುಬ್ಬಿ ಗ್ರಾಮದಲ್ಲಿ ₹1 ಕೋಟಿ ಮೌಲ್ಯದ 2 ಗುಂಟೆ ಗುಂಡುತೋಪು, ಅತ್ತಿಬೆಲೆ ಹೋಬಳಿಯ ವೀರಸಂದ್ರ ಗ್ರಾಮದಲ್ಲಿ ₹18 ಲಕ್ಷ ಮೌಲ್ಯದ 4 ಗುಂಟೆ ರಾಜಕಾಲುವೆ ಒತ್ತುವರಿ ತೆರವು ಮಾಡಲಾಗಿದೆ.

ತಾವರಕೆರೆ ಹೋಬಳಿ ಮಾರೇನಹಳ್ಳಿ ಗ್ರಾಮದಲ್ಲಿ ₹66 ಲಕ್ಷ ಮೌಲ್ಯದ 22 ಗುಂಟೆ ಗುಂಡುತೋಪು, ನಾಗನಹಳ್ಳಿ ಗ್ರಾಮದಲ್ಲಿ ₹ 57 ಲಕ್ಷ ಮೌಲ್ಯದ 19 ಗುಂಟೆ ಗುಂಡುತೋಪು ಹಾಗೂ ₹ 1.38 ಕೋಟಿ ಮೌಲ್ಯದ 1.06 ಗುಂಟೆ, ದಾಸನಪುರ ಹೋಬಳಿಯ ಸೊಂಡೇಕೊಪ್ಪ ಗ್ರಾಮದಲ್ಲಿ ₹52 ಲಕ್ಷ ಮೌಲ್ಯದ 5 ಗುಂಟೆ ಜಾಗವನ್ನು ತೆರವು ಮಾಡಲಾಗಿದೆ.

ಜಾಹೀರಾತು

'ಉದ್ಯಮಿ ಕುರುಬ' ಎಕ್ಸ್‌ಪೋ ಪೂರ್ವಭಾವಿ ಸಭೆ: ಕುರುಬ ಸಮುದಾಯದ ಒಡೆತನದ ಹಲವಾರು ಕ್ಷೇತ್ರಗಳ ಉದ್ಯಮಗಳು ಹಾಗೂ ಉದ್ಯಮಿಗಳನ್ನು ಒಂದು ವೇದಿಕೆಯಲ್ಲಿ ತರುವ ನಿಟ್ಟಿನಲ್ಲಿ 'ಉದ್ಯಮಿ ಕುರುಬ–2026' ಚೊಚ್ಚಲ ಎಕ್ಸ್‌ಪೋ ಆಯೋಜಿಸುವ ಕುರಿತು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಕನಕಶ್ರೀ ಹೌಸಿಂಗ್ ಸೊಸೈಟಿ ಅಧ್ಯಕ್ಷ ಟಿ.ವಿ ಬಳಗಾವಿ, ವೆಂಚುರಾ ಇನ್‌ಫ್ರಾ ವ್ಯವಸ್ಥಾಪಕ ನಿರ್ದೇಶಕ ಬಾಬು ಆನೇಕಲ್, ವಿಜಯಕುಮಾರ್ ಹಾಗೂ ಕೆ.ಕೆ ಇನ್‌ಫ್ರಾ ಮುಖ್ಯಸ್ಥ ಕೇಶವಮೂರ್ತಿ, ಕಾರ್ತಿಕ್ ಎನ್. ಆರ್. ಹಾಗೂ ಇತರರು ಭಾಗವಹಿಸಿದ್ದರು.

'ರಾಜ್ಯಪಾಲರ ನಡೆ ಅಸಾಂವಿಧಾನಿಕ'

ಬೆಂಗಳೂರು: ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ವಿಧಾನಮಂಡಲ ಅಧಿವೇಶನದಲ್ಲಿ ಓದದೇ ನಿರ್ಗಮಿಸುವ ಮೂಲಕ ಸಂವಿಧಾನವನ್ನು ಉಲ್ಲಂಘಿಸಿದ್ದಾರೆ ಎಂದು 'ಜಾಗೃತ ನಾಗರಿಕರು' ಆರೋಪಿಸಿದ್ದಾರೆ.

'ಜಾಗೃತ ನಾಗರಿಕರು' ಪರವಾಗಿ ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ಎಸ್. ಜಿ. ಸಿದ್ದರಾಮಯ್ಯ, ವಿಜಯಾ, ಟಿ.ಸುರೇಂದ್ರ ರಾವ್, ಬಿ. ಶ್ರೀಪಾದ ಭಟ್, ಕೆ. ಎಸ್. ವಿಮಲಾ, ಮಾವಳ್ಳಿ ಶಂಕರ್, ಜಾಣಗೆರೆ ವೆಂಕಟರಾಮಯ್ಯ, ಬಂಜಗೆರೆ ಜಯಪ್ರಕಾಶ್, ರುದ್ರಪ್ಪ ಹನಗವಾಡಿ, ಎನ್. ಗಾಯತ್ರಿ, ವಸುಂಧರಾ ಭೂಪತಿ ಈ ಕುರಿತು ಹೇಳಿಕೆ ನೀಡಿದ್ದಾರೆ.

ದೇಶಪ್ರೇಮದ ಬಗ್ಗೆ ಉಪದೇಶ ಮಾಡುವ ಬಿಜೆಪಿ ಶಾಸಕರು, ರಾಜ್ಯಪಾಲರ ಅಸಾಂವಿಧಾನಿಕ ನಡೆಗಳನ್ನು ಸಮರ್ಥನೆ ಮಾಡುತ್ತಿರುವುದು ರಾಜ್ಯಪಾಲರ ನಡೆಯ ಹಿಂದಿನ ದುರುದ್ದೇಶವನ್ನು ಸಮರ್ಥನೆ ಮಾಡುತ್ತದೆ ಎಂದು ಹೇಳಿದ್ದಾರೆ.

ಇದೇ ರೀತಿಯ ಘಟನೆಗಳು ಕೇರಳ ಮತ್ತು ತಮಿಳುನಾಡಿನಲ್ಲಿ ನಡೆದ ಬಗ್ಗೆ ವರದಿಯಾಗಿದ್ದು, ರಾಜ್ಯಪಾಲರ ಸಾಂವಿಧಾನಿಕ ಹುದ್ದೆಯನ್ನು ಬಿಜೆಪಿಯೇತರ ಸರ್ಕಾರಗಳ ವಿರುದ್ಧ ದುರುಪಯೋಗ ಪಡಿಸಿಕೊಳ್ಳುತ್ತಿರುವುದಕ್ಕೆ ಉದಾಹರಣೆ ಎಂದು ತಿಳಿಸಿದ್ದಾರೆ. ವಿ.ಬಿ. ಗ್ರಾಮ್ ಜಿ ಯಂತಹ ಜನವಿರೋಧಿ ಕಾಯ್ದೆಯನ್ನು ವಾಪಸ್ ಮಾಡಲು ರಾಜ್ಯ ಸರ್ಕಾರ ನಿರ್ಣಯ ಅಂಗೀಕರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹೆಜ್ಜೆಯಿಡು ಬೆಂಗಳೂರು: 30ಕ್ಕೆ ಸಂವಿಧಾನ ನಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ವತಿಯಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಸಹಯೋಗ, ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಜ.30ರಂದು ಬೆಳಿಗ್ಗೆ 7ಕ್ಕೆ 'ಸಂವಿಧಾನವೇ ಬೆಳಕು–ಹೆಜ್ಜೆಯಿಡು ಬೆಂಗಳೂರು' ಸಂವಿಧಾನ ನಡಿಗೆ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ವೆಂಕಟಗಿರಿ ಗೌಡ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವುದರೊಂದಿಗೆ ಮೌಲ್ಯ, ಹಕ್ಕು, ಮತ್ತು ಕರ್ತವ್ಯಗಳನ್ನು ಗೌರವಿಸುವ, ಅರಿವು ಮೂಡಿಸುವ ಉದ್ದೇಶದಿಂದ ಸಂವಿಧಾನ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಿಚಾರ ಸಂಕಿರಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ ನಡಿಗೆಗೆ ಚಾಲನೆ ನೀಡಲಾಗುತ್ತದೆ. ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ.

ಸಂವಿಧಾನವೇ ಬೆಳಕು

ಬೆಂಗಳೂರು ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿರುವ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಭಾಗವಹಿಸಲು ಮುಕ್ತ ಅವಕಾಶ ಇದೆ. ನೋಂದಣಿ ಮಾಡಿಕೊಂಡವರಿಗೆ ಟಿ ಶರ್ಟ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 9901918805 ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಶಿವಬಾಲಯೋಗಿ ಮಹಾರಾಜರ 91ನೇ ವರ್ಷದ ಜಯಂತ್ಯೋತ್ಸವ: ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಆಯೋಜನೆ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಸ್ಥಳ: ಶಿವಬಾಲಯೋಗಿ ಮಹಾರಾಜ್ ಆಶ್ರಮ, ಜೆ.ಪಿ.ನಗರ 3ನೇ ಹಂತ, ಬೆಳಿಗ್ಗೆ 8ರಿಂದ

ಜನಪರ ಶಿಕ್ಷಣ ನೀತಿಗಾಗಿ 'ಜನ ಸಂಸತ್ತು': ಉದ್ಘಾಟನೆ: ಸುಖದೇವ್ ಥೋರಟ್, ಪ್ರಾಸ್ತಾವಿಕ ನುಡಿ: ತರುಣ್ ಕಾಂತಿ ನಸ್ಕರ್, ಅಧ್ಯಕ್ಷತೆ: ಪ್ರಕಾಶ್ ಎನ್. ಶಾ, ಭಾಷಣಕಾರರು: ಜವಾಹರ್ ಸರ್ಕಾರ್, ರಾಮ್ ಪುನಿಯಾನಿ, ಅರುಣಕುಮಾರ್, ಆದಿತ್ಯ ಮುಖರ್ಜಿ, ನಿರಂಜನಾರಾಧ್ಯ, ಗೋಷ್ಠಿಗಳ ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಎಲ್.ಜವಾಹರ್ ನೇಸನ್, ಎ.ಎಚ್. ರಾಜಾಸಾಬ್, ಮಹಾಬಲೇಶ್ವರ ರಾವ್, ಫ್ರಾನ್ಸಿಸ್ ಅಸ್ಸಿಸಿ ಅಲ್ಮೇಡಾ, ಎ.ಆರ್. ವಾಸವಿ, ಅಲಿ ರಜಾ ಮೂಸ್ವಿ, ಶಿಂಟಿ ಆಂಟೋನಿ, ವಿಕ್ಟರ್ ಲೋಬೊ, ಆಯೋಜನೆ: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್.ಆರ್. ನಗರ, ಮತ್ತಿಕೆರೆ, ಬೆಳಿಗ್ಗೆ 10

'ಸಿರಿಂಜ್ ಹಿಡಿವ ಕೈ ಪೆನ್ನು ಹಿಡಿದಾಗ' ಪುಸ್ತಕ ಬಿಡುಗಡೆ: ಆರ್. ಸುನಂದಮ್ಮ, ಅಧ್ಯಕ್ಷತೆ: ಟಿ.ಎ. ವೀರಭದ್ರಯ್ಯ, ಉಪಸ್ಥಿತಿ: ಡಾ.ಸೂರಿರಾಜು ವಿ., ಡಾ.ಇಂದಿರಾ ದೊಡ್ಡಬಳ್ಳಾಪುರ, ಎಂ. ಅಣ್ಣಯ್ಯ ಕುಲಾಲ್ ಉಳ್ತೂರು, ಆಯೋಜನೆ: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ, ಬೆಂಗಳೂರು ಹಾಗೂ ಭಾರತೀಯ ವೈದ್ಯಕೀಯ ಸಂಘದ ಬರಹಗಾರರ ಸಮಿತಿ, ಹರಿವು ಬುಕ್ಸ್, ಸ್ಥಳ: ಐಎಂಎ ಸಭಾಂಗಣ, ಟಿಪ್ಪು ಸುಲ್ತಾನ್ ಅರಮನೆ ರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 11

ಲಲಿತಾ ಶಂಕರ್ ಅವರಿಂದ 'ಬಿಯಾಂಡ್ ಐಡೆಂಟಿಟಿ' ಶೀರ್ಷಿಕೆಯಡಿ ಕಲಾ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ದ್ವಿಜ ಆರ್ಟ್ ಗ್ಯಾಲರಿ, ಮಧ್ಯಾಹ್ನ 12ರಿಂದ ಸಂಜೆ 6

ರಜತ ಬ್ರಹ್ಮರಥೋತ್ಸವ: ಆಯೋಜನೆ ಹಾಗೂ ಸ್ಥಳ: ವಲ್ಲೀದೇವಸೇನಾಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯಪುರ, ಮಧ್ಯಾಹ್ನ 12.15



ನೂಪುರಾರಾಧನ: ಭರತನಾಟ್ಯ: ಸ್ವಾತಿ ಅಯ್ಯಂಗಾರ್, ಅತಿಥಿ: ವಿದ್ಯಾಲಕ್ಷ್ಮಿ ಎಂ.ಎಸ್., ರೂಪಾ ಪ್ರಕಾಶ್, ಆಯೋಜನೆ: ನೂಪುರಮೈತ್ರಿ ಕಲಾ ಕೇಂದ್ರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಸ್ವಾತಿ ಅಯ್ಯಂಗಾರ್

'ಆಧುನಿಕ ಜಗತ್ತಿನಲ್ಲಿ ವೇದ ವಿಜ್ಞಾನಗಳ ಪ್ರಸ್ತುತತೆ' 7ನೇ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ: ಸಾನ್ನಿಧ್ಯ: ಸುಜಯನಿಧಿತೀರ್ಥ ಸ್ವಾಮೀಜಿ, ಅತಿಥಿಗಳು: ವಿ. ಶ್ರೀಶಾನಂದ, ಜಿ. ಶ್ರೀಧರ್, ಜಗದೀಶ್ ಜಿ., ತುಷಾರ್ ಗಿರಿನಾಥ್, ಎನ್. ಮಂಜುನಾಥ್ ಪ್ರಸಾದ್, ಅಸಗೋಡು ಜಯಸಿಂಹ, ಆಯೋಜನೆ: ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್, ಸ್ಥಳ: ವಿಜಯ ಕಾಲೇಜು, ಜಯನಗರ 4ನೇ ಬ್ಲಾಕ್, ಸಂಜೆ 4

ತೇಜಸ್ವಿ ನಾಟಕೋತ್ಸವ: 'ಯಮಳ ಪ್ರಶ್ನೆ' ನಾಟಕ ಪ್ರದರ್ಶನ: ಪ್ರಸ್ತುತಿ: ಪ್ರಯೋಗ ರಂಗ, ಆಯೋಜನೆ: ತೋಟಗಾರಿಕೆ ಇಲಾಖೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಸ್ಥಳ: ಲಾಲ್‌ಬಾಗ್, ಸಂಜೆ 5

ಸಾತವಲ್ಲಿ ನಂಜುಂಡಯ್ಯ ಅವರ ಜನ್ಮಶತಮಾನೋತ್ಸವ ಪ್ರಯುಕ್ತ 'ಶೃತಿ ಸ್ಮೃತಿ': ಅತಿಥಿ: ಎಸ್. ಶಂಕರ್, ಪಿಟೀಲು: ಅನಿಕಾ ಶಾಸ್ತ್ರಿ, ಶಿವಾನಿ ಶಾಸ್ತ್ರಿ, ಮೃದಂಗ: ಬಿ.ಎಸ್. ಸಮರ್ಥ, ಘಟ: ಸ್ಕಂದ ಮಂಜುನಾಥ್, ಗಾಯನ: ಎಂ.ಎಸ್. ಶೀಲಾ, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಅನಿರುದ್ಧ ಭಟ್, ಘಟ: ಬಿ.ಎಸ್. ರಘುನಂದನ್, ಸಹ ಗಾಯನ: ಅಪೇಕ್ಷ ಅಪ್ಪಲ, ಆಯೋಜನೆ: ಕೃಷ್ಣ ಕಲಾ ಕೇಂದ್ರ, ಅಭಿಜ್ಞಾ ಆರ್ಟ್ಸ್ ಫೌಂಡೇಷನ್, ಸೃಜನಾ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಶ್ರೀಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಸಂಜೆ 5



ಅಪ್ಪಗೆರೆ ತಿಮ್ಮರಾಜು

ಪುಸ್ತಕ ಸುಗ್ಗಿಗೆ ಚಾಲನೆ: ಅಪ್ಪಗೆರೆ ತಿಮ್ಮರಾಜು, ರಸಪ್ರಶ್ನೆ ಕಾರ್ಯಕ್ರಮ: ನಾ. ಸೋಮೇಶ್ವರ, ಅಕ್ಷರ ಸುಗ್ಗಿ–ಮಾತಿನ ಹುಗ್ಗಿ: ಸಿ. ಚಂದ್ರಪ್ಪ, ಶುಭ, ಬೇಲೂರು ರಘುನಂದನ, ಅಧ್ಯಕ್ಷತೆ: ರಾ.ನಂ. ಚಂದ್ರಶೇಖರ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11

ಸಂಸ್ಥಾಪನಾ ದಿನ: ಅತಿಥಿಗಳು: ಕೆ. ಪ್ರಕಾಶ್ ಶೆಟ್ಟಿ, ಯದುವೀರ್ ಒಡೆಯರ್, ರವಿ ಡಿ. ಚನ್ನಣ್ಣನವರ್, ಕೊಟ್ರಸ್ವಾಮಿ ಎಂ., ಅಶೋಕ್ ಚನ್ನೇಗೌಡ, ಉಪೇಂದ್ರ ಶೆಟ್ಟಿ, ಆಯೋಜನೆ ಹಾಗೂ ಸ್ಥಳ: ಯೂನಿವರ್ಸಲ್ ಸಮೂಹ ಸಂಸ್ಥೆಗಳು, ಗುರುರಾಯನಪುರ, ತಾವರೆಕೆರೆ ಹೋಬಳಿ, ಸಂಜೆ 5

'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸುಬ್ರಾಯ ಹೆಬ್ಬಾರ, ಅಕ್ಷಯ ಪ್ರಭು, ಶ್ರೀನಿವಾಸ ಪ್ರಭು, ಮುಮ್ಮೇಳ: ಪ್ರಶಾಂತ ವರ್ಧನ ಮೂರೂರು, ಭರತ ರಾಜ್ ಪರ್ಕಳ, ರವೀಶ ಹೆಗಡೆ ಐನಬೈಲು, ಸಿಂಧುಶ್ರೀ ಹೆಬ್ಬಾರ್, ಸುಖದಾ ಭಟ್, ನಿತ್ಯಾನಂದ ನಾಯಕ, ಶ್ರೀವತ್ಸ, ಆತ್ರೇಯ ಗಾಂವ್ಕರ್, ಆಯೋಜನೆ: ಎಂಇಎಸ್ ಕಲಾವೇದಿ, ಯಕ್ಷೇಶ್ವರಿ ಯಕ್ಷಗಾನ, ಸ್ಥಳ: ಎಂ.ಇ.ಎಸ್.ಪ್ರೊ.ಬಿ.ಆರ್. ಸುಬ್ಬಾರಾವ್ ಪದವಿಪೂರ್ವ ಮಹಾವಿದ್ಯಾಲಯ, ವಿದ್ಯಾರಣ್ಯಪುರ, ಸಂಜೆ 5.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಅತಿಥಿಗಳು: ಪ್ರಮೋದ್ ಮುತಾಲಿಕ್, ಅಶೋಕ್ ಹಾರನಹಳ್ಳಿ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಹಿಂದೂ ಸಮಾಜೋತ್ಸವ: ಸಾನ್ನಿಧ್ಯ: ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅತಿಥಿಗಳು: ಎನ್. ತಿಪ್ಪೇಸ್ವಾಮಿ, ಕೆ. ಗೋಪಾಲಯ್ಯ, ಸುರೇಶ್ ಕುಮಾರ್, ಆಯೋಜನೆ: ಹಿಂದೂ ಸಮಾಜೋತ್ಸವ ಆಯೋಜನ ಸಮಿತಿ, ಸ್ಥಳ: ಕೆರೆ ಮೈದಾನ, ಕಾಮಾಕ್ಷಿಪಾಳ್ಯ, ಸಂಜೆ 6 (4.30ಕ್ಕೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಶೋಭಾಯಾತ್ರೆ)

ದೃಷ್ಟಿ ರಾಷ್ಟ್ರೀಯ ನೃತ್ಯೋತ್ಸವ: ಕಲಾವಿದರು: ಪದ್ಮ ಸುಬ್ರಮಣ್ಯಂ, ನಿರೂಪಮಾ ರಾಜೇಂದ್ರ, ಟಿ.ಡಿ. ರಾಜೇಂದ್ರ, ಅನುರಾಧಾ ವಿಕ್ರಾಂತ್, ಅತಿಥಿಗಳು: ಆರ್. ಗಣೇಶ್, ಶ್ರೀನಿವಾಸ ವರಖೇಡಿ, ಎಚ್.ಎನ್. ಸುರೇಶ್, ಪಿ. ದಯಾನಂದ ಪೈ, ಅಧ್ಯಕ್ಷತೆ: ಟಿ.ಎಂ. ಮಂಜುನಾಥ್, ಆಯೋಜನೆ: ದೃಷ್ಟಿ ಆರ್ಟ್ ಸೆಂಟರ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6

'ನಮ್ಮ ಬೆಂಗಳೂರು ಚಾಲೆಂಜ್' 26ನ ವಿಜೇತ ತಂಡಗಳ ಘೋಷಣಾ ಸಮಾರಂಭ: ಉಪಸ್ಥಿತಿ: ಎಂ. ಮಹೇಶ್ವರ ರಾವ್, ವಿ. ಮಂಜುಳಾ, ಆಯೋಜನೆ: ಅನ್ ಬಾಕ್ಸಿಂಗ್ ಬಿಎಲ್‌ಆರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಬೆಂಗಳೂರು ಹಬ್ಬ: 'ಆಧುನಿಕ ನಗರದ ಸಾಂಪ್ರದಾಯಿಕ ಚಿತ್ರಣ' ವಿಷಯದ ಬಗ್ಗೆ ಉಪನ್ಯಾಸ, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30

'ಹೃದಯದ ತೀರ್ಪು' ನಾಟಕ ಪ್ರದರ್ಶನ: ನಿರ್ದೇಶನ: ಶಂಕರ ವೆಂಕಟೇಶ್ವರನ್, ಆಯೋಜನೆ: ಸ್ಫೂರ್ತಿಧಾಮ, ರಂಗಧ್ವನಿ, ಲೋಕ ಸಂಸ್ಕಾರಿ ಥಿಯೇಟರ್ಸ್, ಸ್ಥಳ: ಸ್ಫೂರ್ತಿಧಾಮ, ಮುದ್ದಿನಪಾಳ್ಯ ಮುಖ್ಯರಸ್ತೆ, ಅಂಜನಾನಗರ, ಸಂಜೆ 6.30

SMART BAZAAR
Reliance
Growth is Life
ಪೂರ್ತಿ ಪೈಸೆ ವಸೂಲಿ ಸೇಲ್
21st - 26th JAN
ಕೊನೆಯ 3 ದಿನಗಳು
ಎಲ್ಲರದು ಒಂದೇ ಮಾತು, ಈಗ ಮಾಡುತ್ತಾರೆ ಪೂರ್ತಿ ಪೈಸೆ ವಸೂಲಿ.
21 ರಿಂದ 26 ಜನವರಿ
COMBO@ ₹749
ಸಫೋಲಾ ಗೋಲ್ಡ್ ಆಯಿಲ್ 3 L + ಇಂಡಿಯಾ ಗೇಟ್ ರೋಜಾನಾ ಚಾಯ್ಸ್ ಬಾಸ್ಮತಿ ರೈಸ್ 5 kg
ಒಟ್ಟು ಎಮ್‌ಆರ್‌ಪಿ ₹1186 | ಉಳಿಸಿರಿ ₹437
ಗುಡ್ ಲೈಫ್ ಬಾದಾಮ್ 500 g + ಕ್ಯಾಶೂ (W320) 500 g
COMBO@ ₹849
ಒಟ್ಟು ಎಮ್‌ಆರ್‌ಪಿ ₹1345
ಉಳಿಸಿರಿ ₹496
ಲೂಸ್ ಉದ್ದಿನ ಬೇಳೆ / ತೊಗರಿ ಬೇಳೆ ವ್ಯಾಲ್ಯೂ 1 kg
ಸ್ಮಾರ್ಟ್ ಬೆಲೆ ₹99/ ₹107
ಮಾರುಕಟ್ಟೆ ಬೆಲೆ ₹104 / ₹112
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 400 g ರಿಂದ / ಲೊಟ್ಟೆ ಚೋಕೊ ಪೈ 336 g (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹75 ರಿಂದ /ಯೂನಿಟ್
ಕೋಕಾ ಕೋಲಾ / ಸ್ಪ್ರೈಟ್ / ಥಮ್ಸ್ ಅಪ್ / ಫೆಂಟಾ 750 ml (ಆಯ್ದ ಪ್ರಕಾರಗಳು)
BUY ANY 3 GET ANY 1 FREE
ಎಮ್‌ಆರ್‌ಪಿ ₹40 ರಿಂದ /ಯೂನಿಟ್
ಫಾರ್ಚ್ಯೂನ್ ಸನ್ ಲೈಟ್ ಎಣ್ಣೆ 800 g / ಸನ್ ಪ್ಯೂರ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 2 L
₹158.00 /kg
ಸ್ಮಾರ್ಟ್ ಬೆಲೆ ₹137/ ₹316
ಎಮ್‌ಆರ್‌ಪಿ ₹185 / ₹399
ಉಳಿಸಿರಿ ₹48 / ₹83
ಗುಡ್ ಲೈಫ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 820 g / ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ಸ್ಮಾರ್ಟ್ ಬೆಲೆ ₹143/ ₹229
₹45.80 /kg
ಎಮ್‌ಆರ್‌ಪಿ ₹185 / ₹330
ಉಳಿಸಿರಿ ₹42 / ₹101
ಗುಡ್ ಲೈಫ್ ಡೈಲಿ / ರಾಯಲ್ ಬುಲೆಟ್ ಕೋಲಂ ಅಕ್ಕಿ 26 kg
₹48.03 /kg
₹39.96 /kg
ಸ್ಮಾರ್ಟ್ ಬೆಲೆ ₹1039 / ₹1249
ಎಮ್‌ಆರ್‌ಪಿ ₹1800 / ₹1900
ಉಳಿಸಿರಿ ₹761 / ₹651
ಚಕ್ಕಿ ಆಟಾ 5 kg / ಆಶೀರ್ವಾದ್ ಸುಪೀರಿಯರ್ ಎಂಪಿ ಆಟ್ಟಾ 10 kg
ಸ್ಮಾರ್ಟ್ ಬೆಲೆ ₹199/ ₹545
ಎಮ್‌ಆರ್‌ಪಿ ₹290 / ₹644 | ಉಳಿಸಿರಿ ₹91 / ₹99
ಟಾಟಾ ಚಹಾ ಗೋಲ್ಡ್ ಲೀಫ್ 500 g
ಉಳಿಸಿರಿ ₹75
ಎಮ್‌ಆರ್‌ಪಿ ₹275 ರಿಂದ
ಸ್ಮಾರ್ಟ್ ಬೆಲೆ ₹200 ರಿಂದ
ಗೋದ್ರೇಜ್ ಜೆರ್ಸಿ ಹಸುವಿನ ತುಪ್ಪ 1 L
ಸ್ಮಾರ್ಟ್ ಬೆಲೆ ₹579
ಎಮ್‌ಆರ್‌ಪಿ ₹749
ಉಳಿಸಿರಿ ₹170
ಟೂತ್‌ಪೇಸ್ಟ್ 280 g ರಿಂದ (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹204 ರಿಂದ
BUY ANY 1 GET ANY 1 FREE
ಸಾಬೂನುಗಳು 125 g ರಿಂದ (ಮಲ್ಟಿ ಪ್ಯಾಕ್) (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹299 ರಿಂದ
BUY ANY 1 GET ANY 1 FREE
ಡಿಟರ್ಜಂಟ್ 4 L / 5 kg ರಿಂದ (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹565 ರಿಂದ
ಮಿನಿಮಮ್ 33% ಕಡಿತ
LYF ಮಿಕ್ಸರ್ ಗ್ರೈಂಡರ್ (500W)
ಸ್ಮಾರ್ಟ್ ಬೆಲೆ ₹999
ಎಮ್‌ಆರ್‌ಪಿ ₹2599
3 ಪೀಸಸ್ ಹಾರ್ಡ್ ಟ್ರಾಲಿ ಸೆಟ್
ಎಮ್‌ಆರ್‌ಪಿ ₹30000 ರಿಂದ
ಸ್ಮಾರ್ಟ್ ಬೆಲೆ ₹4499 ರಿಂದ
ಫ್ಲಾಟ್ 85% ಕಡಿತ
ಡಬಲ್ ಬೆಡ್ ಶೀಟ್ ಸೆಟ್ (ಆಯ್ದ ಪ್ರಕಾರಗಳು)
BUY ANY 1 GET ANY 3 FREE
ಎಮ್‌ಆರ್‌ಪಿ ₹1199 ರಿಂದ
ಮಹಿಳೆಯರ, ಪುರುಷರ ಮತ್ತು ಮಕ್ಕಳ ಉಡುಗೆ
BUY 1 GET 1 FREE*
2000+ ಫ್ಯಾಷನ್ ಸ್ಟೈಲ್ಸ್
ಈಗ ತೆರೆದಿದೆ ಬಾಗಲಗುಂಟೆ: ಬೋನ್ ಮಿಲ್ ಬಸ್ ಸ್ಟಾಪ್, ಹೆಸರಘಟ್ಟ ಮುಖ್ಯ ರಸ್ತೆ.
ಬೆಂಗಳೂರು: ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ. • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು. • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3 ನೇ ಹಂತ. • ಅಕ್ಷಯ ನಗರ: ಡಿಎಲ್ಎಫ್ ನ್ಯೂ ಟೌನ್ ಹತ್ತಿರ, ಬೆಗೂರ್ - ಹುಳಿಮಾವು ರಸ್ತೆ • ಚಂದಾಪುರ: ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ: ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್: ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2 ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ: ಮಾರ್ಸ್ ಎನ್‌ಕ್ಲೇವ, ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆ. • ವಿಜ್ಞಾನನಗರ್: ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ • ವಿಜಯನಗರ ಟಿ ಟಿ ಎಮ್ ಸಿ: ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ: ಚೆಕ್ಲ್ ನಗರ, ಬಸವನಪುರ್ ಮುಖ್ಯ ರಸ್ತೆ, • ಭಾರತೀಯ ಮಾಲ್ ಆಫ್ ಬೆಂಗಳೂರು: ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ, ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್: ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್‌ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್: ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಟಿಟಿಎಂಸಿ, ಶಾಂತಿನಗರ ಬಸ್ ಸ್ಟ್ಯಾಂಡ್. ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್ ನಡುವೆ. ತುಮಕೂರು: ಎಮ್ ಜಿ ಸ್ಟೇಡಿಯಮ್ ನ ಪಕ್ಕದಲ್ಲಿ, ಕುವೆಂಪು ನಗರ. ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
fresh Signature
10% INSTANT DISCOUNT# SBI card
#Min. Trxn.: ₹3,000; Max. Discount: ₹500 per Trxn. per credit card; Validity: 21 Jan - 26 Jan 2026. T&C Apply.
ಸ್ಕ್ಯಾನ್ ಮಾಡಿ ಹೆಚ್ಚಿನ ಆಫರ್ ಗಳನ್ನು ತಿಳಿದುಕೊಳ್ಳಿ
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
SMART BAZAAR
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ.ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಮತ್ತು ಆಪ್ಪರೇಲ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಗಳಲ್ಲಿ ಮಾತ್ರ ಊರ್ಜಿತವಿದೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್ಗಳು 26 ಜನವರಿ 2026. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಸುಮ್ಮನೇ ವಾಹನ ತಡೆದು ತಪಾಸಣೆ, ಆಕ್ರೋಶ

ದ್ವಿಚಕ್ರ ವಾಹನ ಸವಾರರು, ವಾಹನ ಚಾಲಕರಿಗೆ ಕಿರಿಕಿರಿ • ಮಾರ್ಗಸೂಚಿಯ ಪಾಲನೆ ಆಗುತ್ತಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಜಂಕ್ಷನ್‌ಗಳು, ಅಡ್ಡ ರಸ್ತೆಗಳಲ್ಲಿ ಹಗಲು ಹಾಗೂ ರಾತ್ರಿ ವೇಳೆ ಸಂಚಾರ ಪೊಲೀಸರು ದಿಢೀರ್ ಪ್ರತ್ಯಕ್ಷರಾಗುತ್ತಿದ್ದಾರೆ. ದ್ವಿಚಕ್ರ ವಾಹನದಿಂದ ಕೆಳಗೆ ಇಳಿಯುವಂತೆ ಸವಾರರಿಗೆ ಸೂಚಿಸುತ್ತಾರೆ. ದಾಖಲೆಗಳನ್ನು ಕೇಳುವ ಹಾಗೂ ಮದ್ಯ ಸೇವನೆ ಮಾಡಿದ್ದಾರೆಯೇ ಎಂದು ಪರಿಶೀಲಿಸುವ ನೆಪದಲ್ಲಿ ಸುಮ್ಮನೇ ಕಿರಿಕಿರಿ ಉಂಟು ಮಾಡುತ್ತಿದ್ದಾರೆ ಎಂದು ಸವಾರರು ಹಾಗೂ ವಾಹನ ಚಾಲಕರು ಆರೋಪಿಸಿದ್ದಾರೆ.

ಕಳೆದ ವರ್ಷದ ಮೇನಲ್ಲಿ ಮಂಡ್ಯದಲ್ಲಿ ತಂದೆ ಹಾಗೂ ತಾಯಿ, ಮಗುವನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ತಪಾಸಣೆಯ ನೆಪದಲ್ಲಿ ಸಂಚಾರ ಪೊಲೀಸರು ಬೈಕ್ ತಡೆದಿದ್ದರು. ಆ ಗಡಿಬಿಡಿಯಲ್ಲಿ ಬೈಕ್, ಸವಾರನ ನಿಯಂತ್ರಣ ತಪ್ಪಿತ್ತು. ಮಗು ಕೆಳಕ್ಕೆ ಬಿದ್ದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಮಗು ಮೃತಪಟ್ಟಿತ್ತು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ತಡೆದು ನೂರಾರು ಮಂದಿ ಪ್ರತಿಭಟನೆ ನಡೆಸಿದ್ದರು.

ಅದರ ಬೆನ್ನಲ್ಲೇ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು 'ಸಕಾರಣವಿದ್ದರಷ್ಟೇ ವಾಹನಗಳ ದಾಖಲೆಗಳನ್ನು ಪೊಲೀಸರು ಪರಿಶೀಲನೆ ನಡೆಸಬೇಕೇ ವಿನಃ, ಅನಗತ್ಯವಾಗಿ ತಪಾಸಣೆ ನಡೆಸಬಾರದು' ಎಂದು ಆದೇಶ ಹೊರಡಿಸಿದ್ದರು. ಆದರೆ, ಆದೇಶ ಪಾಲನೆ ಆಗುತ್ತಿಲ್ಲ' ಎಂದು ಸವಾರರು ಆಕ್ರೋಶ ಹೊರಹಾಕಿದ್ದಾರೆ.

ಕೀ ಕಸಿದುಕೊಳ್ಳುತ್ತಾರೆ: 'ತಪಾಸಣೆಯ ನೆಪದಲ್ಲಿ ವಾಹನ ಅಡ್ಡಹಾಕುತ್ತಿದ್ದಾರೆ. ನಾವು ಕಚೇರಿಗೆ ಹೋಗಬೇಕು ಎಂದು ಮನವಿ ಮಾಡಿದ್ದರೂ ಕೇಳುವುದಿಲ್ಲ. ಕೆಲವೊಮ್ಮೆ ಗಾಬರಿಯಿಂದ ದ್ವಿಚಕ್ರ ವಾಹನಗಳಿಂದ ಬೀಳುವ ಅಪಾಯ ಇರುತ್ತದೆ' ಎಂದು ಸವಾರ ಸೋಮಶೇಖರ್ ಅಳಲು ತೋಡಿಕೊಂಡಿದ್ದಾರೆ.

ಕೆ.ಆರ್.ಮಾರುಕಟ್ಟೆ, ಜಾಲಹಳ್ಳಿ ಕ್ರಾಸ್, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರ ನಗರ, ಕೆಂಗೇರಿ, ನಾಯಂಡಹಳ್ಳಿ, ಮೈಸೂರು ರಸ್ತೆ ಬಿಎಚ್‌ಇಎಲ್, ಹಳೆ ಮದ್ರಾಸ್ ರಸ್ತೆಯ ಎನ್‌ಜಿಇಎಫ್ ವೃತ್ತದಿಂದ ಎಡಕ್ಕೆ ತಿರುಗುವ ಬಳಿ, ಎಚ್‌ಇಎಲ್‌ಗೆ ಹೋಗುವ ಬಲ ಭಾಗದ ಜಂಕ್ಷನ್, ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ಎದುರು, ನಾಗವಾರ ಪಾಳ್ಯದ ಕೇಂದ್ರೀಯ ವಿದ್ಯಾಲಯದ ಎದುರು, ಯಶವಂತಪುರ ಬಸ್ ನಿಲ್ದಾಣದ ಬಳಿ, ರಾಜಕುಮಾರ್ ರಸ್ತೆಗೆ ಸಾಗುವ ಮಾರ್ಗದಲ್ಲಿ, ಸ್ಯಾಂಕಿ ಟ್ಯಾಂಕಿ ಬಳಿ, ಮಲ್ಲೇಶ್ವರದ 18ನೇ ರಸ್ತೆ, ಓಕಳಿಪುರದ ಕೆಲವು ಭಾಗದಲ್ಲಿ ಸಂಚಾರ ಪೊಲೀಸರು ಹೆಚ್ಚಾಗಿ ತಪಾಸಣೆ ನಡೆಸುತ್ತಿದ್ದಾರೆ' ಎಂದು ಸವಾರರು ಹೇಳಿದ್ದಾರೆ.

'ಕೆಲವು ಜಂಕ್ಷನ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರೂ ಅತ್ತಗಮನ ಹರಿಸದೇ ಸುಮ್ಮನೇ ವಾಹನ ತಡೆಯುವಲ್ಲಿ ಸಂಚಾರ ಪೊಲೀಸರು ಮಗ್ನರಾಗಿರುತ್ತಾರೆ. ಮಾರ್ಗಸೂಚಿ ಪಾಲಿಸುವಂತೆ ಹಿರಿಯ ಅಧಿಕಾರಿಗಳು ಸಿಬ್ಬಂದಿಗೆ ಸೂಚನೆ ನೀಡಬೇಕು' ಎಂದು ಸವಾರರು ಮನವಿ ಮಾಡಿದ್ದಾರೆ.

ಅಪರಾಧ ಸುದ್ದಿ

26 ಚಾಲಕರ ವಿರುದ್ಧ ಪ್ರಕರಣ

ಮದ್ಯಪಾನ ಮಾಡಿ ಶಾಲಾ ವಾಹನ ಚಾಲನೆ ಮಾಡುತ್ತಿದ್ದ 26 ಚಾಲಕರ ವಿರುದ್ಧ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಶುಕ್ರವಾರ ಬೆಳಿಗ್ಗೆ 7ರಿಂದ 10ರ ವರೆಗೆ ವಿಶೇಷ ಕಾರ್ಯಾಚರಣೆ ನಡೆಸಿ, ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದವರ ವಿರುದ್ಧ ಐಎಂವಿ ಕಾಯ್ದೆ ಅಡಿ ಪ್ರಕರಣ ಪ್ರಕರಣ ದಾಖಲು ಮಾಡಿ ಕೊಳ್ಳಲಾಗಿದೆ.



ಮದ್ಯಪಾನ ಮಾಡಿ ಶಾಲಾ ವಾಹನ ಚಾಲನೆ ಮಾಡುತ್ತಿದ್ದವರನ್ನು ತಪಾಸಣೆಗೆ ಒಳಪಡಿಸಲಾಯಿತು

ಕಾರ್ಯಾಚರಣೆ ವೇಳೆ 5,110 ವಾಹನಗಳನ್ನು ತಪಾಸಣೆ ನಡೆಸಲಾಯಿತು. ನಿಯಮ ಉಲ್ಲಂಘಿಸಿದ ಚಾಲಕರ ಡಿಎಲ್ ಅಮಾನತು ಮಾಡುವಂತೆ ಆರ್‌ಟಿಒ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

5,458 ಪ್ರಕರಣ ದಾಖಲು: ರಸ್ತೆ ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ಏಕಮುಖ ರಸ್ತೆಗಳಲ್ಲಿ ವಿರುದ್ಧವಾಗಿ ವಾಹನಗಳನ್ನು ಚಲಾಯಿಸುವ ಚಾಲಕರು ಹಾಗೂ ಸವಾರರ ವಿರುದ್ಧ ಬುಧವಾರ ಹಾಗೂ ಗುರುವಾರ ವಿಶೇಷ ಕಾರ್ಯಾಚರಣೆ ನಡೆಸಿ, 5,458 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಮಾರ್ಗಸೂಚಿ ಏನು ಹೇಳುತ್ತದೆ?

- ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಕಂಡುಬಂದಾಗ ಮಾತ್ರವೇ ವಾಹನಗಳನ್ನು ನಿಲ್ಲಿಸಿ ಪ್ರಕರಣ ದಾಖಲಿಸಬೇಕು
- ಹೆದ್ದಾರಿಗಳಲ್ಲಿ ಜಿಗ್ ಜಾಗ್ ಬ್ಯಾರಿಕೇಡ್‌ಗಳನ್ನು ಹಾಕಿ ವಾಹನಗಳನ್ನು ತಡೆಯಬಾರದು
- ರಸ್ತೆಮಧ್ಯೆ ದಿಢೀರ್ ಅಡ್ಡ ಬಂದು ವಾಹನ ನಿಲ್ಲಿಸುವಂತೆ ಹೇಳಬಾರದು ಹಾಗೂ ಬೈಕ್‌ನ ಹಿಂಬದಿ ಸವಾರನನ್ನು ಹಿಡಿದು ಎಳೆಯುವುದು, ವಾಹನದ ಕೀಲಿ ಕೈ ತೆಗೆದುಕೊಳ್ಳುವುದನ್ನು ಮಾಡಬಾರದು
- ವೇಗವಾಗಿ ವಾಹನ ಚಲಾಯಿಸಿಕೊಂಡು ಬರುವ ಸವಾರರನ್ನು ಬೆನ್ನಟ್ಟದೇ ಆ ವಾಹನಗಳ ನೋಂದಣಿ ಸಂಖ್ಯೆ ಗುರುತು ಮಾಡಿ, ವಿವಿಧ ನಿಯಂತ್ರಣ ಕೊಠಡಿಗಳಿಗೆ ಮಾಹಿತಿ ರವಾನಿಸಿ, ವಾಹನ ಸವಾರನ ಪತ್ತೆಹಚ್ಚಿ ಪ್ರಕರಣ ದಾಖಲಿಸಬೇಕು
- ವಾಹನಗಳ ತಪಾಸಣೆ ವೇಳೆ ಪೊಲೀಸರು ಸುರಕ್ಷತೆಗಾಗಿ ರಿಫ್ಲೆಕ್ಟಿವ್ ಜಾಕೆಟ್ ಧರಿಸಬೇಕು ಮತ್ತು ಬಾಡಿ ವೋರ್ನ್ ಕ್ಯಾಮೆರಾ ಧರಿಸಬೇಕು
- ರಾಜ್ಯ, ರಾಷ್ಟ್ರೀಯ ಹೆದ್ದಾರಿ ಹಾಗೂ ಇತರೆ ರಸ್ತೆಗಳಲ್ಲಿ ಯಾವುದೇ ಕಾರಣಕ್ಕೂ ಅತಿ ವೇಗವಾಗಿ ಚಲಿಸುವ ವಾಹನಗಳನ್ನು ತಡೆಯುವ ಪ್ರಯತ್ನ ಮಾಡಬಾರದು ಹಾಗೂ ಇಂತಹ ವಾಹನಗಳ ವಿರುದ್ಧ ಎಫ್‌ಟಿವಿಆರ್ ದಾಖಲಿಸಲು ತಂತ್ರಜ್ಞಾನ ಆಧಾರಿತ ನಿಯಮಗಳನ್ನು ಅನುಸರಿಸಬೇಕು
- ರಾತ್ರಿ ಮತ್ತು ತಡರಾತ್ರಿಯಲ್ಲಿ ಸಂಚಾರ ಜಂಕ್ಷನ್ ಬದಿಯೇ ವಾಹನ ತಪಾಸಣೆ ಮಾಡಬೇಕು
- ವಾಹನ ವೇಗ ತಗ್ಗಿಸಲು ತಪಾಸಣೆ ಸ್ಥಳದ ಸುಮಾರು 100–150 ಮೀಟರ್ ಮೊದಲೇ ರಿಫ್ಲೆಕ್ಟಿವ್ ರಬ್ಬರ್ ಕೋನ್ ಮತ್ತು ಸುರಕ್ಷತಾ ಸಲಕರಣೆ ಅಳವಡಿಸಿರಬೇಕು

ದಟ್ಟಣೆ ತಗ್ಗಿಸಲು ತಂತ್ರಜ್ಞಾನದ ಮೊರೆ

ಲಭ್ಯವಿರುವ ಸಂಪನ್ಮೂಲಗಳು, ತಂತ್ರಜ್ಞಾನ, ಸಿಬ್ಬಂದಿ ಬಳಸಿಕೊಂಡು ನಗರದಲ್ಲಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, 'ಬೆಳೆಯುತ್ತಿರುವ ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಯು ನಗರದ ಸಂಚಾರ ದಟ್ಟಣೆಗೆ ಪ್ರಮುಖ ಕಾರಣವಾಗಿದೆ. ಬೆಂಗಳೂರು ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದು, ಇದರಿಂದ ಸಂಚಾರ ದಟ್ಟಣೆ ಉಂಟಾಗುವುದು ಸಹಜ. ಬೆಳಿಗ್ಗೆ, ಸಂಜೆಯಲ್ಲಿ ದಟ್ಟಣೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

'ನೆದರ್‌ಲ್ಯಾಂಡ್‌ನ 'ಟಾಮ್‌ಟಾಮ್' ಸಂಸ್ಥೆ ಬಿಡುಗಡೆ ಮಾಡಿರುವ ಸಂಚಾರ ಸೂಚ್ಯಂಕದಲ್ಲಿ ಬೆಂಗಳೂರು ಎರಡನೇ ದಟ್ಟಣೆಯ ನಗರವಾಗಿದೆ ಎಂಬುದಾಗಿ ಉಲ್ಲೇಖವಾಗಿದೆ. ಈ ಸಮೀಕ್ಷೆಯ ವರದಿಯನ್ನು ವಿವರವಾಗಿ ಗಮನಿಸಲಿಲ್ಲ. ಇಲ್ಲಿನ ವಸ್ತುಸ್ಥಿತಿಯ ಅರಿವು ನಮಗಿದೆ. ಈಗಾಗಲೇ ನಮ್ಮ ಸಂಚಾರ ಪೊಲೀಸರು, ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳು ಬಳಸಿ ಸಂಚಾರ ನಿಯಂತ್ರಣಕ್ಕೆ ಪ್ರಯತ್ನಿಸುತ್ತಿದ್ದಾರೆ. ಹೆಚ್ಚು ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳ ಬಳಕೆಯಾದರೆ, ಸಂಚಾರ ದಟ್ಟಣೆ ನಿಯಂತ್ರಿಸಬಹುದು' ಎಂದು ಹೇಳಿದರು.

'ಸಾರ್ವಜನಿಕ ಸಾರಿಗೆಗಳ ಬಳಕೆಗೆ ಉತ್ತೇಜನ ನೀಡಲಾಗುತ್ತಿದೆ' ಎಂದರು.

'ಸುಮ್ಮನೇ ವಾಹನ ತಡೆದರೆ ಅಮಾನತು'

'ಬೆಳಿಗ್ಗೆ 7ರಿಂದ 11ರ ವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 10ರ ದಟ್ಟಣೆ ಅವಧಿಯಿದೆ. ಆ ಸಮಯದಲ್ಲಿ ವಾಹನಗಳನ್ನು ತಡೆದು ತಪಾಸಣೆ ಮಾಡುವಂತಿಲ್ಲ. ಆ ಅವಧಿ ಹೊರತು ಪಡಿಸಿಯೂ ಉಳಿದ ಸಮಯದಲ್ಲೂ ಸುಮ್ಮನೇ ವಾಹನ ತಡೆದು ತಪಾಸಣೆ ನಡೆಸುವಂತಿಲ್ಲ. ಸುಮ್ಮನೇ ವಾಹನ ತಡೆದವರನ್ನು ಅಮಾನತು ಮಾಡಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಎಚ್ಚರಿಸಿದ್ದಾರೆ.

'ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಕಂಡುಬಂದಾಗ ಮಾತ್ರವೇ ವಾಹನಗಳನ್ನು ನಿಲ್ಲಿಸಿ ಪ್ರಕರಣ ದಾಖಲಿಸಬೇಕು. ಕಡ್ಡಾಯವಾಗಿ ಬಾಡಿವೋರ್ನ್ ಕ್ಯಾಮೆರಾ ಧರಿಸಿರಬೇಕು. ಸಾರ್ವಜನಿಕರ ಜತೆಗೆ ಸೌಜನ್ಯದಿಂದ ವರ್ತನೆ ಮಾಡುವಂತೆಯೂ ಸೂಚನೆ ನೀಡಲಾಗಿದೆ' ಎಂದು ಹೇಳಿದರು.

'ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿರುವ ಪ್ರಕರಣಗಳು ನಗರದಲ್ಲಿ ಹೆಚ್ಚಾಗಿವೆ. ಇದರಿಂದ ಅಪಘಾತ ಸಂಭವಿಸುತ್ತಿವೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಜಾಗತಿಕ ಸಾಮರ್ಥ್ಯ ಕೇಂದ್ರ ಸ್ಥಾಪಿಸಲು ನೋಕಿಯಾ ಒಲವು'

ಬೆಂಗಳೂರು: ದೂರಸಂಪರ್ಕ ತಂತ್ರಜ್ಞಾನ ಕ್ಷೇತ್ರದ ದೈತ್ಯ ಸಂಸ್ಥೆಗಳಲ್ಲಿ ಒಂದಾಗಿರುವ ನೋಕಿಯಾ ಕಾರ್ಪೊರೇಷನ್ 'ಜಾಗತಿಕ ಸಾಮರ್ಥ್ಯ ಕೇಂದ್ರ' (ಜಿಸಿಸಿ) ಮತ್ತು ಸಂಶೋಧನಾ ಕೇಂದ್ರಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಒಲವು ವ್ಯಕ್ತಪಡಿಸಿದೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ಸಮಾವೇಶದಲ್ಲಿ ನೋಕಿಯಾದ ಉನ್ನತಾಧಿಕಾರಿಗಳ ಜೊತೆ ನಡೆದ ಸಭೆಯಲ್ಲಿ, ಕಂಪನಿಯ ಭವಿಷ್ಯದ ವಿಸ್ತರಣಾ ಉಪಕ್ರಮಗಳಿಗೆ ಸಂಪೂರ್ಣ ಬೆಂಬಲ ನೀಡುವ ಭರವಸೆ ನೀಡಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ಸೈಬರ್ ಸುರಕ್ಷತೆಯ ಜಾಗತಿಕ ಕಂಪನಿ ಕ್ಲೌಡ್‌ಫ್ಲೇರ್‌ನ ಜೊತೆಗಿನ ಸಭೆಯಲ್ಲಿ 'ಕ್ವಿನ್ ಸಿಟಿ' ಯೋಜನೆಯ ಭಾಗವಾಗುವ ಹಾಗೂ ವಿಸ್ತರಣೆ ಸಾಧ್ಯತೆಗಳ ಬಗ್ಗೆ ಚರ್ಚಿಸಲಾಗಿದೆ' ಎಂದು ಸಚಿವರು ತಿಳಿಸಿದ್ದಾರೆ.

ಪಾಲುದಾರಿಕೆಗೆ ವಾಸ್ಟ್ ಸ್ಪೇಸ್ ಒಲವು: ಬಾಹ್ಯಾಕಾಶ ತಂತ್ರಜ್ಞಾನ, ಅತ್ಯಾಧುನಿಕ ತಯಾರಿಕೆ ಮತ್ತು ನಾವೀನ್ಯ ಆಧಾರಿತ ಉಪಕ್ರಮಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಜೊತೆ ಪಾಲುದಾರಿಕೆ ಮಾಡಿಕೊಳ್ಳಲು ಅಮೆರಿಕದ ಬಾಹ್ಯಾಕಾಶ ತಂತ್ರಜ್ಞಾನ ಕಂಪನಿ ವಾಸ್ಟ್ ಸ್ಪೇಸ್ ಒಲವು ತೋರಿಸಿದೆ. ಯುಎಇ ಮೂಲದ ಬಹುರಾಷ್ಟ್ರೀಯ ಉದ್ಯಮ ಸಮೂಹವಾಗಿರುವ ಕ್ರೆಸೆಂಟ್ ಎಂಟರ್‌ಪ್ರೈಸಸ್, ರಾಜ್ಯದ ಉದ್ದಿಮೆ ಹಾಗೂ ಕಂಪನಿಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ವ್ಯಕ್ತಪಡಿಸಿದೆ ಎಂದಿದ್ದಾರೆ.

ಯುರೋಪ್ ಮುಕ್ತ ವ್ಯಾಪಾರ ಒಪ್ಪಂದದ (ಇಎಫ್‌ಟಿಎ) ಭಾಗವಾಗಿರುವ ಬಂಡವಾಳ ಹೂಡಿಕೆ ಬದ್ಧತೆಯಲ್ಲಿನ ಬಹುಪಾಲನ್ನು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಲಿಚೆಂಟೈನ್ ಪ್ರಧಾನಿಗೆ ರಾಜ್ಯ ಸರ್ಕಾರ ಮನವಿ ಮಾಡಿದೆ ಎಂದು ಹೇಳಿದ್ದಾರೆ.

28ಕ್ಕೆ ಜನಪದ ಗಾಯನ ಸ್ಪರ್ಧೆ

ಬೆಂಗಳೂರು: ಪರಂಪರಾ ಕಲ್ಚರಲ್ ಫೌಂಡೇಷನ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜ. 28ಕ್ಕೆ ಮಹಿಳೆಯರಿಗಾಗಿ ವಿಶೇಷ ಜನಪದ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ.

'ನಾಡಿನ ಜಾನಪದ ಮತ್ತು ಸಾಂಪ್ರದಾಯಿಕ ಕಲೆಗಳನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಎಲ್ಲ ವಯೋಮಾನದ ವಿವಾಹಿತ ಮಹಿಳೆಯರು ಪಾಲ್ಗೊಳ್ಳಬಹುದು' ಎಂದು ಫೌಂಡೇಶನ್ ಅಧ್ಯಕ್ಷ ಜಿ.ಪಿ. ರಾಮಣ್ಣ ಮಾಹಿತಿ ನೀಡಿದ್ದಾರೆ.

ಸಂಪ್ರದಾಯದ ಹಾಡು, ಸೋಬಾನೆ ಪದ, ಲಾವಣಿ, ಗೀಗಿ ಪದ, ಕೋಲಾಟದ ಪದ, ತತ್ವ ಪದ, ಭಜನಾ ಪದ, ಚೌಡಿಕಿ ಪದ, ಡೊಳ್ಳಿನ ಪದ ಮತ್ತು ಜೋಗುಳ ಪದಗಳ ಗಾಯನ ಸ್ಪರ್ಧೆ ಇರಲಿದ್ದು, ಯಾವುದಾದರೂ ಒಂದರಲ್ಲಿ ಸ್ಪರ್ಧಿಸುವ ಅವಕಾಶವಿದೆ ಎಂದು ತಿಳಿಸಿದ್ದಾರೆ. ಸ್ಪರ್ಧೆಯ ನಿಯಮ ಮತ್ತಿತರ ಮಾಹಿತಿಗಾಗಿ 9448202708 ಸಂಪರ್ಕಿಸಬಹುದು.

ಬಹುಮಾನ ಮೊತ್ತ ಲಕ್ಷಕ್ಕೆ ಏರಿಕೆ

ಭ್ರೂಣ ಹತ್ಯೆ ತಡೆಗೆ ಕಾನೂನಿನಡಿ ಕಠಿಣ ಕ್ರಮ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರೂಣ ಲಿಂಗ ಪತ್ತೆ ಬಗ್ಗೆ ಮಾಹಿತಿ ನೀಡಿದವರಿಗೆ ನೀಡುವ ಬಹುಮಾನವನ್ನು ₹50 ಸಾವಿರದಿಂದ ₹1 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಭ್ರೂಣ ಹತ್ಯೆ ತಡೆಗೆ ಕಾನೂನಿನಡಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಆರೋಗ್ಯ ಇಲಾಖೆಯು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ) ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಯಶಸ್ವಿಗೊಂಡ ಗುಪ್ತ ಕಾರ್ಯಾಚರಣೆಯಲ್ಲಿ ಮಾಹಿತಿ ನೀಡಿದವರಿಗೆ ಈ ಬಹುಮಾನ ನೀಡಲಾಗುತ್ತಿದೆ. ಸಾರ್ವಜನಿಕರು ಸಹ ಈ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಭ್ರೂಣ ಹತ್ಯೆ ತಡೆಗೆ ಸಹಕರಿಸಬೇಕು. ಇದರಿಂದ ಹೆಣ್ಣು ಮತ್ತು ಗಂಡು ಮಕ್ಕಳ ನಡುವಿನ ವ್ಯತ್ಯಾಸ ಕಡಿಮೆಯಾಗಲಿದೆ' ಎಂದರು.

ಬಲೂನು ಹಾರಿ ಬಿಡುವ ಮೂಲಕ ದಿನೇಶ್ ಗುಂಡೂರಾವ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು

'ಹೆಣ್ಣು ಮಕ್ಕಳ ರಕ್ಷಣೆಗೆ ನಮ್ಮ ಸರ್ಕಾರ ಬದ್ಧವಾಗಿದೆ. ಹೆಣ್ಣುಮಕ್ಕಳ ಆರೋಗ್ಯ ಕಾಪಾಡಲು ಇಲಾಖೆಯು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. 'ಅನಿಮೀಯಾ ಮುಕ್ತ ಪೌಷ್ಟಿಕ ಕರ್ನಾಟಕ ಯೋಜನೆ'ಯು ಹೆಣ್ಣುಮಕ್ಕಳ ರಕ್ತ ಹೀನತೆ ಹೋಗಲಾಡಿಸುವಲ್ಲಿ ಮಹತ್ವದ ಯೋಜನೆಯಾಗಿದೆ. 'ಶುಚಿ ಯೋಜನೆ', 'ಜನನಿ ಸುರಕ್ಷಾ ಯೋಜನೆ'ಗಳನ್ನು ಜಾರಿಗೊಳಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆ ನಡೆಸುವವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಹೆಣ್ಣು–ಗಂಡು ನಡುವಿನ ವ್ಯತ್ಯಾಸ ಶತಮಾನದಿಂದ ಇದೆ. ಇದರಿಂದ ಹೆಣ್ಣು ಮಕ್ಕಳಿಗೆ ಸರಿಸಮಾನ ಅವಕಾಶ, ಗೌರವಗಳು ಸಮಾಜದಲ್ಲಿ ದೊರೆತಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಸರ್ಕಾರಿ ಹಾಗೂ ಖಾಸಗಿ ಕಚೇರಿಗಳು, ಶಿಕ್ಷಣ ಸಂಸ್ಥೆಗಳು ಸೇರಿ ವಿವಿಧೆಡೆ ಶೇ 50 ಹಾಗೂ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೆಣ್ಣು ಮಕ್ಕಳು ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನಷ್ಟು ಬದಲಾವಣೆಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಸಹಕಾರಿಯಾಗಿವೆ' ಎಂದರು.

ಇಲಾಖೆ ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಅವಿನಾಶ್ ಮೆನನ್ ರಾಜೇಂದ್ರನ್, ಇಲಾಖೆ ನಿರ್ದೇಶಕ ಡಾ. ವಸಂತ್ ಕುಮಾರ್ ಕೆ. ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಕರ್ತವ್ಯಕ್ಕೆ ಅಡ್ಡಿ: ಎಫ್‌ಐಆರ್‌ಗೆ ಸೂಚನೆ

ಬೆಂಗಳೂರು: ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕೆಲಸಕ್ಕೆ ಅಡ್ಡಿ ಪಡಿಸುವ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರ ವಿರುದ್ಧ ರಾಜ್ಯದಾದ್ಯಂತ ಎಫ್‌ಐಆರ್ ದಾಖಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಆದೇಶಿಸಿದ್ದಾರೆ.

ಸಾರ್ವಜನಿಕವಾಗಿ ಕರ್ತವ್ಯಕ್ಕೆ ಅಡ್ಡಿ ಪಡಿಸುತ್ತಿರುವುದು, ಸನ್ಮಾನದ ನೆಪದಲ್ಲಿ ಮಾನಹಾನಿ ಮಾಡುತ್ತಿರುವ ಘಟನೆಗಳು ನಡೆದಿವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆಆರ್‌ಎಸ್ ಪಕ್ಷದ ಆಕ್ರೋಶ: ಭ್ರಷ್ಟ ಅಧಿಕಾರಿಗಳನ್ನು ಪ್ರಶ್ನೆ ಮಾಡಿದರೆ ಸರ್ಕಾರಿ ಕೆಲಸಕ್ಕೆ ಅಡ್ಡಿಯ ನೆಪವೊಡ್ಡಿ ಪ್ರಕರಣ ದಾಖಲಿಸಲು ಸೂಚನೆ ನೀಡಲಾಗಿದೆ. ಇದು ಯಾವ ನ್ಯಾಯ? ಎಂದು ಕೆಆರ್‌ಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಆಕ್ರೋಶ ಹೊರಹಾಕಿದ್ದಾರೆ.

'ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಯಾವುದಕ್ಕೂ ಹೆದರುವ ಅಗತ್ಯವಿಲ್ಲ. ಹೆದರುವುದೂ ಇಲ್ಲ' ಎಂದು ಪಕ್ಷದ ರಾಜ್ಯ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಹೇಳಿದ್ದಾರೆ.

₹1.53 ಕೋಟಿ ವಂಚನೆ ಪ್ರಕರಣಕ್ಕೆ ತಿರುವು

ಮಾಜಿ ಸಂಸದರ ಹೆಸರು ಹೇಳಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಆಗುವುದಾಗಿ ನಂಬಿಸಿ, ₹1.53 ಕೋಟಿ ಪಡೆದು ಮಹಿಳಾ ಟೆಕಿಗೆ ವಂಚಿಸಿದ್ದ ಪ್ರಕರಣದ ಆರೋಪಿ ವಿಜಯ್‌ರಾಜ್ ಗೌಡ ಅವರು ಹಲವು ಪ್ರಕರಣಗಳಲ್ಲಿ ಭಾಗಿ ಆಗಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ವೈಟ್‌ಫೀಲ್ಡ್ ನಿವಾಸಿ, 29 ವರ್ಷದ ಯುವತಿ ನೀಡಿದ ದೂರು ಆಧರಿಸಿ, ಕೆಂಗೇರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದರು. ಜ.19ರಂದು ವಿಜಯ್‌ರಾಜ್ ಅವರನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದಾಗ ಇದೇ ರೀತಿಯ ಹಲವು ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿರುವುದು ಪತ್ತೆಯಾಗಿದೆ.

ವಿಜಯ್‌ರಾಜ್ ವಿರುದ್ಧ ಕುಣಿಗಲ್, ಅತ್ತಿಬೆಲೆ, ಶಿವಮೊಗ್ಗ, ಕಾಡುಗೋಡಿ ಸೇರಿದಂತೆ ರಾಜ್ಯದ ನಾನಾ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಮಾಜಿ ಸಂಸದರೊಬ್ಬರ ಹೆಸರು ಹೇಳಿಕೊಂಡು ಎಂಟು ವರ್ಷಗಳಿಂದ ಹಲವು ಮಂದಿಗೆ ವಂಚಿಸಿರುವುದು ಪೊಲೀಸರ ವಿಚಾರಣೆಯಿಂದ ಪತ್ತೆಯಾಗಿದೆ.

ವಿಜಯ್‌ರಾಜ್ ಗೌಡ

ಮದುವೆ ಆಗುವುದಾಗಿ ನಂಬಿಸಿ, ಲಕ್ಷಾಂತರ ರೂಪಾಯಿ ಮೋಸ ಮಾಡಿರುವುದಾಗಿ ಆರೋಪಿಸಿ, ಯುವತಿ ನೀಡಿದ ದೂರಿನ ಮೇರೆಗೆ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ವಿಜಯ್‌ರಾಜ್ ವಿರುದ್ಧ 'ಝೀರೊ ಎಫ್‌ಐಆರ್' ದಾಖಲಾಗಿತ್ತು. ಕೃತ್ಯ ಎಸಗಿದ ಸ್ಥಳ ಆಧರಿಸಿ ಕೆಂಗೇರಿ ಪೊಲೀಸರಿಗೆ ಪ್ರಕರಣ ವರ್ಗಾವಣೆಗೊಂಡಿತ್ತು. ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ, ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ 2019ರಿಂದ ಹಲವರಿಗೆ ವಂಚಿಸಿರುವುದು ಗೊತ್ತಾಗಿದೆ.

ಮ್ಯಾಟ್ರಿಮೋನಿ ವೆಬ್‌ಸೈಟ್ ಮೂಲಕ ಯುವತಿಯರನ್ನು ಆರೋಪಿ ಪರಿಚಯ ಮಾಡಿಕೊಳ್ಳುತ್ತಿದ್ದ. ದೊಡ್ಡ ಉದ್ಯಮಿ ಎಂದು ಬಿಂಬಿಸಿಕೊಂಡಿದ್ದ. ಪ್ರಕರಣವೊಂದರಲ್ಲಿ ಹಣ ಫ್ರೀಜ್ (ವಹಿವಾಟು ಸ್ಥಗಿತ) ಆಗಿದೆ ಎಂದು ನಕಲಿ ದಾಖಲೆಗಳನ್ನು ತೋರಿಸುತ್ತಿದ್ದ. ಆರೋಪಿಯ ಮಾತು ನಂಬುತ್ತಿದ್ದ ಕೆಲವು ಯುವತಿಯರು, ಹಣ ವರ್ಗಾವಣೆ ಮಾಡುತ್ತಿದ್ದರು. ಅದೇ ರೀತಿ ವೈಟ್‌ಫೀಲ್ಡ್‌ನಲ್ಲಿ ನೆಲಸಿರುವ ಯುವತಿಗೂ ವಂಚಿಸಿದ್ದ. ಪತ್ನಿಯನ್ನು ಅಕ್ಕ ಎಂದು ಪರಿಚಯಿಸಿಕೊಂಡು ಆ ಯುವತಿಯಿಂದ ₹1.53 ಕೋಟಿ ಸುಲಿಗೆ ಮಾಡಿದ್ದ ಎಂದು ಪೊಲೀಸರು ತಿಳಿಸಿದರು.

'ಮಾಜಿ ಸಂಸದರೊಬ್ಬರು ನನಗೆ ಆಪ್ತರು' ಎಂದು ಹೇಳಿಕೊಂಡು ಕಾಮಗಾರಿಗಳ ಗುತ್ತಿಗೆ ಕೊಡಿಸುವುದಾಗಿ ಆರೋಪಿ ನಂಬಿಸಿದ್ದ. ಅಲ್ಲದೇ ಹಲವು ಕಂಪನಿಗಳ ಮುಖ್ಯಸ್ಥ ನಕಲಿ ಸಹಿ ಹಾಗೂ ಮುದ್ರೆಯನ್ನು ಬಳಸಿಕೊಂಡು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಈ ಸಂಬಂಧ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದು ಗೊತ್ತಾಗಿದೆ.

ಅಧಿಕಾರಿ ಹೆಸರಿನಲ್ಲಿ ಮೋಸ

ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ಅವರ ಹೆಸರು ಹಾಗೂ ಹುದ್ದೆ ಬಳಸಿಕೊಂಡು ಲಕ್ಷಾಂತರ ರೂಪಾಯಿ ವಂಚಿಸಿದ್ದ ವ್ಯಕ್ತಿಯ ವಿರುದ್ಧ ಇಲ್ಲಿನ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಜಿಲ್ಲೆಯ ನಂಜನಗೂಡಿನ ಕೆ.ಸಿ.ಜಗದೀಶ್ ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಜೆಎಸ್‌ಎಸ್ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ವೆಂಕಟೇಶ್ ಮುತ್ತಣ್ಣ ಅವರಿಗೆ ಕೆಪಿಎಸ್‌ಸಿ ಸದಸ್ಯ ಸ್ಥಾನವನ್ನು ಕೊಡಿಸುವುದಾಗಿ ಎಂ.ರಾಮಯ್ಯ ಅವರ ಹೆಸರು ಬಳಸಿಕೊಂಡು 2023ರ ಸೆಪ್ಟೆಂಬರ್‌ನಿಂದ 2025ರ ಏಪ್ರಿಲ್ ವರೆಗೆ ಹಣ ಪಡೆದುಕೊಂಡು ವಂಚಿಸಿದ್ದಾರೆ ಎಂದು ದೂರು ನೀಡಲಾಗಿದೆ. ಆರೋಪಿ ತಲೆಮರೆಸಿಕೊಂಡು ಓಡಾಡುತ್ತಿದ್ದಾರೆ. ಅವರ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಅತ್ಯಾಚಾರ ಆರೋಪ: ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆಯಾಗುವ ಭರವಸೆ ನೀಡಿ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ವಕೀಲರೊಬ್ಬರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

'ನನ್ನ ವಿರುದ್ಧದ ಎಫ್‌ಐಆರ್ ಮತ್ತು ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ವಕೀಲರೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

'ಈ ಪ್ರಕರಣದಲ್ಲಿ ದೂರುದಾರ ಮಹಿಳೆ ಕಾನೂನು ನೆರವು ಕೋರಿ ಅರ್ಜಿದಾರ ವಕೀಲರನ್ನು ಸಂಪರ್ಕಿಸಿದ್ದಾರೆ. ಅಂತೆಯೇ, ಮುಂದುವರಿದು ಪರಸ್ಪರ ಸ್ನೇಹ ಸಂಪಾದಿಸಿ ಕೊಂಡಿದ್ದಾರೆ. ತದನಂತರ ಎರಡು ವರ್ಷಗಳ ಅವಧಿಯಲ್ಲಿ ಒಪ್ಪಿಗೆಯ ಸಂಭೋಗ ನಡೆಸಿರುವುದನ್ನು ದೂರಿನ ಅಂಶಗಳು ಮೇಲ್ನೋಟಕ್ಕೆ ವಿಶದಪಡಿಸುತ್ತವೆ. ಹಾಗಾಗಿ, ಈ ಪ್ರಕರಣ ಅತ್ಯಾಚಾರ ಮತ್ತು ಒಪ್ಪಿತ ಲೈಂಗಿಕ ಚಟುವಟಿಕೆಗಳ ಬಲೆಯಲ್ಲಿ ನೇಯ್ದುಕೊಂಡಿದೆ' ಎಂಬ ಅಭಿಪ್ರಾಯದೊಂದಿಗೆ ಎಫ್‌ಐಆರ್ ರದ್ದುಪಡಿಸಿದೆ.

ಅಪಘಾತ: ಸ್ಕೂಟರ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನ್ ಬೀಮಾ ನಗರ ಸಂಚಾರ ಠಾಣಾ ವ್ಯಾಪ್ತಿಯ ಇಂದಿರಾನಗರದ ಡಬಲ್ ರಸ್ತೆಯ 12ನೇ ಮುಖ್ಯರಸ್ತೆಯ ಜಂಕ್ಷನ್‌ನಲ್ಲಿ ಗುರುವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ತಮಿಳುನಾಡಿನ ತಿಪ್ಪಸಂದ್ರದ ನಿವಾಸಿ ಸೋಲಾ ಗುರುಸ್ವಾಮಿ (59) ಮೃತಪಟ್ಟವರು.

ಗುರುಸ್ವಾಮಿ ಗುರುವಾರ ಬೆಳಿಗ್ಗೆ 10.15ರ ಸುಮಾರಿಗೆ ಸ್ಕೂಟರ್‌ನಲ್ಲಿ ಕೇಂಬ್ರಿಡ್ಜ್ ಲೇಔಟ್ ಕಡೆಗೆ ತೆರಳುತ್ತಿದ್ದರು. ಇಂದಿರಾನಗರದ ಡಬಲ್ ರಸ್ತೆಯ 12ನೇ ಮುಖ್ಯ ರಸ್ತೆಯ ಜಂಕ್ಷನ್ ಕಡೆಯಿಂದ ಶಾಂತಿಸಾಗರ್ ಹೋಟೆಲ್ ಜಂಕ್ಷನ್ ಕಡೆಗೆ ಅತಿ ವೇಗವಾಗಿ ಕಾರೊಂದು ಬಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಸುಮಾರು 20 ಅಡಿ ದೂರದವರೆಗೆ ದ್ವಿಚಕ್ರ ವಾಹನ ಹಾಗೂ ಸವಾರನ ಸಮೇತ ಕಾರು ಎಳೆದೊಯ್ದಿದೆ.

ಗುರುಸ್ವಾಮಿ ಅವರು ಹೆಲ್ಮೆಟ್ ಧರಿಸಿದ್ದರೂ ಅವರ ತಲೆಗೆ ಗಂಭೀರ ಗಾಯವಾಗಿ ಮೃತಪಟ್ಟಿದ್ದಾರೆ.

ಕಾರು ಚಾಲಕ ರವಿಚಂದ್ರ ಅತಿ ವೇಗದಿಂದ ಚಾಲನೆ ಮಾಡಿ ಬಂದಿರುವುದು ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಜೀವನ್ ಬೀಮಾ ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಧನದ ವಾರಂಟ್ ಹೊರಡಿಸಿದ್ದ ನ್ಯಾಯಾಲಯ

ಪುನೀತ್ ಕೆರೆಹಳ್ಳಿ ಮತ್ತೆ ಸೆರೆ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಗೋವು ಸಾಗಣೆ ಮಾಡುತ್ತಿದ್ದಾರೆ ಎಂದು ಆರೋಪಿಸಿ ಗೋವು ಸಾಗಣೆದಾರರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ರಾಷ್ಟ್ರ ರಕ್ಷಣಾ ಪಡೆಯ ಮುಖಂಡ ಪುನೀತ್ ಕೆರೆಹಳ್ಳಿ ಅವರನ್ನು ಬಾಗಲಗುಂಟೆ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿ, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಪುನೀತ್ ಕೆರೆಹಳ್ಳಿ

ಈ ಪ್ರಕರಣದಲ್ಲಿ ಪುನೀತ್ ಕೆರೆಹಳ್ಳಿ ಅವರು ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗಿರಲಿಲ್ಲ. ನ್ಯಾಯಾಲಯವು ಬಂಧನದ ವಾರಂಟ್ ಜಾರಿ ಮಾಡಿತ್ತು. ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಜಾಮೀನು ಮಂಜೂರು ಮಾಡಿದ್ದರಿಂದ ಬಿಡುಗಡೆ ಮಾಡಲಾಯಿತು ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಾಂಗ್ಲಾದೇಶದ ಅಕ್ರಮ ವಲಸಿಗರ ಶೆಡ್‌ಗಳಿಗೆ ತೆರಳಿ ಅವರ ಆಧಾರ್ ಕಾರ್ಡ್, ಗುರುತಿನ ಚೀಟಿ ಪರಿಶೀಲನೆ ನಡೆಸಲಾಗಿದೆ ಎಂಬ ದೂರಿನ ಮೇರೆಗೆ ಪುನೀತ್ ಅವರನ್ನು ಬನ್ನೇರುಘಟ್ಟ ಠಾಣೆ ಪೊಲೀಸರು ಜನವರಿ 16ರಂದು ಬಂಧಿಸಿದ್ದರು. ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರು.

ಬಾಂಗ್ಲಾ ವಲಸಿಗರ ರಾಷ್ಟ್ರೀಯತೆಯನ್ನು ಪುನೀತ್ ಹಾಗೂ ಪಡೆಯ ಸದಸ್ಯರು ಪ್ರಶ್ನಿಸಿದ್ದರು. ಇದಕ್ಕೆ ಸಂಬಂಧಿಸಿದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ ಅವರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು.

ಮ್ಯಾನ್ಮಾರ್ ನಿರಾಶ್ರಿತರೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಪುನೀತ್ ಕೆರೆಹಳ್ಳಿ ಹಾಗೂ ಸಹಚರರ ವಿರುದ್ಧ ಸಿ.ಕೆ. ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಡಿ.8ರಂದು ಪ್ರಕರಣ ದಾಖಲಾಗಿತ್ತು. ಹಲ್ಲೆಗೆ ಒಳಗಾಗಿರುವ ಜಹಂಗೀರ್ ಆಲಂ ಎಂಬುವರು ದೂರು ನೀಡಿದ್ದರು.

ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ 8ನೇ ಶಾಖೆ ಉದ್ಘಾಟನೆ

ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿಯವರಿಂದ ಚಾಲನೆ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಗ್‌ಬಾಸ್ ವಿಜೇತ ಗಿಲ್ಲಿ ನಟರಾಜ್ ಸೇರಿದಂತೆ ಇನ್ನಿತರ ಸ್ಪರ್ಧಿಗಳು ಭಾಗವಹಿಸಿ, ಕಾರ್ಯಕ್ರಮಕ್ಕೆ ಮೆರುಗು

ಬೆಂಗಳೂರು: ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ತನ್ನ 8ನೇ ಶಾಖೆಯನ್ನು ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿ ಆರಂಭಿಸಿದೆ. ಶಾಖೆಯನ್ನು ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಸಾಯಿ ಬಾಬಾರ ಅಪಾರ ಭಕ್ತರಾದ ಶರವಣರವರು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಸ್ಥಾಪನೆ ಮಾಡುವ ಮೂಲಕ ಜನರಿಗೆ ಗುಣಮಟ್ಟ ಮತ್ತು ಪಾರದರ್ಶಕ ಚಿನ್ನಾಭರಣ ಒದಗಿಸುವ ಸೇವೆ ಮಾಡುತ್ತಿದ್ದಾರೆ. ಜನ ನೀಡುವ ಹಣಕ್ಕೆ ಉತ್ತಮ ಚಿನ್ನಾಭರಣ ಲಭಿಸಬೇಕೆನ್ನುವ ಹಂಬಲ ಹೊಂದಿದ್ದಾರೆ. ಹೀಗಾಗಿಯೇ, ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ 7 ಮಳಿಗೆ ಆರಂಭಿಸಿದ್ದಾರೆ. ಈಗ 8ನೇ ಮಳಿಗೆಯನ್ನು ಕನಕಪುರ ರಸ್ತೆಯಲ್ಲಿ ಪ್ರಾರಂಭಿಸಿದ್ದಾರೆ. ಶರವಣರವರ ಈ ಮಳಿಗೆಗಳು ಕೇವಲ ಚಿನ್ನಾಭರಣ ಖರೀದಿಸುವ ಜನರಿಗಷ್ಟೇ ಅಲ್ಲದೇ, ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ದುಡಿಯುತ್ತಿರುವ 500ಕ್ಕೂ ಹೆಚ್ಚು ನೌಕರರಿಗೆ ಬದುಕು ಕಟ್ಟಿಕೊಡುವ ಕೆಲಸವಾಗುತ್ತಿದೆ ಎಂದರು.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕರಾದ ಟಿ.ಎ.ಶರವಣ ಮಾತನಾಡಿ, ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಶಾಪಿಂಗ್ ಮಾಡಲು ಸಂಚಾರ ದಟ್ಟಣೆ ಇರುವ ಹಿನ್ನೆಲೆ ಗ್ರಾಹಕರಿಗೆ ಸಾಕಷ್ಟು ತೊಂದರೆಯಾಗುತ್ತದೆ. ಚಿನ್ನಾಭರಣ ಖರೀದಿಗೆ ಒಂದು ದಿನ ವ್ಯರ್ಥವಾಗುತ್ತದೆ. ಹೀಗಾಗಿ, ಗ್ರಾಹಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ 8ನೇ ಶಾಖೆಯನ್ನು ಕನಕಪುರ ರಸ್ತೆ ಆರಂಭಿಸಲಾಗಿದೆ. ಈ ಶಾಖೆ ಮಂಡ್ಯ, ಚನ್ನಪಟ್ಟಣ, ರಾಮನಗರ ಜನತಗೆ ಹತ್ತಿರವಾಗಲಿದ್ದು, ಸಮಯ ಉಳಿತಾಯವಾಗಲಿದೆ. ಪ್ರಸ್ತುತ, ಚಿನ್ನದ ಬೆಲೆ ದಿನದಿಂದ ದಿನಕ್ಕೆ ಏರಿಕೆ ಕಾಣುತ್ತಿದ್ದು, ಅವಶ್ಯಕತೆಗೆ ತಕ್ಕಂತೆ ಚಿನ್ನ ಖರೀದಿಸಬೇಕಾಗುತ್ತದೆ. ವಿಶೇಷವಾಗಿ ಶ್ರೀಸಾಯಿ ಪ್ಯಾಲೇಸ್‌ನಲ್ಲಿ ಪಾರಂಪಾರಿಕ ಮತ್ತು ಟೆಂಪಲ್ ಶೈಲಿಯ ನವನವೀನ ವಿನ್ಯಾಸದ ಚಿನ್ನಾಭರಣ ಲಭ್ಯವಿದೆ ಎಂದು ಹೇಳಿದರು.

ಗುಣಮಟ್ಟಕ್ಕೆ ಆದ್ಯತೆ: ರಾಜ್ಯದಲ್ಲಿ ಅನೇಕ ವರ್ಷಗಳಿಂದ ಚಿನ್ನಾಭರಣ ಕ್ಷೇತ್ರದಲ್ಲಿ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ತನ್ನ ಸೇವೆಯನ್ನು ಮುಂದುವರೆಸಿಕೊಂಡು ಬಂದಿದ್ದು, ನಾನಾ ವಿಶೇಷ ಕೊಡುಗೆಗಳನ್ನು ನೀಡುತ್ತ ಬಂದಿದೆ. ಬೆಂಗಳೂರಿನಲ್ಲಿ ಈವರೆಗೆ 7 ಶಾಖೆಗಳನ್ನು ಹೊಂದಿದ್ದು, ಪ್ರಸ್ತುತ 8ನೇ ಶಾಖೆ ಕಾರ್ಯಾರಂಭ ಮಾಡಿದೆ. ಆ ಮೂಲಕ ಜನರಿಗೆ ತನ್ನ ಸೇವೆಯನ್ನು ವಿಸ್ತರಿಸಿದೆ.

ಕಾರ್ಯಕ್ರಮವನ್ನು ಕೇಂದ್ರ ಸಚಿವೆ ಶೋಭಾ ಕರಾಂದ್ಲಾಜೆ, ಬಿಗ್‌ಬಾಸ್ ವಿಜೇತ ಗಿಲ್ಲಿ ನಟರಾಜ್ ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು. ಕಾರ್ಯಕ್ರಮದಲ್ಲಿ ಬಿಗ್ ಬಾಸ್ ಸ್ಪರ್ಧಿಗಳಾದ ರಕ್ಷಿತಾ, ಅಶ್ವಿನಿ ಗೌಡ, ಕಾವ್ಯ, ರಘು, ಧನುಷ್ ಗೌಡ, ಸ್ಪಂದನ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ 8ನೇ ಶಾಖೆ ಆರಂಭ
- ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿ ಶಾಖೆ
- ಗ್ರಾಹಕರಿಗೆ ಗುಣಮಟ್ಟದ ಚಿನ್ನಾಭರಣ ಮಾರಾಟಕ್ಕೆ ಸುಸಜ್ಜಿತ ವ್ಯವಸ್ಥೆ
- ಮಂಡ್ಯ, ಮೈಸೂರು, ರಾಮನಗರ ಭಾಗದ ಜನರಿಗೆ ಕನಕಪುರ ರಸ್ತೆಯ ಶಾಖೆ ಸಮೀಪ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ. ಹೊನ್ನೂರಪ್ಪ ಯಶೋದಮ್ಮ ನವರು

ದೊಡ್ಡದೇವಪ್ಪ ನವರ ಸೊಸೆ, ಮಾವಳ್ಳಿ, ಬೆಂಗಳೂರು.

ಜನನ: 09-11-1948 – ಮರಣ: 24-01-2024

ನೀವು ನಮ್ಮನಗಲಿ ಇಂದಿಗೆ ಎರಡು ವರ್ಷಗಳಾದರೂ ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ಅನುದಿನವೂ, ಅನುಕ್ಷಣವೂ, ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು:

ಪತಿ ಡಿ. ರಾಜು, ಪುತ್ರ ಆರ್. ನಂದೀಶ್ ರಾಜು, ಸೊಸೆ ಭಾನುಮತಿ, ಪುತ್ರಿ ಆರ್. ಸುನೀತ, ಮೊಮ್ಮಕ್ಕಳು ನಿಖಿತ ಶಿವಕುಮಾರ್, ನಿಖಿಲ್ ಶಿವಕುಮಾರ್, ಸಿದ್ಧಾರ್ಥ್ ನಂದೀಶ್ ರಾಜು, ಗಾನವಿ ನಂದೀಶ್ ರಾಜು. ಮೊಬೈಲ್: 9845503062, 8197826061, 7204935434.

‘2030ಕ್ಕೆ ಉಪನಗರ ರೈಲು ಪೂರ್ಣ– ಗುರಿ’

2027ರ ಅಂತ್ಯಕ್ಕೆ ಚಿಕ್ಕಬಾಣಾವರ– ಯಶವಂತಪುರ ನಡುವೆ ರೈಲು ಸಂಚಾರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಎಲ್ಲ ನಾಲ್ಕು ಕಾರಿಡಾರ್‌ಗಳನ್ನು 2030ಕ್ಕೆ ಪೂರ್ಣಗೊಳಿಸುವ ಹೊಸ ಗುರಿಯನ್ನು ಕೆ-ರೈಡ್ ಇಟ್ಟುಕೊಂಡಿದೆ. ಎರಡನೇ ಕಾರಿಡಾರ್‌ನಲ್ಲಿ ಚಿಕ್ಕಬಾಣಾವರದಿಂದ ಯಶವಂತಪುರವರೆಗೆ 2027ರ ಡಿಸೆಂಬರ್ ಒಳಗೆ ಮೊದಲ ರೈಲು ಸಂಚರಿಸುವ ಸಾಧ್ಯತೆ ಇದೆ.

ಪ್ರಧಾನಿ ನರೇಂದ್ರ ಮೋದಿಯವರು ಈ ಯೋಜನೆಗೆ 2022ರ ಆಗಸ್ಟ್‌ನಲ್ಲಿ ಚಾಲನೆ ನೀಡುವ ಸಮಯದಲ್ಲಿ 40 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದರು. ಈ ಗಡುವು 2025ರ ಡಿಸೆಂಬರ್‌ಗೆ ಮುಗಿದುಹೋಗಿದೆ. ಕಾಯಂ ವ್ಯವಸ್ಥಾಪಕ ನಿರ್ದೇಶಕ ಕೊರತೆ, ತಾಂತ್ರಿಕ ತಜ್ಞರಲ್ಲದವರಿಗೆ ಜವಾಬ್ದಾರಿ ನೀಡಿದ್ದು, ಗುತ್ತಿಗೆ ಪಡೆದ ಕಂಪನಿಗಳು ನಿಗದಿತ ವೇಗದಲ್ಲಿ ಕಾಮಗಾರಿ ನಡೆಸದಿರುವುದು, ಕೊನೆಗೆ ಯೋಜನೆಯಿಂದ ಹಿಂದಕ್ಕೆ ಸರಿದಿದ್ದು ಕೂಡ ತೆವಳಲು ಕಾರಣವಾಗಿತ್ತು.

ಭಾರತೀಯ ರೈಲ್ವೆ ಸೇವೆಯ ಎಂಜಿನಿಯರ್ (ಐಆರ್‌ಎಸ್‌ಇ) ಲಕ್ಷ್ಮಣ್ ಸಿಂಗ್ ಅವರು ಕಾಯಂ ವ್ಯವಸ್ಥಾಪಕ ನಿರ್ದೇಶಕರಾಗಿ ಬಂದ ಬಳಿಕ ನಿರೀಕ್ಷೆ ಹುಟ್ಟಿಸಿದ್ದಾರೆ. ಕಾಮಗಾರಿಗಳ ಪ್ರಗತಿ ಪರಿಶೀಲಿಸಿದ್ದಲ್ಲದೇ ಅಧಿಕಾರಿಗಳೊಂದಿಗೆ, ಸಾರ್ವಜನಿಕರೊಂದಿಗೆ ಚರ್ಚಿಸುತ್ತಿದ್ದಾರೆ ಎಂದು ಯೋಜನಾ ಆಸಕ್ತರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಕಾರಿಡಾರ್–2 ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ ಯೋಜನೆಯನ್ನು 2029ಕ್ಕೆ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ್ದಾರೆ. ಈ ಕಾರಿಡಾರ್‌ನಲ್ಲಿಯೇ ಮೊದಲ 7 ಕಿ.ಮೀ. ಮುಂದಿನ ವರ್ಷದ ಕೊನೆಗೆ ಆರಂಭಿಸುವ ಮೂಲಕ ಜನರಲ್ಲಿ ಬಿಎಸ್‌ಆರ್‌ಪಿ ಬಗ್ಗೆ ಭರವಸೆ ಮೂಡಿಸುವುದಾಗಿ ಆಸಕ್ತ ಸಾರ್ವಜನಿಕ ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಹೇಳಿದ್ದಾರೆ. 2030ರ ವೇಳೆಗೆ ಎಲ್ಲ ಕಾರಿಡಾರ್‌ಗಳು ಪೂರ್ಣಗೊಳ್ಳುವಂತೆ ಕೆ-ರೈಡ್ ಕಾರ್ಯನಿರ್ವಹಿಸಲಿರುವುದಾಗಿಯೂ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

‘ಮೊದಲು ನಿಗದಿಪಡಿಸಿದ್ದ ಗಡುವಿನ ಅವಧಿಯೂ ಕಡಿಮೆ ಇತ್ತು. ಬೇರೆ ಬೇರೆ ಕಾರಣಗಳಿಂದ ಕಾಮಗಾರಿಯೂ ವಿಳಂಬವಾಗಿತ್ತು. ಸ್ವಲ್ಪ ಹೆಚ್ಚಿನ ಅವಧಿಯನ್ನು ತೆಗೆದುಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸುವ ಸವಾಲು ನಮ್ಮೆದುರು ಇದೆ. ಕೆ-ರೈಡ್‌ನ ಕಾರ್ಯವು ರೈಲು ಮೂಲಸೌಕರ್ಯವನ್ನು ನಿರ್ಮಿಸುವುದಕ್ಕಷ್ಟೇ ಸೀಮಿತವಾಗಿಲ್ಲ. ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನಾಗರಿಕರೊಂದಿಗೆ ನಿರಂತರ ಸಂಪರ್ಕದ ಮೂಲಕ ಸಾರ್ವಜನಿಕ ವಿಶ್ವಾಸವನ್ನು ಬೆಳೆಸಬೇಕಿದೆ. ದೀರ್ಘಕಾಲೀನ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಕೆ-ರೈಡ್ ಪ್ರಮುಖ ಪಾತ್ರ ವಹಿಸಲಿದೆ’ ಎಂದು ಲಕ್ಷ್ಮಣ್ ಸಿಂಗ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- 2022ರಲ್ಲಿ ಉಪನಗರ ರೈಲು ಯೋಜನೆಗೆ ಚಾಲನೆ
- 40 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಗಡುವು
- ಕಾಮಗಾರಿ ನಿಧಾನ– ಹೊಸ ಗಡುವು ನಿಗದಿ

ಕೆ–ರೈಡ್‌ನ ಸುದ್ದಿ ಪತ್ರ ‘ಸಂಪರ್ಕ’ವನ್ನು ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಅವರು ಅಧಿಕಾರಿಗಳು ಮತ್ತು ನಾಗರಿಕ ಪಾಲುದಾರರೊಂದಿಗೆ ಇತ್ತೀಚೆಗೆ ಬಿಡುಗಡೆ ಮಾಡಿದರು

2ನೇ ಹಂತದ ಯೋಜನೆಗೆ ಬೇಡಿಕೆ

ಮೊದಲ ಹಂತದಲ್ಲಿ ನಾಲ್ಕು ಕಾರಿಡಾರ್‌ಗಳ ನಿರ್ಮಾಣ ಕಾರ್ಯ ವಿಳಂಬವಾಗಿದೆ. ಆದರೆ, ಮೆಟ್ರೊ ಇನ್ನಿತರ ಸಾರಿಗೆ ಸಂಪರ್ಕ ಇರುವುದರಿಂದ ಅಷ್ಟಾಗಿ ಸಮಸ್ಯೆ ಕಾಡಿಲ್ಲ. ಬೆಂಗಳೂರಿಗೆ ಸಮೀಪ ಇರುವ ಕೋಲಾರ, ಬಂಗಾರಪೇಟೆ, ತುಮಕೂರು, ಮಾಗಡಿ, ಹೊಸೂರು, ಗೌರಿಬಿದನೂರಿಗೆ ವಿಸ್ತರಿಸುವ ಯೋಜನೆಯನ್ನು ಈಗಲೇ ಕೈಗೆತ್ತಿಕೊಳ್ಳಬೇಕು. ಆಗ ಜನರಿಗೆ ಅನುಕೂಲ ಆಗುತ್ತದೆ. ಅಲ್ಲದೇ ವಸತಿ, ಜನ ಸಂಚಾರ ಉಪನಗರಗಳಿಗೆ ವಿಸ್ತರಣೆಗೊಳ್ಳುವುದರಿಂದ ಇಲ್ಲಿ ಸಮಸ್ಯೆ ಕಡಿಮೆಯಾಗಲಿದೆ ಎಂದು ಸಭೆಯಲ್ಲಿ ಸಾರ್ವಜನಿಕರು ಒತ್ತಾಯಿಸಿದ್ದಾರೆ.

‘ಸಂಪರ್ಕ’ ಬಿಡುಗಡೆ

ಯೋಜನೆಯ ಪ್ರಗತಿ, ಪ್ರಮುಖ ಮೈಲುಗಲ್ಲುಗಳ ಬಗ್ಗೆ ಮಾಹಿತಿ ನೀಡುವ ಕೆ-ರೈಡ್‌ನ ಸುದ್ದಿ ಪತ್ರ ‘ಸಂಪರ್ಕ’ವು ಪ್ರಕಟವಾಗುವುದೇ ನಿಂತು ಹೋಗಿತ್ತು. ಸುಮಾರು ಒಂದು ವರ್ಷದ ಬಳಿಕ ಬುಧವಾರ ಬಿಡುಗಡೆಗೊಂಡಿದೆ.

https://kride.in/samparka-newsletterನಲ್ಲಿ ಮಾಹಿತಿ ದೊರೆಯಲಿದ್ದು, ಇದರ ಮುದ್ರಿತ ಪ್ರತಿಯನ್ನು ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಬಿಡುಗಡೆ ಮಾಡಿದರು.

ಕೆ-ರೈಡ್ ನಿರ್ದೇಶಕರಾದ ರಾಜೇಶ್ ಕುಮಾರ್ ಸಿಂಗ್, ಅವದೇಶ್ ಮೆಹ್ತಾ, ವಿವಿಧ ಸಂಘಟನೆಗಳ ರಾಜಕುಮಾರ್ ದುಗಾರ್, ಕೆ.ಎನ್. ಕೃಷ್ಣಪ್ರಸಾದ್, ಪ್ರಕಾಶ್ ಮಂಡೋತ್, ಕರ್ಣಂ ರಮೇಶ್, ಸಂಜೀವ್ ದ್ಯಾಮಣ್ಣನವರ್, ಟಿ.ಪಿ. ಲೋಕೇಶ್, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯದ ಉದ್ಘಾಟನೆಯ ದೇವತಾ ಕಾರ್ಯಕ್ಕೆ ಕಾಡಸಿದ್ದೇಶ್ವರ ಟ್ರಸ್ಟ್ ದೇವಸ್ಥಾನದ ಆನೆಯನ್ನು ಶುಕ್ರವಾರ ಕರೆತರಲಾಗಿತ್ತು ಪ್ರಜಾವಾಣಿ ಚಿತ್ರ

ಆದಿಶಕ್ತಿ ದೇಗುಲ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ – ನಗರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ನೌಕರರ ದೇಣಿಗೆಯೊಂದಿಗೆ ಜೀರ್ಣೋದ್ಧಾರ ಮಾಡಿರುವ ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯ ಶುಕ್ರವಾರ ಉದ್ಘಾಟನೆಯಾಯಿತು.

ಭಾನುಪ್ರಕಾಶ್ ಶರ್ಮಾ ಅವರ ನೇತೃತ್ವದಲ್ಲಿ 40ಕ್ಕೂ ಹೆಚ್ಚು ಅರ್ಚಕರು, ಆಗಮ ಪಂಡಿತರಿಂದ ಜ.21ರಿಂದ 23ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಶುಕ್ರವಾರ ಶತಚಂಡಿಕಯಾಗ ನಡೆಯಿತು. ನೊಣವಿನಕೆರೆ ಕಾಡಸಿದ್ದೇಶ್ವರ ಟ್ರಸ್ಟ್ ದೇವಸ್ಥಾನದ ಆನೆಯನ್ನು ದೇವತಾ ಕಾರ್ಯಕ್ಕೆ ಕರೆತರಲಾಗಿತ್ತು.

‘ಜಿಬಿಎ ಹಾಗೂ ಪಾಲಿಕೆ ನೌಕರರ ನೆರವಿನಿಂದ ಪುರಾತನ ದೇವಸ್ಥಾನಕ್ಕೆ ಹೊಸ ರೂಪ ಕೊಡಲಾಗಿದೆ. ಶುಕ್ರವಾರ ಸುಮಾರು ಐದು ಸಾವಿರ ಭಕ್ತರಿಗೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಸುಮಾರು 800 ವರ್ಷಗಳ ಇತಿಹಾಸವಿರುವ ಈ ದೇವಾಲಯದ ಆವರಣದಲ್ಲಿ ಮಹಾಗಣಪತಿ, ಸಪ್ತಮಾತೃಕೆಯರು, ಕಾಶಿ ವಿಶ್ವನಾಥ ದಂಪತಿ ಸಮೇತ ಪೋತುರಾಜಸ್ವಾಮಿ, ವಲ್ಲಿ ದೇವಸೇನಾ ಸಮೇತ ಕಾರ್ತಿಕೇಯ, ಆಂಜನೇಯ, ಆದಿ ದೇವತೆಗಳು, ಅಷ್ಟ ದಿಕ್ಪಾಲಕರೊಂದಿಗೆ ನವಗ್ರಹ, ಶನಿ ಮಹಾತ್ಮ ದೇವರುಗಳಿದ್ದು, ಸೂರ್ಯ ಭಗವಾನ್ ಮತ್ತು ಕಾಲಭೈರವ ದೇವರ ಮೂರ್ತಿಯನ್ನು ಹೊಸದಾಗಿ ಸ್ಥಾಪಿಸಲಾಗಿದೆ.

ಜಿಬಿಎ ಕೇಂದ್ರ ಕಚೇರಿಯ ಆವರಣದಲ್ಲಿ ಮೂರು ದಿನ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲೆಡೆ ಹೂವಿನ ಅಲಂಕಾರ, ವಿದ್ಯುತ್ ದ್ವೀಪಗಳು ಸೇರಿದಂತೆ ವಿಶಿಷ್ಟ ರೀತಿಯಲ್ಲಿ ಕೋಟೆಯ ಪ್ರತಿಕೃತಿಯನ್ನು ನಿರ್ಮಿಸಲಾಗಿತ್ತು.

ಜಾಹೀರಾತು ನೀತಿಯಂತೆ ಅನುಮತಿ ಪಡೆದರಷ್ಟೇ ಇನ್ನೊಂದು ಫಲಕಕ್ಕೆ ಅವಕಾಶ: ಆಯುಕ್ತ ಡಿ.ಎಸ್. ರಮೇಶ್

ಒಂದಕ್ಕಿಂತ ಹೆಚ್ಚು ಜಾಹೀರಾತು ಫಲಕಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಣಿಜ್ಯ ಮಳಿಗೆಗಳ ಮುಂದೆ ಒಂದಕ್ಕಿಂತ ಹೆಚ್ಚು ಜಾಹೀರಾತು ಫಲಕ ಅಳವಡಿಸುವುದನ್ನು ನಿರ್ಬಂಧಿಸಲಾಗಿದೆ.

ಒಂದಕ್ಕಿಂತ ಹೆಚ್ಚಿನ ಫಲಕಗಳನ್ನು ಅಳವಡಿಸಬೇಕಾದರೆ ಅದಕ್ಕೆ ಜಾಹೀರಾತು ನೀತಿಯಂತೆ ಅನುಮತಿ ಪಡೆಯಬೇಕಾಗುತ್ತದೆ.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಹೊಸದಾಗಿ ಜಾರಿಗೆ ತಂದಿರುವ ಜಾಹೀರಾತು ನಿಯಮಾವಳಿಯಂತೆ ವಾಣಿಜ್ಯ ಮಳಿಗೆಯವರು ಒಂದಕ್ಕಿಂತ ಹೆಚ್ಚಿನ ಫಲಕ ಅಳವಡಿಸುವಂತಿಲ್ಲ. ಅನುಮತಿ ಪಡೆಯದೇ ಅಳವಡಿಸುವ ಎಲ್ಲಾ ಜಾಹೀರಾತು ಫಲಕಗಳು ಅನಧಿಕೃತವಾಗುತ್ತವೆ. ಹೀಗಾಗಿ, ವಾಣಿಜ್ಯ ಮಳಿಗೆ ಮಾಲೀಕರು ತಾವೇ ಎಲ್ಲಾ ರೀತಿಯ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವು ಮಾಡಬೇಕು’ ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಸೂಚಿಸಿದರು.

ಕೃಷ್ಣರಾಜಪುರ ವಲಯ ವ್ಯಾಪ್ತಿಯ ಹಳೆ ಮದ್ರಾಸ್ ಮುಖ್ಯರಸ್ತೆಯ ಎರಡೂ ಬದಿಗಳಲ್ಲಿನ ವಾಣಿಜ್ಯ ಮಳಿಗೆಗಳ ಮುಂಭಾಗದಲ್ಲಿ ಅಳವಡಿಸಲಾಗಿರುವ ಅನಧಿಕೃತ ಜಾಹೀರಾತು ಹೋರ್ಡಿಂಗ್ ಹಾಗೂ ಎಲ್‌ಇಡಿ ಜಾಹೀರಾತಿನ 17 ಫಲಕಗಳನ್ನು ಜಂಟಿ ಕಾರ್ಯಾಚರಣೆಯಲ್ಲಿ ಶುಕ್ರವಾರ ತೆರವು ಮಾಡಲಾಯಿತು. ನಗರ ಪಾಲಿಕೆಯ ಎಂಜಿನಿಯರಿಂಗ್, ಕಂದಾಯ, ವಿದ್ಯುತ್ ಮತ್ತು ಆರೋಗ್ಯ ಇಲಾಖೆಯ ತಂಡವು ವಿಶೇಷ ಜಂಟಿ ಕಾರ್ಯಾಚರಣೆ ನಡೆಸಿತು ಎಂದು ಮಾಹಿತಿ ನೀಡಿದರು.

ಸಾರ್ವಜನಿಕ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ರಾತ್ರಿ 10ರಿಂದ ಬೆಳಗಿನ ಜಾವ 4ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು ಎಂದರು.

ನಗರದ ಸೌಂದರ್ಯ, ಸಾರ್ವಜನಿಕರ ಸುರಕ್ಷತೆ ಹಾಗೂ ಸಂಚಾರ ವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಅನಧಿಕೃತ ಜಾಹೀರಾತುಗಳ ವಿರುದ್ಧ ಪ್ರತಿ ವಾರ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುವುದು. ಅನುಮತಿ ಪಡೆಯದೇ ಜಾಹೀರಾತು ಫಲಕಗಳನ್ನು ಅಳವಡಿಸುವುದು ಕಾನೂನುಬಾಹಿರವಾಗಿದ್ದು, ಇಂತಹ ಅಕ್ರಮ ಚಟುವಟಿಕೆಗಳ ವಿರುದ್ಧ ಬೆಂಗಳೂರು ಪೂರ್ವ ನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ತೆರವು ಕಾರ್ಯಾಚರಣೆ ಜೊತೆಗೆ ನಿಯಮ ಉಲ್ಲಂಘಿಸುವವರ ವಿರುದ್ಧ ದಂಡನಾತ್ಮಕ ಕ್ರಮಗಳನ್ನೂ ಕೈಗೊಳ್ಳಲಾಗುವುದು ಎಂದು ಆಯುಕ್ತರು ಎಚ್ಚರಿಸಿದರು.

ಜಯನಗರಕ್ಕೆ ಸಮಗ್ರ ಪಾರ್ಕಿಂಗ್ ಕ್ರಿಯಾ ಯೋಜನೆ

ಜಯನಗರದಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ಸಮಗ್ರ ಪಾರ್ಕಿಂಗ್ ಕ್ರಿಯಾಯೋಜನೆ ಸಿದ್ಧಪಡಿಸುವಂತೆ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಂಚಾರ ಪೊಲೀಸ್ ಅಧಿಕಾರಿಗಳು ಹಾಗೂ ಪಾಲಿಕೆಯ ಸಂಚಾರ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಜಯನಗರದಲ್ಲಿ ಹೊಸ ಪಾರ್ಕಿಂಗ್ ನೀತಿ ಜಾರಿಗೆ ತರುವುದು, ಅವಶ್ಯ ಇರುವ ಕಡೆ ರಸ್ತೆ ಉಬ್ಬುಗಳ ನಿರ್ಮಾಣ, ಪಾದಚಾರಿಗಳ ಸುರಕ್ಷತೆಗೆ ಒತ್ತು, ಲೇನ್ ಮಾರ್ಕಿಂಗ್ ಮತ್ತು ಎಚ್ಚರಿಕೆ ಫಲಕಗಳನ್ನು ಅಳವಡಿಸಲು ನಿರ್ಧರಿಸಲಾಯಿತು.

ಬಜೆಟ್ ಅನುದಾನ ಅಥವಾ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಜಯನಗರದಲ್ಲಿ ಬಹುಮಹಡಿ ಪಾರ್ಕಿಂಗ್ ಸಂಕೀರ್ಣಗಳನ್ನು ನಿರ್ಮಿಸಲಾಗುತ್ತದೆ. ಸಂಚಾರಕ್ಕೆ ಅಡ್ಡಿಯಾಗದಂತೆ ಬೀದಿ ಬದಿ ವ್ಯಾಪಾರಿಗಳಿಗೆ ‘ವ್ಯಾಪಾರ ವಲಯ’ ಮತ್ತು ‘ನಿಷೇಧಿತ ವ್ಯಾಪಾರ ವಲಯ’ಗಳನ್ನು ಗುರುತಿಸುವ ಜವಾಬ್ದಾರಿಯನ್ನು ಸಂಚಾರ ಪೊಲೀಸರಿಗೆ ವಹಿಸಲಾಯಿತು. ವೇಗಾ ಸಿಟಿ ಮಾಲ್, ಫೋರಂ ಮಾಲ್ ಮತ್ತು ಬನಶಂಕರಿ ಜಂಕ್ಷನ್‌ಗಳಲ್ಲಿ ಸ್ಕೈವಾಕ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ರಮೇಶ್ ಅವರು ತಿಳಿಸಿದರು.

ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಜಯನಗರದ ಸಿ.ಐ.ಎಂ.ಎಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಲಿಕೆ ಅಧಿಕಾರಿ–ಸಿಬ್ಬಂದಿ ಮತದಾನದ ಪ್ರತಿಜ್ಞಾ ವಿಧಿ ಬೋಧಿಸಿದರು.

ನಿಷೇಧಿತ ಪ್ಲಾಸ್ಟಿಕ್ ಬಳಕೆ: ಮೆಟ್ರೊ ಕ್ಯಾಶ್‌ಗೆ ₹50 ಸಾವಿರ ದಂಡ

ಸುಬ್ರಹ್ಮಣ್ಯ ನಗರದಲ್ಲಿರುವ ಮೆಟ್ರೊ ಕ್ಯಾಶ್ ಆ್ಯಂಡ್ ಕ್ಯಾರಿ ಇಂಡಿಯಾದಲ್ಲಿ ನಿಷೇಧಿಸಲಾಗಿರುವ ಪ್ಲಾಸ್ಟಿಕ್ ಬಳಕೆ–ಮಾರಾಟವನ್ನು ಪತ್ತೆ ಹಚ್ಚಿದ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸುಬ್ರಹ್ಮಣ್ಯ ನಗರ ವಿಭಾಗದ ಸಿಬ್ಬಂದಿ ₹50 ಸಾವಿರ ದಂಡ ವಿಧಿಸಿದ್ದಾರೆ.

ಏಕ ಬಳಕೆ ಪ್ಲಾಸ್ಟಿಕ್ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಹಾಗೂ ಪರಿಸರ ಸುಸ್ಥಿರತೆಯನ್ನು ಪ್ರಚಾರಗೊಳಿಸಲು ಬಿಎಸ್‌ಡಬ್ಲ್ಯುಎಂಎಲ್ ನಗರದಾದ್ಯಂತ ಕಾರ್ಯಾಚರಣೆ ನಡೆಸುತ್ತಿದೆ.

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.
TENDER NOTICE
Quotations are invited from reputed companies:
Supply and installation of HVAC chilled water system included indoor equipment's chiller and CPM to KRJS Medical College & Research Center at Kasavanahalli. Approx Cost : 5,20,00,000
Sealed quotations are to be submited to General Secretary within 7 days of this publication.
For more details, Visit our website **www.reddyjanasangha.org** or
Contact: 080-2553 4194 or 90361 30173
Sd/- **President** Sd/- **General Secretary**

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ವಿಭಾಗ, ಚಿಕ್ಕಬಳ್ಳಾಪುರ
ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 18/2025–26 ದಿನಾಂಕ: 20.01.2026
ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಸೇತುವೆ ನಿರ್ಮಾಣ, ಕಟ್ಟಡ ನಿರ್ವಹಣೆ ಕಾಮಗಾರಿಗಳಿಗೆ ಕೆ.ಡಬ್ಲ್ಯು– 1,2 & 4 ರಂತೆ ಕಾ.ಇಂ, ಲೋ.ಇ **ಚಿಕ್ಕಬಳ್ಳಾಪುರ** ರವರು ರಾಜ್ಯಪಾಲರ ಪರವಾಗಿ ಏಕ/ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in ದಿನಾಂಕ: 20.01.2026 ರಿಂದ 07.02.2026 ರವರೆಗೆ ಪಡೆದು** ಸಂಜೆ 3.00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾ.ಇಂ, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:386/ಕೆಎಸ್‌ಎಂಸಿಎ/2025–26

ಪ್ರಜ್ವಲ್ ರೇವಣ್ಣ ಪ್ರಕರಣ: ತನಿಖಾ ತಂಡಕ್ಕೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ವಿವಿಧ ದರ್ಜೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ನಗದು ಬಹುಮಾನವನ್ನು ಮಂಜೂರು ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಹಾಸನ ಲೋಕಸಭಾ ಕ್ಷೇತ್ರ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿದ್ದ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ಸೇರಿದಂತೆ ಇನ್ನಿತರ ಪ್ರಕರಣಗಳನ್ನು ಸಮರ್ಥವಾಗಿ ತನಿಖೆ ನಡೆಸಿ ಅಪರಾಧಿಗೆ ಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾದ ತಂಡಕ್ಕೆ ನಗದು ಬಹುಮಾನ ಘೋಷಿಸಲಾಗಿದೆ. ಆ ತಂಡಕ್ಕೆ ಒಟ್ಟಾರೇ ₹35 ಲಕ್ಷ ನಗದು ಬಹುಮಾನವನ್ನು ಗೃಹ ಇಲಾಖೆ ಮಂಜೂರು ಮಾಡಿದೆ. ಪ್ರಕರಣದ ಅಪರಾಧಿ ಆಗಿರುವ ಪ್ರಜ್ವಲ್ ರೇವಣ್ಣ ಆಜೀವ ಶಿಕ್ಷೆಗೆ ಗುರಿಯಾಗಿದ್ದಾನೆ.

ಹಾಸನದ ಫಾರ್ಮ್ ಹೌಸ್ ಮತ್ತು ಬೆಂಗಳೂರಿನ ಬಸವನಗುಡಿಯಲ್ಲಿ ಇರುವ ನಿವಾಸದಲ್ಲಿ ಬಲವಂತವಾಗಿ ಪ್ರಜ್ವಲ್ ಅತ್ಯಾಚಾರ ಎಸಗಿ, ಆ ಕೃತ್ಯವನ್ನು ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದ ಎಂದು ಸಂತ್ರಸ್ತೆ ದೂರು ನೀಡಿದ್ದರು. ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ಹಾಗೂ ಸಿಐಡಿಯಲ್ಲಿ ಪ್ರಕರಣಗಳು ದಾಖಲಾಗಿದ್ದವು. ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರವು ಎಸ್‌ಐಟಿ ರಚಿಸಿತ್ತು. ತನಿಖಾ ತಂಡವು 123 ಸಾಕ್ಷ್ಯಗಳನ್ನು ಸಂಗ್ರಹಿಸಿ, ಸುಮಾರು 2 ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ಪ್ರಜ್ವಲ್ ರೇವಣ್ಣ

ಮನೆ ಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆಜೀವ ಶಿಕ್ಷೆ ಹಾಗೂ ₹11.60 ಲಕ್ಷ ದಂಡ ವಿಧಿಸಿತ್ತು.

ಇತರೆ ಬಹುಮಾನಗಳು: ಡಿಜಿ ಮತ್ತು ಐಜಿಪಿ ದರ್ಜೆಯ ಅಧಿಕಾರಿಗಳಿಗೆ ತಲಾ ₹20 ಸಾವಿರದಂತೆ ಒಟ್ಟು ₹25 ಲಕ್ಷ, ಡಿಜಿಪಿ, ಎಡಿಜಿಪಿ ಮತ್ತು ಐಜಿಪಿ ಅಧಿಕಾರಿಗಳಿಗೆ ತಲಾ ₹8 ಸಾವಿರದಂತೆ ಒಟ್ಟು ₹3 ಲಕ್ಷ, ಇಲಾಖೆಯ ಇತರೆ ಅಧಿಕಾರಿ – ಸಿಬ್ಬಂದಿಗೆ ತಲಾ ₹5 ಸಾವಿರದಂತೆ ಒಟ್ಟು ₹2 ಲಕ್ಷ, ಜಿಲ್ಲಾಮಟ್ಟದ ಅಧಿಕಾರಿಗಳಿಗೆ ತಲಾ ₹5 ಸಾವಿರದಂತೆ ಒಟ್ಟು ₹1 ಲಕ್ಷ ನಗದನ್ನು ಗೃಹ ಇಲಾಖೆ ಮಂಜೂರು ಮಾಡಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣ: ಹೈಕೋರ್ಟ್ ಅಭಿಪ್ರಾಯ

‘ಫುಡ್–ಬೆಡ್: ಮಾರ್ಗಸೂಚಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೈಲಿನಲ್ಲಿರುವ ಕೈದಿಗಳಿಗೆ ಮನೆ ಊಟ ಹಾಗೂ ಇತರ ಅಗತ್ಯ ವಸ್ತುಗಳನ್ನು ತರಿಸಿಕೊಳ್ಳುವ ಕುರಿತಂತೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಲು ಕಾಲ ಕೂಡಿ ಬಂದಿದ್ದು ಈ ನಿಟ್ಟಿನಲ್ಲಿ ನ್ಯಾಯಾಂಗ ಮುಂದಡಿ ಇಡಲಿದೆ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

‘ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಆರೋಪಿಗಳಾಗಿ ಜೈಲಿನಲ್ಲಿರುವ ಪವಿತ್ರಾಗೌಡ, ನಾಗರಾಜ್ ಮತ್ತು ಲಕ್ಷ್ಮಣ್ ಅವರಿಗೆ ವಾರಕ್ಕೊಮ್ಮೆ ಮನೆ ಊಟಕ್ಕೆ ಅವಕಾಶ ಕಲ್ಪಿಸಿ ನಗರದ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಇದೇ 12ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನಾಗರಾಜ್ ಮತ್ತು ಲಕ್ಷ್ಮಣ್ ಪರ ವಕೀಲ ಎಸ್.ಸುನಿಲ್ ಕುಮಾರ್, ‘ಪ್ರಜ್ವಲ್ ರೇವಣ್ಣ ಅವರಿಗೆ ಮನೆ ಊಟ ತರಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಅದನ್ನು ಚಾಲೆಂಜ್ ಮಾಡಿಲ್ಲ. ಈ ಕೇಸಿನಲ್ಲಿ ಎಸ್‌ಪಿಪಿ ಬಿ.ಎನ್. ಜಗದೀಶ್ ಅವರೇ ಹಾಜರಾಗಿದ್ದರು’ ಎಂದರು.

ಇದಕ್ಕೆ ಗರಂ ಆದ ನ್ಯಾಯಪೀಠ, ‘ಹಾಗೆಲ್ಲಾ ಹೆಸರು ತೆಗೆದುಕೊಳ್ಳಬೇಡಿ. ಜಗದೀಶ್ ಒಬ್ಬ ಉತ್ತಮ ಪ್ರಾಸಿಕ್ಯೂಟರ್. ನೀವಿನ್ನೂ ಚಿಕ್ಕವರು. ಆ ರೀತಿ ವೈಯಕ್ತಿಕ ದೂಷಣೆ ಸಲ್ಲ’ ಎಂದು ಕಿವಿಮಾತು ಹೇಳಿತು.

ಸುನಿಲ್ ಕುಮಾರ್ ಆಕ್ಷೇಪಣೆಯನ್ನು ತಳ್ಳಿ ಹಾಕಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ‘ಅಧಿಕಾರಿಗಳು ಜೈಲಿನ ಕೈಪಿಡಿಯನ್ನು ಉಲ್ಲಂಘಿಸಿ ನಡೆದುಕೊಳ್ಳಲು ಸಾಧ್ಯವಿಲ್ಲ. ವೈದ್ಯಕೀಯ ಶಿಫಾರಸಿನ ಹೊರತಾಗಿ ಯಾವೊಂದೂ ಅವಕಾಶ ಕಲ್ಪಿಸಲು ಆಗದು. ಕಾನೂನಿನ ಅಂಶಗಳ ಅಡಿಯಲ್ಲಿ ನಮಗೂ ಮನೆ ಊಟ ತರಿಸಿಕೊಳ್ಳುವುದಕ್ಕೆ ಅವಕಾಶ ಇದೆ ಎಂಬುದನ್ನು ಅರ್ಜಿದಾರರು ನಿರೂಪಿಸಿದರೆ ಸಾಕು. ಅದು ಬಿಟ್ಟು, ಅವರಿಗೆ ಕೊಟ್ಟಿದ್ದಾರೆ, ಇವರಿಗೆ ಕೊಟ್ಟಿದ್ದಾರೆ ಎಂಬ ನೆಪದಲ್ಲಿ ಫುಡ್–ಬೆಡ್ ಬೇಕು ಅಂತಾ ವಾದ ಮಾಡುವುದು ತರವಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಈ ಪ್ರಕರಣದ ಆರೋಪಿಗಳಿಗೆ ವಿಶೇಷ ಸವಲತ್ತುಗಳನ್ನು ನೀಡಿದ್ದ ಬಗ್ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ಕೂಡಾ ಉಲ್ಲೇಖ ಮಾಡಿದೆಯಲ್ಲವೇ’ ಎಂದು ಪ್ರಶ್ನಿಸಿ ‘ಯಾರಿಗೇ ಆಗಲಿ, ವೈದ್ಯಕೀಯ ಶಿಫಾರಸಿನ ಹೊರತಾಗಿ ಯಾವುದೇ ಸವಲತ್ತು ಒದಗಿಸುವುದು ಕಾನೂನು ಬಾಹಿರ ಎನಿಸಿಕೊಳ್ಳುತ್ತದೆ. ಆದಾಗ್ಯೂ, ಈ ನಿಟ್ಟಿನಲ್ಲಿ ಕೋರ್ಟ್ ಸೂಕ್ತ ಮಾರ್ಗಸೂಚಿ ರೂಪಿಸಲಿದೆ’ ಎಂದು ತಿಳಿಸಿ ವಿಚಾರಣೆಯನ್ನು ಫೆಬ್ರುವರಿ 5ಕ್ಕೆ ಮುಂದೂಡಿತು.

ಮುಖ್ಯಾಂಶಗಳು

- ವಿಚಾರಣೆ ಫೆಬ್ರುವರಿ 5ಕ್ಕೆ ಮುಂದೂಡಿಕೆ
- ಕೈಪಿಡಿ–ದಾಖಲೆ ಒಪ್ಪಿಸಲು ಪ್ರಾಸಿಕ್ಯೂಷನ್‌ಗೆ ಸೂಚನೆ

ಜೈಲಿನ ದುರವಸ್ಥೆ ಅಷ್ಟಿಷ್ಟಲ್ಲ..!

‘ದರ್ಶನ್ ಅವರಿಗೆ ಜೈಲಿನಲ್ಲಿ ವಿಶೇಷ ಸವಲತ್ತುಗಳನ್ನು ನೀಡಲಾಗುತ್ತಿದೆ ಎಂಬ ಆರೋಪದ ಬಳಿಕ ಜೈಲಿನ ಮೇಲೆ ದಾಳಿ ನಡೆಸಲಾಗಿತ್ತು. ದಾಳಿ ವೇಳೆ ಕೈದಿಗಳಿಂದ ಡ್ರಗ್ಸ್ ಮತ್ತು 19 ಮೊಬೈಲ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಅಷ್ಟೇ ಅಲ್ಲ, ಈ ಸಂಬಂಧ ಜೈಲಿನ ಅಧಿಕಾರಿಗಳು ಅಮಾನತುಗೊಂಡಿದ್ದಾರೆ. ಇದು ನಮ್ಮ ಜೈಲಿನ ದುರವಸ್ಥೆ’ ಎಂದು ಸುನಿಲ್ ಕುಮಾರ್ ನ್ಯಾಯಪೀಠದ ಗಮನ ಸೆಳೆದರು.

‘ನನ್ನ ಅರ್ಜಿದಾರ ಕೈದಿಗಳು ಆರೋಗ್ಯದ ದೃಷ್ಟಿಯಿಂದ ಕೇವಲ ವಾರಕ್ಕೊಮ್ಮೆ ಮನೆ ಊಟ ಕೇಳಿದ್ದಾರೆ. ಅಷ್ಟಕ್ಕೂ, ನಾನು ನನ್ನ ಕಕ್ಷಿದಾರರ ಪರ ನ್ಯಾಯ ಕೇಳುತ್ತಿದ್ದೇನೆ ಸ್ವಾಮಿ ಅಷ್ಟೇ. ಇದರಲ್ಲಿ ವೈಯಕ್ತಿಕವಾಗಿ ಯಾರನ್ನೂ ದೂಷಿಸುವ ಇರಾದೆ ಇಲ್ಲ’ ಎಂದರು.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 16218-16219 OF 2025
WITH PRAYER FOR INTERIM RELIEF
ANISHA BHANDARY AND ANOTHER ... **Petitioner(s)**
-VERSUS-
M/S M. K. TRADING COMPANY LLC AND OTHERS ... **Respondent(s)**
To, 1. M/S M. K. TRADING COMPANY LLC S/o, REP BY C B PARDHANANI, R/ AT AMARJYOTHI HOUSE BUILDING CO OPERATIVE SOCIETY LAYOUT, RING ROAD, DOMLUR, DISTRICT- BANGALORE, KARNATAKA-560071. **PID: 298088/2025 FOR R[1] IN SLP(C) NO.16218-16219/2025 (SEC IV-A)**
2. MR. C. B. PARDHANANI, R/AT AMARJYOTHI HOUSE BUILDING COOPERATIVE SOCIETY LAYOUT, RING ROAD, DOMLUR, DISTRICT- BANGALORE, KARNATAKA-560071. **PID: 298089/2025 FOR R[2] IN IN SLP(C) NO. 16218/2025, SLP(C) NO. 16219/2025SLP(C) NO.16218-16219/2025 (SEC IV-A)**
3. MR. JYOTHINDRAN KOZHIKODE PUTHENVEETIL, S/O J. ACHUTHA MENON,MANAGER, R/ AT AMARJYOTHI HOUSE BUILDING COOPERATIVE SOCIETY LAYOUT, RING ROAD, DOMLUR, DISTRICT- BANGALORE, KARNATAKA-560071 **PID: 298090/2025 FOR R[3] IN IN SLP(C) NO. 16218/2025, SLP(C) NO. 16219/2025SLP(C) NO.16218-16219/2025 (SEC IV-A)**
4. DR. MAHMOOD ABDULLA S/O MR. ABDULLA MOHD. AQIL KAZIM, PARTNER R/AT AMARJYOTHI HOUSE BUILDING COOPERATIVE SOCIETY LAYOUT, RING ROAD, DOMLUR, DISTRICT- BANGALORE, KARNATAKA 560071. **PID: 298091/2025 FOR R[7] IN IN SLP(C) NO. 16218/2025, SLP(C) NO. 16219/2025SLP(C) NO.16218-16219/2025 (SEC IV-A)**
WHEREAS the Petition for Special Leave to Appeal with prayer for interim relief along with application for **CONDONATION OF DELAY IN FILING, APPLICATION UNDER ORDER V RULE 20 CPC FOR EFFECTING SERVICE THROUGH PUBLICATION** above mentioned (copy enclosed) filed in the Registry by **Mr. BHARADWAJ S.,** Advocate on behalf of the Petitioner(s) above named was listed for hearing before this Court on **29th May, 2025,** when the Court was pleased to pass the following order:
1. **Heard learned counsel for the petitioners.**
2. **Delay condoned.**
3. **Issue notice, returnable on 11.08.2025.**
4. **The adjudication of Regular First Appeal shall be subject to the final outcome of this special leave petition.**
AND WHEREAS, the matter above-mentioned was listed before Hon'ble Court on **27th November, 2025,** When the following order was passed:-
1. **As per the office report, service on respondents no.1 to 3 and 7 is incomplete.**
2. **Learned counsel for the petitioners has filed application (I.A. No.301275/2025) for substituted service on the unserved respondents.**
3. **The application (I.A. No. 301275/25) is allowed.**
4. **Accordingly, the petitioner is permitted to serve the unserved respondents through paper publication. Let the proof of publication be filed within four weeks.**
5. **Post the matters on 29.01.2026.'**
NOW, THEREFORE, TAKE NOTICE that the above petition will be posted for hearing before this Court on **29th January, 2026** at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.
Take Further Notice that this Court has passed an interim order pending for disposal of SLP after notice as quoted above.
Take Further Notice that the prayer for interim relief after notice will also be listed before the Court on the aforesaid date.
You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.
Dated :10th December, 2025 **ASSISTANT REGISTRAR**
Copy to :- 1 Mr. Bharadwaj S. (adv.)
You are required to file the affidavit along with the proof of publication.
ASSISTANT REGISTRAR
Important Notice
LEGAL AID
(1) Legal Services of an advocate is provided by the Supreme Court Legal Services Committee and the Supreme Court Middle Income Group Legal Aid Society to eligible litigants.
ಬೆಂಗಳೂರು: ಕರ್ನಾಟಕ ತಂಡಕ್ಕೆ ಮಧ್ಯ ಪ್ರದೇಶದ ಎದುರಿನ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಫಾಲೋ ಆನ್ ತಪ್ಪಿಸಿಕೊಳ್ಳಲು ಇನ್ನೂ ಆರು ರನ್‌ಗಳು ಮಾತ್ರ ಬೇಕು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣ (1) ದಲ್ಲಿ ನಡೆಯುತ್ತಿರುವ ಎಲೀಟ್ ಬಿ ಗುಂಪಿನ ಪಂದ್ಯದ ಎರಡನೇ ದಿನದ ಅಂತ್ಯಕ್ಕೆ ಆತಿಥೇಯರ ಬಳಗದಲ್ಲಿ ಉಳಿದ ಆತಂಕ ಇದು. ಮಧ್ಯಪ್ರದೇಶ ತಂಡವು ಗಳಿಸಿದ 323 ರನ್‌ಗಳಿಗೆ ಉತ್ತರವಾಗಿ ಕರ್ನಾಟಕವು ಶುಕ್ರವಾರ ದಿನದಾಟದ ಮುಕ್ತಾಯಕ್ಕೆ 58 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 168 ರನ್ ಗಳಿಸಿದೆ. ಫಾಲೋ ಆನ್ ನಿಯಮದ ಪ್ರಕಾರ 174 ರನ್ ಗಳಿಸಬೇಕು.

ಪ್ರವಾಸಿ ಬಳಗದ ಸ್ಪಿನ್ನರ್ ಸಾರಾಂಶ್ ಜೈನ್ (42ಕ್ಕೆ3) ಮತ್ತು ಮಧ್ಯಮವೇಗಿ ಆರ್ಯನ್ ಪಾಂಡೆ (25ಕ್ಕೆ2) ಅವರ ದಾಳಿಯ ಮುಂದೆ ಕರ್ನಾಟಕವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ ಆತಿಥೇಯ ತಂಡದ ಗೌರವವನ್ನು ಆರಂಭಿಕ ಆಟಗಾರ ಕೆ.ವಿ. ಅನೀಶ್ (ಬ್ಯಾಟಿಂಗ್ 80; 153ಎ, 4X8) ಅವರು ದಿಟ್ಟ ಬ್ಯಾಟಿಂಗ್ ಬಲದಿಂದ ಕಾಪಾಡಿದರು. ಅವರಿಗೆ ಶ್ರೇಯಸ್ ಗೋಪಾಲ್ (41;76ಎ) ಉತ್ತಮ ಜೊತೆ ನೀಡಿದರು. 6ನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 82 ರನ್ ಸೇರಿಸಿದರು. 60 ರನ್‌ಗಳಿಗೇ 5 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಚೇತರಿಕೆ ನೀಡಿದರು. ಅನೀಶ್ ಪ್ರಥಮದರ್ಜೆ ಪಂದ್ಯದಲ್ಲಿ ತಮ್ಮ ಮೊದಲ ಅರ್ಧಶತಕವನ್ನು 107 ಎಸೆತಗಳಲ್ಲಿ ದಾಖಲಿಸಿದರು.

ಉರುಳಿದ ಬ್ಯಾಟರ್‌ಗಳು: ಊಟದ ವಿರಾಮಕ್ಕೆ 20 ನಿಮಿಷಗಳ ಮುನ್ನ ಮಧ್ಯಪ್ರದೇಶ ಇನಿಂಗ್ಸ್‌ಗೆ ತೆರೆಯೆಳೆಯುವಲ್ಲಿ ಕರ್ನಾಟಕದ ವೇಗಿ ವಿದ್ಯಾಧರ್ ಪಾಟೀಲ (56ಕ್ಕೆ3) ಹಾಗೂ ವಿದ್ವತ್ ಕಾವೇರಪ್ಪ (50ಕ್ಕೆ2) ಯಶಸ್ವಿಯಾದರು. ಅನೀಶ್ ಜೊತೆಗೆ ಇನಿಂಗ್ಸ್ ಆರಂಭಿಸಿದ ನಾಯಕ ಮಯಂಕ್ ಏಳು ಎಸೆತ ಎದುರಿಸಿದರು. ಆರ್ಯನ್ ಎಸೆತದಲ್ಲಿ ಸಾಗರ್ ಸೋಳಂಕಿಗೆ ಕ್ಯಾಚ್ ಕೊಟ್ಟರು. ಗುರುವಾರ ತಮ್ಮ ಆರೋಗ್ಯದಲ್ಲಿ ಏರುಪೇರಾದ ಕಾರಣ ಮೈದಾನ ತೊರೆದು ಎರಡು ಅವಧಿ ವಿಶ್ರಾಂತಿ ಪಡೆದಿದ್ದ ಮಯಂಕ್ ಎರಡನೇ ದಿನದಲ್ಲಿ ಕಣಕ್ಕೆ ಮರಳಿದರು.

ಕರ್ನಾಟಕದ ಅನೀಶ್ ಹಾಗೂ ಶ್ರೇಯಸ್ ಗೋಪಾಲ್ ಅವರ ಜೊತೆಯಾಟ ಚಿತ್ರ: ಪ್ರಶಾಂತ್ ಎಚ್‌ಜಿ

ಊಟದ ವಿರಾಮದ ನಂತರದ ಮೊದಲ ಎಸೆತದಲ್ಲಿಯೇ ದೇವದತ್ತ ಪಡಿಕ್ಕಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಸಾರಾಂಶ್ ಜೈನ್ ತಮ್ಮ ಖಾತೆ ತೆರೆದರು. ದೇವದತ್ತ ಅವರು ಅಂಪೈರ್ ತೀರ್ಮಾನಕ್ಕೆ ಅಸಮಾಧಾನಗೊಂಡಂತೆ ಕಂಡರು. ದೇವದತ್ತ ಈಚೆಗೆ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ 725 ರನ್ ಗಳಿಸಿದ್ದರು.

ಕರುಣ್ ನಾಯರ್ (12 ರನ್) ಒಂಟಿ ಓಟಕ್ಕಾಗಿ ಅವಸರಪಟ್ಟು ರನ್‌ಔಟ್ ಆದರು. ಕೆ.ಎಲ್. ಶ್ರೀಜಿತ್ (7ರನ್) ಅವರ ವಿಕೆಟ್ ಕುಲದೀಪ್ ಸೇನ್ ಪಾಲಾಯಿತು.

ಆಟಕ್ಕೆ ಕುದುರಿಕೊಂಡಿದ್ದ ಅಭಿನವ್ ಮನೋಹರ್ (14 ರನ್) ಅವರಿಗೆ ಪೆವಿಲಿಯನ್ ದಾರಿ ತೋರಿಸುವಲ್ಲಿ ಸಾರಾಂಶ್ ಯಶಸ್ವಿಯಾದರು. ಹಿಮಾಂಶು ಮಂತ್ರಿ ಅವರ ಸ್ಟಂಪಿಂಗ್ ಇಲ್ಲಿ ಫಲ ನೀಡಿತು. ಮಧ್ಯಪ್ರದೇಶದ ಕೋಚ್ ಚಂದ್ರಕಾಂತ್ ಪಂಡಿತ್ ಅವರ ತಂತ್ರಗಾರಿಕೆಯನ್ನು ಬೌಲರ್‌ಗಳು ಅಚ್ಚುಕಟ್ಟಾಗಿ ಜಾರಿಗೊಳಿಸಿದರು. ಶ್ರೇಯಸ್ ಗೋಪಾಲ್ ಅವರನ್ನು ಎಲ್‌ಬಿಡಬ್ಲ್ಯು ಮಾಡಿದ ಸಾರಾಂಶ್ ಜೊತೆಯಾಟವನ್ನೂ ಮುರಿದರು.

ಒಂದು ಬದಿಯಲ್ಲಿ ಅನೀಶ್ ಬ್ಯಾಕ್‌ಫುಟ್ ಪಂಚ್, ಸ್ವೀಪ್, ಫ್ರಂಟ್‌ಫೂಟ್ ಹೊಡೆತಗಳನ್ನು ಪ್ರಯೋಗಿಸುತ್ತ ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು. ಇನ್ನೊಂದೆಡೆ ಕ್ರೀಸ್‌ಗೆ ಬಂದ ಕೆಳಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಪಡೆಯುವಲ್ಲಿ ಬೌಲರ್‌ಗಳು ಯಶಸ್ವಿಯಾದರು.

ಮಧ್ಯಪ್ರದೇಶ ತಂಡವು ಗುರುವಾರ 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 244 ರನ್ ಗಳಿಸಿತ್ತು. ಎರಡನೇ ದಿನದಾಟದಲ್ಲಿ ಈ ಮೊತ್ತಕ್ಕೆ 79 ರನ್ ಸೇರಿಸುವಲ್ಲಿ ತಂಡವು ಯಶಸ್ವಿಯಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 116.1 ಓವರ್‌ಗಳಲ್ಲಿ 323 (ಸಾರಾಂಶ್ ಜೈನ್ 32, ಅಕ್ಷತ್ ರಘುವಂಶಿ 22, ಸಾಗರ್ ಸೋಳಂಕಿ 20, ವಿದ್ವತ್ ಕಾವೇರಪ್ಪ 50ಕ್ಕೆ2, ವಿದ್ಯಾಧರ್ ಪಾಟೀಲ 56ಕ್ಕೆ3, ವೈಶಾಖ ವಿಜಯಕುಮಾರ್ 71ಕ್ಕೆ2, ಶಿಖರ್ ಶೆಟ್ಟಿ 70ಕ್ಕೆ1, ಶ್ರೇಯಸ್ ಗೋಪಾಲ್ 56ಕ್ಕೆ2) ಕರ್ನಾಟಕ: 58 ಓವರ್‌ಗಳಲ್ಲಿ 8ಕ್ಕೆ168 (ಕೆ.ವಿ. ಅನೀಶ್ ಬ್ಯಾಟಿಂಗ್ 80, ಅಭಿನವ್ ಮನೋಹರ್ 14, ಶ್ರೇಯಸ್ ಗೋಪಾಲ್ 41, ಆರ್ಯನ್ ಪಾಂಡೆ 25ಕ್ಕೆ2, ಸಾರಾಂಶ್ ಜೈನ್ 42ಕ್ಕೆ3, ಕುಲದೀಪ್ ಸೇನ್ 32ಕ್ಕೆ1, ಸಾಗರ್ ಸೋಳಂಕಿ 21ಕ್ಕೆ1)

ಮುಖ್ಯಾಂಶಗಳು

- ಎರಡನೇ ದಿನದಾಟದಲ್ಲಿ ಒಟ್ಟು 13 ವಿಕೆಟ್‌ಗಳ ಪತನ
- ಸೊನ್ನೆ ಸುತ್ತಿದ ಮಯಂಕ್, ದೇವದತ್ತ
- ಪ್ರಥಮ ಇನಿಂಗ್ಸ್ ಲೆಕ್ಕ ಚುಕ್ತಾ ಮಾಡಲು ಕರ್ನಾಟಕಕ್ಕೆ ಬೇಕು 155 ರನ್

ಪಂಜಾಬ್ ವಿರುದ್ಧ ಎರಡನೇ ದಿನವೇ ಗೆದ್ದ ಸೌರಾಷ್ಟ್ರ

ರಾಜ್‌ಕೋಟ್ (ಪಿಟಿಐ): ಎರಡೇ ದಿನಗಳಲ್ಲಿ ಮುಗಿದ ರಣಜಿ ಟ್ರೋಫಿ ಎಲೀಟ್ ಬಿ ಗುಂಪಿನ ಕ್ರಿಕೆಟ್ ಪಂದ್ಯದಲ್ಲಿ ಸೌರಾಷ್ಟ್ರ ತಂಡವು ಪಂಜಾಬ್ ಎದುರು 194 ರನ್‌ಗಳಿಂದ ಜಯಿಸಿತು.

ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 320 ರನ್‌ಗಳ ಗುರಿ ಬೆನ್ನಟ್ಟಿದ ಪಂಜಾಬ್ ತಂಡವು 125 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಸ್ಪಿನ್ನರ್ ಪಾರ್ಥ್ ಬೂತ್ (8ಕ್ಕೆ5) ಮತ್ತು ಧರ್ಮೇಂದ್ರಸಿಂಹ ಜಡೇಜ (55ಕ್ಕೆ5) ಅವರ ದಾಳಿಗೆ ಪಂಜಾಬ್ ತತ್ತರಿಸಿತು. ನಾಯಕ ಶುಭಮನ್ ಗಿಲ್ ಅವರು ಎರಡನೇ ಇನಿಂಗ್ಸ್‌ನಲ್ಲಿಯೂ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಪಂದ್ಯದ ಮೊದಲ ದಿನ ಗುರುವಾರ ಇಲ್ಲಿ ಒಟ್ಟು 23 ವಿಕೆಟ್‌ಗಳು ಪತನವಾಗಿದ್ದವು. 33 ರನ್‌ಗಳ ಇನಿಂಗ್ಸ್ ಮುನ್ನಡೆ ಸಾಧಿಸಿದ್ದ ಸೌರಾಷ್ಟ್ರ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಪ್ರೇರಕ್ ಮಂಕಡ್ (56;41ಎ) ಅವರ ಅರ್ಧಶತಕದ ಬಲದಿಂದ 286 ರನ್ ಗಳಿಸಿತು. ಶುಕ್ರವಾರ ಒಟ್ಟು 17 ವಿಕೆಟ್‌ಗಳು ಪತನವಾದವು.

ಪ್ರಿಕ್ವಾರ್ಟರ್ ಫೈನಲ್‌ಗೆ ಅಲ್ಕರಾಜ್ ಲಗ್ಗೆ

ಆಸ್ಟ್ರೇಲಿಯಾ ಓಪನ್: ಸಬಲೆಂಕಾ, ಮೆಡ್ವೆಡೇವ್‌ಗೆ ಜಯ

ಮೆಲ್ಬರ್ನ್ (ಎಎಫ್‌ಪಿ): ಆಸ್ಟ್ರೇಲಿಯಾ ಓಪನ್‌ನಲ್ಲಿ ಮೊದಲ ಪ್ರಶಸ್ತಿ ಗೆಲುವಿನ ಹಾದಿಯಲ್ಲಿ ದಿಟ್ಟ ಹೆಜ್ಜೆಯಿಟ್ಟ ಕಾರ್ಲೋಸ್ ಅಲ್ಕರಾಜ್ ಅವರು 'ಶೋಮ್ಯಾನ್' ಕೊರೆಂಟಿನ್ ಮೌಟೆಟ್ ಅವರನ್ನು ಸೋಲಿಸಿ 16ರ ಘಟ್ಟಕ್ಕೆ ದಾಪುಗಾಲಿಟ್ಟರು. ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ಪ್ರಯಾಸದ ಗೆಲುವು ಸಾಧಿಸಿ ಸಂಭ್ರಮಿಸಿದರು.

ಮೂರು ಬಾರಿಯ ಫೈನಲ್ ತಲುಪಿರುವ ಡೇನಿಯಲ್ ಮೆಡ್ವೆಡೇವ್ ಅವರೂ, ಟೂರ್ನಿಯ ಆರನೇ ದಿನವಾದ ಶುಕ್ರವಾರ ಗೆಲುವಿಗೆ ಬೆವರು ಹರಿಸಬೇಕಾಯಿತು. ಮೂರನೇ ಶ್ರೇಯಾಂಕದ ಕೊಕೊ ಗಾಫ್ ಮತ್ತು ಅಲೆಕ್ಸಾಂಡರ್ ಜ್ವರೇವ್ ಅವರಿಗೂ ನೇರ ಸೆಟ್‌ಗಳಲ್ಲಿ ಗೆಲ್ಲಲಾಗಲಿಲ್ಲ.

ಆದರೆ ಅಗ್ರ ಶ್ರೇಯಾಂಕದ ಅಲ್ಕರಾಜ್ ಅವರು ರಾಡ್ ಲೇವರ್ ಅರೇನಾದಲ್ಲಿ 32ನೇ ಶ್ರೇಯಾಂಕದ ಮೌಟೆಟ್ ಅವರನ್ನು 6-2, 6-4, 6-1 ರಿಂದ ಆರಾಮವಾಗಿ ಸೋಲಿಸಿದರು. ಗೆಲುವಿಗೆ ಸ್ಪೇನ್‌ನ ಆಟಗಾರನಿಗೆ 2 ಗಂಟೆ 5 ನಿಮಿಷ ತಗಲಿತು.

ನೂರನೇ ಪಂದ್ಯ: ಇದು ಅಲ್ಕರಾಜ್ ಅವರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ನೂರನೇ ಪಂದ್ಯವಾಗಿತ್ತು. ಅವರು 87-13 ಗೆಲುವಿನ ದಾಖಲೆ ಹೊಂದಿದ್ದಾರೆ. ಅವರು ಈ ಹಂತದಲ್ಲಿ ಸ್ವೀಡನ್‌ನ ದಂತಕತೆ ಬ್ಯೋನ್ ಬೋರ್ಗ್ ದಾಖಲೆ ಸರಿಗಟ್ಟಿದ್ದಾರೆ. ಅಲ್ಕರಾಜ್ ಅವರ ಪ್ರಶಸ್ತಿಗಳ ಕಪಾಟಿನಲ್ಲಿ ಆಸ್ಟ್ರೇಲಿಯಾ ಓಪನ್ ಟ್ರೋಫಿಯ ಜಾಗ ಖಾಲಿಯಿದೆ.

22 ವರ್ಷ ವಯಸ್ಸಿನ ಅಲ್ಕರಾಜ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 19ನೇ ಶ್ರೇಯಾಂಕದ ಟಾಮಿ ಪಾಲ್ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ. ಪಾಲ್ ಅವರ ಎದುರಾಳಿ, ಸ್ಪೇನ್‌ನ ಅಲೆಕ್ಸಾಂಡ್ರೊ ಡೊವಿಡೊವಿಚ್ ಮೊಣಕಾಲಿನ ನೋವಿನಿಂದಾಗಿ ಅರ್ಧದಲ್ಲೇ ಪಂದ್ಯ ಬಿಟ್ಟುಕೊಟ್ಟರು.

ಪ್ರಯಾಸದ ಜಯ: ಮಹಿಳೆಯರ ವಿಭಾಗ ದಲ್ಲಿ ಬೆಲರೂಸ್‌ನ ತಾರೆ ಸಬಲೆಂಕಾ ಅವರು ರಷ್ಯಾ ಸಂಜಾತೆಯಾದ ಆಸ್ಟ್ರಿಯಾದ ಆಟಗಾರ್ತಿ ಅನಸ್ತೇಸಿಯಾ ಪೊಟಪೋವಾ ಅವರನ್ನು 7-6 (7-4), 7-6 (9-7) ರಿಂದ ಸೋಲಿಸಿದರು. ಮೂರನೇ ಸುತ್ತಿನ ಈ ಪಂದ್ಯ ಮುಗಿಯಲು ಎರಡು ಗಂಟೆ ಹಿಡಿಯಿತು.

ನಾಲ್ಕು ವರ್ಷಗಳಲ್ಲಿ ಮೂರನೇ ಪ್ರಶಸ್ತಿಗೆ ಪ್ರಯತ್ನಿಸುತ್ತಿರುವ ಸಬಲೆಂಕಾ, 2025ರ ಫೈನಲ್‌ನಲ್ಲಿ ಅಮೆರಿಕದ ಮ್ಯಾಡಿಸನ್ ಕೀಸ್ ಕೈಲಿ ಅನಿರೀಕ್ಷಿತ ಸೋಲುಂಡಿದ್ದರು.

19 ವರ್ಷ ವಯಸ್ಸಿನ ಎಂಬೊಕೊ 7-6 (7-5), 5-7, 6-3 ರಿಂದ ಡೆನ್ಮಾರ್ಕ್‌ನ ಕ್ಲಾರಾ ಟಾಸನ್ ಅವರನ್ನು ಸೋಲಿಸಿದರು.

ಅಮೆರಿಕದ ಕೊಕೊ ಗಾಫ್ 3-6, 6-0, 6-3 ರಿಂದ ಸ್ವದೇಶದ ಹೇಯ್ಲಿ ಬ್ಯಾಪ್ಟಿಸ್ಟ್ ಸವಾಲನ್ನು ಬದಿಗೊತ್ತಿದರು. ಅವರು ಮುಂದಿನ ಸುತ್ತಿನಲ್ಲಿ 19ನೇ ಶ್ರೇಯಾಂಕದ ಕರೋಲಿನಾ ಮುಚೋವಾ ಅವರನ್ನು ಎದುರಿಸಲಿದ್ದಾರೆ. 21 ವರ್ಷ ವಯಸ್ಸಿನ ಗಾಫ್ ಅವರು ಅಮೆರಿಕ ಓಪನ್ ಮತ್ತು ಫ್ರೆಂಚ್ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದಾರೆ. ಆದರೆ ಇಲ್ಲಿ ಸೆಮಿಫೈನಲ್ ತಲುಪಿದ್ದು ಅವರ ಉತ್ತಮ ಸಾಧನೆ ಎನಿಸಿದೆ.

ಚೆಂಡನ್ನು ಹಿಂತಿರುಗಿಸುವ ಯತ್ನದಲ್ಲಿ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ

ಏಳನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ ಹೊರಬಿದ್ದರು. ಅಮೆರಿಕದ 18 ವರ್ಷ ವಯಸ್ಸಿನ ಇವಾ ಜೊವಿಕ್ 6-2, 7-6 (7/3) ರಿಂದ ಇಟಲಿಯ ಆಟಗಾರ್ತಿಯನ್ನು ಸೋಲಿಸಿ ಮೊದಲ ಸಲ ಪ್ರಮುಖ ಟೂರ್ನಿಯೊಂದರ ನಾಲ್ಕನೇ ಸುತ್ತಿಗೆ ಕಾಲಿಟ್ಟರು.

ಮೆಡ್ವೆಡೇವ್‌ಗೆ ಜಯ: 11ನೇ ಶ್ರೇಯಾಂಕದ ಡೇನಿಲ್ ಮೆಡ್ವೆಡೇವ್ ಅವರು 3 ಗಂಟೆ 43 ನಿಮಿಷ ಹೋರಾಡಿ ಹಂಗೆರಿಯ ಫೇಬಿಯನ್ ಮೊರೋಸಾನ್ ಅವರನ್ನು ಸೋಲಿಸಿದರು. 6-7 (5-7), 4-6, 7-5, 6-0, 6-3 ರಿಂದ ಗೆದ್ದ ರಷ್ಯದ ಆಟಗಾರ ಮುಂದಿನ ಪಂದ್ಯದಲ್ಲಿ ಅಮೆರಿಕದ ಲರ್ನರ್ ಟಿಯೆನ್ ಅವರನ್ನು ಎದುರಿಸಲಿದ್ದಾರೆ.

ಗೆಲುವಿನ ಮೂಲಕ ಮೆಡ್ವೆಡೇವ್ ಸೇಡು ತೀರಿಸಿದಂತಾಯಿತು. ಹೋದ ವರ್ಷ ಇಲ್ಲಿಯೇ ಇದೇ ರೀತಿಯ ಸುದೀರ್ಘ ಪಂದ್ಯದಲ್ಲಿ ಯುವೋತ್ಸಾಹಿ ಫೇಬಿಯನ್ ಅವರು ಮೆಡ್ವೆಡೇವ್ ಅವರನ್ನು ಸೋಲಿಸಿದ್ದರು.

ಜರ್ಮನಿಯ ಜ್ವರೇವ್ 7-5, 4-6, 6-3, 6-1 ರಿಂದ ಬ್ರಿಟನ್‌ನ ಕ್ಯಾಮೆರಾನ್ ನೋರಿ ಅವರನ್ನು ಮಣಿಸಿದರು. ಆಸ್ಟ್ರೇಲಿಯಾದ ಭರವಸೆ, ಆರನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ 6-3, 6-4, 7-5 ರಿಂದ ಅಮೆರಿಕದ ಫ್ರಾನ್ಸಿಸ್ ಟಿಯೊಫೊ ಅವರನ್ನು ಸೋಲಿಸಿ ಸತತ ಐದನೇ ವರ್ಷ ನಾಲ್ಕನೇ ಸುತ್ತಿಗೆ ಮುನ್ನಡೆದರು.

ಬ್ಯಾಡ್ಮಿಂಟನ್: ಸಿಂಧು, ಲಕ್ಷ್ಯ ಪರಾಭವ

ಜಕಾರ್ತಾ (ಪಿಟಿಐ): ಭಾರತದ ಅಗ್ರ ಷಟ್ಲರ್‌ಗಳಾದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್‌ನಲ್ಲಿ ನೇರ ಆಟಗಳ ಸೋಲನುಭವಿಸಿದರು. ಇದರೊಂದಿಗೆ ₹4.60 ಕೋಟಿ ಬಹುಮಾನದ ಟೂರ್ನಿಯಲ್ಲಿ ಭಾರತದ ಸವಾಲು ಕ್ವಾರ್ಟರ್ ಫೈನಲ್ ಹಂತದಲ್ಲೇ ಅಂತ್ಯಗೊಂಡಿತು.

ಎರಡು ಬಾರಿ ಒಲಿಂಪಿಕ್ ಪದಕ ಪಡೆದಿರುವ ಸಿಂಧು ಅವರು ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಚೆನ್ ಯು ಫೀ ಅವರಿಗೆ 13-21, 17-21 ರಲ್ಲಿ ಸೋತರು. ಈ ಪಂದ್ಯ 42 ನಿಮಿಷ ನಡೆಯಿತು.

ಲಕ್ಷ್ಯ ಅವರು ಪುರುಷರ ಸಿಂಗಲ್ಸ್‌ನಲ್ಲಿ 18-21, 20-22 ರಲ್ಲಿ ಥಾಯ್ಲೆಂಡ್‌ನ ಪನಿತ್‌ಚಫೊನ್ ತೀರರತ್‌ಸಕುಲ್ ಅವರಿಗೆ ಮಣಿದರು.

ಆರ್‌ಸಿಬಿ– ಕ್ಯಾಪಿಟಲ್ಸ್ ಪಂದ್ಯ ಇಂದು

ವಡೋದರ (ಪಿಟಿಐ): ಅಜೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ತಡೆದು ಡಬ್ಲ್ಯುಪಿಎಲ್‌ನಲ್ಲಿ ತನ್ನ ಪ್ಲೇಆಫ್ ಅವಕಾಶ ಜೀವಂತವಾಗಿರಿಸಬೇಕಾದರೆ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಪ್ರಬಲ ಆಲ್‌ರೌಂಡ್ ಆಟ ಪ್ರದರ್ಶಿಸಬೇಕಾದ ಅಗತ್ಯವಿದೆ. ಈ ತಂಡಗಳು ಶನಿವಾರ ಕೋತಂಬಿ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಈ ಹಿಂದಿನ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಏಳು ವಿಕೆಟ್‌ಗಳ ಗೆಲುವಿನೊಡನೆ ಕ್ಯಾಪಿಟಲ್ಸ್ ತಂಡವು ಆತ್ಮವಿಶ್ವಾಸದ ಮಟ್ಟ ಎತ್ತರಿಸಿಕೊಂಡಿದೆ. ಜೆಮಿಮಾ ರಾಡ್ರಿಗಸ್ ಸಾರಥ್ಯದ ಡೆಲ್ಲಿ ತಂಡ ಐದು ತಂಡಗಳ ಲೀಗ್‌ನಲ್ಲಿ ಈಗ ನಾಲ್ಕನೇ ಸ್ಥಾನದಲ್ಲಿದೆ. ಸ್ಮೃತಿ ಮಂದಾನ ಬಳಗ 5 ಪಂದ್ಯಗಳಿಂದ 10 ಪಾಯಿಂಟ್ ಪಡೆದು ಈಗಾಗಲೇ ಪ್ಲೇ ಆಫ್‌ಗೆ ಅರ್ಹತೆ ಪಡೆದಿದೆ. ಇನ್ನೊಂದು ಪಂದ್ಯ ಗೆದ್ದರೆ ನೇರವಾಗಿ ಫೈನಲ್‌ಗೆ ಲಗ್ಗೆಯಿಡಬಹುದು.

ಆದರೆ, ಈ ಆವೃತ್ತಿಯಲ್ಲಿ ಅಜೇಯವಾಗುಳಿದಿರುವ ಆರ್‌ಸಿಬಿ ತಂಡವನ್ನು ಮಣಿಸಬೇಕಾದರೆ ಡೆಲ್ಲಿ ತಂಡ ತನ್ನ ಆಟವನ್ನು ಸಾಕಷ್ಟು ಸುಧಾರಿಸಿಕೊಳ್ಳಬೇಕಾಗಿದೆ. ಡೆಲ್ಲಿ ಪರ ಈ ಋತುವಿನಲ್ಲಿ ಲಿಝೆಲ್ ಲೀ (213 ರನ್) ಉತ್ತಮವಾಗಿ ಆಡಿದ್ದಾರೆ. ಅವರಿಗೆ ಲಾರಾ ವೋಲ್ವಾರ್ಟ್ (123) ಮತ್ತು ಶಫಾಲಿ ವರ್ಮಾ (149) ಅವರಿಂದ ಸ್ವಲ್ಪ ಬೆಂಬಲ ದೊರೆತಿದೆ.

ಆದರೆ ನಾಯಕಿ ಜೆಮಿಮಾ ರಾಡ್ರಿಗಸ್ ಒಳ್ಳೆಯ ಲಯದಲ್ಲಿ ಇಲ್ಲದಿರುವುದು ತಂಡದ ಚಿಂತೆಗೆ ಕಾರಣವಾಗಿದೆ. ಮುಂಬೈ ವಿರುದ್ಧ ಗೆಲುವು ಕಂಡ ಪಂದ್ಯದಲ್ಲಿ ಅವರು ಅಜೇಯ ಅರ್ಧ ಶತಕ ಗಳಿಸಿದ್ದು ತಂಡಕ್ಕೆ ಕೊಂಚ ನೆಮ್ಮದಿ ಮೂಡಿಸಿದೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕಾರ್ತಿಕೇಯ ಶತಕ: ಕರ್ನಾಟಕ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ತಿಕೇಯ ಕೆ.ಪಿ. ಅವರ ಅಜೇಯ ಶತಕದ ನೆರವಿನಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ (23 ವರ್ಷದೊಳಗಿನವರ) ಟೂರ್ನಿಯ ಪಂದ್ಯದಲ್ಲಿ ಚಂಡೀಗಢ ವಿರುದ್ಧ ಬೃಹತ್ ಮೊತ್ತದತ್ತ ದಾಪುಗಾಲಿಟ್ಟಿದೆ.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣ (3)ದಲ್ಲಿ ನಡೆಯುತ್ತಿರುವ ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ ಮೊದಲ ದಿನದಾಟಕ್ಕೆ ಆತಿಥೇಯ ತಂಡವು 91 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 369 ರನ್ ಕಲೆಹಾಕಿದೆ. ಎದುರಾಳಿ ಬೌಲರ್‌ಗಳ ದಾಳಿಯನ್ನು ಧ್ವಂಸಗೊಳಿಸಿದ ಕಾರ್ತಿಕೇಯ 181 ಎಸೆತಗಳಲ್ಲಿ ಔಟಾಗದೇ 155 ರನ್ ಹೊಡೆದರು. ಅವರ ಇನಿಂಗ್ಸ್‌ನಲ್ಲಿ 10 ಬೌಂಡರಿ ಮತ್ತು 9 ಸಿಕ್ಸರ್‌ಗಳು ಸೇರಿದ್ದವು.



ಕಾರ್ತಿಕೇಯ ಕೆ.ಪಿ.

ಆರಂಭ ಆಟಗಾರ ಪ್ರಖರ್ ಚತುರ್ವೇದಿ (95;114, 4x13) ಅವರು ಕೇವಲ 5 ರನ್‌ಗಳ ಅಂತರದಿಂದ ಶತಕ ವಂಚಿತರಾದರು. ಅವರು ಮತ್ತು ಫೈಜಾನ್ ಖಾನ್ (45;90) ಮೊದಲ ವಿಕೆಟ್ ಜೊತೆಯಾಟದಲ್ಲಿ 114 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಅವರ ನಿರ್ಗಮನದ ಬಳಿಕ ಕಾರ್ತಿಕೇಯ ಮತ್ತು ಧ್ರುವ್ ಪ್ರಭಾಕರ್ (ಔಟಾಗದೇ 70;131ಎ, 4x6, 6x1) ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 210 ರನ್ ಸೇರಿಸಿ, ಎರಡನೇ ದಿನಕ್ಕೆ ಆಟವನ್ನು ಕಾಯ್ದುಕೊಂಡಿದ್ದಾರೆ.

ಚಂಡೀಗಢದ ಶಾಹಿಲ್ ಕುಮಾರ್ ಮತ್ತು ದೇವಾಂಗ್ ಕೌಶಿಕ್ ತಲಾ ಒಂದು ವಿಕೆಟ್ ಪಡೆದರು.

ಅನೀಶ್ವರ್ ಗೌತಮ್ ನಾಯಕತ್ವದ ಕರ್ನಾಟಕ ತಂಡವು (18 ಅಂಕ) ಹಾಲಿ ಆವೃತ್ತಿಯಲ್ಲಿ ಒಂದು ಗೆಲುವು, ಒಂದು ಡ್ರಾ ಹಾಗೂ ಮತ್ತೊಂದು ಸೋಲಿನೊಂದಿಗೆ ಎಲೀಟ್ ಡಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಚಂಡೀಗಢ (18) ತಂಡವು ಕೊನೆಯ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 91 ಓವರ್‌ಗಳಲ್ಲಿ 2 ವಿಕೆಟ್‌ಗೆ 369 (ಪ್ರಖರ್ ಚತುರ್ವೇದಿ 95, ಫೈಜಾನ್ ಖಾನ್ 45, ಕಾರ್ತಿಕೇಯ ಕೆ.ಪಿ. ಔಟಾಗದೇ 155, ಧ್ರುವ್ ಪ್ರಭಾಕರ್ ಔಟಾಗದೇ 90) ವಿರುದ್ಧ ಚಂಡೀಗಢ

ಡಿಆರ್‌ಸಿ ಮೊರೆಹೋದ ಹತಾಶ ಬಿಸಿಬಿ

ನವದೆಹಲಿ (ಪಿಟಿಐ): ಕಗ್ಗಂಟು ಬಗೆಹರಿಸಲು ಹಾತೊರೆಯುತ್ತಿರುವ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು, ಐಸಿಸಿ ವ್ಯಾಜ್ಯ ಪರಿಹಾರ ಸಮಿತಿಯ (ಡಿಆರ್‌ಸಿ) ಮೊರೆಹೋಗಿದೆ. ಟಿ20 ವಿಶ್ವಕಪ್‌ನ ತನ್ನ ಪಂದ್ಯಗಳನ್ನು ಭಾರತದಲ್ಲೇ ಆಡಬೇಕೆಂದು ನಿರ್ದೇಶಿಸಿರುವ ಐಸಿಸಿ ಆಡಳಿತ ಮಂಡಳಿಯ ನಿರ್ಧಾರವನ್ನು ಬದಲಿಸಬೇಕೆಂದು ಲಿಖಿತವಾಗಿ ಮನವಿ ಮಾಡಿದೆ.

ಆದರೆ ಈ ವಿಷಯವು ಉಪಸಮಿತಿ ವ್ಯಾಪ್ತಿಯ ಹೊರಗಿರುವುದರಿಂದ, ಬಿಸಿಬಿಯ ಮೇಲ್ಮನವಿ ಆಲಿಸಲು ಅವಕಾಶ ಇಲ್ಲವಾಗಿದೆ. ಬಾಂಗ್ಲಾ ತಂಡದ ಬದಲು ಕ್ರಮಾಂಕದಲ್ಲಿ ಅದರ ನಂತರದ ಸ್ಥಾನದಲ್ಲಿರುವ ಸ್ಕಾಟ್ಲೆಂಡ್ ತಂಡವನ್ನು ಈಗ ಸ್ಟ್ಯಾಂಡ್‌ಬೈನಲ್ಲಿ ಇಡಲಾಗಿದೆ. 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಟೂರ್ನಿಯ ಕಾರ್ಯಕ್ರಮಕ್ಕೆ ನಮೀಬಿಯಾಕ್ಕೆ ತೆರಳಿದ್ದ ಐಸಿಸಿ ಅಧ್ಯಕ್ಷ ಜಯ್ ಶಾ ಅವರು ಈಗಾಗಲೇ ದುಬೈ ತಲುಪಿದ್ದಾರೆ. ಬಾಂಗ್ಲಾದೇಶ ತಂಡಕ್ಕೆ ಬದಲಿಯಾಗಿ ಆಡುವ ತಂಡವನ್ನು ಶನಿವಾರ ಅಧಿಕೃತವಾಗಿ ಪ್ರಕಟಿಸಲಾಗುವುದು ಎಂದು ತಿಳಿದುಬಂದಿದೆ.

ಭಾರತದಲ್ಲೇ ಪಂದ್ಯಗಳನ್ನು ಆಡಬೇಕೆಂದು ಬಾಂಗ್ಲಾದೇಶದ ಕ್ರಿಕೆಟ್ ಮಂಡಳಿಗೆ ಐಸಿಸಿ ತಾಕೀತು ಮಾಡಿರುವ ಕಾರಣ ಅದರ ಅಧ್ಯಕ್ಷ ಅಮಿನುಲ್ ಇಸ್ಲಾಂ ಬುಲ್‌ಬುಲ್ ಅವರು ಇಕ್ಕಟ್ಟಿಗೆ ಸಿಲುಕಿದ್ದಾರೆ. ಕೊನೆಯ ಪ್ರಯತ್ನವಾಗಿ ಅವರು ಇಂಗ್ಲೆಂಡ್‌ನ ಮೈಕೆಲ್ ಬೆಲೋಫ್ ನೇತೃತ್ವದ ಐಸಿಸಿಯ ವ್ಯಾಜ್ಯ ಪರಿಹಾರ ಸಮಿತಿಯ ನೆರವು ಕೇಳಿದ್ದಾರೆ. ಈ ಸಮಿತಿ 11 ಸದಸ್ಯರನ್ನು ಹೊಂದಿದೆ.

'ತನ್ನ ಮುಂದಿದ್ದ ಇತರ ಎಲ್ಲಾ ಆಯ್ಕೆಗಳು ಫಲಪ್ರದವಾಗದ ಕಾರಣ ಬಿಸಿಬಿಯು, ಐಸಿಸಿ ಅಂಗಸಂಸ್ಥೆಯಾದ ಡಿಆರ್‌ಸಿಯನ್ನು ಸಂಪರ್ಕಿಸಿರುವುದು ನಿಜ. ಒಂದೊಮ್ಮೆ ಡಿಆರ್‌ಸಿಯೂ ಬಿಸಿಬಿಗೆ ವಿರುದ್ಧವಾಗಿ ಆದೇಶ ನೀಡಿದಲ್ಲಿ, ಅದು ಸ್ವಿಟ್ಜರ್ಲೆಂಡ್‌ನಲ್ಲಿರುವ ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಾಲಯದ (ಸಿಎಎಸ್) ಮೊರೆಹೋಗಲು ಅವಕಾಶವಿದೆ' ಎಂದು ಬಿಸಿಬಿಯ ಮೂಲವೊಂದು ಪಿಟಿಐಗೆ ತಿಳಿಸಿದೆ.

ಹಾಸನ: ಜೆಡಿಎಸ್ ಸಮಾವೇಶ ಇಂದು

ಪ್ರಜಾವಾಣಿ ವಾರ್ತೆ

ಹಾಸನ: ಪಕ್ಷದ ಬೆಳ್ಳಿ ಹಬ್ಬ ಹಾಗೂ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವ ಪ್ರಯತ್ನದ ಭಾಗವಾಗಿ ಜೆಡಿಎಸ್ ಪಕ್ಷದಿಂದ, ಶನಿವಾರ (ಜ.24) ಇಲ್ಲಿನ ಹೊರವಲಯದ ಹುಡಾ ಬಡಾವಣೆಯಲ್ಲಿ ಸಮಾವೇಶ ಆಯೋಜಿಸಲಾಗಿದೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಶಾಸಕ ಎಚ್.ಡಿ. ರೇವಣ್ಣ, ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮುಖಂಡರಾದ ಭೋಜೇಗೌಡ, ಸಾ.ರಾ. ಮಹೇಶ್ ಸೇರಿದಂತೆ ಹಲವು ನಾಯಕರು ಭಾಗವಹಿಸಲಿದ್ದಾರೆ.

ಸುಮಾರು 2 ಲಕ್ಷ ಜನರು ಭಾಗವಹಿಸಬಹುದು ಎಂದು ಜೆಡಿಎಸ್ ಮುಖಂಡರು ಅಂದಾಜು ಮಾಡಿದ್ದಾರೆ. ಮುಖ್ಯ ವೇದಿಕೆಯ ಮುಂಭಾಗದಲ್ಲಿ 1 ಲಕ್ಷ ಹಾಗೂ ಅಕ್ಕಪಕ್ಕದ ಸ್ಥಳಗಳಲ್ಲಿ ಹೆಚ್ಚುವರಿಯಾಗಿ 50 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ.

ಕಾರ್ಯಕರ್ತರನ್ನು ಕರೆತರಲು 1,300 ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಊಟದ ವ್ಯವಸ್ಥೆಗಾಗಿ ಒಂದು ಸಾವಿರ ಸಿಬ್ಬಂದಿ ನಿಯೋಜಿಸಲಾಗಿದೆ. ಜಿಲ್ಲೆಯ ಹಾಗೂ ಅಕ್ಕಪಕ್ಕದ ಜಿಲ್ಲೆಗಳಿಂದ ಒಟ್ಟು 1,400 ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ.

ಶಾಸಕರಾದ ಎಚ್.ಡಿ.ರೇವಣ್ಣ ಮತ್ತು ಸ್ವರೂಪ್ ಪ್ರಕಾಶ್ ಹಾಗೂ ಸ್ಥಳೀಯ ಮುಖಂಡರು ಶುಕ್ರವಾರ ಸಮಾವೇಶದ ಸಿದ್ಧತೆಗಳನ್ನು ಪರಿಶೀಲಿಸಿದರು.

ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಸಮಾವೇಶದ ಫ್ಲೆಕ್ಸ್, ಬ್ಯಾನರ್, ಕಟೌಟ್‌ಗಳು ರಾರಾಜಿಸುತ್ತಿವೆ.

ಶನಿವಾರ ಬೆಳಿಗ್ಗೆ ಬೆಂಗಳೂರಿನಿಂದ ವಿಶೇಷ ಹೆಲಿಕಾಪ್ಟರ್ ಮೂಲಕ ಹುಟ್ಟೂರು ಹರದನಹಳ್ಳಿಗೆ ಬರಲಿರುವ ಎಚ್.ಡಿ.ದೇವೇಗೌಡರು, ಮನೆ ದೇವರು ದೇವೇಶ್ವರನಿಗೆ ಪೂಜೆ ಸಲ್ಲಿಸಿದ ಬಳಿಕ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಹೆರಿಗೆ ಆಸ್ಪತ್ರೆಗಳ ಮೇಲ್ದರ್ಜೆಗೆ ₹310 ಕೋಟಿ

ಜಿಬಿಎಯಿಂದ ಅಭಿವೃದ್ಧಿ; 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ

• ಆರ್.ಮಂಜುನಾಥ್

ಬೆಂಗಳೂರು: ಜಿಬಿಎ ವ್ಯಾಪ್ತಿಯ ನಾಲ್ಕು ನಗರ ಪಾಲಿಕೆಗಳಲ್ಲಿರುವ 21 ಹೆರಿಗೆ ಹಾಗೂ ರೆಫರಲ್ ಆಸ್ಪತ್ರೆಗಳನ್ನು ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡಗಳಿಗೆ (ಐಪಿಎಚ್‌ಎಸ್–2022) ಅನುಸಾರವಾಗಿ ಮೇಲ್ದರ್ಜೇರಿಸಲು ನಿರ್ಧರಿಸಲಾಗಿದೆ.

ಹೆರಿಗೆ/ ರೆಫರಲ್ ಆಸ್ಪತ್ರೆಗಳಲ್ಲಿ ವೈದ್ಯಕೀಯ ಉಪಕರಣ, ವೈದ್ಯಕೀಯ ಗ್ಯಾಸ್ ಕೊಳವೆ ಮಾರ್ಗ, ಅಗ್ನಿಶಾಮಕ ವ್ಯವಸ್ಥೆ, ವಿದ್ಯುತ್ ಮತ್ತು ಇತರೆ ಅಗತ್ಯ ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಇದಕ್ಕಾಗಿ ₹310 ಕೋಟಿ ವೆಚ್ಚ ಮಾಡಲಾಗುತ್ತಿದೆ.

21 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳನ್ನು 18 ತಿಂಗಳಲ್ಲಿ ತಿಂಗಳಲ್ಲಿ ಮುಗಿಸಲು ನಿರ್ಧರಿಸಲಾಗಿದೆ. ಜಿಬಿಎ ಯೋಜನಾ ಅನುಷ್ಠಾನ ವಿಭಾಗದ ಕಾರ್ಯಕಾರಿ ಎಂಜಿನಿಯರ್–4 ಅವರು ಯೋಜನೆಯನ್ನು ನಿರ್ವಹಿಸಲಿದ್ದಾರೆ.

ಐಪಿಎಚ್‌ಎಸ್–2022ರ ಪ್ರಕಾರ ಯಾವ ರೀತಿ ಕಟ್ಟಡ ನಿರ್ಮಾಣ ಮಾಡಬೇಕೆಂಬ ನೀಲನಕ್ಷೆಯನ್ನೂ ಸಿದ್ಧಪಡಿಸಲಾಗಿದ್ದು, ಅದರಂತೆಯೇ ಕಾಮಗಾರಿ ನಡೆಯಲಿದೆ. ಇದಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

ಏನೇನು ಷರತ್ತು: ಹೆರಿಗೆಗೆ ಸಂಬಂಧಿಸಿದ ಎಲ್ಲ ರೀತಿಯ ಉಪಕರಣಗಳು ಆಸ್ಪತ್ರೆಗೆ ಸರಬರಾಜಾದ ಎಂಟು ವಾರದಲ್ಲಿ ಕಾರ್ಯಾಚರಣೆಯಾಗುವಂತೆ ಕ್ರಮ ಕೈಗೊಳ್ಳಬೇಕು. ಇದಕ್ಕೆಲ್ಲ ಐಎಸ್‌ಒ 9001 ಮತ್ತು ಐಎಸ್‌ಒ 13485 ಪ್ರಮಾಣ ಪತ್ರವಿರಬೇಕು.

ಆಸ್ಪತ್ರೆಗಳಿಗೆ ಒದಗಿಸುವ ಎಲ್ಲ ಉತ್ಪನ್ನಗಳು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ (ಸಿಡಿಎಸ್‌ಸಿಒ) ಪ್ರಮಾಣ ಪತ್ರ ಹೊಂದಿರುವ ಉಪಕರಣಗಳನ್ನೇ ಬಳಸಬೇಕು. ಉಪಕರಣಗಳನ್ನು ಆಮದು ಮಾಡಿಕೊಂಡರೆ, ಯುರೋಪಿಯನ್ ಕಮಿಷನ್/ ಎಫ್‌ಡಿಎ (ಯುಎಸ್)/ ಬಿಐಎಸ್/ ಪ್ರಮಾಣ ಪತ್ರವನ್ನು ಹೊಂದಿರಬೇಕು. ಸುರಕ್ಷತಾ ಪ್ರಮಾಣ ಪತ್ರವನ್ನೂ ಒಳಗೊಂಡಿರಬೇಕು. ಉಪಕರಣಗಳು ಕಾರ್ಯಾರಂಭಿಸಿದ ದಿನದಿಂದ ಎರಡು ವರ್ಷ ವಾರಂಟಿ ಅವಧಿಯೂ ಇರಬೇಕು ಎಂಬ ಷರತ್ತು ವಿಧಿಸಲಾಗಿದೆ.

ಯಾವ ಆಸ್ಪತ್ರೆಗಳ ಅಭಿವೃದ್ಧಿ...

ಬೆಂಗಳೂರು ಕೇಂದ್ರ ನಗರ ಪಾಲಿಕೆ: ಹಲಸೂರು ರೆಫರಲ್ ಆಸ್ಪತ್ರೆ, ಆಸ್ಟಿನ್ ಟೌನ್ ಹೆರಿಗೆ ಆಸ್ಪತ್ರೆ, ಕಾಕ್ಸ್ ಟೌನ್ ಹೆರಿಗೆ ಆಸ್ಪತ್ರೆ, ಜಯನಗರ ಹೆರಿಗೆ ಆಸ್ಪತ್ರೆ, ತಿಮ್ಮಯ್ಯ ರಸ್ತೆ ಹೆರಿಗೆ ಆಸ್ಪತ್ರೆ, ಮಾಗಡಿ ರಸ್ತೆ ಹೆರಿಗೆ ಆಸ್ಪತ್ರೆ, ಗವಿಪುರ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ, ಎಚ್. ಸಿದ್ದಯ್ಯ ರಸ್ತೆ ರೆಫರಲ್ ಆಸ್ಪತ್ರೆ, ವಿಲ್ಸನ್ ಗಾರ್ಡನ್ ಹೆರಿಗೆ ಆಸ್ಪತ್ರೆ.

ಬೆಂಗಳೂರು ಉತ್ತರ ನಗರ ಪಾಲಿಕೆ: ಡಿ.ಜೆ. ಹಳ್ಳಿ ಹೆರಿಗೆ ಆಸ್ಪತ್ರೆ, ಎಂ.ಆರ್. ಪಾಳ್ಯ ಹೆರಿಗೆ ಆಸ್ಪತ್ರೆ, ಯಶವಂತಪುರ ಆಸ್ಪತ್ರೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ: ತಾವರೆಕೆರೆ/ ಈಜಿಪುರ ಹೆರಿಗೆ ಆಸ್ಪತ್ರೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ: ನಂದಿನಿ ಲೇಔಟ್ ಹೆರಿಗೆ ಆಸ್ಪತ್ರೆ, ಶ್ರೀರಾಮಪುರ ರೆಫರಲ್ ಆಸ್ಪತ್ರೆ, ಪ್ಯಾಲೇಸ್ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ, ಮೂಡಲಪಾಳ್ಯ ಹೆರಿಗೆ ಆಸ್ಪತ್ರೆ, ಎಂ.ಸಿ. ಲೇಔಟ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಎನ್. ಆರ್. ಕಾಲೊನಿ ಹೆರಿಗೆ ಆಸ್ಪತ್ರೆ, ಆಜಾದ್‌ನಗರ ಹೆರಿಗೆ ಆಸ್ಪತ್ರೆ, ಹೊಸಕೆರೆಹಳ್ಳಿ ರೆಫರಲ್ ಆಸ್ಪತ್ರೆ.

ಮುಖ್ಯಾಂಶಗಳು

- 21 ಹೆರಿಗೆ ಆಸ್ಪತ್ರೆಗಳು ಮೇಲ್ದರ್ಜೆಗೆ
- ವೈದ್ಯಕೀಯ ಉಪಕರಣ, ಇತರೆ ಅಗತ್ಯ ವ್ಯವಸ್ಥೆಗಳ ಅಳವಡಿಕೆಗೆ ಕ್ರಮ

ಯೂನಸ್ ಆಡಳಿತವನ್ನು ಕಿತ್ತೊಗೆಯಿರಿ: ಹಸೀನಾ

ನವದೆಹಲಿ (ಪಿಟಿಐ): 'ಬಾಂಗ್ಲಾದೇಶದಲ್ಲಿ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರ ನೇತೃತ್ವದ ಸರ್ಕಾರವನ್ನು ದೇಶದ ಜನರು ಕಿತ್ತೊಗೆಯಬೇಕು. ಅವರು ಅಧಿಕಾರದಲ್ಲಿ ಇರುವವರೆಗೆ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಲು ಸಾಧ್ಯವಿಲ್ಲ' ಎಂದು ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ದೇಶದ ಜನರಿಗೆ ಕರೆ ನೀಡಿದ್ದಾರೆ.

ಶೇಖ್ ಹಸೀನಾ

17 ತಿಂಗಳ ಹಿಂದೆ ಢಾಕಾದಿಂದ ಪಲಾಯನ ಮಾಡಿದ ನಂತರ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಕರೆ ನೀಡಿದ್ದಾರೆ.

'ಕಳೆದ ವರ್ಷ ದೇಶದಲ್ಲಿ ಘಟನೆಗಳ ಕುರಿತಂತೆ ವಿಶ್ವಸಂಸ್ಥೆಯು ನೈಜ ನಿಷ್ಪಕ್ಷಪಾತ ತನಿಖೆ ನಡೆಸಲು ಕ್ರಮ ಕೈಗೊಳ್ಳಬೇಕು. ದೇಶದಲ್ಲಿ ಸಂವಿಧಾನ ಮರುಸ್ಥಾಪಿಸಲು, ಅಲ್ಪಸಂಖ್ಯಾತರ ಹಿತರಕ್ಷಿಸಲು ಜನರು ಧ್ವನಿಯೆತ್ತಬೇಕು' ಎಂದು ಕರೆ ನೀಡಿದ್ದಾರೆ.

ಕೊಚ್ಚಿ–ಮುಝಿರಿಸ್ ಉತ್ಸವಕ್ಕೆ ಸ್ಪಂದನೆ

ಬೆಂಗಳೂರು: 'ಎರಡು ವರ್ಷಕ್ಕೆ ಒಮ್ಮೆ ನಡೆಯುವ ಕೊಚ್ಚಿ–ಮುಝಿರಿಸ್ ಉತ್ಸವ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಉತ್ಸವದ ಅಂಗವಾಗಿ ವಿಶ್ವದ ಪ್ರಸಿದ್ಧ ಕಲಾವಿದರ ಕಲಾಕೃತಿಗಳನ್ನು ಕೇರಳದ ಪಾರಂಪರಿಕ ತಾಣಗಳಲ್ಲಿ ಪ್ರದರ್ಶಿಸಲಾಗುತ್ತಿದೆ' ಎಂದು ಕೇರಳದ ಪ್ರವಾಸೋದ್ಯಮ ಇಲಾಖೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಬಾಬು ಮಹೇಂದ್ರ ತಿಳಿಸಿದರು.

ಕೇರಳ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ನಗರದಲ್ಲಿ ಹಮ್ಮಿಕೊಂಡಿದ್ದ ಪ್ರಚಾರ ಅಭಿಯಾನದಲ್ಲಿ ಅವರು ಮಾತನಾಡಿದರು.

'ಕೊಚ್ಚಿ ಕೋಟೆಯ ಐತಿಹಾಸಿಕ ಮತ್ತು ಪಾರಂಪರಿಕ ಪರಿಸರದಲ್ಲಿ ನಡೆಯುತ್ತಿರುವ ಈ ಕಲಾ ಹಬ್ಬವು ಕಲೆ, ಇತಿಹಾಸ ಮತ್ತು ಪ್ರವಾಸೋದ್ಯಮವನ್ನು ಬೆಸೆಯುವ ಮೂಲಕ ಪ್ರವಾಸಿಗರಿಗೆ ಅನನ್ಯ ಅನುಭವವನ್ನು ನೀಡುತ್ತಿದೆ. ಮಾರ್ಚ್ 31ರವರೆಗೆ ಉತ್ಸವ ನಡೆಯಲಿದೆ' ಎಂದರು.



ಲಾಲ್‌ಬಾಗ್‌ನಲ್ಲಿ ನಡೆದ ತೇಜಸ್ವಿ ವಿಸ್ಮಯ ವಿಷಯಾಧಾರಿತ ಫಲಪುಷ್ಪ ಪ್ರದರ್ಶನದಲ್ಲಿ ಕಾರ್ಪೊರೇಟ್ ತೋಟಗಾರಿಕೆ ವಿಭಾಗದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ತಂಡದವರು ಪ್ರಥಮ ಬಹುಮಾನ ಪಡೆದರು

'ತೇಜಸ್ವಿಗೆ ಅರ್ಥಪೂರ್ಣ ಪುಷ್ಪ ಗೌರವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಉದ್ಯಾನದಲ್ಲಿ ಪೂರ್ಣಚಂದ್ರ ತೇಜಸ್ವಿ ಬದುಕು ಬರಹ ಆಧರಿತ ಫಲಪುಷ್ಪ ಪ್ರದರ್ಶನ ಪರಿಸರ ಜಾಗೃತಿ ಮೂಡಿಸುವ ಉತ್ತಮ ಮಾದರಿ' ಎಂದು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ್ ಕೆಂಜಿಗೆ ಹೇಳಿದರು.

ತೋಟಗಾರಿಕೆ ಇಲಾಖೆ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಜಂಟಿಯಾಗಿ ಆಯೋಜಿಸಿರುವ ತೇಜಸ್ವಿ ವಿಸ್ಮಯ ಫಲಪುಷ್ಪ ಪ್ರದರ್ಶನ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

'ನಿರೀಕ್ಷೆ ಮೀರಿ ತೇಜಸ್ವಿ ಕುರಿತಾದ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ. ಗ್ಯಾಲರಿ, ಕ್ಯಾರಿಕೇಚರ್, ಛಾಯಾಚಿತ್ರ, ಪುಸ್ತಕಗಳು ಗಮನ ಸೆಳೆಯುತ್ತಿವೆ. ಇದು ತೇಜಸ್ವಿ ಅವರಿಗೆ ಸಲ್ಲಿಸಿರುವ ಪುಷ್ಪ ಗೌರವ' ಎಂದು ಬಣ್ಣಿಸಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ಉಪನಿರ್ದೇಶಕ ಬಾಲಕೃಷ್ಣ ಉಪಸ್ಥಿತರಿದ್ದರು. ಗಾಜಿನಮನೆಯ ಪ್ರದರ್ಶನ, ತೋಟಗಳ ಸ್ಪರ್ಧೆ, ಇಕೆಬಾನ, ಪುಷ್ಪಭಾರತಿ, ಪುಷ್ಪ ರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂ, ಬೋನ್ಸಾಯ್ ಗಿಡಗಳ ಪ್ರದರ್ಶನ ಮತ್ತು ಚಿತ್ರಕಲಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ ಸಲಹೆ

'ಅರ್ಬನ್ ಬ್ಯಾಂಕ್‌ಗಳು ನಂಬಿಕೆ ಉಳಿಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂರು ಅರ್ಬನ್ ಬ್ಯಾಂಕ್‌ಗಳು ಆರ್ಥಿಕವಾಗಿ ತೊಂದರೆಗೆ ಸಿಲುಕಿದರೂ ನಂಬಿಕೆ ಮೇಲೆಯೇ ಇತರ ಸಹಕಾರ ಬ್ಯಾಂಕ್‌ಗಳ ವಹಿವಾಟು ನಡೆಯುತ್ತಿದೆ. ಅದನ್ನು ಉಳಿಸಿಕೊಳ್ಳಬೇಕು' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಸಚಿವ ಎಚ್. ಕೆ.ಪಾಟೀಲ ಸಲಹೆ ನೀಡಿದರು.

ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಗುರುವಾರ ಆಯೋಜಿಸಿದ್ದ ತ್ಯಾಗರಾಜರ ಆರಾಧನಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

'ದೇಶದಲ್ಲಿ 1451 ಅರ್ಬನ್ ಬ್ಯಾಂಕ್‌ಗಳಿದ್ದು, ಇವುಗಳ ದುಡಿಯುವ ಬಂಡವಾಳದ ಪ್ರಮಾಣವೇ ₹6.50 ಲಕ್ಷ ಕೋಟಿಯಷ್ಟಿದೆ. ಇದರಲ್ಲಿ ಠೇವಣಿ ಪ್ರಮಾಣ ₹ 5.33 ಲಕ್ಷ ಕೋಟಿ. ಕರ್ನಾಟಕದ 249 ಅರ್ಬನ್ ಬ್ಯಾಂಕ್‌ಗಳಲ್ಲಿ 24 ಲಕ್ಷ ಸದಸ್ಯರಿದ್ದು, ದುಡಿಯುವ ಬಂಡವಾಳ ಪ್ರಮಾಣ ₹58 ಸಾವಿರ ಕೋಟಿ. ಈ ಬ್ಯಾಂಕ್‌ಗಳು ₹500 ಕೋಟಿ ನಿವ್ವಳ ಲಾಭ ಪಡೆಯುತ್ತಿವೆ. ಎನ್‌ಪಿಎ ಪ್ರಮಾಣ ಶೇ 3ಕ್ಕಿಂತ ಕಡಿಮೆ ಇರುವುದು ಗಮನಾರ್ಹ' ಎಂದರು.

'ಸರ್ಕಾರದ ನೆರವು ಇಲ್ಲದೇ ಸಹಕಾರ ಬ್ಯಾಂಕ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ತ್ಯಾಗರಾಜ ಬ್ಯಾಂಕ್‌ನವರು ಉದ್ಯೋಗ ಸೃಷ್ಟಿ ಮಾಡುವವರಿಗೆ ಸಾಲ ನೀಡುವ ಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಇದು ಮುಂದಿನ ದಿನಗಳಲ್ಲಿ ಬ್ಯಾಂಕಿನ ಪ್ರಗತಿಗೂ ಸಹಕಾರಿಯಾಗಲಿದೆ' ಎಂದು ಹೇಳಿದರು.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಅಶ್ವತ್ಥನಾರಾಯಣ ಮಾತನಾಡಿ, 'ಮೂರು ದಶಕದ ಹಿಂದೆ ಬಿಎಚ್‌ಇಎಲ್ ಸಹಿತ ಹಲವು ಸಂಸ್ಥೆಗಳ ನೌಕರರಿಗೆ ನಿವೇಶನ ಸಾಲವನ್ನು ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ನೀಡಿತು. ಇದರಿಂದ ಹಲವರು ಸೂರು ಮಾಡಿಕೊಂಡು ಅವರ ಆಸ್ತಿ ಮೌಲ್ಯ ಬೆಳೆದಿರುವುದು ಸಂತಸದ ಸಂಗತಿ' ಎಂದು ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ವ್ಯವಸ್ಥಾಪಕ ನಿರ್ದೇಶಕ ನವೀನ್, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಲ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪುಂಡಲೀಕ ಎನ್. ಕೇರೂರೆ, ತ್ಯಾಗರಾಜ ಬ್ಯಾಂಕ್ ಅಧ್ಯಕ್ಷ ಎಂ.ಆರ್.ವೆಂಕಟೇಶ್, ಉಪಾಧ್ಯಕ್ಷ ಎಂ.ಎನ್. ಕಂಬೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಶ್ರೀರಾಮ್, ನಿರ್ದೇಶಕರು ಹಾಜರಿದ್ದರು.

ನಗರದ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ತ್ಯಾಗರಾಜರ ಆರಾಧನಾ ಮಹೋತ್ಸವ ಅಂಗವಾಗಿ ಹೊರ ತಂದಿರುವ ಮೈಸ್ಟಾಂಪ್ ಮತ್ತು ವಿಶೇಷ ಪೋಸ್ಟಲ್ ಕವರ್ ಅನ್ನು ಎಚ್‌.ಕೆ.ಪಾಟೀಲ ಬಿಡುಗಡೆ ಬಿಡುಗಡೆ ಮಾಡಿದರು. ಅಶ್ವತ್ಥನಾರಾಯಣ, ವಿ. ತಾರಾ, ಗಜೇಂದ್ರಕುಮಾರ್ ಮೀನಾ, ಎಂ.ಆರ್. ವೆಂಕಟೇಶ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ

ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ಪ್ರಶಸ್ತಿಯನ್ನು ವಿಜಯನಗರದ ಜನಸೇವಾ ಕೋ ಆಪರೇಟಿವ್ ಬ್ಯಾಂಕ್‌ಗೆ, ಅತ್ಯುತ್ತಮ ನೌಕರ ಪ್ರಶಸ್ತಿಯನ್ನು ತುಮಕೂರು ವೀರಶೈವ ಸಹಕಾರ ಬ್ಯಾಂಕ್‌ನ ಆಶಾ, ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್‌ನ ದೊಡ್ಡೇಗೌಡ ಅವರಿಗೆ ಪ್ರದಾನ ಮಾಡಲಾಯಿತು.

Think Plots.®
Think KNS.
KNS® INFRA
ಕೆ.ಎನ್.ಎಸ್.
RERA No.: PRM/KA/RERA/1250/307/PR/060325/007551
RERA Registered
BENGALURU'S BIGGEST
PLOTTED TOWNSHIP
150+ ACRES
ONE ACRE CLUBHOUSE ZONE
KNS SAMOOHA
BMRDA APPROVED
Plots from 1200 to 3000 sq. ft.
15 min from Madavara Metro Stn.
LAUNCHING
KNS®
Samooha
Nelamangala
Off Bengaluru - Tumkur Exp Highway
PLOTS FROM
₹69 lakhs*
Launching on
Jan 31st & Feb 1st
*T&C Apply
Financed by Piramal Finance
Our Banking Partners
CREDAI BANGALORE
Scan for Invite
See it to believe it
Call for a site visit
079 4105 7108
www.knsgroup.in
KNS Infrastructure Pvt. Ltd.
#1125/12, 1st Floor, Service Road, Hampinagar,
2nd Stage, Vijayanagar Bengaluru - 560 104

ಚಿಟಿಕೆ ಸುದ್ದಿ

ಹತ್ಯೆಯಾದ ವ್ಯಕ್ತಿ ಕುಟುಂಬಕ್ಕೆ ₹10 ಲಕ್ಷ

ಇಂಫಾಲ್ (ಪಿಟಿಐ): ಮಣಿಪುರದ ಚುರಾಚಾಂದಪುರ ಜಿಲ್ಲೆಯಲ್ಲಿ ಶಂಕಿತ ಕುಕಿ ಸಮುದಾಯದವರಿಂದ ಹತ್ಯೆಯಾದ ಮೈತೇಯಿ ಸಮುದಾಯದ ವ್ಯಕ್ತಿಯ ಕುಟುಂಬಕ್ಕೆ ಸರ್ಕಾರ ಶುಕ್ರವಾರ ₹10 ಲಕ್ಷ ಪರಿಹಾರ ಘೋಷಿಸಿದೆ.

ಮಯಾಂಗ್ಲಂಬಮ್ ರಿಷಿಕಾಂತ ಸಿಂಗ್ ಹತ್ಯೆಯಾದ ವ್ಯಕ್ತಿ. ಜ. 21ರಂದು ಚುರಾಚಾಂದಪುರ ಜಿಲ್ಲೆಯ ಟುಯಿಬಾಂಗ್ ಪ್ರದೇಶದಲ್ಲಿನ ಮನೆಯಿಂದ ರಿಷಿಕಾಂತ ದಂಪತಿಯನ್ನು ಅಪಹರಿಸಿದ್ದ ಬಂಡುಕೋರರು ಸಿಂಗ್ ಅವರನ್ನು ಗುಂಡಿಕ್ಕಿ ಹತ್ಯೆಗೈದಿದ್ದಾರೆ. ಸಿಂಗ್ ಪತ್ನಿ ಕುಕಿ ಸಮುದಾಯಕ್ಕೆ ಸೇರಿದವರಾಗಿದ್ದು, ಅವರಿಗೆ ಯಾವುದೇ ತೊಂದರೆ ಮಾಡದೆ ಬಿಡುಗಡೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸುವುದಾಗಿ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ತಿಳಿಸಿದ್ದರು.

ಘರ್ಷಣೆ: ಸಚಿವರ ಪುತ್ರ ಶರಣು

ಮುಂಬೈ (ಪಿಟಿಐ): ಮಹಾಡ್ ಸ್ಥಳೀಯ ಸಂಸ್ಥೆ ಚುನಾವಣೆ ಸಂದರ್ಭದಲ್ಲಿ ನಡೆದಿದ್ದ ಘರ್ಷಣೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಸಚಿವ ಭರತ್ ಗೋಗಾವಲೆ (ಶಿವಸೇನಾ) ಅವರ ಪುತ್ರ ವಿಕಾಸ್ ಗೋಗಾವಲೆ ಪೊಲೀಸರ ಮುಂದೆ ಶುಕ್ರವಾರ ಶರಣಾಗಿದ್ದಾರೆ.

ಸಚಿವರ ಪುತ್ರನ ವಿರುದ್ಧ ಕ್ರಮ ಕೈಗೊಳ್ಳಲು ವಿಫಲವಾದ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಬಾಂಬೆ ಹೈಕೋರ್ಟ್ ಗುರುವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

‘ಒಂದು ವಾರದಿಂದ ಸಚಿವರ ಪುತ್ರ ಬಂಧನದಿಂದ ತಪ್ಪಿಸಿಕೊಂಡಿದ್ದಾರೆ. ಕ್ರಮ ಕೈಗೊಳ್ಳುವಲ್ಲಿ ಮುಖ್ಯಮಂತ್ರಿಗಳೂ ಅಸಹಾಯಕರಾಗಿದ್ದಾರೆ. ರಾಜ್ಯದಲ್ಲಿ ನೆಲದ ಕಾನೂನು ಅಸ್ತಿತ್ವದಲ್ಲಿದೆಯೇ?’ ಎಂದಿತ್ತು.

ವಿಕಾಸ್ ಸೇರಿ ಎಲ್ಲ ಆರೋಪಿಗಳೂ ಪೊಲೀಸರ ಮುಂದೆ ಶರಣಾಗಿರುವ ಬಗ್ಗೆ ನ್ಯಾಯಮೂರ್ತಿ ಮಾಧವ್ ಜಂಬಾರ್ ಅವರು ಇದ್ದ ಪೀಠಕ್ಕೆ ಅಡ್ವೊಕೇಟ್ ಜನರಲ್ ಮಿಲಿಂದ್ ಸಾಠೆ ಅವರು ಶುಕ್ರವಾರ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಲೋಕಪಾಲಕ್ಕೆ ಕಾಲಾವಕಾಶ

ನವದೆಹಲಿ (ಪಿಟಿಐ): ‘ಪ್ರಶ್ನೆಗಾಗಿ ಲಂಚ’ ಪ್ರಕರಣದಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಸಿಬಿಐಗೆ ಅನುಮತಿ ನೀಡುವ ವಿಚಾರವನ್ನು ಕಾನೂನಿನ ಪ್ರಕಾರ ಪರಿಗಣಿಸಲು ಲೋಕಪಾಲಕ್ಕೆ ನೀಡಿದ್ದ ಕಾಲಾವಕಾಶವನ್ನು ದೆಹಲಿ ಹೈಕೋರ್ಟ್ ಎರಡು ತಿಂಗಳು ವಿಸ್ತರಿಸಿದೆ.

ನ್ಯಾಯಮೂರ್ತಿಗಳಾದ ಅನಿಲ್ ಕ್ಷೇತ್ರಪಾಲ್ ಮತ್ತು ಹರೀಶ್ ವೈದ್ಯನಾಥನ್ ಶಂಕರ್ ಅವರ ಪೀಠವು, ಸಮಯ ವಿಸ್ತರಣೆ ಕೋರಿ ಇನ್ನು ಮುಂದೆ ಸಲ್ಲಿಸುವ ಯಾವುದೇ ಮನವಿಯನ್ನು ಪರಿಗಣಿಸುವುದಿಲ್ಲ ಎಂದು ಶುಕ್ರವಾರ ಹೇಳಿತು.

ಮಹುವಾ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ಪರ ವಾದ ಮಂಡಿಸಿದ ವಕೀಲರು, ‘ಕಾಲಾವಕಾಶವನ್ನು ಎರಡು ತಿಂಗಳು ವಿಸ್ತರಿಸಬೇಕೆಂಬ ಲೋಕಪಾಲದ ಮನವಿಯನ್ನು ನಾವು ವಿರೋಧಿಸುತ್ತಿಲ್ಲ’ ಎಂದು ಹೇಳಿದರು.

ಕೆಟಿಆರ್ ವಿಚಾರಣೆ

ಹೈದರಾಬಾದ್ (ಪಿಟಿಐ): ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ ರಾಮರಾವ್ ಅವರು ದೂರವಾಣಿ ಕದ್ದಾಲಿಕೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಗಾಗಿ ತೆಲಂಗಾಣ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಂದೆ ಶುಕ್ರವಾರ ಹಾಜರಾದರು.

ಬಿಆರ್‌ಎಸ್ ಆಡಳಿತದ ಅವಧಿಯಲ್ಲಿ ನಡೆದಿದೆ ಎನ್ನಲಾದ ದೂರವಾಣಿ ಕದ್ದಾಲಿಕೆ ಪ್ರಕರಣದ ವಿಚಾರಣೆ ನಡೆಸುತ್ತಿರುವ ಎಸ್‌ಐಟಿ ರಾಮರಾವ್ ಅವರಿಗೆ ಗುರುವಾರ ನೋಟಿಸ್ ಜಾರಿ ಮಾಡಿತ್ತು. ರಾಮರಾವ್ ಅವರ ಸಂಬಂಧಿ, ಬಿಆರ್‌ಎಸ್ ಶಾಸಕ ಟಿ. ಹರೀಶ್ ರಾವ್ ಅವರನ್ನು ಜನವರಿ 20ರಂದು ಎಸ್‌ಐಟಿ ವಿಚಾರಣೆಗೆ ಒಳಪಡಿಸಿತ್ತು.

ಮಕ್ಕಳಿಗೆ ಆನ್‌ಲೈನ್ ನಿರ್ಬಂಧ: ಚಿಂತನೆ

ಅಮರಾವತಿ (ಪಿಟಿಐ): 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಆನ್‌ಲೈನ್ ವೇದಿಕೆಗಳನ್ನು ನಿರ್ಬಂಧಿಸಲು ಆಂಧ್ರಪ್ರದೇಶ ಸರ್ಕಾರ ಚಿಂತಿಸಿದೆ.

ನಾರಾ ಲೋಕೇಶ್

ಆನ್‌ಲೈನ್ ವೇದಿಕೆಗಳಿಗೆ ಅನ್ವಯವಾಗುವ ಅಸ್ತಿತ್ವದಲ್ಲಿರುವ ಕಾನೂನುಗಳು, ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಪರಿಶೀಲಿಸಲು ಸಚಿವರ ಸಮಿತಿಯನ್ನು 2025ರ ಅಕ್ಟೋಬರ್‌ನಲ್ಲೇ ರಚಿಸಲಾಗಿದೆ ಎಂದು ಗೃಹ ಸಚಿವೆ ವಂಗಲಪುಡಿ ಅನಿತಾ ಶುಕ್ರವಾರ ತಿಳಿಸಿದ್ದಾರೆ.

ಸಮಿತಿ ನೀಡುವ ವರದಿಯನ್ನು ಕೇಂದ್ರ ಸರ್ಕಾರದೊಂದಿಗೆ ಹಂಚಿಕೊಳ್ಳಲಾಗುವುದು ಎಂದಿದ್ದಾರೆ.

ಐಟಿ ಸಚಿವ ನಾರಾ ಲೋಕೇಶ್, ಆರೋಗ್ಯ ಸಚಿವ ಸತ್ಯಕುಮಾರ್ ಯಾದವ್ ಸಮಿತಿಯ ಸದಸ್ಯರಾಗಿದ್ದಾರೆ.

‘ಕೇರಳದಲ್ಲೂ ಬದಲಾವಣೆ ನಿಶ್ಚಿತ’

ಭ್ರಷ್ಟ ಆಡಳಿತದಿಂದ ಬೇಸತ್ತಿರುವ ಜನರಿಗೆ ಬಿಜೆಪಿಯಲ್ಲಿ ವಿಶ್ವಾಸ: ಪ್ರಧಾನಿ ಮೋದಿ

ತಿರುವನಂತಪುರ(ಪಿಟಿಐ): ‘ದಶಕಗಳಿಂದ ಆಳುತ್ತಿರುವ ಎಲ್‌ಡಿಎಫ್ ಹಾಗೂ ಯುಡಿಎಫ್‌ನ ಭ್ರಷ್ಟ ಆಡಳಿತದಿಂದ ಕೇರಳವನ್ನು ವಿಮೋಚನೆಗೊಳಿಸಲು ಜನರು ನಿಶ್ಚಯಿಸಿದ್ದಾರೆ. ತಿರುವನಂತಪುರ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಯ ಗೆಲುವು ರಾಜ್ಯದ ಜನರ ಈ ದೃಢ ಸಂಕಲ್ಪಕ್ಕೆ ಸಾಕ್ಷಿಯಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

‘ಮುಂಬರುವ ವಿಧಾನಸಭೆ ಚುನಾವಣೆ ಬಳಿಕ ರಾಜ್ಯದಲ್ಲಿಯೂ ಬದಲಾವಣೆಯ ಗಾಳಿ ಬೀಸಲಿದ್ದು, ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ನನಗಿದೆ. ಈ ಬದಲಾವಣೆ ತಿರುವನಂತಪುರ ಮಹಾನಗರಪಾಲಿಕೆ ಚುನಾವಣೆಯಿಂದಲೇ ಆರಂಭವಾಗಿದೆ’ ಎಂದು ಹೇಳುವ ಮೂಲಕ ಅವರು, ಕೇರಳದಲ್ಲಿ ಚುನಾವಣಾ ಕಹಳೆಯನ್ನು ಮೊಳಗಿಸಿದ್ದಾರೆ.

ತಿರುವನಂತಪುರ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ದಾಖಲಿಸಿದ್ದಕ್ಕಾಗಿ ಇಲ್ಲಿನ ಪುತ್ತರಿಕಂಡಂ ಮೈದಾನದಲ್ಲಿ ಹಮ್ಮಿಕೊಂಡಿದ್ದ ವಿಜಯೋತ್ಸವದಲ್ಲಿ ಅವರು ಮಾತನಾಡಿದರು.

‘ನಾಲ್ಕು ದಶಕಗಳ ಹಿಂದೆ ಅಹಮದಾಬಾದ್ ಪಾಲಿಕೆಯಲ್ಲಿ ಬಿಜೆಪಿ ಒಂದು ಸ್ಥಾನ ಗೆದ್ದಿತ್ತು. 1987ರಲ್ಲಿ ಈ ಪಾಲಿಕೆಯಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಬಿಜೆಪಿ, ಬಳಿಕ ಗುಜರಾತ್‌ನಲ್ಲಿ ಅಧಿಕಾರದ ಗದ್ದುಗೆಗೆ ಏರಿತು’ ಎಂದರು.

‘ಎಲ್‌ಡಿಎಫ್ ಹಾಗೂ ಯುಡಿಎಫ್‌ನ ನಿರ್ಲಕ್ಷದಿಂದಾಗಿ ತಿರುವನಂತಪುರ ನಗರದ ಅಭಿವೃದ್ಧಿ ಕುಂಠಿತಗೊಂಡಿದೆ. ನಗರವು ಮೂಲಸೌಕರ್ಯಗಳಿಂದ ವಂಚಿತವಾಗಿದೆ. ನಗರದ ಅಭಿವೃದ್ಧಿಗೆ ಬಿಜೆಪಿ ತಂಡ ಈಗಾಗಲೇ ಕಾರ್ಯೋನ್ಮುಖವಾಗಿದ್ದು, ದೇಶದಲ್ಲಿ ಇದು ಮಾದರಿ ನಗರವಾಗಲಿದೆ’ ಎಂದರು.

‘ಶಬರಿಮಲೆ ಚಿನ್ನ ಕಳವು: ತನಿಖೆ’

ವಿಧಾನಸಭೆ ಚುನಾವಣೆ ಎದುರು ನೋಡುತ್ತಿರುವ ಕೇರಳಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಶಬರಿಮಲೆ ಚಿನ್ನ ಕಳವು ಪ್ರಕರಣ ಪ್ರಸ್ತಾಪಿಸಿದರಲ್ಲದೇ, ಆಡಳಿತಾರೂಢ ಸಿಪಿಎಂ ಹಾಗೂ ವಿಪಕ್ಷ ಕಾಂಗ್ರೆಸ್ ವಿರುದ್ಧ ಶುಕ್ರವಾರ ವಾಗ್ದಾಳಿ ನಡೆಸಿದರು.

‘ಶಬರಿಮಲೆ ದೇಗುಲದಿಂದ ಚಿನ್ನ ಕಳವು ಮಾಡಿರುವ ಬಗ್ಗೆ ವರದಿಗಳಿವೆ. ದೇವರ ಚಿನ್ನವನ್ನೇ ಕಳವು ಮಾಡಲಾಗಿದೆ. ಚುನಾವಣೆ ಬಳಿಕ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಗಲಿದ್ದು, ಚಿನ್ನ ಕಳವು ಪ್ರಕರಣ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರನ್ನು ಜೈಲಿಗೆ ಅಟ್ಟಲಾಗುವುದು. ಇದು ಮೋದಿಯ ಗ್ಯಾರಂಟಿ’ ಎಂದು ಹೇಳಿದರು.

ಮುಸ್ಲಿಂ ಲೀಗ್ ನಡುವಿನ ಮೈತ್ರಿ ಕುರಿತು ಪ್ರಸ್ತಾಪಿಸಿದ ಅವರು, ಕಾಂಗ್ರೆಸ್ ಪಕ್ಷವನ್ನು ‘ಮುಸ್ಲಿಂ ಲೀಗ್ ಮಾವೊವಾದಿ ಕಾಂಗ್ರೆಸ್’ (ಎಂಎಂಸಿ) ಎಂದು ಕರೆದರು.

ತಿರುವನಂತಪುರದಲ್ಲಿ ನಡೆದ ರೋಡ್ ಶೋನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜನರತ್ತ ಕೈಬೀಸಿದರು ಪಿಟಿಐ ಚಿತ್ರ

> ತಿರುವನಂತಪುರ ಜನರು ಬಹುದಿನಗಳ ಹಿಂದೆಯೇ ಬದಲಾವಣೆ ಬಯಸಿದ್ದರು. ನಂಬಿಕೆ ಇಡಿ. ನೀವು ಬಯಸಿರುವ ಬದಲಾವಣೆ ನನಸಾಗಲಿದೆ
> **ನರೇಂದ್ರ ಮೋದಿ**
> ಪ್ರಧಾನಿ

ಜನರ ಪ್ರೀತಿಗೆ ‘ನಾಟಕ’ದ ಹಣೆಪಟ್ಟಿ...

‘ಜನರು ನನ್ನ ಕುರಿತಾಗಿ ವ್ಯಕ್ತಪಡಿಸುವ ಪ್ರೀತಿಗೆ ಕೆಲವರು ‘ನಾಟಕ’ ಅಥವಾ ‘ಪೂರ್ವಯೋಜಿತ’ ಎಂಬ ಹಣೆಪಟ್ಟಿ ಹಚ್ಚುತ್ತಾರೆ’ ಎಂದು ಮೋದಿ ಹೇಳಿದರು.

ಇಲ್ಲಿ ನಡೆದ ಕಾರ್ಯಕ್ರಮದ ವೇಳೆ, ಬಾಲಕನೊಬ್ಬ ಬಿಡಿಸಿದ್ದ ತಮ್ಮ ಭಾವಚಿತ್ರವನ್ನು ಗಮನಿಸಿದ ಬಳಿಕ ಮೋದಿ ಈ ಮಾತು ಹೇಳಿದರು.

‘ವಿದೇಶಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ, ಯುವ ಜನತೆ ಕೂಡ ನನ್ನ ಮೇಲಿನ ಪ್ರೀತಿಯನ್ನು ಇಂತಹ ವಿಧಾನಗಳ ಮೂಲಕ ವ್ಯಕ್ತಪಡಿಸುತ್ತಾರೆ. ಬಳಿಕ ರೀಲ್ಸ್‌ಗಳನ್ನು ಮಾಡಲಾಗುತ್ತದೆ. ನನ್ನ ವಿರೋಧಿಗಳು ಇಂತಹ ಘಟನೆಗಳನ್ನು ಪೂರ್ವಯೋಜಿತ ಇಲ್ಲವೇ ನಾಟಕ ಎಂದು ಕರೆಯುತ್ತಾರೆ’ ಎಂದರು.

‘ನನ್ನ ಬಗ್ಗೆ ನಿಮಗಿರುವ ಪ್ರೀತಿ, ಮಕ್ಕಳು ಹೊಂದಿರುವ ಭಾವನೆಗಳು ನನಗೆ ಅರ್ಥವಾಗುತ್ತವೆ. ಇದೇ ಕಾರಣಕ್ಕೆ ನಾನು ಇಂತಹ ಎಲ್ಲ ಅವಮಾನಗಳನ್ನು ಸಹಿಸಿಕೊಳ್ಳುವೆ. ಆದರೆ, ಚಿತ್ರ ರಚಿಸುವ ಮೂಲಕ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಬಾಲಕನನ್ನು ನಾನು ಅವಮಾನಿಸಲಾರೆ. ಆತ ನಿರಾಶೆಗೊಳ್ಳುವಂತೆ ಮಾಡಲಾರೆ’ ಎಂದೂ ಹೇಳಿದರು.

ಸುದ್ದಿ 2 ನಿಮಿಷ

ಕಾಂಗ್ರೆಸ್ ಸಭೆ: ತರೂರ್ ಗೈರು

ನವದೆಹಲಿ (ಪಿಟಿಐ): ಕೇರಳ ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಕಾಂಗ್ರೆಸ್‌ನ ಉನ್ನತ ನಾಯಕರು ಕೇರಳ ರಾಜ್ಯ ಘಟಕದ ನಾಯಕರೊಂದಿಗೆ ಶುಕ್ರವಾರ ಇಲ್ಲಿ ಮಹತ್ವದ ಸಭೆ ನಡೆಸಿದರು. ಸಂಸದ ಶಶಿ ತರೂರ್ ಅವರು ಸಭೆಗೆ ಗೈರಾದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪಾಲ್ಗೊಂಡರು.

ಪಕ್ಷದ ರಾಜ್ಯ ಘಟಕದ ನಾಯಕರು ತಮ್ಮನ್ನು ಪದೇ ಪದೇ ಕಡೆಗಣಿಸಲು ಪ್ರಯತ್ನಿಸಿರುವುದಕ್ಕೆ ಅಸಮಾಧಾನಗೊಂಡಿರುವ ಹಿರಿಯ ನಾಯಕ ತರೂರ್ ಸಭೆಯಿಂದ ಹೊರಗುಳಿದರು ಎಂದು ಮೂಲಗಳು ತಿಳಿಸಿವೆ.

ಜನವರಿ 19ರಂದು ಕೊಚ್ಚಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ ಅವರು ಕೇರಳದ ಇತರ ನಾಯಕರ ಹೆಸರು ಉಲ್ಲೇಖಿಸಿದ್ದರು. ಆದರೆ ವೇದಿಕೆಯಲ್ಲಿದ್ದ ತರೂರ್ ಅವರ ಹೆಸರನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರಲಿಲ್ಲ. ಈ ಬೆಳವಣಿಗೆಯಿಂದಲೂ ಅವರು ಅಸಮಾಧಾನಗೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಆದರೆ ತರೂರ್ ಅಸಮಾಧಾನಗೊಂಡಿದ್ದಾರೆ ಎಂಬ ವರದಿಯನ್ನು ಕಾಂಗ್ರೆಸ್ ಅಲ್ಲಗಳೆದಿದೆ. ‘ಕೋಯಿಕ್ಕೋಡ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವುದರಿಂದ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ’ ಎಂದು ತರೂರ್ ಅವರ ಕಚೇರಿ ತಿಳಿಸಿದೆ ಎಂದಿದೆ.



ಪಕ್ಷದ ಕೇರಳ ಉಸ್ತುವಾರಿ ದೀಪಾ ದಾಸ್‌ಮುನ್ಶಿ, ಕೇರಳ ಚುನಾವಣೆ ಉಸ್ತುವಾರಿಗಳಾದ ಸಚಿನ್ ಪೈಲಟ್ ಮತ್ತು ಕೆ.ಜೆ ಜಾರ್ಜ್, ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ವಿ.ಡಿ.ಸತೀಶನ್ ಮತ್ತು ಸನ್ನಿ ಜೋಸೆಫ್ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ಭ್ರಷ್ಟಾಚಾರ, ಮಾಫಿಯಾಕ್ಕೆ ಡಿಎಂಕೆ ಪ್ರೋತ್ಸಾಹ: ಮೋದಿ

ಮದುರಾಂತಕಂ(ತಮಿಳುನಾಡು) (ಪಿಟಿಐ): ‘ತಮಿಳುನಾಡಿನಲ್ಲಿನ ಡಿಎಂಕೆ ನೇತೃತ್ವದ ಸರ್ಕಾರವು ಭ್ರಷ್ಟಾಚಾರ, ಮಾಫಿಯಾ ಹಾಗೂ ಅಪರಾಧ ಕೃತ್ಯಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಹಾಗಾಗಿ, ಈ ಸರ್ಕಾರ ಪತನಗೊಳ್ಳುವುದಕ್ಕೆ ದಿನಗಣನೆ ಆರಂಭವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ನಗರದಲ್ಲಿ ಎನ್‌ಡಿಎ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಡಿಎಂಕೆಗೆ ರಾಜ್ಯದ ಜನರು ಎರಡು ಬಾರಿ ಸ್ಪಷ್ಟ ಬಹುಮತ ನೀಡಿದ್ದರು. ಆದರೆ, ಆ ಪಕ್ಷವು ಈಗ ಜನರ ನಂಬಿಕೆಯನ್ನು ಕಳೆದುಕೊಂಡಿದೆ’ ಎಂದು ಹೇಳಿದರು.

ತಿರುಪರನ್‌ಕುಂಡ್ರಂ ಕಾರ್ತಿಕ ದೀಪ ಬೆಳಗುವ ಕುರಿತ ವಿವಾದ ಪ್ರಸ್ತಾಪಿಸಿದ ಅವರು, ‘ಚುನಾವಣೆ ಲಾಭಕ್ಕಾಗಿ ಇಲ್ಲಿನ ಆರಾಧ್ಯದೈವ ಮುರುಗನ್ ಹಾಗೂ ನ್ಯಾಯಾಲಯಗಳಿಗೆ ಡಿಎಂಕೆ ಸರ್ಕಾರ ಅವಮಾನ ಮಾಡಿದೆ’ ಎಂದು ಟೀಕಿಸಿದರು.

ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರನ್ನು ಸ್ಮರಿಸಿದ ಮೋದಿ, ‘ಜಯಲಲಿತಾ ಅವರು ಅಪರಾಧಗಳನ್ನು ಮಟ್ಟಹಾಕಿದ್ದರು. ಈ ಸರ್ಕಾರದ ಅವಧಿಯಲ್ಲಿ ಮಹಿಳೆಯರು ಸಂಕಷ್ಟ ಎದುರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ಎನ್‌ಡಿಎ ಅಂಗಪಕ್ಷಗಳಾದ ಎಐಎಡಿಎಂಕೆ ಹಾಗೂ ಎಎಂಎಂಕೆ ನಾಯಕರು ಉಪಸ್ಥಿತರಿದ್ದರು.

ಬೆಟ್ಟದ ದೀಪ: ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ತಿರುಪರನ್‌ಕುಂಡ್ರಂ ದೇವಾಲಯವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಸುಪರ್ದಿಗೆ ನೀಡಬೇಕು ಹಾಗೂ ಬೆಟ್ಟದ ಮೇಲಿರುವ ದೀಪಸ್ತಂಭದಲ್ಲಿ ನಿತ್ಯವೂ ದೀಪ ಬೆಳಗಿಸಲು ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ತಮಿಳುನಾಡು ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ನೀಡಿದೆ.

ಹಿಂದೂ ಧರ್ಮ ಪರಿಷತ್‌ನಿಂದ ಸಲ್ಲಿಕೆಯಾಗಿರುವ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಹಾಗೂ ವಿಪುಲ್ ಎಂ. ಪಾಂಚೋಲಿ ಅವರನ್ನೊಳಗೊಂಡ ಪೀಠವು ವಿಚಾರಣೆ ನಡೆಸಿದೆ. ದೇವಸ್ಥಾನದ ಸುಪರ್ದಿ ಮಾತ್ರವಲ್ಲದೇ ಪ್ರತೀವರ್ಷ ಕಾರ್ತಿಕ ಮಾಸದಲ್ಲಿ ಬೆಟ್ಟದ ಪೂರ್ತಿ ದೀಪ ಬೆಳಗಿಸಲು, ಭಕ್ತರು ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಬೇಕೆಂದೂ ಅರ್ಜಿಯಲ್ಲಿ ಕೋರಲಾಗಿದೆ.

ಎಸ್‌ಐಆರ್ ಆತಂಕದಿಂದ 110ಕ್ಕೂ ಹೆಚ್ಚು ಸಾವು: ಮಮತಾ ಬ್ಯಾನರ್ಜಿ

‘ಬಂಗಾಳ: ನಿತ್ಯ ಮೂರ್ನಾಲ್ಕು ಆತ್ಮಹತ್ಯೆ’

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಿಂದ ಆತಂಕಕ್ಕೆ ಒಳಗಾಗಿ ರಾಜ್ಯದಲ್ಲಿ ಪ್ರತಿದಿನ ಮೂರರಿಂದ ನಾಲ್ಕು ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಮಮತಾ

ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನದ ಅಂಗವಾಗಿ ಶುಕ್ರವಾರ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರ ಈ ಸಾವಿನ ಹೊಣೆ ಹೊರಬೇಕು’ ಎಂದು ಒತ್ತಾಯಿಸಿದರು.

‘ಎಸ್‌ಐಆರ್ ಪ್ರಕ್ರಿಯೆ ಆರಂಭವಾದಾಗಿನಿಂದ ಇದುವರೆಗೆ 110ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ನಿತ್ಯವೂ ಮೂರರಿಂದ ನಾಲ್ಕು ಮಂದಿ ಆತಂಕದಿಂದ ಆತ್ಮಹತ್ಯೆ ಮಾಡಿಕೊಳ್ಳು-ತ್ತಿದ್ದಾರೆ’ ಎಂದು ಹೇಳಿದರು.

ಬಿಜೆಪಿಯು ಬಂಗಾಳದ ವಿರುದ್ಧ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿದ ಅವರು, ‘ಮಹಾತ್ಮ ಗಾಂಧಿ, ರವೀಂದ್ರನಾಥ ಟ್ಯಾಗೋರ್, ಬೋಸ್ ಮತ್ತು ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಲಾಗುತ್ತಿದೆ’ ಎಂದು ಟೀಕಿಸಿದರು.

ಟಿಎಂಸಿ ಶಾಸಕನ ವಿರುದ್ಧ ದಾಖಲಾಗದ ಎಫ್‌ಐಆರ್: ‘ಮುರ್ಶಿದಾಬಾದ್ ಜಿಲ್ಲೆಯ ಫರಕ್ಕಾ ಬಿಡಿಒ ಕಚೇರಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ನಡೆದ ವಿಧ್ವಂಸಕ ಕೃತ್ಯ ಸಂಬಂಧ ಟಿಎಂಸಿ ಶಾಸಕ ಮೋನಿರುಲ್ ಇಸ್ಲಾಂ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಚುನಾವಣಾ ಆಯೋಗ ವಿಧಿಸಿದ್ದ ಗಡುವು ಮುಗಿದು ಒಂದು ದಿನ ಕಳೆದರೂ, ಯಾವುದೇ ಪ್ರಕ್ರಿಯೆ ನಡೆದಿಲ್ಲ’ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಮೋನಿರುಲ್ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಖಚಿತಪಡಿಸಿ-ಕೊಳ್ಳುವಂತೆ ಮುರ್ಶಿದಾಬಾದ್ ಜಿಲ್ಲಾ ಚುನಾವಣಾಧಿಕಾರಿಗೆ ಆಯೋಗವು ಗುರುವಾರ ಸೂಚನೆ ನೀಡಿತ್ತು.

‘ಈವರೆಗೆ ಯಾವುದೇ ದೂರು ಬಾರದ ಕಾರಣ ಎಫ್‌ಐಆರ್ ದಾಖಲಿಸಿಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸಂಬಂಧ ಎಸ್‌ಐಆರ್ ಪ್ರಕ್ರಿಯೆ ವೇಳೆ ಅಗತ್ಯ ಭದ್ರತೆ ಒದಗಿಸಬೇಕು. ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಚುನಾವಣಾ ಆಯೋಗವು ಸೂಚಿಸಿತ್ತು.

‘ಬಂಗಾಳದಲ್ಲಿ ಬಂಗಾಳಿಗರು ಸುರಕ್ಷಿತರಲ್ಲ’

ಜಬಲ್ಪುರ (ಮಧ್ಯಪ್ರದೇಶ): ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ಸಮುದಾಯವು ಸುರಕ್ಷಿತವಾಗಿಲ್ಲ ಎಂದು ಕೇಂದ್ರ ಸಚಿವ ಜೆ.ಪಿ ನಡ್ಡಾ ಶುಕ್ರವಾರ ಹೇಳಿದರು.

ಇಲ್ಲಿನ ಬಂಗಾಳಿ ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತೃಣಮೂಲ ಕಾಂಗ್ರೆಸ್ ಆಡಳಿತದಲ್ಲಿ ಬಂಗಾಳವು ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ಟೀಕಿಸಿದರು.

ನಡ್ಡಾ ಅವರಿಗಿಂತಲೂ ಮುನ್ನ ಮಾತನಾಡಿದ ಅತಿಥಿಯೊಬ್ಬರು, ‘ಮಧ್ಯ ಪ್ರದೇಶದಲ್ಲಿ ಬಂಗಾಳಿ ಸಮುದಾಯವು ಸುರಕ್ಷಿತವಾಗಿದೆ’ ಎಂದು ಹೇಳಿದರು. ಆ ಹೇಳಿಕೆಯನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ನಡ್ಡಾ, ‘ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ಸಮುದಾಯವು ಸುರಕ್ಷಿತವಾಗಿಲ್ಲ. ಇದು ವಿಪರ್ಯಾಸ’ ಎಂದರು.

‘ಬಂಗಾಳಕ್ಕೆ ಬದಲಾವಣೆಯ ಅಗತ್ಯವಿದೆ ಎಂಬ ಸಂದೇಶ ಸಾರುವ ಸಮಯ ಬಂದಿದೆ. ಇಡೀ ದೇಶವು ಬಂಗಾಳದೊಂದಿಗೆ ನಿಲ್ಲಬೇಕು ಮತ್ತು ನಾವು ಆ ರಾಜ್ಯವನ್ನು ಬಿಕ್ಕಟ್ಟಿನಿಂದ ಪಾರುಮಾಡಬೇಕು’ ಎಂದು ಹೇಳಿದರು.

ಶಿವಸೇನಾ ಪಾಲಿಕೆ ಸದಸ್ಯನ ಮೇಲೆ ಬಿಜೆಪಿಗರಿಂದ ಹಲ್ಲೆ

ಠಾಣೆ (ಪಿಟಿಐ): ಬಿಜೆಪಿ ಪದಾಧಿಕಾರಿ ಮತ್ತು ಅವರ ಬೆಂಬಲಿಗರು ಹಲ್ಲೆ ನಡೆಸಿದ್ದರಿಂದ ಶಿವಸೇನಾದ ಪಾಲಿಕೆ ಸದಸ್ಯರೊಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ನಡೆದಿದೆ.

ಪಾಲಿಕೆ ಸದಸ್ಯ ಹೇಮಂತ್ ಛತುರೆ ಅವರು ಬದ್ಲಾಪುರದ ಸೋನಿವಲಿ ಪ್ರದೇಶದಲ್ಲಿನ ಮಾಘ ಗಣಪತಿ ಪೆಂಡಾಲ್‌ಗೆ ಭೇಟಿ ನೀಡಿದ್ದ ವೇಳೆ ಅವರ ಮೇಲೆ ಹಲ್ಲೆ ನಡೆದಿರುವುದಾಗಿ ಆರೋಪಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬಿಜೆಪಿ ಪದಾಧಿಕಾರಿ ತೇಜಸ್ ಅಲಿಯಾಸ್ ಬಂಟಿ ಮಹಸ್ಕರ್ ಮತ್ತು ಆತನ 20ರಿಂದ 25 ಬೆಂಬಲಿಗರು ವಾಗ್ವಾದ ನಡೆಸಿ ಹಲ್ಲೆ ಮಾಡಿದ್ದಾರೆ ಎಂದು ಹೇಮಂತ್ ಆಪ್ತರು ಆರೋಪಿಸಿದ್ದಾರೆ.

ಹೇಮಂತ್ ಅವರಿಗೆ ಗಂಭೀರ ಗಾಯಗಳಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಿರ್ಣಯ ಅಂಗೀಕರಿಸಿದ ತಮಿಳುನಾಡು ವಿಧಾನಸಭೆ

‘ನರೇಗಾ ಯೋಜನೆ ಮುಂದುವರಿಸಿ’

ಚೆನ್ನೈ (ಪಿಟಿಐ): ರಾಜ್ಯದ ಗ್ರಾಮೀಣ ಜನರ ಜೀವನೋಪಾಯವನ್ನು ರಕ್ಷಿಸಲು ನರೇಗಾ ಯೋಜನೆಯನ್ನೇ ಮುಂದುವರಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆ ಶುಕ್ರವಾರ ಅಂಗೀಕರಿಸಿತು.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಈ ನಿರ್ಣಯವನ್ನು ಮಂಡಿಸಿದರು.

ಸ್ಟಾಲಿನ್

‘ಜನರು, ವಿರೋಧ ಪಕ್ಷಗಳ ಧ್ವನಿಯನ್ನು ಕಡೆಗಣಿಸಿ ಕೇಂದ್ರ ಸರ್ಕಾರವು ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಇದು ಜನರ ಅಗತ್ಯಗಳನ್ನು ಆಧರಿಸಿದ ಯೋಜನೆಯಲ್ಲ. ಈ ಬಗ್ಗೆ 2025ರ ಡಿ.18ರಂದೇ ನಾನು ಪ್ರಧಾನಿಗೆ ಪತ್ರ ಬರೆದಿದ್ದೇನೆ’ ಎಂದು ಹೇಳಿದರು.

ಮಹಾತ್ಮ ಗಾಂಧಿ ಅವರ ಹೆಸರಿನ ಯೋಜನೆಯನ್ನೇ ಮುಂದುವರಿಸಬೇಕು ಎಂದು ಈ ಸದನವು ಆಗ್ರಹಿಸುತ್ತದೆ ಎಂದು ಸ್ಟಾಲಿನ್ ಪ್ರತಿಪಾದಿಸಿದರು.

‘ದೇಶದ ಗ್ರಾಮೀಣ ಜನರ ಜೀವನೋಪಾಯ, ರಾಜ್ಯಗಳ ಆರ್ಥಿಕ ರಚನೆ, ಸ್ಥಳೀಯ ಸಂಸ್ಥೆಗಳ ಅವಲಂಬನೆ ಮತ್ತು ಗ್ರಾಮೀಣ ಮಹಿಳೆಯರ ಉದ್ಯೋಗದ ಅವಕಾಶಗಳನ್ನು ಹಾಳು ಮಾಡುವ ರೀತಿಯಲ್ಲಿ ವಿಬಿ–ಜಿ ರಾಮ್ ಜಿ ಯೋಜನೆಯನ್ನು ಕೇಂದ್ರವು ವಿನ್ಯಾಸಗೊಳಿಸಿದೆ. ಇದು ನರೇಗಾ ಸ್ವರೂಪವನ್ನೇ ಬದಲಿಸಲಿದೆ’ ಎಂದು ಮುಖ್ಯಮಂತ್ರಿ ಹೇಳಿದರು.

‘ಮೂಲಸೌಕರ್ಯ ಯೋಜನೆಯೇ ಆಗಿರಲಿ ಅಥವಾ ಜನರ ಜೀವನೋಪಾಯವನ್ನು ಉನ್ನತೀಕರಿಸುವ ಯೋಜನೆಯೇ ಆಗಿರಲಿ, ಎಲ್ಲ ಕಾರ್ಯಕ್ರಮಗಳನ್ನು ತಮಿಳುನಾಡಿನಲ್ಲಿ ತಾರತಮ್ಯವಿಲ್ಲದೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ’ ಎಂದರು.

ಕೇಂದ್ರ ಸರ್ಕಾರದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ತಮಿಳುನಾಡು ಮುಂಚೂಣಿಯಲ್ಲಿದೆ ಎಂದು ಸ್ಟಾಲಿನ್ ಹೇಳುತ್ತಿದ್ದಂತೆ, ಶಾಸಕರು ಮೇಜು ಕುಟ್ಟಿ ಸ್ವಾಗತಿಸಿದರು.

‘ಯೋಜನೆಯ ಪ್ರಗತಿ ಆಧಾರದಲ್ಲಿ ಕೇಂದ್ರ ಸರ್ಕಾರವು ಅನುದಾನ ಬಿಡುಗಡೆ ಮಾಡುತ್ತಿಲ್ಲ. ತಮಿಳುನಾಡಿನ ಅಭಿವೃದ್ಧಿಯ ಬಗ್ಗೆ ತಾರತಮ್ಯ ಮನೋಭಾವ ಹೊಂದಿದೆ’ ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ದೂರಿದರು.

ತಿರುಪತಿ ಲಡ್ಡು ಪ್ರಕರಣ: ತನಿಖೆ ಪೂರ್ಣ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಪತಿ ಲಡ್ಡು ಪ್ರಸಾದದಲ್ಲಿ ಕಲಬೆರಕೆ ತುಪ್ಪ ಬಳಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಸುಪ್ರೀಂ ಕೋರ್ಟ್ ನೇಮಿಸಿರುವ ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡವು (ಎಸ್‌ಐಟಿ) ಪೂರ್ಣಗೊಳಿಸಿದೆ.

12 ರಾಜ್ಯಗಳಲ್ಲಿ ಸತತ 15 ತಿಂಗಳು ತನಿಖೆ ನಡೆಸಿರುವ ತನಿಖಾ ತಂಡವು, ನೆಲ್ಲೂರ್ ಎಸಿಬಿ ಕೋರ್ಟ್‌ನಲ್ಲಿ ಶುಕ್ರವಾರ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಉತ್ತರಾಖಂಡದ ಭೋಲೆ ಬಾಬಾ ಸಾವಯವ ಡೇರಿ ನಿರ್ದೇಶಕರಾದ ಪೋಮಿಲ್ ಜೈನ್ ಮತ್ತು ವಿಪಿನ್ ಜೈನ್ ಅವರನ್ನು ಪ್ರಕರಣದ ಪ್ರಮುಖ ಆರೋಪಿಗಳನ್ನಾಗಿಸಲಾಗಿದೆ. ದೋಷಾರೋಪ ಪಟ್ಟಿಯಲ್ಲಿ 36 ಆರೋಪಿಗಳ ಹೆಸರನ್ನು ಪಟ್ಟಿ ಮಾಡಲಾಗಿದ್ದು, ಅಷ್ಟೂ ಜನರನ್ನು ಬಂಧಿಸಲಾಗಿದೆ. ಈ ಪೈಕಿ ಮೂವರು ಜಾಮೀನು ಲಭ್ಯವಾಗದೆ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮಾಜಿ ಪ್ರಧಾನ ವ್ಯವಸ್ಥಾಪಕರು ಸೇರಿದಂತೆ ಟಿಟಿಡಿ ಹಿರಿಯ ಅಧಿಕಾರಿಗಳು ನೆಲ್ಲೋರ್ ಕೇಂದ್ರೀಯ ಕಾರಾಗೃಹದಲ್ಲಿದ್ದಾರೆ. ಜೊತೆಗೆ ಟಿಟಿಡಿ ಮಾಜಿ ಮುಖ್ಯಸ್ಥರ ನಿಕಟವರ್ತಿ ಚಿನ್ನ ಅಪ್ಪಣ್ಣ ಮತ್ತು ಅಜಯ್ ಕುಮಾರ್ ಸುಗಂಧ ಅವರೂ ಜೈಲಿನಲ್ಲಿದ್ದಾರೆ. ಹಲವು ಡೇರಿಗಳ ಮಾಲೀಕರಿಗೆ ಷರತ್ತುಬದ್ಧ ಜಾಮೀನು ಲಭಿಸಿದ್ದು, ನಿಗದಿತ ದಿನಾಂಕಗಳಂದು ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿದೆ.

ಆರೋಪಿಗಳು ಹಸುವಿನ ಶುದ್ಧ ತುಪ್ಪದ ಬದಲಿಗೆ ಕೋಲ್ಕತ್ತದ ಬ್ಯೂಜ್ ಬಡ್ಜ್ ಕಂಪನಿಯಿಂದ ಪಡೆದ ಪಾಮ್ ಆಯಿಲ್, ಪಾಮ್ ಕರ್ನಲ್ ಎಣ್ಣೆ ಮತ್ತು ಪಾಮೋಲಿನ್‌ನಂತಹ ಕಲಬೆರಕೆ ವಸ್ತುಗಳನ್ನು ಬಳಸಿದ್ದಾರೆ. ಈ ವಸ್ತುಗಳನ್ನು ಅಲ್ಪ ಪ್ರಮಾಣದ ಶುದ್ಧ ತುಪ್ಪ, ಬೀಟಾ–ಕೆರೋಟಿನ್, ಅಸಿಟಿಕ್ ಆ್ಯಸಿಡ್ ಎಸ್ಟರ್ ಮತ್ತು ಸಿಂಥೆಟಿಕ್ ತುಪ್ಪದ ಸುವಾಸನೆಯಂತಹ ರಾಸಾಯನಿಕಗಳೊಂದಿಗೆ ಮಿಶ್ರಣ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ಗೊತ್ತಾಗಿದೆ.

‘ಕಳೆದ ವರ್ಷ ಫೆಬ್ರುವರಿಯಿಂದ ಬಂಧನದಲ್ಲಿರುವ ಪೋಮಿಲ್ ಜೈನ್ ಮತ್ತು ವಿಪಿನ್ ಜೈನ್, ಉತ್ತರಾಖಂಡದ ರೂರ್ಕಿ ಬಳಿಯ ಭಗವಾನ್‌ಪುರದಲ್ಲಿರುವ ತಮ್ಮ ಡೇರಿ ಘಟಕದಲ್ಲಿ ಕಲಬೆರಕೆ ತುಪ್ಪ ತಯಾರಿಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

ತಂಡ ಹೇಳಿದ್ದೇನು?

- ತುಪ್ಪದ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲ
- ಖಾಸಗಿ ಡೇರಿಗಳಿಂದ ಟಿಟಿಡಿ ಮಾನದಂಡಗಳ ಕಡೆಗಣನೆ
- 2019ರಿಂದ 2024ರವರೆಗೆ ಹಾಲು ಬಳಸದೆಯೇ ತುಪ್ಪ ತಯಾರಿಕೆ

ಅಪೂರ್ಣ ಭಾಷಣ: ಕಲಾಪ ಹರಣ

ಸಚಿವ ತಿಮ್ಮಾಪುರ ರಾಜೀನಾಮೆಗೆ ವಿಪಕ್ಷ ಪಟ್ಟು

ಒಂದನೇ ಪುಟದಿಂದ...

‘ನಿಲುವಳಿ ಸೂಚನೆಯಡಿ ಕೊಡಲು ಸಾಧ್ಯವಿಲ್ಲ. ಬೇಕಿದ್ದರೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿ ಅಥವಾ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿಕೊಡುತ್ತೇನೆ’ ಎಂದು ಸಭಾಧ್ಯಕ್ಷರು ಹೇಳಿದರು.

ಸಭಾಧ್ಯಕ್ಷರ ಸಲಹೆಯನ್ನು ಬಿಜೆಪಿ ಸದಸ್ಯರು ತೀವ್ರವಾಗಿ ಪ್ರತಿರೋಧಿಸಿದರು. ಪ್ರತಿರೋಧವನ್ನು ಗಣನೆಗೆ ತೆಗೆದುಕೊಳ್ಳದ ಸಭಾಧ್ಯಕ್ಷರು, ವಂದನಾ ನಿರ್ಣಯದ ಮೇಲೆ ಮಾತನಾಡುವಂತೆ ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ ಅವರಿಗೆ ಸೂಚಿಸಿದರು. ಇದರಿಂದ ಕೆರಳಿದ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧಾವಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು.

‘ಇದೊಂದು ದೊಡ್ಡ ಹಗರಣ. ಇದರ ಬಗ್ಗೆ ಮಾತನಾಡಲು ಅವಕಾಶ ನೀಡಬೇಕು. ಕಿಕ್ ಬ್ಯಾಕ್ ಆಗಿದೆ, ಲೋಕಾಯುಕ್ತದಲ್ಲಿ ದೂರು ಸಲ್ಲಿಕೆಯಾಗಿದೆ. ಈ ಹಿಂದೆ ರಾಜ್ಯದ ಹಲವು ಯೋಜನೆಗಳ ಹಣವನ್ನು ಅಕ್ರಮವಾಗಿ ವಿವಿಧ ರಾಜ್ಯಗಳ ಚುನಾವಣೆಗೆ ಸಾಗಿಸಿ ಬಳಸಿದ ರೀತಿಯಲ್ಲಿ ಈಗ ಅಸ್ಸಾಂ, ತಮಿಳುನಾಡು, ಕೇರಳ ಚುನಾವಣೆಗಳಲ್ಲಿ ಬಳಸಲು ಮದ್ಯದ ಹಣ ಬಳಸಲಾಗುತ್ತಿದೆ’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಆರೋಪಿಸಿದರು.

‘ಸನ್ನದು ಪಡೆಯಲು ಸಚಿವರಿಗೆ ಹಣ ನೀಡಬೇಕು ಎಂದು ಅಧಿಕಾರಿಗಳು ಹೇಳುವ ಒಟ್ಟು ನಾಲ್ಕು ಆಡಿಯೊಗಳ ಪೆನ್ ಡ್ರೈವ್ ನನ್ನ ಬಳಿ ಇದೆ. ಅದನ್ನು ಎಲ್ಲರೂ ಕೇಳಬಹುದು’ ಎಂದು ಹೇಳಿದ ಅಶೋಕ ಪೆನ್ ಡ್ರೈವ್ ಪ್ರದರ್ಶಿಸಿದರು.

‘ಸನ್ನದುಗಳನ್ನು ಭಾರಿ ಮೊತ್ತಕ್ಕೆ ಮಾರಲಾಗುತ್ತಿದೆ. ನಿಮ್ಮ ಬಳಿ ದಾಖಲೆ ಇದ್ದರೆ ಸದನದಲ್ಲಿ ಮಂಡಿಸಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪಂಥಾಹ್ವಾನ ನೀಡಿದ್ದಾರೆ. ಆದ್ದರಿಂದ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಿದರೆ ಎಲ್ಲ ದಾಖಲೆಗಳನ್ನು ಮುಂದಿಡುತ್ತೇನೆ. ಇದರಲ್ಲಿರುವ ಮಾಹಿತಿ ಸುಳ್ಳು ಎಂದಾದರೆ ಯಾವುದೇ ಶಿಕ್ಷೆ ಎದುರಿಸಲು ಸಿದ್ಧನಿದ್ದೇನೆ’ ಎಂದು ಸವಾಲು ಹಾಕಿದರು. ಗದ್ದಲದ ಮಧ್ಯೆ ಪೊನ್ನಣ್ಣ ಅವರ ಭಾಷಣ ಯಾರ ಕಿವಿಗೂ ತಲುಪಲಿಲ್ಲ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ‘ರಾಜ್ಯಪಾಲರ ನಡೆಯ ಕುರಿತು ಉತ್ತಮ ಅಂಶಗಳನ್ನು ಹೇಳುತ್ತಿದ್ದಾರೆ. ಗಲಾಟೆಯಿಂದಾಗಿ ಯಾರಿಗೂ ಕೇಳುತ್ತಿಲ್ಲ’ ಎಂದು ಸಭಾಧ್ಯಕ್ಷರಿಗೆ ಹೇಳಿದರು. ಸಭಾಧ್ಯಕ್ಷರು ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು. ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಇಡೀ ಕಲಾಪವನ್ನು ನಗುತ್ತಲೇ ಆಲಿಸಿದರು.

ಪರಿಷತ್‌ನಲ್ಲೂ ಆಗ್ರಹ: ತಿಮ್ಮಾಪುರ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ವಿರೋಧ ಪಕ್ಷಗಳ ಬಿಜೆಪಿ, ಜೆಡಿಎಸ್ ಸದಸ್ಯರು ವಿಧಾನಪರಿಷತ್‌ನಲ್ಲೂ ಪಟ್ಟು ಹಿಡಿದರು.

ಲಂಚ ಪ್ರಕರಣದಲ್ಲಿ ಅಬಕಾರಿ ಉಪ ಆಯುಕ್ತ ಸೇರಿದಂತೆ ಮೂವರು ಲೋಕಾಯುಕ್ತ ಬಲೆಗೆ ಬಿದ್ದ ವಿಚಾರದ ಚರ್ಚೆಗೆ ನಿಲುವಳಿ ಸೂಚನೆ ಮಂಡಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಚಿವರನ್ನು ತಕ್ಷಣ ವಜಾ ಮಾಡಬೇಕು. ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಿಲುವಳಿ ಸೂಚನೆಯನ್ನು ಸಭಾಪತಿ ಬಸವರಾಜ ಹೊರಟ್ಟಿ ನಿಯಮ 330ಕ್ಕೆ ಬದಲಾಯಿಸಿದರು. ಅದಕ್ಕೆ ವಿರೋಧ ವ್ಯಕ್ತಪಡಿಸಿದ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್ ಸೇರಿದಂತೆ ಬಿಜೆಪಿ, ಜೆಡಿಎಸ್ ಸದಸ್ಯರು ಅಬಕಾರಿ ಹಗರಣದ ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ಪ್ರತಿಭಟನೆ ನಡೆಸಿದರು.

ವಿಬಿ ಜಿ ರಾಮ್ ಜಿ: ಚರ್ಚೆ

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಇದೇ 27 ಮತ್ತು 28ರಂದು ಚರ್ಚೆ ನಡೆಯಲಿದೆ. ಇದಕ್ಕೆ 28ರಂದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ನೀಡಲಿದ್ದಾರೆ. ಇದೇ 29ರಿಂದ 31ರವರೆಗೆ ವಿಬಿ ಜಿ ರಾಮ್ ಜಿ ಕಾಯ್ದೆಯ ನಿರ್ಣಯ ಕುರಿತು ಚರ್ಚೆ ನಡೆಯಲಿದ್ದು, 31ರಂದು ಮುಖ್ಯಮಂತ್ರಿ ಉತ್ತರ ನೀಡಲಿದ್ದಾರೆ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಪ್ರಕಟಿಸಿದರು.

ವೈದ್ಯನಾಗುವ ಬಯಕೆ: ಪಾದ ಕತ್ತರಿಸಿಕೊಂಡ ಯುವಕ



ಜೌನಪುರ (ಪಿಟಿಐ): ವೈದ್ಯನಾಗಬೇಕೆಂಬುದು ಅನೇಕ ವಿದ್ಯಾರ್ಥಿಗಳ ಕನಸು. ಇದಕ್ಕಾಗಿ ಹಗಲು–ರಾತ್ರಿ ಓದುತ್ತಾರೆ. ಆದರೆ, ಉತ್ತರ ಪ್ರದೇಶದ ಯುವಕರೊಬ್ಬರು ಅಂಗವಿಕಲರ ಕೋಟಾದಡಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಲು ತನ್ನ ಪಾದವನ್ನೇ ಕತ್ತರಿಸಿಕೊಂಡಿದ್ದಾರೆ.

ಜೌನಪುರ ಜಿಲ್ಲೆಯ ಖಲೀಲಪುರದ ಸೂರಜ್ ಭಾಸ್ಕರ್ (20) ಎಂಬುವವರು ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಲು ಎರಡು ಬಾರಿ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಬರೆದರೂ ಉತ್ತೀರ್ಣರಾಗಿರಲಿಲ್ಲ. ಹೀಗಾಗಿ, ಅಂಗವಿಕಲ ಕೋಟಾದಡಿಯಾದರೂ ಪ್ರವೇಶ ಪಡೆಯುವ ಉದ್ದೇಶದಿಂದ ಈ ಕೃತ್ಯ ಎಸಗಿರುವುದು ಪೊಲೀಸರ ತನಿಖೆಯಲ್ಲಿ ಪತ್ತೆಯಾಗಿದೆ.

ಸೂರಜ್ ವಿರುದ್ಧ ಯಾವ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಬಹುದು ಎಂಬುದನ್ನು ನಿರ್ಧರಿಸಲು ಪೊಲೀಸರು ಕಾನೂನು ತಜ್ಞರ ಅಭಿಪ್ರಾಯ ಪಡೆಯಲು ಮುಂದಾಗಿದ್ದಾರೆ.

ಏನಿದು ಪ್ರಕರಣ?: ‘ಶನಿವಾರ ರಾತ್ರಿ ಅಪರಿಚಿತ ದುಷ್ಕರ್ಮಿಗಳು ತಮ್ಮನ ಮೇಲೆ ಹಲ್ಲೆ ನಡೆಸಿ ಕಾಲು ಕತ್ತರಿಸಿ ಪರಾರಿಯಾಗಿದ್ದಾರೆ’ ಎಂದು ಸೂರಜ್ ಅವರ ಅಣ್ಣ ಆಕಾಶ್ ಭಾಸ್ಕರ್ ಭಾನುವಾರ ಪೊಲೀಸರಿಗೆ ದೂರು ನೀಡಿದ್ದರು.

‘ತನಿಖೆ ವೇಳೆ, ಸೂರಜ್ ನೀಡಿದ ಹೇಳಿಕೆಗಳು ಗೊಂದಲಕಾರಿಯಾಗಿದ್ದವು. ಅವರ ಮೊಬೈಲ್ ಫೋನ್ ಪರಿಶೀಲನೆ ವೇಳೆ ಮಹಿಳೆಯೊಬ್ಬರ ಮೊಬೈಲ್ ಸಂಖ್ಯೆ ಸಿಕ್ಕಿದ್ದು, ಅವರನ್ನು ವಿಚಾರಣೆ ನಡೆಸಿದಾಗ ಅನುಮಾನ ಮತ್ತಷ್ಟು ಹೆಚ್ಚಾಯಿತು’ ಎಂದು ತನಿಖಾಧಿಕಾರಿಯೂ ಆದ ನಗರ ವೃತ್ತಾಧಿಕಾರಿ (ಸಿಸಿಒ) ಗೋಲ್ಡಿ ಗುಪ್ತಾ ತಿಳಿಸಿದ್ದಾರೆ.

‘ಸೂರಜ್‌ಗೆ ಸೇರಿದ ಡೈರಿಯನ್ನು ವಶಪಡಿಸಿಕೊಳ್ಳಲಾಯಿತು. ಅದರಲ್ಲಿ ‘ನಾನು 2026ರಲ್ಲಿ ಎಂಬಿಬಿಎಸ್ ಮುಗಿಸಿ ವೈದ್ಯನಾಗುತ್ತೇನೆ’ ಎಂದು ಬರೆದಿದ್ದರು. ‘ನೀಟ್’ನಲ್ಲಿ ಎರಡು ಬಾರಿ ಅನುತ್ತೀರ್ಣರಾಗಿದ್ದರಿಂದ ಅವರು ಮಾನಸಿಕ ಖಿನ್ನತೆಗೆ ಒಳಗಾಗಿದ್ದರು’ ಎಂದು ಹೇಳಿದ್ದಾರೆ.

‘ಅಂಗವಿಕಲರ ಕೋಟಾದಡಿ ಪ್ರವೇಶ ಪಡೆಯಲು ತನ್ನ ಪಾದವನ್ನು ಕತ್ತರಿಸಿಕೊಂಡು, ಇದು ದುಷ್ಕರ್ಮಿಗಳ ಕೃತ್ಯವೆಂದು ಬಿಂಬಿಸಿ, ಆ ಮೂಲಕ ದೈಹಿಕವಾಗಿ ಅಂಗವಿಕಲನಾಗುವ ಯೋಜನೆಯನ್ನು ರೂಪಿಸಿದ್ದರು’ ಎಂದು ಗುಪ್ತಾ ತಿಳಿಸಿದ್ದಾರೆ.

‘ಆರೋಪಿಯು ಕಟ್ಟುಕಥೆ ಮೂಲಕ ತನಿಖೆಯ ದಾರಿ ತಪ್ಪಿಸಲು ಪ್ರಯತ್ನಿಸಿದರು. ಆದರೆ, ನಿರಂತರ ವಿಚಾರಣೆ ಮತ್ತು ಸಾಕ್ಷ್ಯಗಳ ಪರಿಶೀಲನೆ ವೇಳೆ ಸತ್ಯ ಗೊತ್ತಾಯಿತು. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದ್ದಾರೆ.

‘ಸೂರಜ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಲೈನ್ ಬಜಾರ್ ಠಾಣಾಧಿಕಾರಿ ಸತೀಶ್ ಸಿಂಗ್ ತಿಳಿಸಿದ್ದಾರೆ.

STORES OPEN
10AM - 10PM
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
ಸಾರೇ ಜಹಾಂ ಸೇ ಸಸ್ತಾ
UPTO 70% OFF
ಅತ್ಯಧಿಕ ರಿಯಾಯಿತಿ. ಅತ್ಯಧಿಕ ಬ್ರ್ಯಾಂಡುಗಳು
ಅತಿ ದೊಡ್ಡ ಗಣರಾಜ್ಯೋತ್ಸವ ಆಚರಣೆ
3 ದಿನಗಳು ಮಾತ್ರ
(24 – 26 ಜನವರಿ)
CASH BACK Upto 20% ಕ್ರೆಡಿಟ್ ಕಾರ್ಡ್‌ಗಳ ಮೇಲೆ
HDFC BANK We understand your world
10% OFF INSTANT CASH BACK ON CC & DC EMI* MIN TXN ₹17,000 MAX CAP ₹2,500 *T&C
ಫೈನಾನ್ಸ್ ಬೊನಾಂಜಾ
1 ಇ.ಎಮ್.ಐ ಉಚಿತ*
ಇನ್ಸ್ಟಂಟ್ ಲೋನ್ ಅಪ್ರೂವಲ್ UPTO ₹4,00,000*
UPTO ₹15,000* ಕ್ಯಾಶ್ ಬ್ಯಾಕ್*
ಮೆಗಾ ಎಕ್ಸ್‌ಚೇಂಜ್ ಕೊಡುಗೆ ಅಪ್‌ಡೇಟ್
UPTO ₹25,000
ಪರಿಗೂ ಕಡಿತ ಹಳೆಯ ಎಲೆಕ್ಟ್ರಿಕ್, ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ*
SAMSUNG 65 4K ULTRA HD SMART ಎಲ್‌ಇಡಿ 65DU8300 10% CASH BACK ಗಣರಾಜ್ಯೋತ್ಸವ ದಿನದ ವಿಶೇಷ ಕೊಡುಗೆ 32% ಕಡಿತ SPECIAL PRICE:₹66,690 MRP: ₹98,500
SONY 65 4K ULTRA HD SMART ಎಲ್‌ಇಡಿ K-65S25 10% CASH BACK 53% ಕಡಿತ SPECIAL PRICE:₹65,690 MRP: ₹1,39,990
LG 55 QNED AI ಎಲ್‌ಇಡಿ 55QNED82T6A 20% CASH BACK 52% ಕಡಿತ SPECIAL PRICE:₹55,390 MRP: ₹1,16,090
Haier 55 QLED GOOGLE ಎಲ್‌ಇಡಿ 10% CASH BACK 54% ಕಡಿತ SPECIAL PRICE:₹55,090 MRP: ₹1,20,990
Panasonic 43 4K UHD SMART ಎಲ್‌ಇಡಿ 10% CASH BACK 39% ಕಡಿತ SPECIAL PRICE:₹32,990 MRP: ₹53,990
vivo V60E 5G 8+256 10% CASH BACK SPECIAL PRICE ₹30,600* ಇ.ಎಮ್.ಐ ₹2,550
Redmi NOTE 15 5G 8+128 UPTO ₹3000 CASH BACK ₹22,999* EMI ₹1,917
SAMSUNG S25/ S25Ultra SPECIAL PRICE ₹74,999* Onwards ಇ.ಎಮ್.ಐ ₹6,250
iPhone 17 17 256 10% CASH BACK SPECIAL PRICE ₹81,500* ಇ.ಎಮ್.ಐ ₹6,792
realme 15 5G 8+128 10% CASH BACK SPECIAL PRICE ₹25,300* ಇ.ಎಮ್.ಐ ₹2,108
oppo F31 5G 8+128 10% CASH BACK SPECIAL PRICE ₹23,890* EMI ₹1,991
hp 15S 10% CASH BACK • 13TH GEN i3 • 12GB RAM, 512 GB SSD • 15.6 FHD • WIN 11 MSO 24 OFFER PRICE ₹42,990 ಇ.ಎಮ್.ಐ ₹3,583
DELL INS15 10% CASH BACK • CORE i3 • 16GB RAM,512 GB SSD • 15.6" FHD • WIN 11 MSO 24 OFFER PRICE ₹43,490 ಇ.ಎಮ್.ಐ ₹3,624
DELL 3530 10% CASH BACK • 13TH GEN i5 • 16GB RAM • 512GB SSD • 15.6 FHD • WIN 11 MSO 24 OFFER PRICE ₹53,990 ಇ.ಎಮ್.ಐ ₹4,499
Lenovo SLIM 3 10% CASH BACK • 13TH GEN i7-13620H • 16GB,512GB SSD • 15.3" WUXGA • WIN 11 MSO 24 OFFER PRICE ₹67,990 ಇ.ಎಮ್.ಐ ₹5,666
Lenovo LOQ 10% CASH BACK • RYZEN 5 7235HS • 24GB, 512GB SSD • RTX 3050 6GB • 15.6 FHD • WIN 11 MSO 24 OFFER PRICE ₹69,990 ಇ.ಎಮ್.ಐ ₹5,833
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 10% CASH BACK 506 LTRS Double Door Refrigerator, Smart Inverter Compressor GN-H702HLHM 37% ಕಡಿತ SPECIAL PRICE:₹63,349 MRP: ₹1,00,999
Whirlpool 10% CASH BACK 231 LTRS FROST FREE REFRIGERATOR 32% ಕಡಿತ SPECIAL PRICE:₹25,175 MRP: ₹37,100
DAIKIN 1.8 TON 1 STAR SPLIT AC 10% CASH BACK 35% ಕಡಿತ SPECIAL PRICE:₹36,890 MRP: ₹56,780
BOSCH 10% CASH BACK 10 ಕೆಜಿ FULLY AUTOMATIC ಫ್ರಂಟ್ ಲೋಡಿಂಗ್ WASHING MACHINE 30% ಕಡಿತ SPECIAL PRICE:₹42,890 MRP: ₹61,590
Godrej 10% CASH BACK 7 ಕೆಜಿ ಫ್ರಂಟ್ ಲೋಡಿಂಗ್ 43% ಕಡಿತ SPECIAL PRICE:₹26,999 MRP: ₹48,000
LG 20% CASH BACK 14 PLACE SETTIN FREESTANDING DISHWASHER DFB512FP 26% ಕಡಿತ SPECIAL PRICE:₹40,790 MRP: ₹55,499
IFB 25ಲೀ ಕನ್‌ವೆಕ್ಷನ್ ಮೈಕ್ರೋವೇವ್ 36% ಕಡಿತ SPECIAL PRICE:₹12,630 MRP: ₹19,890
OFFER VALID TILL STOCK LAST | OFFER VALID TILL STOCK LAST
GEYSER 60% ಕಡಿತ
MIXER GRINDER 63% ಕಡಿತ
CHIMNEY 50% ಕಡಿತ
WATER PURIFIER 53% ಕಡಿತ
SONY HT-S40R REAL 5.1CH, 600W, DOLBY AUDIO, WIRELESS REAR SPEAKERS UPTO ₹2000 CASH BACK 37% ಕಡಿತ SPECIAL PRICE:₹22,190 MRP: ₹34,990
GIRIAS THE CONSUMER DURABLE PEOPLE Since 1971
ಆಂಧ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.
180 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸತ್ಯವನ್ನು ಹೇಳುವವನು, ಸ್ವಾರ್ಥವನ್ನು ಗೆದ್ದವನು ನಿಜವಾದ ಸುಖಿ.

–ಗೌತಮ ಬುದ್ಧ

ಸಂಪಾದಕೀಯ

ರೋಗಗ್ರಸ್ತ ಉನ್ನತ ಶಿಕ್ಷಣ ಕ್ಷೇತ್ರ ‘ಸುಪ್ರೀಂ’ ನಿರ್ದೇಶನವೇ ಭರವಸೆ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತುರ್ತಾಗಿ ಆಗಬೇಕಾದ ಸುಧಾರಣೆಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳು, ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳು ಅನುಭವಿಸುತ್ತಿರುವ ತೀವ್ರ ಒತ್ತಡ ಮತ್ತು ಅವರ ಆತ್ಮಹತ್ಯೆ ಪ್ರಕರಣಗಳ ಕುರಿತಾದ ಕಳವಳಕ್ಕೆ ಸ್ಪಂದನದಂತಿವೆ. ಈ ನಿರ್ದೇಶನಗಳು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಮೂಲ ಸೌಕರ್ಯಗಳ ಕೊರತೆಯು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದನ್ನು ಸೂಚಿಸುವಂತಿವೆ. ನ್ಯಾಯಾಲಯವು ರಚಿಸಿದ್ದ ಕಾರ್ಯಪಡೆಯೊಂದು ನೀಡಿರುವ ಮಧ್ಯಂತರ ವರದಿಯನ್ನು ಆಧರಿಸಿ, ವಿದ್ಯಾರ್ಥಿಗಳ ಹಿತಾಸಕ್ತಿಗೆ ಅನುಕೂಲ ಆಗುವಂತೆ ಸಾಂಸ್ಥಿಕ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ನಿರ್ದೇಶನಗಳನ್ನು ನೀಡಲಾಗಿದೆ. ಕಟ್ಟುನಿಟ್ಟಾದ ಹಾಜರಾತಿ ವ್ಯವಸ್ಥೆ, ಪಠ್ಯಕ್ರಮ ಮತ್ತು ಪರೀಕ್ಷಾ ಮೌಲ್ಯಮಾಪನಕ್ಕೆ ಸಂಬಂಧಿಸಿದ ತೊಡಕುಗಳು, ಕಠಿಣವಾದ ನಿಯೋಜನೆ ಪ್ರಕ್ರಿಯೆಯಲ್ಲಿನ ಅಸಮರ್ಪಕತೆ, ಬೋಧಕ ಸಿಬ್ಬಂದಿ ಕೊರತೆ ಮತ್ತಿತರ ಸಂಗತಿಗಳು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಉಂಟುಮಾಡುತ್ತಿದ್ದು, ರಚನಾತ್ಮಕ ಶೈಕ್ಷಣಿಕ ಜೀವನವನ್ನು ಖಾತರಿಪಡಿಸುವ ಅಗತ್ಯ ಇರುವುದನ್ನು ಕೋರ್ಟ್ ಗಮನಿಸಿದೆ.

ಸಂವಿಧಾನದ 142ನೇ ವಿಧಿಯನ್ವಯ ತನಗಿರುವ ಅಧಿಕಾರವನ್ನು ಬಳಸಿ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಗೆ ಅಗತ್ಯವಾದ ನಿರ್ದೇಶನಗಳನ್ನು ಸುಪ್ರೀಂ ಕೋರ್ಟ್ ನೀಡಿದೆ. ಇವುಗಳಲ್ಲಿ ಏಳು ನಿರ್ದೇಶನಗಳು ಆತ್ಮಹತ್ಯೆಗಳ ದಾಖಲೆ ನಿರ್ವಹಣೆ, ವರದಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ್ದಾಗಿವೆ. ಉಳಿದ ಎರಡು ನಿರ್ದೇಶನಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಿಸಿದ್ದಾಗಿವೆ. ಸರ್ಕಾರಿ ಮತ್ತು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿಯ ಹುದ್ದೆಗಳನ್ನು ನಾಲ್ಕು ತಿಂಗಳಲ್ಲಿ ತುಂಬುವಂತೆ ಕೋರ್ಟ್ ಸೂಚಿಸಿದೆ. ಕುಲಪತಿ, ರಿಜಿಸ್ಟ್ರಾರ್ ಹುದ್ದೆಗಳು ಖಾಲಿಯಾದ ಒಂದು ತಿಂಗಳಲ್ಲಿ ತುಂಬುವುದರೊಂದಿಗೆ, ನಿಯಮಿತ ಪ್ರಕ್ರಿಯೆಯನ್ನು ಅನುಸರಿಸುವಂತೆಯೂ ಸೂಚಿಸಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ನಾಯಕತ್ವದ ಹುದ್ದೆಗಳು ದೀರ್ಘ ಕಾಲ ಖಾಲಿ ಉಳಿಯಬಾರದು ಎಂದು ರಾಷ್ಟ್ರೀಯ ಶಿಕ್ಷಣ ನೀತಿ ಹೇಳಿರುವುದನ್ನು ಕಾರ್ಯಪಡೆ ತನ್ನ ವರದಿಯಲ್ಲಿ ಉಲ್ಲೇಖಿಸಿರುವುದನ್ನು ಕೋರ್ಟ್ ಗಮನಿಸಿದೆ. ಬಾಕಿ ಉಳಿದಿರುವ ವಿದ್ಯಾರ್ಥಿ ವೇತನಗಳನ್ನು ನಾಲ್ಕು ತಿಂಗಳಲ್ಲಿ ವಿತರಿಸುವಂತೆಯೂ ಕೋರ್ಟ್ ಹೇಳಿದೆ. ವಾಣಿಜ್ಯೀಕರಣ ಮತ್ತು ಖಾಸಗೀಕರಣದಿಂದಾಗಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ನೋಂದಣಿಗೆ ಸಂಬಂಧಿಸಿದಂತೆ ಭಾರತ ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿದೆ. ಆದರೆ, ಈ ಬೆಳವಣಿಗೆಯ ಜೊತೆಗೇ ವಿದ್ಯಾರ್ಥಿಗಳ ಮಾನಸಿಕ ಒತ್ತಡ, ಆತ್ಮಹತ್ಯೆಗಳು, ಶೋಷಣೆ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನೂ ಗಮನಿಸಬೇಕು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.



ಸುಪ್ರೀಂ ಕೋರ್ಟ್ ನಿರ್ದೇಶನದಿಂದಾಗಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತ್ವರಿತ ಹಾಗೂ ಪರಿಣಾಮಕಾರಿ ಬದಲಾವಣೆ ಸಾಧ್ಯವಾಗುವ ಆಶಾಭಾವ ರೂಪುಗೊಂಡಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅರ್ಧದಷ್ಟು ಉನ್ನತ ಹುದ್ದೆಗಳು ಖಾಲಿ ಉಳಿದಿವೆ ಎನ್ನಲಾಗಿದೆ. ಮತ್ತಷ್ಟು ವಿಳಂಬ ಮಾಡದೆ ಆ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಪ್ರಸ್ತುತ, ನ್ಯಾಯಾಲಯವು ಹಸ್ತಕ್ಷೇಪ ಮಾಡಿದ್ದರೂ, ಆ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಗೊತ್ತುಪಡಿಸಿರುವ ಕಡಿಮೆ ಅವಧಿಯಲ್ಲಿ ನಡೆಯಲಿದೆಯೇ ಎನ್ನುವುದನ್ನು ಕಾದು ನೋಡಬೇಕಾಗಿದೆ. ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ಕೆಲವು ರಾಜ್ಯಗಳಲ್ಲಿ ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ನಡುವಿನ ಸಂಘರ್ಷದಿಂದ ಕುಲಪತಿಗಳ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಆ ಪ್ರಕ್ರಿಯೆ ಕಾನೂನು ಮತ್ತು ರಾಜಕೀಯ ಸವಾಲುಗಳನ್ನು ಎದುರಿಸುತ್ತಿದೆ. ಬೋಧಕ ಸಿಬ್ಬಂದಿ ನೇಮಕಾತಿ ಯುಜಿಸಿ ನಿಯಮಾವಳಿಯ ಪ್ರಕಾರವೇ ನಡೆಯಬೇಕಾಗುವುದರಿಂದ, ನಿಗದಿತ ಮಾನದಂಡಗಳನ್ನು ಉಲ್ಲಂಘಿಸಿ ತರಾತುರಿಯಲ್ಲಿ ಆ ಪ್ರಕ್ರಿಯೆ ನಡೆಸುವುದಕ್ಕೆ ಸಾಧ್ಯವಿಲ್ಲ. ಆಯವ್ಯಯಕ್ಕೆ ಸಂಬಂಧಿಸಿದ ವಿಚಾರಗಳೂ ನೇಮಕಾತಿಗಳೊಂದಿಗೆ ತಳಕು ಹಾಕಿಕೊಂಡಿವೆ. ಹಾಗೆಯೇ, ಬೋಧನೆ ಮತ್ತು ಆಡಳಿತಾತ್ಮಕ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳು ಇದ್ದಕ್ಕಿದ್ದಂತೆ ದೊರೆಯುತ್ತಾರೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ಇವೆಲ್ಲ ಅಡೆತಡೆಗಳ ನಡುವೆಯೂ, ನ್ಯಾಯಾಲಯದ ನಿರ್ದೇಶನಗಳಲ್ಲಿ ವ್ಯಕ್ತವಾಗಿರುವ ದೃಢ ಉದ್ದೇಶವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ತ್ವರಿತ ಮತ್ತು ಪರಿಣಾಮಕಾರಿ ಬದಲಾವಣೆ ತರಬಹುದಾದ ಮೊದಲ ಹೆಜ್ಜೆ ಆಗುವ ಸಾಧ್ಯತೆಯಿದೆ.

ರಾಜ್ಯಪಾಲ: ಕತ್ತಿ ಇಲ್ಲದ ರಾಜ

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಮೇಲ್ನೋಟಕ್ಕೆ ಶಕ್ತಿಶಾಲಿಯಾಗಿ ಕಾಣಿಸುವ ರಾಜ್ಯಪಾಲರ ಸ್ಥಾನ ಅತ್ಯಂತ ಅಸುರಕ್ಷಿತವೂ ಹೌದು. ಈ ಹುದ್ದೆಯ ಅಗತ್ಯ ಮತ್ತು ಅದರ ಸ್ಥಾನ–ಮಾನದ ಚರ್ಚೆಗೆ ಕೆಲವು ರಾಜ್ಯಪಾಲರೇ ಅವಕಾಶ ಕಲ್ಪಿಸಿದ್ದಾರೆ. ಈ ಆಲಂಕಾರಿಕ ಹುದ್ದೆಯನ್ನು ಬಲಪಡಿಸುವ ಬಗ್ಗೆ, ಇಲ್ಲವೇ ಲೋಕ ಭವನವನ್ನು ಮುಚ್ಚುವ ಬಗ್ಗೆ ರಾಜಕೀಯ ಪಕ್ಷಗಳು ನಿರ್ಧರಿಸಲು ಇದು ಸಕಾಲ.

ರಾಜ್ಯಪಾಲರಷ್ಟು ಶೋಷಣೆಗೀಡಾದ ಸಾಂವಿಧಾನಿಕ ಹುದ್ದೆ ಮತ್ತೊಂದಿಲ್ಲ. ರಾಜ್ಯಪಾಲರದ್ದು ಒಂದು ರೀತಿಯಲ್ಲಿ ಒರೆಯಲ್ಲಿ ಕತ್ತಿ ಇಲ್ಲದೆ ತಲೆಗೆ ಕಿರೀಟ ತೊಟ್ಟ ಅರಸನ ಕತೆ. ಸಂವಿಧಾನದ ಪಾಲನೆ, ರಕ್ಷಣೆ ಹಾಗೂ ಸಮರ್ಥನೆಯ ಪ್ರಮಾಣವಚನದೊಂದಿಗೆ ಅಧಿಕಾರ ಸ್ವೀಕರಿಸುವ ರಾಜ್ಯಪಾಲರು, ಏಕಕಾಲಕ್ಕೆ ರಾಜ್ಯದಲ್ಲಿ ಸಾಂವಿಧಾನಿಕ ಮುಖ್ಯಸ್ಥರು ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಆಗಿರುತ್ತಾರೆ. ಇಂತಹ ದ್ವಿಪಾತ್ರವೇ ಹಲವಾರು ಬಾರಿ ಈ ಹುದ್ದೆಯನ್ನು ವಿವಾದದ ಸುಳಿಗೆ ಸಿಕ್ಕಿಸಿದೆ.

ರಾಜ್ಯಪಾಲರು ಇಚ್ಛಿಸುವವರೆಗೆ ಮಾತ್ರ ಮುಖ್ಯಮಂತ್ರಿ ಅಧಿಕಾರದಲ್ಲಿರಬಹುದು ಎನ್ನುತ್ತದೆ ಸಂವಿಧಾನದ 164(1)ನೇ ಪರಿಚ್ಛೇದ. ರಾಜ್ಯದ ಆಡಳಿತ ಅಧಿಕೃತವಾಗಿ ನಡೆಯುವುದೆಲ್ಲವೂ ರಾಜ್ಯಪಾಲರ ಹೆಸರಿನಲ್ಲಿ. ಅವರ ಅಂಕಿತ ಇಲ್ಲದೆ ಯಾವ ಮಸೂದೆಯೂ ಕಾನೂನಿನ ರೂಪ ಪಡೆಯುವ ಹಾಗಿಲ್ಲ. ರಾಜ್ಯಪಾಲರೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಕೊಂಡಿ... ಹೀಗೆ ಹೇಳುತ್ತಾ ಹೋದರೆ ರಾಜ್ಯಪಾಲರದು ಶಕ್ತಿಶಾಲಿ ಹುದ್ದೆ ಅನಿಸುವುದು ಸಹಜವೇ. ಆದರೆ, ರಾಜ್ಯಪಾಲರಷ್ಟು ದುರ್ಬಲ ಮತ್ತು ಕಳಂಕಿತ ಹುದ್ದೆ ಇನ್ನೊಂದಿಲ್ಲ.

ರಾಜ್ಯಪಾಲರಿಗೆ ಒಬ್ಬ ಸಾಮಾನ್ಯ ಸರ್ಕಾರಿ ನೌಕರನಿಗೆ ಇರುವ ಸೇವಾಭದ್ರತೆ ಇಲ್ಲವೇ ಸ್ವಾತಂತ್ರ್ಯ ಇಲ್ಲ. ಕೇಂದ್ರದಲ್ಲಿರುವ ಆಡಳಿತಾರೂಢ ಪಕ್ಷ ತನ್ನ ಮರ್ಜಿಗೆ ತಕ್ಕಂತೆ ರಾಜ್ಯಪಾಲರ ನೇಮಕಾತಿ ಮಾಡಬಹುದು, ಇಲ್ಲವೇ ಕಿತ್ತುಹಾಕಬಹುದು. ಈ ಅಭದ್ರತೆಯ ಕಾರಣದಿಂದಾಗಿಯೇ ಪಕ್ಷಾತೀತವಾಗಿ ಕೇಂದ್ರದ ಆಡಳಿತಾರೂಢ ಪಕ್ಷಗಳು ತಮ್ಮ ರಾಜಕೀಯ ಅಜೆಂಡಾಗಳಿಗೆ ಅನುಗುಣವಾಗಿ ರಾಜ್ಯಪಾಲರನ್ನು ಸೂತ್ರದ ಗೊಂಬೆಗಳಂತೆ ದುರ್ಬಳಕೆ ಮಾಡುತ್ತಾ ಬಂದಿವೆ. ಸ್ವಾತಂತ್ರ್ಯಾನಂತರದ ಮೊದಲ ಮೂವತ್ತು ವರ್ಷ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದ ಕಾರಣ, ಲೋಕ ಭವನದ ದುರುಪಯೋಗಕ್ಕೆ ಚಾಲನೆ ನೀಡಿದ್ದು ಕಾಂಗ್ರೆಸ್ ಎನ್ನುವುದು ನಿರ್ವಿವಾದ. ಆದರೆ, ಕೇರಳದಲ್ಲಿ ಇ.ಎಂ.ಎಸ್. ನಂಬೂದಿರಿಪಾಡ್ ನೇತೃತ್ವದ ಕಮ್ಯುನಿಸ್ಟ್ ಸರ್ಕಾರವನ್ನು ಪ್ರಧಾನಿ ಜವಾಹರಲಾಲ್ ನೆಹರೂ ಕಿತ್ತುಹಾಕಿದ ನಂತರ 1967ರವರೆಗೆ ಲೋಕ ಭವನದ ರಾಜಕೀಯ ದುರುಪಯೋಗದ ಪ್ರಕರಣಗಳು ನಡೆದಿರಲಿಲ್ಲ ಎನ್ನುವುದೂ ನಿಜ. 1977ರಲ್ಲಿ ಅಧಿಕಾರ ಹಿಡಿದ ಜನತಾ ಸರ್ಕಾರ– ಕರ್ನಾಟಕ, ಪಂಜಾಬ್ ಮತ್ತು ಆಂಧ್ರಪ್ರದೇಶದ ರಾಜ್ಯಪಾಲರನ್ನು ಮನೆಗೆ ಕಳಿಸಿತ್ತು. ವಿ.ಪಿ. ಸಿಂಗ್ ಪ್ರಧಾನಿಯಾದಾಗ ಕಾಂಗ್ರೆಸ್ ಕಾಲದಲ್ಲಿ ನೇಮಕಗೊಂಡಿದ್ದ 18 ರಾಜ್ಯಪಾಲರನ್ನು ವಜಾಮಾಡಿತ್ತು. 1998ರಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅಧಿಕಾರ ವಹಿಸಿಕೊಂಡಾಗ, ಹಿಂದಿನ ಸರ್ಕಾರ ನೇಮಿಸಿದ್ದ ಆರು ರಾಜ್ಯಪಾಲರು ರಾಜೀನಾಮೆ ನೀಡಬೇಕಾಯಿತು. ಅವರಲ್ಲೊಬ್ಬರು, 2 ತಿಂಗಳ ಹಿಂದೆಯಷ್ಟೇ ಗೋವಾ ರಾಜ್ಯಪಾಲರಾಗಿ ನೇಮಕಗೊಂಡಿದ್ದ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ಟಿ.ಆರ್. ಸತೀಶ್ ಚಂದ್ರನ್.

ಎಲ್ಲ ಸಂದರ್ಭಗಳಲ್ಲಿಯೂ ರಾಜ್ಯಪಾಲರನ್ನು ಕೇಂದ್ರ ಸರ್ಕಾರವೇ ತಾಳಕ್ಕೆ ತಕ್ಕಂತೆ ಕುಣಿಸುತ್ತಾ ಬಂದಿದೆ ಎಂದು ಹೇಳಲಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹುದ್ದೆಯ ಅಭದ್ರತೆ ಮತ್ತು ಅದರಿಂದ ಹುಟ್ಟಿಕೊಂಡ ಕೀಳರಿಮೆಯ ಕಾರಣದಿಂದಲೋ ಏನೋ ಕೆಲವು ರಾಜ್ಯಪಾಲರು ಅತಿಕ್ರಿಯಾಶೀಲರಾಗಲು ಹೋಗಿ ವಿವಾದದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ, ಕರ್ನಾಟಕದ ರಾಜ್ಯಪಾಲರಾಗಿದ್ದ (2009–2014) ಹಂಸರಾಜ್ ಭಾರದ್ವಾಜ್. ಇವರು ಆಗಿನ ವಿರೋಧಪಕ್ಷದ ನಾಯಕರಿಗಿಂತ ಹೆಚ್ಚು ಆಕ್ರಮಣಕಾರಿಯಾಗಿ ಬಿ.ಎಸ್. ಯಡಿಯೂರಪ್ಪ ಸರ್ಕಾರದ ವಿರುದ್ಧ ಮುಗಿಬೀಳುತ್ತಿದ್ದರು. 2011ರಲ್ಲಿ ವಿಧಾನಸಭೆಯನ್ನು ಅಮಾನತಿನಲ್ಲಿರಿಸಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂಬ ಭಾರದ್ವಾಜ್ ಶಿಫಾರಸನ್ನು ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವೇ ತಿರಸ್ಕರಿಸಿತ್ತು.

ಒಂದು ಕಾಲದಲ್ಲಿ ಲೋಕ ಭವನಗಳು ಸುದ್ದಿ ಆಗುತ್ತಿದ್ದುದು ಕೇಂದ್ರ ಸರ್ಕಾರಗಳು ಸಂವಿಧಾನದ 356ನೇ ಪರಿಚ್ಛೇದದಡಿ ರಾಜ್ಯ ಸರ್ಕಾರವನ್ನು ವಜಾಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುತ್ತಿದ್ದ ಪ್ರಕರಣಗಳಲ್ಲಿ. ಎಸ್.ಆರ್. ಬೊಮ್ಮಾಯಿ ಮತ್ತು ಕೇಂದ್ರ ಸರ್ಕಾರದ ನಡುವಿನ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ನಂತರ ಈ ಪರಿಚ್ಛೇದದ ದುರುಪಯೋಗ ಹೆಚ್ಚುಕಡಿಮೆ ನಿಂತಿದೆ. ಆದರೆ, ವಿರೋಧಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಕ್ಕೆ ಕಿರುಕುಳ ನೀಡಲು ರಾಜ್ಯಪಾಲರನ್ನು ದುರ್ಬಳಕೆ ಮಾಡುವ ಕೇಂದ್ರ ಸರ್ಕಾರದ ಪ್ರಯತ್ನಗಳು ನಿಂತಿಲ್ಲ. ಇದಕ್ಕೆ ತಮಿಳುನಾಡು ಮತ್ತು ಕೇರಳ ರಾಜ್ಯಗಳ ರಾಜ್ಯಪಾಲರ ನಡವಳಿಕೆಗಳೇ ಸಾಕ್ಷಿ. ಈ ‘ಸಾಂಕ್ರಾಮಿಕ ರೋಗ’ಕ್ಕೆ ಈಗ ಕರ್ನಾಟಕದ ರಾಜ್ಯಪಾಲರಾದ ಥಾವರಚಂದ್ ಗೆಹಲೋತ್ ಅವರೂ ಬಲಿಯಾಗಿದ್ದಾರೆ.

ಲೋಕ ಭವನದ ದುರ್ಬಳಕೆ ತಡೆಯಬೇಕೆಂದು ರಾಜಕೀಯ ಪಕ್ಷಗಳು ಬಯಸಿದರೆ ಅದಕ್ಕೆ ದಾರಿ ಇದೆ. ಅದಕ್ಕಾಗಿ ರಾಜ್ಯಪಾಲರ ಹುದ್ದೆಗೆ ನಿಜವಾದ ಸ್ವಾಯತ್ತತೆಯನ್ನು ನೀಡಿ ಅದನ್ನು ಬಲಗೊಳಿಸಬೇಕು. ರಾಜ್ಯಪಾಲರ ಹುದ್ದೆಗೆ ಭದ್ರತೆ ಒದಗಿಸಬೇಕೆಂಬ ಬಗ್ಗೆ ಸಂವಿಧಾನ ರಚನಾಸಭೆ ಸುದೀರ್ಘ ಚರ್ಚೆ ನಡೆಸಿತ್ತು. ರಾಜ್ಯಪಾಲರನ್ನು ನೇರವಾಗಿ ಶಾಸಕರೇ ಆಯ್ಕೆ ಮಾಡಬಹುದೆಂಬ ಸಲಹೆಯೂ ಆ ಚರ್ಚೆಯಲ್ಲಿ ವ್ಯಕ್ತವಾಗಿತ್ತು. ಆದರೆ, ಚುನಾವಣೆ ಮೂಲಕ ನೇಮಕಗೊಂಡ ರಾಜ್ಯಪಾಲರು ರಾಜ್ಯದಲ್ಲಿ ನಿಷ್ಪಕ್ಷಪಾತವಾಗಿ ಉಳಿಯದೆ ಪ್ರಾಂತೀಯ ಭಾವನೆಗೆ ಉತ್ತೇಜನ ನೀಡುವ ಸಾಧ್ಯತೆ ಇದೆ ಎಂದು ನೆಹರೂ ಸೇರಿದಂತೆ ಕೆಲವರು ಆತಂಕ ವ್ಯಕ್ತಪಡಿಸಿದ್ದರು.

ರಾಜ್ಯ ಸರ್ಕಾರಗಳನ್ನು ನಿಯಂತ್ರಿಸಿಕೊಂಡು ಹೋಗುವ ರೀತಿಯಲ್ಲಿ ಕೇಂದ್ರವನ್ನು ಬಲಗೊಳಿಸಬೇಕೆಂಬ ಅಭಿಪ್ರಾಯವೇ ಆ ಕಾಲದಲ್ಲಿ ಬಲವಾಗಿದ್ದ ಕಾರಣದಿಂದಾಗಿ ಚುನಾಯಿತ ಪ್ರತಿನಿಧಿಗಳ ತಲೆಯ ಮೇಲೆ ರಾಜ್ಯಪಾಲರ ಹುದ್ದೆಯನ್ನು ಸೃಷ್ಟಿಸಲಾಗಿತ್ತು. ಈ ಸದುದ್ದೇಶವನ್ನು ದುರುಪಯೋಗಪಡಿಸಿಕೊಂಡ ರಾಜಕೀಯ ಪಕ್ಷಗಳು ಅರ್ಹತೆಯನ್ನು ಪಕ್ಕಕ್ಕೆ ಸರಿಸಿ, ಪಕ್ಷನಿಷ್ಠೆ ಮತ್ತು ರಾಜಕೀಯ ಲಾಭ–ನಷ್ಟದ ಲೆಕ್ಕಾಚಾರದ ಆಧಾರದಲ್ಲಿ ರಾಜ್ಯಪಾಲರನ್ನು ನೇಮಿಸ ತೊಡಗಿದವು. ಅದರ ಪರಿಣಾಮವೇ ಇಂದಿನ ಸ್ಥಿತಿ.

ಲೋಕ ಭವನದ ಸಮಸ್ಯೆಗೆ ಪರಿಹಾರ ಇಲ್ಲವೆಂದಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಸುಧಾರಣೆಗಾಗಿ ರಚನೆಗೊಂಡ ನ್ಯಾಯಮೂರ್ತಿ ಆರ್.ಎಸ್. ಸರ್ಕಾರಿಯಾ ಆಯೋಗ ಮತ್ತು ಸಂವಿಧಾನ ಕಾರ್ಯ ನಿರ್ವಹಣೆಯ ಪುನರ್ ಪರಿಶೀಲನಾ ಆಯೋಗದ ಶಿಫಾರಸುಗಳಲ್ಲಿ ಪರಿಹಾರಗಳಿದ್ದು, ಕೆಲವು ಶಿಫಾರಸುಗಳು ಹೀಗಿವೆ:

- ರಾಜ್ಯಪಾಲರಾಗಿ ನೇಮಕಗೊಳ್ಳುವವರು ಯಾವುದಾದರೂ ಒಂದು ಕ್ಷೇತ್ರದಲ್ಲಿ ಸಾಧನೆ ಮಾಡಿರಬೇಕು. ಹುಟ್ಟಿದ ರಾಜ್ಯದಲ್ಲಿ ರಾಜ್ಯಪಾಲರಾಗಬಾರದು. ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ ಕ್ರಿಯಾಶೀಲರಾಗಿರಬಾರದು.
- ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ಸೇರಿದವರನ್ನು ವಿರೋಧಪಕ್ಷಗಳ ಆಡಳಿತ ಇರುವ ರಾಜ್ಯಕ್ಕೆ ರಾಜ್ಯಪಾಲರಾಗಿ ನೇಮಕ ಮಾಡಬಾರದು. ರಾಜ್ಯಪಾಲರಾಗಿ ಹೋಗುವವರು ರಾಜ್ಯ ರಾಜಕೀಯದಲ್ಲಿ ಆಸಕ್ತಿಹೊಂದಿರಬಾರದು.
- ರಾಜ್ಯಪಾಲರನ್ನು ನೇಮಕ ಮಾಡುವ ಮೊದಲು ಕೇಂದ್ರವು ಸಂಬಂಧಿತ ರಾಜ್ಯಗಳ ಮುಖ್ಯಮಂತ್ರಿ ಜೊತೆ ಸಮಾಲೋಚನೆ ನಡೆಸಬೇಕು. ರಾಜ್ಯಪಾಲರ ನೇಮಕಾತಿ ಬಗ್ಗೆ ಉಪರಾಷ್ಟ್ರಪತಿ ಮತ್ತು ಲೋಕಸಭಾಧ್ಯಕ್ಷರ ಜೊತೆ ರಹಸ್ಯ, ಅನೌಪಚಾರಿಕ ಸಮಾಲೋಚನೆ ನಡೆಸಬೇಕು.
- ಒಮ್ಮೆ ರಾಜ್ಯಪಾಲರ ಹುದ್ದೆಯಿಂದ ನಿರ್ಗಮಿಸಿದ ನಂತರ ಅವರು ಯಾವುದೇ ರಾಜಕೀಯ ಅಧಿಕಾರದ ಸ್ಥಾನಮಾನ, ಲಾಭದಾಯಕ ಹುದ್ದೆ ಹೊಂದಬಾರದು. ಬೇಕಿದ್ದರೆ ಇನ್ನೊಂದು ರಾಜ್ಯಕ್ಕೆ ರಾಜ್ಯಪಾಲರಾಗಿ ಹೋಗಬಹುದು.

ಸರ್ಕಾರಿಯಾ ಆಯೋಗದ ಕೆಲವು ಶಿಫಾರಸುಗಳನ್ನು ಬೆಂಬಲಿಸುವ ಜೊತೆಯಲ್ಲಿ, ಸಂವಿಧಾನದ ಕಾರ್ಯನಿರ್ವಹಣೆಯ ಪುನರ್ ಪರಿಶೀಲನಾ ಆಯೋಗ ಇನ್ನಷ್ಟು ಹೊಸ ಶಿಫಾರಸು ಮಾಡಿದೆ:

- ರಾಜ್ಯಪಾಲರ ನೇಮಕಕ್ಕೆ ಪ್ರಧಾನಮಂತ್ರಿ, ಲೋಕಸಭಾಧ್ಯಕ್ಷರು ಮತ್ತು ಸಂಬಂಧಿತ ರಾಜ್ಯಗಳ ಮುಖ್ಯಮಂತ್ರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಬೇಕು. ಅದರಲ್ಲಿ ಉಪರಾಷ್ಟ್ರಪತಿಗಳನ್ನು ಸೇರಿಸಿಕೊಳ್ಳಬಹುದು. ಸರ್ಕಾರಿಯಾ ಆಯೋಗದ ಶಿಫಾರಸಿನಂತೆ ಈ ಸಮಿತಿಯ ಸಮಾಲೋಚನೆ ರಹಸ್ಯ ಮತ್ತು ಅನೌಪಚಾರಿಕ ರೀತಿಯಲ್ಲಿ ನಡೆಯಬೇಕಾಗಿಲ್ಲ. ಪಾರದರ್ಶಕವಾಗಿದ್ದರೆ ಒಳಿತು.
- ರಾಜ್ಯಪಾಲರ ಅವಧಿ ಕಡ್ಡಾಯವಾಗಿ ಐದು ವರ್ಷಗಳಾಗಿರಬೇಕು. ಸಂಸತ್ ಮೂರನೇ ಎರಡರಷ್ಟು ಬಹುಮತದಿಂದ ರಾಷ್ಟ್ರಪತಿಯನ್ನು ವಜಾಗೊಳಿಸಲು ಅವಕಾಶ ಇರುವಂತೆ ವಿಧಾನ ಮಂಡಲಕ್ಕೂ ರಾಜ್ಯಪಾಲರನ್ನು ಬಹುಮತದ ಮೂಲಕ ವಜಾಗೊಳಿಸುವ ಅಧಿಕಾರ ಇರಬೇಕು.
- ಚುನಾವಣಾ ಪೂರ್ವ ಮೈತ್ರಿಕೂಟವನ್ನು ಒಂದು ರಾಜಕೀಯ ಪಕ್ಷವೆಂದು ಪರಿಗಣಿಸಿ, ಅದಕ್ಕೆ ಬಹುಮತ ಇದ್ದಲ್ಲಿ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡಬೇಕು.

ರಾಜ್ಯಪಾಲರ ಹುದ್ದೆಯ ದುರುಪಯೋಗವನ್ನು ತಡೆಯಬೇಕೆಂಬ ಸದುದ್ದೇಶವನ್ನು ದೇಶದ ರಾಜಕೀಯ ಪಕ್ಷಗಳು ಹೊಂದಿದ್ದರೆ ಅವುಗಳ ಎದುರು ಎರಡು ಆಯ್ಕೆಗಳಿವೆ. ಒಂದೋ, 38 ವರ್ಷಗಳ ಹಿಂದೆ ಸರ್ಕಾರಿಯಾ ಆಯೋಗ ಮಾಡಿದ್ದ ಶಿಫಾರಸುಗಳು ಮತ್ತು 22 ವರ್ಷಗಳ ಹಿಂದೆ ಸಂವಿಧಾನದ ಕಾರ್ಯನಿರ್ವಹಣೆಯ ಪುನರ್ ಪರಿಶೀಲನಾ ಆಯೋಗ ನೀಡಿದ ವರದಿಗಳನ್ನು ಒಪ್ಪಿಕೊಂಡು ರಾಜ್ಯಪಾಲ ಹುದ್ದೆಗೆ ಬಲ ತುಂಬುವ ಕೆಲಸ ಮಾಡಬೇಕು. ಇಲ್ಲವೇ, ರಾಜ್ಯಪಾಲರ ಹುದ್ದೆಯನ್ನೇ ರದ್ದುಗೊಳಿಸಿ ಲೋಕ ಭವನವನ್ನು ಮುಚ್ಚಬೇಕು.

ವಾಚಕರ ವಾಣಿ

ರಾಜ್ಯಪಾಲರ ನಡೆ ಸಂವಿಧಾನ ವಿರೋಧಿ

ಕರ್ನಾಟಕ ಮತ್ತು ತಮಿಳುನಾಡಿನ ರಾಜ್ಯಪಾಲರು ಶಾಸನಸಭೆಯಿಂದ ಹೊರ ಹೋದದ್ದು ಸಾಂವಿಧಾನಿಕ ನಿಯಮ ಮತ್ತು ಒಕ್ಕೂಟದ ಆಶಯವನ್ನು ದುರ್ಬಲಗೊಳಿಸುವ ಹುನ್ನಾರವಾಗಿದೆ. ರಾಜ್ಯಪಾಲರ ಈ ಕ್ರಮ ಸಂವಿಧಾನದ ಮೂಲತತ್ತ್ವಗಳ ಉಲ್ಲಂಘನೆಯಾಗಿದೆ. ಜಂಟಿ ಅಧಿವೇಶನ ಉದ್ದೇಶಿಸಿ ಮಾಡುವ ಔಪಚಾರಿಕ ಭಾಷಣ ಕುರಿತಂತೆ ರಾಜ್ಯಪಾಲರು ಚುನಾಯಿತ ಮಂತ್ರಿಮಂಡಲದ ಸಲಹೆಯಂತೆ ನಡೆಯುವುದು ಸಮಂಜಸ. ರಾಜ್ಯಪಾಲರಿಗೆ ಸಿದ್ಧಪಡಿಸಿದ ಭಾಷಣವನ್ನು ಏಕಪಕ್ಷೀಯವಾಗಿ ಸಂಪಾದಿಸುವ ಅಥವಾ ಓದಲು ನಿರಾಕರಿಸುವ ಅಧಿಕಾರ ಇಲ್ಲ. ಇದು ಜನಾಶಯದ ಇಚ್ಛೆಯನ್ನು ದುರ್ಬಲಗೊಳಿಸುತ್ತದೆ. ವೈಯಕ್ತಿಕ, ಪಕ್ಷಪಾತದ ದೃಷ್ಟಿಕೋನವನ್ನು ಹೇರುತ್ತದೆ ಮತ್ತು ರಾಜ್ಯಗಳ ಸ್ವಾಯತ್ತತೆಯನ್ನು ಕ್ಷೀಣಗೊಳಿಸುತ್ತದೆ. ಕೇಂದ್ರ ಸರ್ಕಾರದ ಪ್ರತಿನಿಧಿಗಳಂತೆ ಕಾಣಿಸಿಕೊಳ್ಳುವ ರಾಜ್ಯಪಾಲರ ನಡೆಯು ಚುನಾಯಿತ ಸರ್ಕಾರವನ್ನು ಅವಮಾನಿಸಿದಂತೆಯೇ ಸರಿ.

ಕಲ್ಯಾಣ ರಾಮನ್ ಚಂದ್ರಶೇಖರನ್, ಬೆಂಗಳೂರು

ಅಂಗನವಾಡಿ ನೌಕರರ ಬಾಡಿದ ಬದುಕು

ಅಂಗನವಾಡಿ ಕಾರ್ಯಕರ್ತೆಯರು ಕೇವಲ ನೌಕರರಲ್ಲ. ಮಳೆ–ಬಿಸಿಲೆನ್ನದೆ ಹಸಿವು–ನೀರಡಿಕೆ ನೋಡದೆ ಗ್ರಾಮೀಣ ಮಕ್ಕಳ ಅಪೌಷ್ಟಿಕತೆ ನಿರ್ಮೂಲನೆ ಮತ್ತು ಶಿಕ್ಷಣಕ್ಕಾಗಿ ತಮ್ಮ ಬದುಕು ಸವೆಸುತ್ತಿದ್ದಾರೆ. ಈ ತಾಯಂದಿರ ಶ್ರಮವನ್ನು ಅಳೆಯಲಾಗದು. ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಸಿಗುವ ಅತ್ಯಲ್ಪ ಗೌರವಧನವನ್ನು ನಂಬಿಕೊಂಡು ಜೀವನ ನಿರ್ವಹಿಸುವುದು ಅವರಿಗೆ ಕಷ್ಟಕರವಾಗಿದೆ. ಈ ಬಾರಿಯ ಕೇಂದ್ರ ಮತ್ತು ರಾಜ್ಯ ಬಜೆಟ್‌ನಲ್ಲಿ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಕಣ್ಣೀರು ಒರೆಸಿ, ಅವರ ಕುಟುಂಬಗಳಲ್ಲಿ ನೆಮ್ಮದಿಯ ದೀಪ ಹಚ್ಚುವ ಕೆಲಸಕ್ಕೆ ಸರ್ಕಾರಗಳು ಮುಂದಾಗಲಿ.

ರಾಜೇಶ್ವರಿ ಅನಂತರೆಡ್ಡಿ, ಯಾದಗಿರಿ

ಸಹ್ಯಾದ್ರಿಯ ಧರೆ ಬಿರಿದು ಕುಸಿದೊಡೆ...

‘**ನೀನೇರುವ** ಮಲೆ ಸಹ್ಯಾದ್ರಿ, ನೀ ಮುಟ್ಟುವ ಮರ ಶ್ರೀಗಂಧದ ಮರ, ನೀ ಕುಡಿಯುವ ನೀರ್ ಕಾವೇರಿ...’ ಎಂದು ಕರ್ನಾಟಕದ ಗರಿಮೆಯನ್ನು ರಾಷ್ಟ್ರಕವಿ ಕುವೆಂಪು ಅವರು ಬಣ್ಣಿಸಿದ್ದಾರೆ. ಅವರು ಗತಿಸಿದ ಕೆಲವು ದಶಕಗಳಲ್ಲಿಯೇ ಅಭಿವೃದ್ಧಿಯ ಹೆಸರಿನಲ್ಲಿ ನಾವು ಸಹ್ಯಾದ್ರಿಯ ಪಶ್ಚಿಮ ಘಟ್ಟಗಳ ದಟ್ಟ ಅರಣ್ಯವನ್ನು ಹಾಳುಗೆಡವುತ್ತಿದ್ದೇವೆ. ಇದರ ಪರಿಣಾಮ ಪರಿಸರದ ಅಸಮತೋಲನ ಉಂಟಾಗಿದೆ.

ಮಾರುತಗಳು ದಿಕ್ಕುಕೆಟ್ಟಂತಾಗಿ ಅತಿವೃಷ್ಟಿ, ಅನಾವೃಷ್ಟಿ ಉಂಟಾಗುತ್ತಿದೆ. ಈ ಪ್ರಾಕೃತಿಕ ಅಸಮತೋಲನ ದಿಂದ ರಾಜ್ಯದ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಜೊತೆಗೆ ಮಾನವ ಮತ್ತು ವನ್ಯಜೀವಿ ಸಂಘರ್ಷ ತಾರಕಕ್ಕೇರಿದೆ. ಆದರೆ, ಸಮಾಜದ ನೀತಿ ನಿರೂಪಕರು, ಆಡಳಿತಗಾರರ ಗಮನ ಈ ಬಿಕ್ಕಟ್ಟಿನತ್ತ ಹರಿಯುತ್ತಿಲ್ಲ. ಈಗಲಾದರೂ ಅವರು ಎಚ್ಚತ್ತು ಪರಿಸರ ಸಂರಕ್ಷಣೆ ಹಾಗೂ ರೈತರ ಹಿತಾಸಕ್ತಿ ಕಾಪಾಡಬೇಕಿದೆ.

ಎ.ಸಿ. ಲಕ್ಷ್ಮಣ, ಮೈಸೂರು

ಸಂಪುಟದ ನಿರ್ಧಾರ: ನೇಮಕಾತಿಗೆ ಭಗ್ನ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಉಳಿದಿವೆ. ಈ ವರ್ಷದಲ್ಲಾದರೂ ಇವುಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗುತ್ತದೆ ಎಂದು ಸ್ಪರ್ಧಾರ್ಥಿಗಳು ಚಾತಕಪಕ್ಷಿಯಂತೆ ಕಾದು ಕುಳಿತಿದ್ದಾರೆ. ಆದರೆ, ಒಂದು ಬಾರಿಗೆ ಅನ್ವಯಿಸುವಂತೆ ಐದು ವರ್ಷ ವಯೋಮಿತಿ ಸಡಿಲಿಕೆಗೆ ಸಚಿವ ಸಂಪುಟ ನಿರ್ಧರಿಸಿದೆ. ಇದರಿಂದ ನೇಮಕಾತಿ ಅಧಿಸೂಚನೆಗಳು ಮತ್ತಷ್ಟು ವಿಳಂಬವಾಗುವುದು ಸ್ಪಷ್ಟ. ಬೆಂಗಳೂರು, ಧಾರವಾಡ, ವಿಜಯಪುರ ಸೇರಿದಂತೆ ವಿವಿಧ ನಗರಗಳಲ್ಲಿ ಕೋಚಿಂಗ್ ಪಡೆಯುತ್ತಿರುವ ಸ್ಪರ್ಧಾರ್ಥಿಗಳ ಕತೆ ಹೇಳತೀರದು. ಸರ್ಕಾರ ಇನ್ನಾದರೂ ಮೀಸಲಾತಿ ಗೊಂದಲವನ್ನು ಬಗೆಹರಿಸಿಕೊಂಡು ಹುದ್ದೆಗಳ ಭರ್ತಿಗೆ ಕ್ರಮವಹಿಸಲಿ.

ರಾಮಚಂದ್ರ ಮಂಚಲದೊರೆ, ಗುಬ್ಬಿ

ನವರಸಪುರ ಉತ್ಸವ: ಮೀನಮೇಷ ಏಕೆ?

ವಿಜಯಪುರ ಜಿಲ್ಲೆಯ ಕಲೆ, ಸಂಸ್ಕೃತಿ, ಇತಿಹಾಸ, ಸಾಹಿತ್ಯ, ಪರಂಪರೆ ಬಿಂಬಿಸುವ ‘ನವರಸಪುರ ರಾಷ್ಟ್ರೀಯ ಉತ್ಸವ’ವು 1990ರಲ್ಲಿ ಮೊದಲ ಬಾರಿಗೆ ಆರಂಭಗೊಂಡಿತು. 2015ರ ಫೆಬ್ರುವರಿ ಅಂತ್ಯದಲ್ಲಿ 13ನೇ ಉತ್ಸವ ಕೊನೆಯ ಬಾರಿಗೆ ನಡೆಯಿತು. ಬರ ಮತ್ತು ಅತಿವೃಷ್ಟಿ ಕಾರಣ ನೀಡಿ ಈ ಉತ್ಸವವನ್ನು ರದ್ದುಪಡಿಸುತ್ತಾ ಬರಲಾಗುತ್ತಿದೆ. ಆದರೆ, ಅಕ್ಕಪಕ್ಕದ ಜಿಲ್ಲೆಗಳಲ್ಲಿ ನಿಯಮಿತವಾಗಿ ವಿವಿಧ ಉತ್ಸವಗಳನ್ನು ಆಯೋಜಿಸಲಾಗುತ್ತಿದೆ. ಉಳಿದೆಲ್ಲ ಉತ್ಸವಗಳಿಗೆ ಅಡ್ಡಿಯಾಗದ ಸಮಸ್ಯೆಗಳು ನವರಸಪುರ ಉತ್ಸವವನ್ನು ಕಾಡುವುದು ಸೋಜಿಗ.

ಸತೀಶ ಎಸ್. ಇಂಗಳೇಶ್ವರ, ವಿಜಯಪುರ

‘ವಿಶ್ವಗುರು’ ವಿರುದ್ಧ ಸೆಟೆದು ನಿಂತ ಟ್ರಂಪ್

‘**ವಿಶ್ವಗುರುವಿನ ಬಿಕ್ಕಟ್ಟುಗಳು**’ ಲೇಖನವು (ಲೇ: ಪುರುಷೋತ್ತಮ ಬಿಳಿಮಲೆ, ಪ್ರ.ವಾ., ಜ. 23) ನೈಜ ವಿಷಯಗಳ ಮೇಲೆ ಕನ್ನಡಿ ಹಿಡಿದಿದೆ. 2014ರ ಲೋಕಸಭೆ ಚುನಾವಣಾ ಪ್ರಣಾಳಿಕೆಯಲ್ಲಿ ನರೇಂದ್ರ ಮೋದಿ ಅವರು, ‘ವಿಶ್ವಗುರು’ವಿನ ಬಗ್ಗೆ ಉಲ್ಲೇಖಿಸಿದ್ದರು. ಕೆಲವರಂತೂ ಭಾರತ ವಿಶ್ವಗುರುವಾಗಿದೆ ಎಂಬ ಭ್ರಾಂತಿಯಲ್ಲಿದ್ದಾರೆ. ವಿಶ್ವಗುರು ಎಂದಾಕ್ಷಣ ನಮ್ಮ ಮಾತನ್ನು ಒಪ್ಪುವ ಒಂದಷ್ಟು ಶಿಷ್ಯ ದೇಶಗಳು ಬೇಕಲ್ಲವೆ? ಮಾತಿನಲ್ಲೆ ಮಂಟಪ ಕಟ್ಟುವ ಮೋದಿ, ಮತ್ತವರ ಶಿಷ್ಯರು ಈ ಸತ್ಯ ಅರಿಯಬೇಕಿದೆ. ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರನ್ನು ಅಮೆರಿಕದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ‘ತಮ್ಮ ಗುರು’ ಎಂದಿದ್ದರು. ಇಂದು ಡೊನಾಲ್ಡ್ ಟ್ರಂಪ್ ಭಾರತದ ವಿರುದ್ಧವೇ ಸೆಟೆದು ನಿಂತಿದ್ದಾರೆ. ಅವರಿಗೆ ಸಮರ್ಥವಾಗಿ ಉತ್ತರಿಸುವ ಸ್ಥಿತಿಯಲ್ಲಿ ಭಾರತ ಇಲ್ಲ. ಹಾಗಿದ್ದರೆ ‘ವಿಶ್ವಗುರು’ವಾಗಲು ಹೇಗೆ ಸಾಧ್ಯ?

ಪೃಥ್ವಿ ಹೋಳ್ಕರ್, ಹುಬ್ಬಳ್ಳಿ

ಚಾಟಿ

ಮುಖ್ಯಮಂತ್ರಿ ಭೇಟಿ!

ಬಿಗ್‌ಬಾಸ್ ವಿಜೇತ ನೇರವಾಗಿ ಸಿ.ಎಂ ಭೇಟಿ ಮಾಡಬಹುದು! ಸರ್ಕಾರಿ ಶಾಲೆಗಳ ಉಳಿವಿಗಾಗಿ ಉಪವಾಸ ಕೂತು, ಹೋರಾಟ ಮಾಡುತ್ತಿರುವವರು ಸಿ.ಎಂ ಭೇಟಿ ಮಾಡಲು ಮನವಿ ಕೊಡಬೇಕಂತೆ!

ರಂಗಸ್ವಾಮಿ ಎನ್., ‘ಎಕ್ಸ್’ನಿಂದ

ಕಿಡಿನುಡಿ

ಜೈಲಲ್ಲಿ ತಟ್ಟೆ, ಲೋಟ, ಚಮಚಾಗಳನ್ನು ಬಿಟ್ಟು ಬೇರೆ ಜಗತ್ತು ನೋಡದ ಗಾಲಿ ಜನಾರ್ದನ ರೆಡ್ಡಿಗೆ ರಾಜಕೀಯ ಜೀವನದಲ್ಲಿ ‘ಚಮಚಾಗಿರಿ’ ಹೊರತುಪಡಿಸಿ ಬೇರೆ ಲೋಕದ ಪರಿಜ್ಞಾನವೇ ಇಲ್ಲ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 24-1-2001

- **ರಸ್ತೆ ಅಪಘಾತ: ಐವರು ವಕೀಲರು ಸೇರಿ 7 ಸಾವು**

ತುಮಕೂರು, ಜ. 23– ನೆಲಮಂಗಲ ತಾಲ್ಲೂಕಿನ ಬಿಲ್ಲನಕೋಟೆ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದು ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನಗರದ ಐದು ಮಂದಿ ಯುವ ವಕೀಲರು ಸೇರಿ ಏಳು ಮಂದಿ ಮೃತಪಟ್ಟಿದ್ದಾರೆ.

ತುಮಕೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ಟಾಟಾ ಸುಮೊ ವಾಹನ ಇನ್ನೊಂದು ವಾಹನವನ್ನು ಹಿಂದಿಕ್ಕುವ ಭರದಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆಯಿತು.

ತುಮಕೂರಿನ ಯುವ ವಕೀಲರಾದ ಡಿ.ಎಸ್. ಪ್ರವೀಣ್ ಕುಮಾರ್ (30), ಲೋಕೇಶ್ ಗಾಂಧಿ (31), ಸಿ.ಬಿ. ಜೇಮ್ಸ್ (32), ಕೃಷ್ಣಮೂರ್ತಿ (29), ಮಾರುತಿ ಪ್ರಸಾದ್ (31), ಸಾಫ್ಟ್‌ವೇರ್ ಎಂಜಿನಿಯರ್ ಅರುಣ್‌ಕುಮಾರ್ (29), ಚಾಲಕ ಸಾದಿಕ್ (30) ಮೃತಪಟ್ಟವರು.

- **ಅರೆಕಾಲಿಕ ನೌಕರರ ಸೇವೆ ಕಾಯಂ: ತೀರ್ಪು ಊರ್ಜಿತ**

ಬೆಂಗಳೂರು, ಜ. 23– ಜಿಲ್ಲಾ ಪಂಚಾಯಿತಿಗಳಲ್ಲಿ ಹತ್ತು ವರ್ಷಗಳ ಕಾಲ ಅರೆಕಾಲಿಕ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಕಾಯಂ ಮಾಡುವಂತೆ ಹೈಕೋರ್ಟ್‌ನ ಏಕಸದಸ್ಯ ಪೀಠ ನೀಡಿದ್ದ ತೀರ್ಪನ್ನು ಇಂದು ವಿಭಾಗೀಯ ಪೀಠ ಎತ್ತಿ ಹಿಡಿದಿದೆ.

ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ಜಿಲ್ಲಾ ಪಂಚಾಯಿತಿಯ ಅರೆಕಾಲಿಕ ನೌಕರರ ಸೇವೆಯನ್ನು ಕಾಯಂ ಮಾಡುವಂತೆ ಏಕ ಸದಸ್ಯ ಪೀಠ ನೀಡಿದ್ದ ತೀರ್ಪಿನ ವಿರುದ್ಧ ಮನವಿ ಸಲ್ಲಿಸಿದ್ದ ರಾಜ್ಯ ಸರ್ಕಾರದ ಮನವಿಯನ್ನು ನ್ಯಾಯಪೀಠವು ತಳ್ಳಿಹಾಕಿತು.

75 ವರ್ಷಗಳ ಹಿಂದೆ

ಬುಧವಾರ, 24-1-1951

- **ಅಗ್ನಿ ಪರ್ವತ ಸ್ಫೋಟ: ನಾಲ್ಕು ಸಾವಿರ ಮಂದಿ ಮರಣ**

ಕ್ಯಾನ್‌ಬೆರಾ, ಜ.23– ನ್ಯೂಗಿನಿಯಾದ ಲ್ಯಾಮಿಂಗ್‌ಟನ್ ಅಗ್ನಿ ಪರ್ವತದಿಂದ ಚಿಮ್ಮಿಬಂದ ಭಯಂಕರ ಮೃತ್ಯು ಕಾರಕ ಶಿಲಾ ಪ್ರವಾಹವು ತನಗೆ ತಾನೇ ತಾಂಡವವಾಡುತ್ತಿದೆ. ಈ ಜ್ವಾಲಾಮುಖಿಯ ರೌದ್ರ ಅವತಾರಕ್ಕೆ ನಾಲ್ಕು ಸಾವಿರ ಮಂದಿ ಬಲಿಯಾಗಿರುವುದು ದೃಢಪಟ್ಟಿದೆ ಎಂದು ನ್ಯೂಗಿನಿಯಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಗ್ನಿ ಪರ್ವತದ ಅಕ್ಕಪಕ್ಕದ 20 ಹಳ್ಳಿಗಳಲ್ಲಿ ಜನರ ಸುಳಿವೇ ಇಲ್ಲವೆಂದೂ, ಮನೆ–ಮಠಗಳೆಲ್ಲ ಉರುಳಿ, ಗಿಡ ಮರಗಳೆಲ್ಲ ಸುಟ್ಟುಹೋಗಿವೆ ಎಂದು ವಿಮಾನ ವೀಕ್ಷಕರೊಬ್ಬರು ವರದಿ ಮಾಡಿದ್ದಾರೆ.

ಈ ಸ್ಥಳಕ್ಕೆ ಮೋರ್ಸ್ ಬಿಯಿ ಪರಿಹಾರ ಸಾಮಗ್ರಿಗಳನ್ನೊತ್ತು ಹಡಗೊಂದು ತೆರಳಿದೆ. ಸತ್ತವರ ಅಂತ್ಯಕ್ರಿಯೆ ನಡೆಸಿ, ಗಾಯಗೊಂಡವರನ್ನು ಹೊರತರಲು ಆಳುಗಳ ತಂಡವನ್ನು ಕಳುಹಿಸಲಾಗಿದೆ.

ಚುರುಮುರಿ



ಜೇಜೀ ಖಂಡನೋಪಾಖ್ಯಾನ!

● ತುರುವೇಕೆರೆ ಪ್ರಸಾದ್

‘**ಕುಲ** ಪುರೋಹಿತರಾದ ದಂಮ್ರೋಟು ಜೀಜೀ ಅವರು ಖಂಡನೋಪಾಖ್ಯಾನ ವ್ರತ ಕತೆ ಓದಲ್ಲ ಅಂತ ಕ್ಯಾತೆ ತೆಗೆದು ದೊಡ್ ರಂಪಾಟ ಮಾಡವ್ರಲ್ಲಪ್ಪ’ ಎಂದು ಸಿಬಿರೆಬ್ಬಿದ ಗುದ್ಲಿಂಗ.

‘ಅದ್ಕೇ ಅಭಯಹಸ್ತ ಭಕ್ತರು ಸಿಟ್ಟಾಗಿರೋದು. ನೀವು ಶಂಕ ಊದಿ ಕತೆ ಓದಿದ್ಮೇಲೇ ನಾವು ಕುದಿವೇಶನದ ಮಿಕ್ಕ ಪೂಜೆ, ಪುನಸ್ಕಾರ ಮಾಡಿ ಎಡೆ ಇಟ್ಕಳಕ್ ಆಗಾದು. ಸಂಪ್ರದಾಯ ಮುರ್ದವ್ರೆ ಅಂತ ಕಿಡಿ ಕಾರ್‍ತಾವ್ರೆ’ ಎಂದ ಮಾಲಿಂಗ.

‘ಆದ್ರೆ ಈ ಕಮಲಭೂಷಣರು, ತೆನೆಧಾರಿಗಳು ಪುರೋಹಿತ್ರ ವಕಾಲತ್ತು ವಹಿಸವ್ರೆ. ವ್ರತದ ಕತೆ ಓದಿ ಅಂತ ಕಮಲಾರೋಪ ಕ್ಯಾತೆ ಉಪಾಖ್ಯಾನ ಬರ್ಕೊಟ್ರೆ ಎಂಗಾಯ್ತದೆ?’ ಕಾಲೆಳೆದ ಕಲ್ಲೇಶಿ.

‘ಅಲ್ವಾ ಮತ್ತೆ? ಅವರು ಮೊದ್ಲೇ ತಾವರೆ ಚಂದ ಅನ್ನೋರು. ಕಮಲಾಂಶ ಸಂಭೂತರು. ಅವರು ಎಂಗ್ಲಾ ಈ ಕತೆ ಓದಾರು?’

‘ಮೊದ್ಲಿಂದನೂ ಇಂಗೇ ಆಸ್ಥಾನ ಪುರೋಹಿತ್ರು ಕಿರಿಕ್ ಮಾಡ್ತಾವ್ರೆ. ಈ ದಂಬ್ರೋಟ್‌ನ ಎಂಗಾದ್ರೂ ಗೆಟ್‌ಔಟ್ ಮಾಡುಸ್ಬೇಕು ಅಂತ ಹಸ್ತಭೂಷಣರು ಪಣ ತೊಟ್ಟವ್ರಂತೆ’.

‘ಅದೆಂಗ್ಲಾ ಆಯ್ತದೆ? ಮಂತ್ರಕ್ಕಿಂತ ಉಗುಳೇ ಜಾಸ್ತಿ ಅಂತ ಕತೆ ಕುಲಗೆಡಿಸಿ ಅವರ ಪಿತೃಕುಲನೇ ಬಯ್ಕಳೋ ಅಂಗ್ ಬರ್ದಿಟ್ರೆ ಎಂಗೆ? ಕಮಲದಡಿ ಕೆಸರೈತೆ ಅಂತ ಪುರೋಹಿತ್ರು ಅದ್ನ ತೆಗೆದು ಹೂವಿನ್ ಮೇಲೆ ಎಸೆಯಕ್ಕಾಯ್ತದಾ? ಅವರು ಪೂರಾ ಕತೆ ಓದ್ದಿದ್ರೂ ನಾಂದಿ ಶ್ಲೋಕ ಹೇಳಿ ಗಂಟೆ ಬಾರಿಸಿ ಓಗವ್ರಲ್ಲ’.

‘ಅದ್ಕೇ ಒಂದು ತಿದ್ದುಪಡಿ ಮಾಡ್ಕಳಾದು? ಈಗ ವ್ರತ, ಮದ್ವೆ ಮಾಡುವಾಗ ಪುರೋಹಿತ್ರು ‘ಮಮ’ ಅಂತ ಯೋಳ್ಸಿ ಮುಂದಿಂದೆಲ್ಲಾ ಅವರೇ ಯೋಳ್ಕತಾರೆ... ರಾಜ್ರಿಗೆ, ಅಮಾತ್ಯರಿಗೆ ಪ್ರಮಾಣವಚನ ಯೋಳುವಾಗ್ಲೂ ‘ನಾನು’ ಅಂತ ಎಲ್ಡಕ್ಷರ ಯೋಳಿ ಸುಮ್ಕಾಗ್ತಾರೆ. ಅಂಗೇ ಕುದಿವೇಶದನದಲ್ಲೂ ಕುಲಪುರೋಹಿತ್ರು ‘ನಾನು’ ಅಂತ ಯೋಳಿ ಎದ್ ಓಗ್ಲಿ... ಮಿಕ್ಕಿದ್ದನ್ನ ಅಧಿ(ವೇಶನ)ಪತಿಗಳೇ ಓದ್ಕಳ್ಳಿ ಬುಡು’ ಎಂದ ಪರ್ಮೇಶಿ.

‘ಸೂಪರ್!’ ಎಂದು ಪರ್ಮೇಶಿ ಬೆನ್ನಿಗೆ ಎಲ್ಲರೂ ಮೆಚ್ಚುಗೆಯಿಂದ ಗುದ್ದಿದರು.

ಸಂಗತ

ಉಸಿರುಗಟ್ಟಿದ ಕಾಡು; ಕಾರಣ ನೂರಾರು

ಕಾಡು ಮತ್ತು ವನ್ಯಜೀವಿಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬೇರುಗಳು ನಮ್ಮತ್ತಲೇ ಚಾಚಿಕೊಳ್ಳುತ್ತದೆ. ಹೊಸ ಕಾಡನ್ನು ಸೃಷ್ಟಿಸದ ನಾವು ಇರುವುದನ್ನು ತರಿಯುತ್ತಿದ್ದೇವೆ.

● ಕೆ.ಎಚ್. ಓಬಳೇಶ್

ಭೂಮಿಯ ಮೇಲೆ ಗುಣಮಟ್ಟದ ಅರಣ್ಯವಿದ್ದರೆ ಎಲ್ಲವೂ ಸರಿಯಾಗಿದೆ ಎಂದರ್ಥ. ಅಂತಹ ಅರಣ್ಯಕ್ಕೆ ಪ್ರಾಕೃತಿಕ ವಿಕೋಪಗಳನ್ನು ಸಹಿಸಿಕೊಳ್ಳುವ ಗುಣ ಇರುತ್ತದೆ. ಕಾಳ್ಗಿಚ್ಚು, ಪ್ರವಾಹದಂತಹ ಕೋಪಾಟೋಪಗಳು ಸಂಭವಿಸಿದಾಗ ಅಲ್ಲಿನ ಜೀವಪರಿಸರ ಅಸ್ತವ್ಯಸ್ತವಾಗುತ್ತದೆ. ಹಳೆಯ ಗಿಡಮರಗಳು ಉಸಿರು ಕಳೆದುಕೊಂಡು ಹೊಸ ಬಗೆಯ ಗಿಡಮರಗಳು ಉತ್ಪತ್ತಿಯಾಗುತ್ತವೆ. ಇಂತಹ ಪ್ರಕೃತಿಚಕ್ರದ ಘಟನೆಗಳಿಗೆ ಸಾಕ್ಷಿಯಾಗುತ್ತಾ, ಸರಿದೂಗಿಸಿಕೊಳ್ಳುತ್ತಾ ಕಾಡು ಉಳಿದುಕೊಂಡಿರುತ್ತದೆ. ಹಲವಾರು ವರ್ಷಗಳ ಕಾಲ ಸಂಭವಿಸುವ ಈ ಬದಲಾವಣೆಗಳಿಗೆ ಹೊಂದಿಕೊಂಡು ಸಮತೋಲನದ ಸ್ಥಿತಿಗೆ ತಲಪುತ್ತದೆ. ಅಲ್ಲಿನ ಜೀವಸಂಕುಲವೂ ಸ್ಥಿರವಾಗಿರುತ್ತದೆ.

ಹಾಗಿದ್ದರೆ ಕರ್ನಾಟಕದ ಅರಣ್ಯ ಪರಿಸರ ಹೇಗಿದೆ? ಅರಣ್ಯಗಳ ನಡುವೆ ಸಂಪರ್ಕ ಇದೆಯೇ? ಕಾಡುಪ್ರಾಣಿಗಳೇಕೆ ನಾಡಿಗೆ ನುಗ್ಗುತ್ತಿವೆ? ಮಾನವ ಮತ್ತು ಅವುಗಳ ನಡುವಿನ ಸಂಘರ್ಷವೇಕೆ ಉಲ್ಬಣಿಸಿದೆ? ಈ ಪ್ರಶ್ನೆಗಳ ಸರಮಾಲೆ ಸಂಕೀರ್ಣವಾದುದು.

ಸಂಘರ್ಷಕ್ಕೆ ಕಾರಣಗಳು ಹಲವು. ಇದು ಜಿಲ್ಲೆಯಿಂದ ಜಿಲ್ಲೆಗೆ; ಪ್ರಾಣಿಗಳಿಂದ ಪ್ರಾಣಿಗಳಿಗೆ ಭಿನ್ನವಾಗಿರುತ್ತದೆ. ಗುಣಮಟ್ಟ ಕಳೆದುಕೊಳ್ಳುತ್ತಿರುವ ಅರಣ್ಯಗಳೇ ಈ ಸಮಸ್ಯೆಗೆ ಮೂಲ ಕಾರಣ. ರಾಜ್ಯದಲ್ಲಿ ವನ್ಯಜೀವಿಗಳ ನೆಲೆ ಛಿದ್ರವಾಗುತ್ತಿದೆ. ಜೀವಸಂಕುಲದಲ್ಲಿ ಉಂಟಾಗುತ್ತಿರುವ ಈ ತಲ್ಲಣ ಸಂಘರ್ಷದ ರೂಪ ತಳೆದಿದೆ. ಅಂತಿಮವಾಗಿ ಇದು ಕಾಡುಪ್ರಾಣಿ ಅಥವಾ ಮನುಷ್ಯನ ಸಾವಿನೊಂದಿಗೆ ಪರ್ಯಾವಸಾನ ಕಾಣುತ್ತಿದೆ.



ಕಾಡಿಗೆ ಲಕ್ಷಾಂತರ ಜೀವಿಗಳನ್ನು ಪೋಷಿಸುವ ಶಕ್ತಿ ಇರುವುದು ದಿಟ. ಆದರೆ, ಸುಸ್ಥಿತಿ ಕಳೆದುಕೊಂಡಿರುವ ಅದಕ್ಕೆ ಉಸಿರಾಡಲು ಮತ್ತಷ್ಟು ಜಾಗ ಬೇಕಲ್ಲವೆ? ಅದಕ್ಕಾಗಿ ಅರಣ್ಯದಂಚಿನ ಕುರುಚಲು ಪ್ರದೇಶ, ಕಂದಾಯ ಜಮೀನುಗಳನ್ನು ಕಾಪು ವಲಯಗಳಾಗಿ (ಬಫರ್ ಜೋನ್) ಮಾರ್ಪಾಡು ಮಾಡಬೇಕು. ಆದರೆ, ಕಾಡಂಚಿನ ಪ್ರದೇಶ, ಕಾಯ್ದಿಟ್ಟ ಅರಣ್ಯ, ಕಂದಾಯ ಇಲಾಖೆಗೆ ಸೇರಿದ ವಿವಿಧ ಬಗೆಯ ಕಾಡನ್ನು ಅರಣ್ಯದ ವ್ಯಾಪ್ತಿಗೆ ಸೇರಿಸುವ ಕೆಲಸವಾಗುತ್ತಿಲ್ಲ. ಹಾಗಾಗಿ, ಒಂದು ಅರಣ್ಯದಿಂದ ಮತ್ತೊಂದು ಅರಣ್ಯಕ್ಕೆ ಸಂಪರ್ಕ ಇಲ್ಲದೆ ದ್ವೀಪಗಳಂತೆ ಚದುರಿಹೋಗಿವೆ. ಹತ್ತಾರು ವರ್ಷಗಳ ಹಿಂದೆ ಪುನರ್ವಸತಿ ಹೆಸರಿನಡಿ ಅರಣ್ಯ ಭೂಮಿ ಹಾಗೂ ಕಾಡಂಚಿನ ಸಾವಿರಾರು ಎಕರೆ ಭೂಮಿಯನ್ನು ಭೂರಹಿತರಿಗೆ ಹಂಚಿಕೆ ಮಾಡಲಾಗಿದೆ. ಸರ್ಕಾರದ ಇಂತಹ ಜನಪ್ರಿಯ ನೀತಿಗಳಿಂದ ಈ ಪ್ರದೇಶಗಳು ಹರಿದು ಹಂಚಿಹೋಗಿವೆ. ಇಂತಹ ಸಾವಿರಾರು ಎಕರೆ ಜಮೀನು ಇಂದಿಗೂ ಪಾಳುಬಿದ್ದಿದೆ. ರೈತರು ವ್ಯವಸಾಯ ಮಾಡುತ್ತಿಲ್ಲ. ದಶಕಗಳ ಹಿಂದೆ ಈ ಜಮೀನುಗಳೇ ಕಾಡುಪ್ರಾಣಿಗಳ ಸಂಚಾರಕ್ಕೆ ಮುಖ್ಯಪಥವಾಗಿದ್ದವು.

ಪ್ರಸ್ತುತ ಕಾಡಿನ ಜೀವವೈವಿಧ್ಯ ಏರುಪೇರಾಗಿದೆ. ಹಿಂದಿನ ವೈಭವ ಅಲ್ಲಿಲ್ಲ; ಪ್ರಶಾಂತ ನೀರವತೆಯ ಕುರುಹುಗಳು ಕಾಣುತ್ತಿಲ್ಲ. ಅಲ್ಲೀಗ ಯಂತ್ರಗಳ ಕರ್ಕಶ ಶಬ್ದ. ಆ ಸದ್ದಿಗೆ ಪ್ರಾಣಿಗಳು ನಿದ್ದೆಗೆಟ್ಟಿವೆ. ಅಳಿವಿನಂಚಿನ ಜೀವಿಗಳು ಸಂರಕ್ಷಣೆ ಇಲ್ಲದೆ ಪೊದೆಯಲ್ಲಿ ಅಡಗಿಕೊಂಡು ತಮ್ಮ ಅವನತಿಯ ದಿನಗಳನ್ನು ಎಣಿಸುತ್ತಿವೆ. ಅರಣ್ಯದ ಸಸ್ಯಸಂಯೋಜನೆಯೂ ಬದಲಾಗಿದೆ. ಲಂಟಾನಾ, ಯುಪಟೋರಿಯಾ, ಸೆನ್ನಾ ಸ್ಪೆಕ್ಟಾಬಿಲಿಸ್‌ನಂತಹ ವಿದೇಶಿ ಕಳೆಗಳು ಆವರಿಸಿವೆ. ಇವು ಸ್ಥಳೀಯ ಪ್ರಾಣಿಗಳಿಗೆ ಅವಶ್ಯವಿರುವ ಆಹಾರ, ಆಸರೆ ನೀಡುವುದಿಲ್ಲ. ಈ ವ್ಯತ್ಯಾಸ ವನ್ಯಜೀವಿಗಳ ಮೇಲೆ ಅಗಾಧ ಪರಿಣಾಮ ಬೀರುತ್ತಿದೆ. ಪ್ರತಿಯೊಂದು ಜೀವಿಯ ಅಂತಿಮ ಗುರಿಯೇ ಸಂತಾನಾಭಿವೃದ್ಧಿ. ಆದರೆ, ಗುಣಮಟ್ಟ ಕಳೆದುಕೊಂಡಿರುವ ಇಂತಹ ಕಾಡಿನಲ್ಲಿ ಅವು ತಮ್ಮ ಜೀವವನ್ನು ಕವಲೊಡೆಸಲು ಸಾಧ್ಯವೆ?

ಮತ್ತೊಂದೆಡೆ ಅರಣ್ಯದ ಮಧ್ಯದಲ್ಲಿಯೇ ಹಳ್ಳಿ, ನಗರ, ಪಟ್ಟಣಗಳು ಹುಟ್ಟಿಕೊಂಡಿವೆ. ವನ್ಯಜೀವಿಗಳ ಮೊಗಸಾಲೆಗಳನ್ನು ಅಭಿವೃದ್ಧಿ ಹೆಸರಿನ ಹೆದ್ದಾರಿಗಳು ತುಂಡರಿಸಿವೆ. ಕೈಗಾರಿಕೆ, ಕಲ್ಲು ಗಣಿಗಾರಿಕೆ, ಜಲವಿದ್ಯುತ್ ಯೋಜನೆಯಿಂದ ಕಾಡಿನ ಹರವು ಕಡಿಮೆಯಾಗುತ್ತಿದೆ. ಅರಣ್ಯಗಳನ್ನು ಕುಗ್ಗಿಸುತ್ತಿರುವ ಈ ‘ರಾಜಕೀಯ’ ಕಾರಣಕ್ಕೆ ಮದ್ದೆಲ್ಲಿದೆ? ರಾಜ್ಯದಲ್ಲಿ ಹಲವು ದಶಕಗಳಿಂದ ಕಾಡನ್ನು ವಿಸ್ತರಿಸುವ ಪ್ರಕ್ರಿಯೆಯೇ ನಡೆದಿಲ್ಲ. ಲಕ್ಷಾಂತರ ಎಕರೆ ಅರಣ್ಯಭೂಮಿ ಒತ್ತುವರಿಯಾಗಿದ್ದರೂ ತೆರವುಗೊಳಿಸಲು ಸರ್ಕಾರಕ್ಕೆ ಮನಸ್ಸಿಲ್ಲ. ಈಗಲೂ ಎಗ್ಗಿಲ್ಲದೆ ಒತ್ತುವರಿ ಮುಂದುವರಿದಿದ್ದು, ಕಾನೂನು ನಿದ್ರೆಗೆ ಜಾರಿದೆ.

ಹುಲಿ ಮರಿಗಳು ಬೆಳೆದು ದೊಡ್ಡವಾದ ಮೇಲೆ ತಾಯಿಯೊಂದಿಗೆ ಇರುವುದಿಲ್ಲ. ಜೈವಿಕ ಒತ್ತಡದಿಂದ ಹೊಸ ಆವಾಸದ ಹುಡುಕಾಟ ನಡೆಸುತ್ತವೆ. ಆದರೆ, ಅವುಗಳಿಗೆ ಹೊಸ ಕಾಡುಗಳಿಲ್ಲ. ಕಣ್ಣುಬಿಟ್ಟಾಗ ಅರಣ್ಯದಂಚಿನ ರೈತರ ಅನುಪಯುಕ್ತ ಒಣಭೂಮಿಗಳೇ ಅವುಗಳಿಗೆ ಕಾಡುಗಳಂತೆ ಭಾಸವಾಗುತ್ತವೆ. ವ್ಯಾಘ್ರಗಳು ದೀರ್ಘಕಾಲ ಬದುಕುಳಿಯಲು ಸದೃಢ ತಳಿಗಳು ಬಹುಮುಖ್ಯ. ಇದಕ್ಕಾಗಿ ಆ ತಳಿಗಳ ಗುಣಮಟ್ಟದ ವಂಶವಾಹಿನಿಯು ನಿರಂತರವಾಗಿ ಪ್ರವಹಿಸುತ್ತಿರಬೇಕು. ಇದೇ ಜೀವಜಾಲದಲ್ಲಿ ಹುಲಿಯಂತಹ ಅಪರೂಪದ ಜೀವಿಗಳು ಬದುಕುಳಿಯುವ ಗುಟ್ಟು. ಇಲ್ಲವಾದರೆ ಅವುಗಳ ಭವಿಷ್ಯ ಗಾಢಕತ್ತಲೆಗೆ ಜಾರುತ್ತದೆ. ಆದರೆ, ಅರಣ್ಯಗಳ ನಡುವೆ ಸಂಪರ್ಕ ಕಡಿದುಹೋಗಿರುವುದರಿಂದ ತಳಿವೈವಿಧ್ಯ ವೃದ್ಧಿಸುವ ಅವಕಾಶಗಳು ಕಡಿಮೆ.

ಚಿರತೆ ಮರಿಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಬೆಟ್ಟಗುಡ್ಡಗಳಲ್ಲಿ ಆವಾಸ ಕಳೆದುಕೊಂಡಿರುವ ಅವುಗಳಿಗೆ ಕಬ್ಬಿನ ಗದ್ದೆಗಳೇ ಅರಣ್ಯದಂತೆ ಕಾಣುತ್ತಿವೆ. ಚಿಕ್ಕಮಗಳೂರು, ಹಾಸನ ಜಿಲ್ಲೆಯಲ್ಲಿರುವ ಕಾಡಾನೆ ಮರಿಗಳ ಪಾಲಿಗೆ ಅಲ್ಲಿನ ಕಾಫಿತೋಟಗಳೇ ಕಾಡುಗಳಾಗಿವೆ. ಮನುಷ್ಯ ಅರಣ್ಯಕ್ಕೆ ಗಡಿರೇಖೆ ನಿರ್ಮಿಸಿದ್ದಾನೆ. ಅವನ ಅರಿವಿಗೆ ನಿಲುಕುವ ಈ ಗಡಿ ವನ್ಯಜೀವಿಗಳಿಗೆ ಅರ್ಥವಾಗುವುದಿಲ್ಲ. ಈ ಕಟುಸತ್ಯವನ್ನು ಆಳುವ ವರ್ಗಕ್ಕೆ ಅರ್ಥೈಸುವುದಾದರೂ ಹೇಗೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐದು ಪಾಲಿಕೆ, ಸ್ಥಳೀಯ ಸಂಸ್ಥೆ ಚುನಾವಣೆ: ಹಲವು ಸವಾಲು

ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳೂ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆ ಕುರಿತು ಸಾಕಷ್ಟು ಚರ್ಚೆ ನಡೆಯುತ್ತಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ. ವಿದ್ಯುನ್ಮಾನ ಮತಯಂತ್ರದ (ಇವಿಎಂ) ಬದಲು ಮತಪತ್ರಗಳನ್ನು (ಬ್ಯಾಲೆಟ್ ಪೇಪರ್) ಬಳಸಿ ಚುನಾವಣೆ ನಡೆಸುವುದಾಗಿ ರಾಜ್ಯ ಚುನಾವಣಾ ಆಯೋಗ ಘೋಷಿಸಿದೆ. ಇನ್ನೊಂದೆಡೆ ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳ ಆಡಳಿತದ ಅವಧಿ ಮುಗಿದು ಐದು ವರ್ಷಗಳಾದರೂ ಚುನಾವಣೆ ನಡೆದಿಲ್ಲ. ಸರ್ಕಾರದ ವಿಳಂಬ ಧೋರಣೆ ವಿರುದ್ಧ ಆಯೋಗ ಕೋರ್ಟ್ ಮೆಟ್ಟಿಲೇರಿದೆ. ಸರ್ಕಾರ ಮೂರೂ ಸ್ತರಗಳಿಗೆ ಒಟ್ಟಿಗೆ ಚುನಾವಣೆ ನಡೆಸಲು ಚಿಂತಿಸುತ್ತಿದೆ. ಈ ಎಲ್ಲ ಬೆಳವಣಿಗೆಗಳ ಕುರಿತು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಅವರ ಜತೆ 'ಪ್ರಜಾವಾಣಿ' ನಡೆಸಿದ ಮಾತುಕತೆಯ ಸಾರ ಇಲ್ಲಿದೆ


ಜಿ.ಎಸ್.ಸಂಗ್ರೇಶಿ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ

• ಬಹಳಷ್ಟು ಬೇಡಿಕೆಗಳು, ಪ್ರಯೋಗಗಳ ತರುವಾಯ ಇವಿಎಂ ಜಾರಿಗೆ ತರಲಾಗಿದೆ. ಮತ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಾದ ಆಯೋಗ, ಹಿಂದಕ್ಕೆ ಚಲಿಸಲು ಹೊರಟಿದೆಯಲ್ಲ?

ಮತಪತ್ರ ಬಳಸಬಾರದು ಎಂದು ಯಾವ ಕಾನೂನು ಕೂಡ ಹೇಳಿಲ್ಲ. ಚುನಾವಣಾ ಆಯೋಗ ಸ್ವತಂತ್ರ ಆಯೋಗವಾಗಿದ್ದರೂ ಕಾಯ್ದೆಗಳ ಪ್ರಕಾರವೇ ಕಾರ್ಯನಿರ್ವಹಿಸುತ್ತದೆ. ಚುನಾವಣೆಗಳನ್ನು ನಡೆಸುತ್ತದೆ. ಯಾವುದೇ ಚುನಾವಣೆಗಳನ್ನು ಇವಿಎಂ ಅಥವಾ ಮತಪತ್ರ ಬಳಸಿ ಮಾಡಬಹುದು ಎಂದು ಚುನಾವಣಾ ನಿಯಮಗಳೇ ಹೇಳುತ್ತವೆ. ಅಂತಹ ನಿಯಮಗಳ ಅನ್ವಯವೇ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಜ್ಯ ಸರ್ಕಾರ ಈಚೆಗೆ ಜಾರಿಗೆ ತಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಚುನಾವಣೆ) ಕಾಯ್ದೆ–2025ರಲ್ಲೂ ಚುನಾವಣೆಗಳನ್ನು ಮತಪತ್ರ ಬಳಸಿ ನಡೆಸಬಹುದು ಎಂಬ ಅಂಶವನ್ನು ನಿಯಮ 37, 57ರಲ್ಲಿ ಉಲ್ಲೇಖಿಸಲಾಗಿದೆ. ಈ ನಿಯಮಗಳ ಅನ್ವಯವೇ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ಪಾಲಿಕೆಗಳಿಗೆ ಮತಪತ್ರ ಬಳಸಿ ಚುನಾವಣೆ ನಡೆಸಲು ನಿರ್ಧರಿಸಿದ್ದೇವೆ.

• ಮತಪತ್ರ ಬಳಕೆ ಮತದಾನದ ಅವಧಿಯ ಹಿಗ್ಗುವಿಕೆಗೆ ಕಾರಣವಾಗುತ್ತದೆಯಲ್ಲ?

ಬಿಬಿಎಂಪಿ ಚುನಾವಣೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆದು ಎಷ್ಟು ವರ್ಷಗಳಾಗಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಪ್ರಜಾಪ್ರಭುತ್ವದಲ್ಲಿ ಅವಧಿ ಮುಗಿದ ನಂತರವೂ ನಡೆಯುವ ಚುನಾವಣೆ, ವಿವಿಧ ಹಂತಗಳ ಬಳಿಕ ಪ್ರಕಟವಾಗುವ ಫಲಿತಾಂಶಕ್ಕಾಗಿ ತಾಳ್ಮೆಯಿಂದ ಕಾಯುವ ಜನರು ಮತದಾನಕ್ಕಾಗಿ ಮೂರು, ನಾಲ್ಕು ಗಂಟೆ ಹೆಚ್ಚು ಅವಧಿ ತೆಗೆದುಕೊಂಡರೆ ಸಹಿಸುವುದಿಲ್ಲವೇ? ಮತಪತ್ರ ಬಳಕೆಯಲ್ಲೂ ತ್ವರಿತ ಮತದಾನಕ್ಕೆ ಅಗತ್ಯವಾದ ಕ್ರಮವನ್ನು ಆಯೋಗ ತೆಗೆದುಕೊಳ್ಳಲಿದೆ.

• ಇವಿಎಂನಂತಹ ಆಧುನಿಕ ವಿಧಾನ ಅವಳವಡಿಕೆಯ ನಂತರವೂ ನಗರ ಪ್ರದೇಶಗಳಲ್ಲಿ ಮತದಾನ ಪ್ರಮಾಣ ಕಡಿಮೆಯಾಗುತ್ತಿದೆ. ಮತಪತ್ರ ಬಳಕೆಯಿಂದ ಇನ್ನಷ್ಟು ಇಳಿಕೆ ಆಗುವುದಿಲ್ಲವೇ?

ಮತಪತ್ರ ಅಥವಾ ಇವಿಎಂ ಬಳಕೆಗೂ ಮತದಾನ ಪ್ರಮಾಣದ ಇಳಿಕೆಗೂ ಸಂಬಂಧವಿಲ್ಲ. ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆ, ಸಹಕಾರ ಸಂಘಗಳ ಚುನಾವಣೆ ಸೇರಿದಂತೆ ಹಲವೆಡೆ ಇಂದಿಗೂ ಮತಪತ್ರ ಬಳಕೆಯೇ ಮುಂದುವರಿದಿದೆ. ಸುಮಾರು 6,000 ಗ್ರಾಮ ಪಂಚಾಯಿತಿಗಳಿಗೆ ನಡೆಸುವ ಚುನಾವಣೆಯಲ್ಲಿ ಇದುವರೆಗೂ ಮತಪತ್ರವನ್ನೇ ಬಳಸಲಾಗಿದೆ. 2.97 ಕೋಟಿ ಮತದಾರರು ಇದ್ದಾರೆ. ಅಲ್ಲಿ ಮತಪತ್ರ ಯಶಸ್ವಿಯಾಗಿ ಬಳಸಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ 80ರಿಂದ 90 ಲಕ್ಷ ಮತದಾರರು ಇದ್ದಾರೆ. ಇಷ್ಟು ಮತದಾರರಿಗೆ ಮತಪತ್ರಗಳನ್ನು ಬಳಕೆ ಮಾಡುವುದರಲ್ಲಿ ಯಾವ ಸಮಸ್ಯೆಯೂ ಇಲ್ಲ. ಮತಪ್ರಮಾಣ ಹೆಚ್ಚಳಕ್ಕೆ ಜಾಗೃತಿ ಮೂಡಿಸುವ ಹಲವು ಕ್ರಮಗಳನ್ನು ಆಯೋಗ ಕೈಗೊಳ್ಳಲಿದೆ.

• ಮತಪತ್ರ ಬಳಸಲು ಅಗತ್ಯವಾದ ಮತಪೆಟ್ಟಿಗೆ ಇವೆಯೇ?

ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಪಾಲಿಕೆಗಳಿಗೆ ಸಾಕಾಗುವಷ್ಟು ಮತಪೆಟ್ಟಿಗೆಗಳು ಇವೆ. 8 ಸಾವಿರಕ್ಕೂ ಹೆಚ್ಚು ಮತಪೆಟ್ಟಿಗೆಗಳು ಈಗಾಗಲೇ ಸಿದ್ಧ ಇವೆ. ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ಇನ್ನಷ್ಟು ಮತಪೆಟ್ಟಿಗೆಗಳ ಅಗತ್ಯವಿದೆ. ಖರೀದಿಗಾಗಿ ಅಗತ್ಯ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.

• ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ ಐದು ವರ್ಷ ವಿಳಂಬ ಏಕೆ?

ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ 2016ರ ಏಪ್ರಿಲ್‌ನಲ್ಲಿ ಚುನಾವಣೆ ನಡೆದಿತ್ತು. ಅಂದು ಆಯ್ಕೆಯಾಗಿದ್ದ ಸದಸ್ಯರ ಅವಧಿ 2021ರ ಏಪ್ರಿಲ್ 27ರಂದು ಮುಕ್ತಾಯವಾಗಿತ್ತು. ಚುನಾವಣೆಗೆ ಸಿದ್ಧತೆ ನಡೆದಿರುವಾಗಲೇ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆಯಲಾಗಿತ್ತು. ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ಕ್ಕೆ ನೀಡಲಾಗಿತ್ತು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ವಿಳಂಬದ ವಿರುದ್ಧ ಹೈಕೋರ್ಟ್ ಮೊರೆ ಹೋಗಿದ್ದೇವೆ. ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಾಗಿ 2023ರ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ನಂತರ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ಸರ್ಕಾರ ರಚಿಸಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಆದರೆ, ಮೀಸಲಾತಿ ನಿಗದಿಯನ್ನು ಇಲ್ಲಿಯವರೆಗೂ ಅಂತಿಮಗೊಳಿಸಿಲ್ಲ.

• ಚುನಾವಣೆ ನಡೆಸುವ ಕುರಿತು ಆಯೋಗದ ಮುಂದಿನ ನಡೆ ಏನು?

ವಿಳಂಬಕ್ಕೆ ಹೈಕೋರ್ಟ್ ಈಗಾಗಲೇ ರಾಜ್ಯ ಸರ್ಕಾರಕ್ಕೆ ದಂಡ ವಿಧಿಸಿದೆ. ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ ಅವಧಿಯ ಒಳಗೆ ಚುನಾವಣೆ ನಡೆಸಲು ಸಹಕರಿಸಿಲ್ಲ ಎಂದು ಮತ್ತೊಂದು ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸಿದ್ದೇವೆ. ಕೋರ್ಟ್ ಇದೇ ಜನವರಿ 30ರಂದು ಸಮಯ ನಿಗದಿ ಮಾಡಿದೆ. ಅಷ್ಟರ ಒಳಗೆ ಮತಕ್ಷೇತ್ರಗಳ ವಿವರ, ಮೀಸಲಾತಿ ಪಟ್ಟಿ ತಲುಪುವ ನಿರೀಕ್ಷೆ ಇದೆ. ಅವಧಿ ಮುಕ್ತಾಯಗೊಂಡ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಕ್ಷೇತ್ರಗಳ ಪಟ್ಟಿ ಹಾಗೂ ಮೀಸಲಾತಿ ಅಧಿಸೂಚನೆ ಹೊರಡಿಸದೇ ಇದ್ದರೆ, ಹಿಂದಿನ ಚುನಾವಣೆಯಲ್ಲಿ ನಿಗದಿ ಮಾಡಲಾಗಿದ್ದ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿ ಅನ್ವಯವೇ ಚುನಾವಣೆ ನಡೆಸಬಹುದು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಜ.30ರ ನಂತರ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು.

• ಎಷ್ಟು ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬವಾಗಿದೆ?

ಮೈಸೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಮಂಗಳೂರು ಸೇರಿ ಐದು ಮಹಾನಗರ ಪಾಲಿಕೆಗಳು, 192 ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಿದೆ. ಹೊಸ ಪಟ್ಟಣ ಪಂಚಾಯಿತಿಗಳ ಘೋಷಣೆ, ಪುರಸಭೆ, ನಗರಸಭೆಗಳಾಗಿ ಮೇಲ್ದರ್ಜೆಗೆ ಏರಿಕೆ ಮಾಡಿದಾಗ ನಗರಗಳ ಸೆರಗಿನ ಹಲವು ಪಂಚಾಯಿತಿಗಳು ವಿಲೀನವಾಗುತ್ತವೆ. ಅವುಗಳನ್ನು ಸೇರಿಸಿ, ಕೆಲವನ್ನು ಕೈಬಿಟ್ಟು ಆಯಾ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಬೇಕು. ಇಂತಹ ಕಾರ್ಯಗಳಲ್ಲಿ ವಿಳಂಬವಾಗುತ್ತಿದೆ. ಅಧಿಕಾರಿಗಳು, ಸರ್ಕಾರದ ಇಚ್ಛಾಶಕ್ತಿಯ ಕೊರತೆಯೂ ಇದಕ್ಕೆ ಕಾರಣ ಇರಬಹುದು. ಎರಡು ತಿಂಗಳಲ್ಲಿ ಶೇ 90ರಷ್ಟು ಗ್ರಾಮ ಪಂಚಾಯಿತಿಗಳ ಅವಧಿ ಮುಗಿಯುತ್ತದೆ. ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳನ್ನು ಪರಿಗಣಿಸಿ ಮೂರೂ ಸ್ತರಗಳ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕಿದೆ. ❖

ಎಲ್ಲ ಮತಗಟ್ಟೆಗಳಿಗೂ 'ವೆಬ್ ಕಾಸ್ಟಿಂಗ್'

ಮೊದಲೆಲ್ಲ ಸೂಕ್ಷ್ಮ ಮತಗಟ್ಟೆಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗುತ್ತಿತ್ತು. ಈ ಬಾರಿ ಪ್ರತಿ ಮತಗಟ್ಟೆಯಲ್ಲೂ ಸಿ.ಸಿ.ಟಿ.ವಿ. ಕ್ಯಾಮೆರಾ ವೆಬ್‌ಕಾಸ್ಟಿಂಗ್ ಕಣ್ಗಾವಲು ಇರಲಿದೆ ಎಂದು ರಾಜ್ಯ ಚುನಾವಣಾ ಆಯುಕ್ತ ಸಂಗ್ರೇಶಿ ಹೇಳಿದರು.

ಹಿಂದೆಲ್ಲ ಮತಪೆಟ್ಟಿಗೆಗಳನ್ನೇ ಹೊತ್ತೊಯ್ದ ಪ್ರಕರಣಗಳು ನಡೆದಿವೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಹೊತ್ತುಕೊಂಡು ಹೋಗುವವರಿಗೆ ಮತ ಪೆಟ್ಟಿಗೆ, ಮತಯಂತ್ರ ಅನ್ನುವ ವ್ಯತ್ಯಾಸ ಇರುವುದಿಲ್ಲ. ಅಂತಹ ಪ್ರಕರಣಗಳಿಗೆ ಅವಕಾಶ ಇಲ್ಲದಂತೆ ಜನರು, ಪಕ್ಷಗಳು, ಪೊಲೀಸರ ಸಹಕಾರ ಪಡೆದು ನಿರ್ವಹಣೆ ಮಾಡವಷ್ಟು ಆಯೋಗ ಸಮರ್ಥವಾಗಿದೆ. ಕಟ್ಟುನಿಟ್ಟಿನ, ಪಾರದರ್ಶಕ ಚುನಾವಣೆಗೆ ಅಗತ್ಯ ಇರುವಷ್ಟು ಸಿಬ್ಬಂದಿ, ಪೊಲೀಸರನ್ನು ಬಳಕೆ ಮಾಡಲಾಗುತ್ತದೆ. ಮತಪತ್ರ ನಕಲಿಗೂ ಅವಕಾಶ ನೀಡುವುದಿಲ್ಲ. ಹಲವು ಕಠಿಣ ಕ್ರಮಗಳನ್ನು ಅಳವಡಿಸಲಾಗುತ್ತದೆ' ಎಂದರು.

• ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಸುವಂತೆ ರಾಜ್ಯ ಸರ್ಕಾರದ ಒತ್ತಡವಿದೆಯಾ?

ಖಂಡಿತಾ ಯಾರದೇ ಒತ್ತಡವಿಲ್ಲ. ಚುನಾವಣಾ ಆಯೋಗ ರಾಜ್ಯ ಸರ್ಕಾರದ ಅಧೀನ ಸಂಸ್ಥೆಯಲ್ಲ. ಸಾಂವಿಧಾನಿಕ ಸಂಸ್ಥೆ. ರಾಜಕೀಯ ಪಕ್ಷಗಳು ಚುನಾವಣೆಗೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ಆಯೋಗಕ್ಕೆ ಮನವಿ ಮಾಡುತ್ತವೆ. ಮತಪತ್ರ ಬಳಸುವಂತೆ ಕೆಲ ಪಕ್ಷಗಳು, ಇವಿಎಂ ಬಳಕೆ ಕುರಿತು ಕೆಲ ಪಕ್ಷಗಳ ಪ್ರತಿನಿಧಿಗಳು ಕಚೇರಿಗೆ ಬಂದು ಮನವಿ ಮಾಡಿದ್ದಾರೆ. ಯಾರೇ ಮನವಿ ಮಾಡಿದರೂ ನಿಯಮಗಳಲ್ಲಿರುವ ಅವಕಾಶದಂತೆ ಆಯೋಗ ಕ್ರಮ ಕೈಗೊಳ್ಳುತ್ತದೆ. ಇವಿಎಂ, ಮತಪತ್ರಗಳ ವಿಚಾರದಲ್ಲೂ ಕೂಲಂಕಷ ಪರಿಶೀಲನೆಯ ಬಳಿಕ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಅತ್ಯಂತ ದೊಡ್ಡ ಚುನಾವಣೆ ಗ್ರಾಮ ಪಂಚಾಯಿತಿಗಳ ಚುನಾವಣೆ. 2.97 ಕೋಟಿ ಮತದಾರರು ಭಾಗವಹಿಸುವ ಚುನಾವಣೆಗೆ ಮತಪತ್ರ ಬಳಕೆ ಮಾಡುತ್ತಿದ್ದೇವೆ. ಹಾಗಾಗಿ, ಇತರ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತಪತ್ರ ಬಳಕೆ ಬಗ್ಗೆ ವಿರೋಧ ವ್ಯಕ್ತ ಮಾಡುವುದು, ವಿವಾದ ಮಾಡುವುದು ಸರಿಯಲ್ಲ. ಇಂತಹ ವಿಚಾರಗಳಲ್ಲಿ ಒತ್ತಡಗಳಿಗೆ ಆಯೋಗ ಮಣಿಯುವುದೂ ಇಲ್ಲ.

ಕಿರಿಯ ಮುಖಂಡನಿಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಪಟ್ಟ

ನಿತಿನ್ ನವೀನ್ ಬಿಜೆಪಿಯ ಹೊಸ ಬಾಸ್

ಪಕ್ಷದ ನೂತನ ಸಾರಥಿಗಾಗಿ ವರ್ಷದಿಂದ ಹುಡುಕಾಟ ನಡೆಸುತ್ತಿದ್ದ ಪ್ರಧಾನಿ ನರೇಂದ್ರ ಮೋದಿ–ಅಮಿತ್ ಶಾ ಜೋಡಿ ಹೆಕ್ಕಿ ತಂದಿದ್ದು ಬಿಹಾರದ ನವೀನ್ ಅವರನ್ನು. 45 ಹರೆಯದ ಅವರು ಈಗ ವಿಶ್ವದ ಅತೀ ದೊಡ್ಡ ರಾಜಕೀಯ ಪಕ್ಷದ ಅತೀ ಕಿರಿಯ ಅಧ್ಯಕ್ಷ. 1980ರಲ್ಲಿ ಜನ್ಮ ತಳೆದ ಬಿಜೆಪಿಗಿಂತ ನವೀನ್ ಅವರು ಒಂದು ವರ್ಷ ಕಿರಿಯರು ಅಷ್ಟೇ. '2047ರ ವಿಕಸಿತ ಭಾರತ'ದ ಸಂಕಲ್ಪ ತೊಟ್ಟಿರುವ ಮೋದಿ ಹಾಗೂ ಬಿಜೆಪಿಗೆ ಅವರು ಈಗ 'ಬಾಸ್'

• ಮಂಜುನಾಥ ಹೆಬ್ಬಾರ್

ವ್ಯಕ್ತಿ

ಛತ್ತೀಸಗಢ ವಿಧಾನಸಭೆಗೆ 2018ರ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಕೇವಲ 15 ಸ್ಥಾನಗಳನ್ನು ಗಳಿಸಿ ಹೀನಾಯವಾಗಿ ಸೋತಿತ್ತು. ಈ ಸೋಲಿನಿಂದ ಪಕ್ಷದ ನಾಯಕರ ಜಂಘಾಬಲ ಉಡುಗಿಹೋಗಿತ್ತು. ರಾಜ್ಯ ಘಟಕದಲ್ಲಿ ಬಣ ಕಿತ್ತಾಟ ತೀವ್ರವಾಗಿತ್ತು. 2019ರಲ್ಲಿ ಬಿಹಾರದ ಶಾಸಕ ನಿತಿನ್ ನವೀನ್ ಅವರನ್ನು ಛತ್ತೀಸಗಢ ರಾಜ್ಯ ಸಹಉಸ್ತುವಾರಿಯಾಗಿ ವರಿಷ್ಠರು ನೇಮಿಸಿದ್ದರು. ಹೊಣೆ ಹೊತ್ತುಕೊಂಡ ಬಳಿಕ ನವೀನ್ ಅವರು ರಾಜ್ಯ ನಾಯಕರನ್ನು ಭೇಟಿ ಮಾಡುತ್ತಾ ಕಾಲಹರಣ ಮಾಡಲಿಲ್ಲ. ಖುದ್ದಾಗಿ ತಳಮಟ್ಟದ ನಾಯಕರನ್ನು ಭೇಟಿ ಮಾಡಿ ಸಂಘಟನೆ ಚುರುಕುಗೊಳಿಸಿದರು. ಮುಂದಿನ ಚುನಾವಣೆಯಲ್ಲಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ನವೀನ್ 2021ರಲ್ಲೇ 'ಭವಿಷ್ಯ' ನುಡಿದಿದ್ದರು. ಅವರ ಮಾತನ್ನು ಕೇಳಿ ನಕ್ಕವರೇ ಜಾಸ್ತಿ. ಆಗ ಭೂಪೇಶ್ ಬಘೆಲ್ ಅವರ ಜನಪ್ರಿಯ ನಾಯಕತ್ವ ಹಾಗೂ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಂದಾಗಿ ಕಾಂಗ್ರೆಸ್ ಸುಲಲಿತವಾಗಿ ಮರಳಿ ಗೆಲ್ಲಲಿದೆ ಎಂಬ ವಾತಾವರಣ ಇತ್ತು.

ನವೀನ್ ಅವರು ಗ್ರಾಮ ಗ್ರಾಮಗಳಿಗೆ ಸುತ್ತಾಡಿ ಕಾರ್ಯಕರ್ತರ ಜತೆ ಬೆರೆತು ಸಂಘಟನಾ ಚಟುವಟಿಕೆಗೆ ಹೊಸ ರೂಪ ನೀಡಿದರು. ಮುಖ್ಯ ವಾಹಿನಿಯಲ್ಲಿ ಕಾಣಿಸಿಕೊಳ್ಳದೆ ತೆರೆಯ ಹಿಂದೆ ಇದ್ದು ತಡರಾತ್ರಿಯವರೆಗೂ ಕಾರ್ಯತಂತ್ರ ರೂಪಿಸಿದರು. ಗೆಲುವಿನ ವಿಶ್ವಾಸವನ್ನೇ ಕಳೆದುಕೊಂಡಿದ್ದ ಕಾರ್ಯಕರ್ತರು ಹಾಗೂ ನಾಯಕರಿಗೆ ಹುರುಪು ತುಂಬಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಕಮಲ ಪಾಳಯ 54 ಸ್ಥಾನಗಳನ್ನು ಗಳಿಸಿ ಅಚ್ಚರಿಯ ಜಯ ಗಳಿಸಿತು. 2024ರ ಲೋಕಸಭಾ ಚುನಾವಣೆಯಲ್ಲೂ ರಾಜ್ಯದಲ್ಲಿ ಪಕ್ಷವು 11ರಲ್ಲಿ 10 ಸ್ಥಾನಗಳನ್ನು ಗೆಲ್ಲುವಲ್ಲಿ ನವೀನ್ ಕಾರ್ಯತಂತ್ರ ಫಲ ನೀಡಿತು. ಆಗ ನಿತಿನ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅತ್ಯಾಪ್ತ ಬಳಗದಲ್ಲಿ ಸ್ಥಾನ ಸಿಕ್ಕಿತು. ಬಿಹಾರ ವಿಧಾನಸಭಾ ಚುನಾವಣೆಯಲ್ಲೂ ನಿತಿನ್ ಅವರು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು.

ಪಕ್ಷದ ನೂತನ ಸಾರಥಿಗಾಗಿ ವರ್ಷದಿಂದ ಹುಡುಕಾಟ ನಡೆಸುತ್ತಿದ್ದ ಪ್ರಧಾನಿ ನರೇಂದ್ರ ಮೋದಿ–ಅಮಿತ್ ಶಾ ಜೋಡಿ ಹೆಕ್ಕಿ ತಂದಿದ್ದು ಬಿಹಾರದ ನವೀನ್ ಅವರನ್ನು. 45 ಹರೆಯದ ಅವರು ಈಗ ವಿಶ್ವದ ಅತೀ ದೊಡ್ಡ ರಾಜಕೀಯ ಪಕ್ಷದ ಅತೀ ಕಿರಿಯ ಅಧ್ಯಕ್ಷ. 1980ರಲ್ಲಿ ಜನ್ಮ ತಳೆದ ಬಿಜೆಪಿಗಿಂತ ನವೀನ್ ಅವರು ಒಂದು ವರ್ಷ ಕಿರಿಯರು ಅಷ್ಟೇ. '2047ರ ವಿಕಸಿತ ಭಾರತ'ದ ಸಂಕಲ್ಪ ತೊಟ್ಟಿರುವ ನರೇಂದ್ರ ಮೋದಿ ಹಾಗೂ ಬಿಜೆಪಿಗೆ ಅವರು ಈಗ 'ಬಾಸ್'.

ರಾಷ್ಟ್ರ ರಾಜಕಾರಣದಲ್ಲಿ ಹಿಡಿತವನ್ನು ಮತ್ತಷ್ಟು ಭದ್ರಗೊಳಿಸಲು ಹಾಗೂ ಯುವ ಮತಗಳು ಆಚೀಚೆ ಕದಲದಂತೆ ನೋಡಿಕೊಳ್ಳಲು ಕಮಲ ಪಾಳಯವು ನಿತಿನ್‌ಗೆ ಪಕ್ಷದ ನಾಯಕತ್ವದ ಹೊಣೆ ವಹಿಸಿದೆ. ಕಠಿಣ ಪರಿಶ್ರಮಿ ನವೀನ್ ಅವರ ನೇಮಕವು ಈ ವರ್ಷ ಮತ್ತು ಮುಂದಿನ ವರ್ಷ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ, ಪಂಜಾಬ್ ಮತ್ತು ಉತ್ತರ ಪ್ರದೇಶ ಸೇರಿದಂತೆ ಪ್ರಮುಖ ರಾಜ್ಯಗಳ ಚುನಾವಣೆಗಳು ಮತ್ತು 2029ರ ಲೋಕಸಭಾ ಚುನಾವಣೆಗೆ ಮುನ್ನ ಬಿಜೆಪಿಯ

ಸಂಘಟನಾತ್ಮಕ ಶಕ್ತಿ ಮತ್ತು ಪೀಳಿಗೆಯ ಪರಿವರ್ತನೆಗೆ ಹೊಸ ಒತ್ತು ನೀಡುವ ಸಂಕೇತವಾಗಿದೆ. ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿ ಅವರನ್ನು ಪ್ರತಿಷ್ಠಾಪಿಸಿರುವುದು ಮುಂದಿನ ಪೀಳಿಗೆಗೆ ನಾಯಕತ್ವ ಬದಲಾವಣೆಯ ಸೂಚಕ. ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಹಿರಿ ತಲೆಗಳನ್ನು ಬದಿಗಿಟ್ಟು 'ನವ ನಾಯಕ'ರನ್ನು ಮುಖ್ಯಮಂತ್ರಿ ಗದ್ದುಗೆಗೆ ಏರಿಸುವ ಮೂಲಕ ಬಿಜೆಪಿಯು ಹೊಸ ತಲೆಮಾರಿಗೆ ನಾಯಕತ್ವ ವರ್ಗಾಯಿಸುವ ಸೂಚನೆ ನೀಡಿತ್ತು. ಇದೀಗ, ಮತ್ತೊಂದು ಹೆಜ್ಜೆ ಮುಂದೆ ಹೋಗಿದೆ. ಸರ್ಕಾರ ಹಾಗೂ ಪಕ್ಷದಲ್ಲಿ ಆಯಕಟ್ಟಿನ ಜಾಗದಲ್ಲಿರುವ ಹಿರಿಯರು ಕಿರಿಯರಿಗೆ ಹಂತ ಹಂತವಾಗಿ ಜಾಗ ಬಿಟ್ಟು ಕೊಡಬೇಕು ಎಂಬ ಸಂದೇಶವನ್ನೂ ರವಾನಿಸಿದೆ.

26ನೇ ವಯಸ್ಸಿನಲ್ಲೇ ಚುನಾವಣೆ ಗೆದ್ದು ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿಯಂತಹ ಮಹತ್ವದ ಖಾತೆಗಳನ್ನು ನಿಭಾಯಿಸಿರುವ ನವೀನ್ ಅವರು ಎರಡು ದಶಕಗಳ ಸಂಘಟನಾ ಅನುಭವ ಹೊಂದಿದ್ದಾರೆ. ಅವರು ಕಾಯಸ್ಥ ಜಾತಿಗೆ ಸೇರಿದವರು. ಬಿಹಾರದ ಜನಸಂಖ್ಯೆಯಲ್ಲಿ ಈ ಜಾತಿಯ ಪಾಲು ಶೇ 0.60ರಷ್ಟು. ಜಾತಿ ಲೆಕ್ಕಾಚಾರ ಬದಿಗಿಟ್ಟು ಸಂಘಟನಾ ಚಾತುರ್ಯಕ್ಕೆ ಬಿಜೆಪಿ ಉನ್ನತ ನಾಯಕರು ಮಣೆ ಹಾಕಿರುವುದು ಸ್ಪಷ್ಟ.

ನಿತಿನ್ ಅವರ ತಂದೆ ನವೀನ್ ಕಿಶೋರ್ ಸಿನ್ಹಾ ಅವರು ಆರ್‌ಎಸ್‌ಎಸ್ ಜತೆಗೆ ನಿಕಟ ಸಂಬಂಧ ಹೊಂದಿದ್ದರು. ತಂದೆ ನಿಧನರಾದ ಬಳಿಕ 2006ರಲ್ಲಿ ಪಟ್ನಾ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಅವರು ರಾಜಕೀಯ ಪ್ರವೇಶಿಸಿದರು. ಆಗ ಅವರು ಮೊದಲ ಬಾರಿಗೆ ಶಾಸಕರಾದರು.

ಅವರು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ರಾಜಕೀಯ ಪಯಣ ಆರಂಭಿಸಿದರು. ಆ ಬಳಿಕ ಬಿಜೆಪಿ ಯುವ ಮೋರ್ಚಾದಲ್ಲಿ ಪ್ರವರ್ಧಮಾನಕ್ಕೆ ಬಂದರು. 2016–19ರಲ್ಲಿ ಪಕ್ಷದ ರಾಜ್ಯ ಯುವ ಮೋರ್ಚಾ ಹಾಗೂ ರಾಷ್ಟ್ರೀಯ ಯುವ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ನಿತಿನ್ ಅವರು ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ನೇಮಕಗೊಳ್ಳುವ ಮುನ್ನ ಬಿಹಾರದ ಆಚೆಗೆ ಅವರ ಹೆಸರು ಕೇಳಿದವರು ಅಪರೂಪ. ಅದಕ್ಕೆ ಅವರನ್ನು ಮೋದಿ ಅವರು 'ತಳಮಟ್ಟದ ಕಾರ್ಯಕರ್ತ' ಎಂದು ಹೊಗಳಿದ್ದು. ❖

ಬೆಟ್ಟದಷ್ಟು ಸವಾಲುಗಳು

ಬಿಜೆಪಿಯ 12ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಚುಕ್ಕಾಣಿ ಹಿಡಿದಿರುವ ಬಿಹಾರದ ಐದು ಬಾರಿಯ ಶಾಸಕ ನಿತಿನ್ ನವೀನ್ ಅವರ ಮುಂದೆ ಬೆಟ್ಟದಷ್ಟು ಸವಾಲುಗಳು ಇವೆ. ಕೇಸರಿ ಪಾಳಯದಲ್ಲಿ 2014ರಿಂದ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ತೆಗೆದುಕೊಳ್ಳುವ ತೀರ್ಮಾನಗಳೇ ಅಂತಿಮ. ಕಳೆದ ಐದು ವರ್ಷ ಅಧ್ಯಕ್ಷರಾಗಿದ್ದ ಜೆ.ಪಿ.ನಡ್ಡಾ ಉತ್ಸವ ಮೂರ್ತಿಯಂತೆ ಇದ್ದರು. ರಿಮೋಟ್ ಕಂಟ್ರೋಲ್ ಶಾ ಅವರ ಕೈಯಲ್ಲೇ ಇತ್ತು. ಐದು ವರ್ಷಗಳಲ್ಲಿ ಪಕ್ಷ 30 ಚುನಾವಣೆಗಳಲ್ಲಿ ಗೆಲ್ಲಲು ಮೋದಿ ನಾಮಬಲ ಹಾಗೂ ಶಾ ಹೊಸೆದ ರಣನೀತಿಗಳೇ ಪ್ರಮುಖ ಕಾರಣ. ಈಗ ನವೀನ್ ಅವರು ಮೋದಿ–ಅಮಿತ್ ಶಾ ನೆರಳಿನಿಂದ ಹೊರ ಬಂದು ಸ್ವತಂತ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆಯೇ ಎಂಬುದು ಸದ್ಯದ ಕುತೂಹಲ.

ಪೂರ್ವ ಹಾಗೂ ದಕ್ಷಿಣ ಬಿಜೆಪಿ ಪಾಲಿಗೆ ಕಡು ಕಠಿಣ ಹಾದಿ. ಏಪ್ರಿಲ್‌ನಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷವನ್ನು ಗೆಲ್ಲಿಸಿಕೊಂಡು ಬರಬೇಕಿದೆ. ಪಶ್ಚಿಮ ಬಂಗಾಳ, ಕೇರಳ ಹಾಗೂ ತಮಿಳುನಾಡಿನಲ್ಲಿ ಪಕ್ಷ ಈವರೆಗೆ ಅಧಿಕಾರದ ಸನಿಹಕ್ಕೇ ಬಂದಿಲ್ಲ. ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಉತ್ತರ ಪ್ರದೇಶ ಸೇರಿದಂತೆ ಪಂಚ ರಾಜ್ಯಗಳ ಚುನಾವಣೆಗಳಲ್ಲಿ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿ ತಮ್ಮ ಸಾಮರ್ಥ್ಯವನ್ನು ಅವರು ಸಾಬೀತುಪಡಿಸಬೇಕಿದೆ. ಘಟಾನುಘಟಿ ಹಿರಿಯ ನೇತಾರರನ್ನು ನಿಭಾಯಿಸಿಕೊಂಡೇ ಪಕ್ಷದ ಉನ್ನತ ಹುದ್ದೆಗಳಿಗೆ ಹೊಸಬರನ್ನು ನೇಮಿಸಿಕೊಂಡು ನವೀನ ರೀತಿಯಲ್ಲಿ ಕಮಲ ರಥವನ್ನು ಮುನ್ನಡೆಸುವ ಸವಾಲು ಅವರ ಮುಂದಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

24 ಜನವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಷಷ್ಠಿ ಗಂ. 24-40 ನಕ್ಷತ್ರ: ಉತ್ತರಾಭಾದ್ರ ಗಂ. 14-16 ಯೋಗ: ಶಿವ ಗಂ. 14-02 ಕರಣ: ಕೌಲವ ಗಂ. 13-17 ಮಕರ ಮಾಸದ 10 ನೇ ದಿನ. ಮಳೆ ನಕ್ಷತ್ರ : ಶ್ರವಣ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00-10-30, ಸೂರ್ಯೋದಯ : 07-01 ಸೂರ್ಯಾಸ್ತ : 06-24, ಮುಸ್ಲಿಂ ದಿನಾಂಕ : 4 ಶಬನ್, ಅದೃಷ್ಟ ಸಂಖ್ಯೆ : 10, 5,

ಮೇಷ: ಜವಳಿ ಮಾರಾಟಗಾರರು ಹೊಸ ದಾಸ್ತಾನು ತರಲು ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಉದ್ಯೋಗಕ್ಕಾಗಿ ವಿದೇಶ ಪ್ರಯಾಣದ ಅವಕಾಶಗಳು ಸಿಗಬಹುದು

ವೃಷಭ: ಸುಖಕರವಾಗಿರುವ ದಾಂಪತ್ಯದಲ್ಲಿ ಬೇರೆಯವರ ಮಾತಿಗೆ ಆಸ್ಪದ ಕೊಟ್ಟು ಮೋಸ ಹೋಗುವುದು ಬೇಡ. ನಿಮ್ಮ ಕೈಗೆ ಎಟಕುವ ವಿಷಯಗಳ ಬಗ್ಗೆ ಮಾತ್ರ ಚಿಂತಿಸಿ. ಕುಟುಂಬದ ಸಂತೋಷ ವೃದ್ಧಿ.

ಮಿಥುನ: ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿರಲು ಶಿಸ್ತಿನ ಜೀವನ ನಡೆಸಬೇಕಾಗುತ್ತದೆ. ಮನೆಯಲ್ಲಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ದೂರಾಗುವುದು.

ಕರ್ಕಾಟಕ: ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವುದು ಅಥವಾ ಆಸಕ್ತಿ ಬೆಳೆಸಿಕೊಳ್ಳುವುದು ಅಗತ್ಯ. ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ.

ಸಿಂಹ: ಅದೃಷ್ಟವು ಚೆನ್ನಾಗಿರುವ ಕಾರಣ ಬಂದ ಅವಕಾಶಗಳನ್ನು ಸದುಪಯೋಗಿಸಿಕೊಂಡಲ್ಲಿ ಅಧಿಕ ಲಾಭ ಕಾಣಬಹುದು. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ಕನ್ಯಾ: ಸಂತಸದ ಸುದ್ದಿಯನ್ನು ಮಾತ್ರ ತಿಳಿಸಿ ದುಃಖದ ವಿಷಯವನ್ನು ತಿಳಿಸದಿರುವುದು ಪ್ರವೃತ್ತಿಗೆ ಸರಿ ಎನ್ನಿಸುವುದಿಲ್ಲ. ಹೊಸ ಉದ್ಯೋಗಕ್ಕಾಗಿ ಪರಿಚಿತರಿಂದ ಅವಕಾಶಗಳು ಸಿಗಲಿವೆ. ಪುಣ್ಯ ಸಂಪಾದನೆ ಧ್ಯೇಯವಾಗಿರಲಿ.

ತುಲಾ: ಸರ್ಕಾರಿ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಯೋಚನೆಯನ್ನು ಮಾಡಿ. ನಿರುದ್ಯೋಗಿಗಳಿಗೆ ಜೀವನ ನಿರ್ವಹಿಸಲು ಸಾಕಾಗುವಂಥ ವರಮಾನವಿರುವ ಸಣ್ಣಮಟ್ಟದ ಕೆಲಸ ದೊರೆಯಲಿದೆ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶಗಳು ದೊರೆಯುತ್ತವೆ. ವರಿಷ್ಠರೊಡನೆ ಗಣಿಗಾರಿಕೆ ವಿಷಯಗಳ ಬಗ್ಗೆ ಚರ್ಚೆ ಸಂಭವಿಸಬಹುದು. ನೀಲಿ ಬಣ್ಣ ಶುಭ ತರಲಿದೆ.

ಧನು: ಹಣದ ಆಸೆಯಿಂದ ಹೊರಬರುವ ಪ್ರಯತ್ನವು ನೆಮ್ಮದಿಯ ಜೀವನವನ್ನು ನಡೆಸಲು ಕಾರಣವಾಗುತ್ತದೆ. ದೇವರ ಅನುಗ್ರಹದಿಂದ ಜಯಶಾಲಿಯಾಗುವ ಲಕ್ಷಣವಿರುವುದು.

ಮಕರ: ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳವನ್ನು ಹೂಡುವಿರಿ. ಯುವ ಕಲಾವಿದರಿಗೆ ಅವಕಾಶಗಳು ಲಭಿಸುವುದು. ಅನಿವಾರ್ಯದ ಪ್ರಯಾಣಗಳು ಹೆಚ್ಚಾಗಲಿದೆ.

ಕುಂಭ: ಶ್ರೀಕೃಷ್ಣನ ಸ್ಮರಣೆಯನ್ನು ನಿರಂತರವಾಗಿ ಮಾಡುವುದರಿಂದ ಬಂದಿರುವಂಥ ಸಕಲ ದುರಿತಗಳು ದೂರವಾಗುವು. ನೈತಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ.

ಮೀನ: ಆತುರದ ಸ್ವಭಾವವನ್ನು ಸುಧಾರಿಸಿಕೊಂಡು ಮತ್ತೊಬ್ಬರ ಭಾವನೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ತಿಳಿದುಕೊಂಡರೆ ಉತ್ತಮ ವ್ಯಕ್ತಿಯಾಗುವಿರಿ. ಸಮಸ್ಯೆ ಬಗೆಹರಿದು ನೆಮ್ಮದಿ ಮೂಡಲಿದೆ.

ಪದಬಂಧ 6294

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2. ಮಹಿಮಾವಂತ ತೋರಿಸಿದ ಕೋಣ (3)
4.ವಿಷ್ಣುವಿನ ದಶಾವತಾರದಲ್ಲಿ ಐದನೆಯದು (3)
5.ಹೆದರುವುದೇ ಸ್ವಭಾವವಾಗಿರುವ ವ್ಯಕ್ತಿ (4)
.ಕಾಡುಪ್ರಾಣಿ ಇಲ್ಲಿ ಕಾಣುತ್ತಿದೆ (4)
7.ಕೆಸರಲ್ಲಿ ಸಿಕ್ಕಿಕೊಂಡಿರುವ ಮೆಟ್ಟು (2)
9.ಗುಹೆಯನ್ನು ಹೀಗೂ ಹೇಳುವರು (2)
13.ಹೊಸಯುಗ ಈ ತರ ಬಂದಿದೆ (4)
14.ಅವಶ್ಯವಿಲ್ಲದ ಖರ್ಚು (4)
15.ಕಪಟಕ್ಕೊಂದು ಪರ್ಯಾಯ ಪದ (3)
16.ತೀಕ್ಷ್ಣತೆ ಅಥವಾ ಹಸಿರು ಬಣ್ಣವೂ ಆದೀತು! (3)

ಮೇಲಿಂದ ಕೆಳಕ್ಕೆ

1.ರತ್ನ ಖಚಿತವಾದ ಒಡವೆ (4)
2.ಮನದಿಂದ ಬಂದಿರುವ ದೃಢವಾದ ನಂಬಿಕೆ (5)
3.ಕಿರೀಟ ಇಲ್ಲಿದೆ (3)
5.ಅಂಗದಲ್ಲಿರುವ ಸುಗಂಧಲೇಪನ ದ್ರವ್ಯ (4)
8.ದ್ರವದಿಂದ ತುಂಬಿರುವುದು (4)
10.ಈತ ವಿವೇಕಶಾಲಿ (5)
11.ಸಮರ್ಪಕವಲ್ಲದ ಕಾರಣ (4)
12.ಅತಿಯಾದ ಬಯಕೆ (3)



6293ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಸ್ಥಾನ 4.ದೀನಭಾವ
6.ನಮಸ್ಕಾರ 7.ರಜತ
10.ಮಡದಿ 12.ಹಸುಗೂಸು
15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ:
1.ಸಂಹಿತೆ 2.ನದೀತೀರ
3.ಭವನ 5.ತರಕಾರಿ
8.ತತ್ಸಮ 9.ಮನೋಹರ
11.ದಿಗ್ವಿಜಯ 13.ಸುಮತಿ
14.ಆಪತ್ತು

ಸುಡೊಕು 6678

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				7		1	
8		7	6		4			
	2			8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

6677ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,232
ಇಂದಿನ ಅಂತ್ಯ: 25,157
ದಿನದ ಗರಿಷ್ಠ: 24,919
75

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹555
12 ಕ್ಕೆ ₹75
ಮೈಸೂರು: 100 ಕ್ಕೆ ₹555

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿ)
ಆರ್‌ಎಸ್‌ಎಸ್-4 ₹192
ಆರ್‌ಎಸ್‌ಎಸ್-5 ₹187
ಗುಡ್ ಲಾಟ್ ₹176

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಪ್ರ.ಕೆ) ₹455-763
ದ್ವಿತಳಿ (ಬಿ.ವಿ) ₹260-950

ಮುದ್ರೆಮನ ಕಾಫಿ
ಎಪಿ ₹26250
ಎಪಿ ₹14140
ಆರ್‌ಪಿ ₹17600
ಆರ್‌ಸಿ ₹10250

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)
ಶೇಂಗಾ (ರಿಫೈನ್ಡ್) ₹1670 (1650)
ಸೋಯಾ (ರಿಫೈನ್ಡ್) ₹1380 (1370)
ಸೂರ್ಯಕಾಂತಿ (ರಿಫೈನ್ಡ್) ₹1620 (1620)
ಪಾಮೊಲೀನ್ ₹1300 (1300)

ಅಡಿಕೆ ಧಾರಣೆ

ಕುಮಟಾ		ಶಿರಸಿ			
ಚಾಲಿ	44569-49289	ಬೆಟ್ಟೆ	36899-53699	ಹಳೆಚಾಲಿ	37209-50680
ಚಿಪ್ಪು	29999-36599	ಬಿಳೇಗೋಟು	26299-41290	ಹೊಸಚಾಲಿ	36355-45700
ಕೋಕ	15099-33339	ಚಾಲಿ	47208-50599	ಕೆಂಪುಗೋಟು	16899-40879
ಫ್ಯಾಕ್ಟರಿ	12089-25629	ಕೆಂಪುಗೋಟು	25811-37399	ರಾಶಿ	53368-60299
ಹೊಸಚಾಲಿ	41110-45233	ರಾಶಿ	51099-57511	ತಟ್ಟಿಬೆಟ್ಟೆ	36969-52699
ಶಿವಮೊಗ್ಗ		**ಯಲ್ಲಾಪುರ**		**ಪುತ್ತೂರು**	
ಬೆಟ್ಟೆ	54540-65529	ಅಪಿ	62710-67670	ಕೋಕ	23000-35500
ಗೊರಬಲು	19030-41786	ಬಿಳೇಗೋಟು	16899-37309	ಹೊಸತು	26000-46000
ರಾಶಿ	45499-56899	ಕೋಕ	11899-31899		
ಸರಕು	60020-87770				

ಮುಂಬೈ ಧಾರಣೆ (ಶೇಂಗಾ)

23-01-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತರಿ ಬಿಟ್ಟು)	1680 (1660)
ಒಂದು ವಾರದ ಡೆಲಿವರಿ	1675 (1655)
ಪಾಮ್ ವಾರದ ಡೆಲಿವರಿ	1298 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿ)	
ಅಪರಂಜಿ ಚಿನ್ನ 10 ಗ್ರಾಂ	1,53,500 (1,50,600)
ಬೆಳ್ಳಿ ಕೆ.ಜಿಗೆ	3,11,500 (2,99,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ



ಚಿಕ್ಕೇಗೌಡ
ಮರಣ: 24-01-2025
ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೆಯಾಗಿ ಉಳಿದಿದೆ
ಲೇಟ್ ಶ್ರೀಮತಿ ರೇವಮ್ಮ ಮತ್ತು ಕರಿಯಣ್ಣನವರ ಹಿರಿಯ ಅಳಿಯನವರಾದ ಚಿಕ್ಕೇಗೌಡ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ
ಪತ್ನಿ, ಮಗಳು ಹಾಗೂ ಹಿತೈಷಿಗಳು

5ನೇ ವರ್ಷದ ಪುಣ್ಯಸ್ಮರಣೆ

ನಿಧನ : 24.01.2021
ನನ್ನ ಧರ್ಮಪತ್ನಿಯಾದ
ಶ್ರೀಮತಿ
ಬಿ.ಹೆಚ್. ಸೌಭಾಗ್ಯರವರು
ಮಹಾಲಕ್ಷ್ಮೀ ಲೇಔಟ್, ಬೆಂಗಳೂರು-86
ಸ್ವರ್ಗಸ್ಥರಾಗಿ ಇಂದಿಗೆ ಐದು ವರ್ಷಗಳಾಯಿತು.
ಸದಾ ನಿಮ್ಮ ನೆನಪಿನಲ್ಲಿ.
ದುಃಖತಪ್ತರಾದ
ಪತಿ ಶ್ರೀ ಪುಟ್ಟರಾಜಣ್ಣ, ಮಗ-ಸೊಸೆ, ಮಗಳು-ಅಳಿಯ ಹಾಗೂ ಮೊಮ್ಮಕ್ಕಳು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ,ಪುರುಷರಿಗೆ ಅದ್ಧತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸೆನ್ಸೆಕ್ಸ್ 769 ಅಂಶ ಕುಸಿತ

ಕಚ್ಚಾ ತೈಲ ದರ ಏರಿಕೆ, ವಿದೇಶಿ ಬಂಡವಾಳದ ಹೊರಹರಿವು ಇಳಿಕೆಗೆ ಕಾರಣ



ಮುಂಬೈ (ಪಿಟಿಐ): ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ, ವಿದೇಶಿ ಬಂಡವಾಳದ ಹೊರಹರಿವಿನಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಶೇ 1ರವರೆಗೆ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 769 ಅಂಶ ಇಳಿಕೆ ಯಾಗಿ, 81,537ಕ್ಕೆ ವಹಿವಾಟು ಅಂತ್ಯ ಗೊಂಡಿದೆ. ವಹಿವಾಟಿನ ವೇಳೆ ಸೆನ್ಸೆಕ್ಸ್ 835 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 241 ಅಂಶ ಕಡಿಮೆಯಾಗಿ, 25,048ಕ್ಕೆ ಕೊನೆಗೊಂಡಿದೆ.

ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹7 ಲಕ್ಷ ಕೋಟಿಯಷ್ಟು ಕರಗಿದೆ.

ಅದಾನಿ ಪೋರ್ಟ್ಸ್, ಎಟರ್ನಲ್, ಎಕ್ಸಿಸ್ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಪವರ್ ಗ್ರಿಡ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಎಸ್‌ಬಿಐ, ಮಾರುತಿ ಸುಜುಕಿ ಇಂಡಿಯಾ, ಬಜಾಜ್ ಫೈನಾನ್ಸ್, ಎನ್‌ಟಿಪಿಸಿ, ಟ್ರೆಂಟ್, ಎಲ್ ಆ್ಯಂಡ್ ಟಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರಿನ ಮೌಲ್ಯ ಇಳಿಕೆ ಆಗಿದೆ.

ಟೆಕ್ ಮಹೀಂದ್ರ, ಹಿಂದೂಸ್ತಾನ್ ಯೂನಿಲಿವರ್, ಇನ್ಫೊಸಿಸ್, ಏಷ್ಯನ್ ಪೇಂಟ್ಸ್, ಟಿಸಿಎಸ್, ಟೈಟನ್ ಮತ್ತು ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ಜಪಾನ್, ಶಾಂಘೈ, ದಕ್ಷಿಣ ಕೊರಿಯಾ ಮತ್ತು ಹಾಂಗ್ ಕಾಂಗ್ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.03ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರಲ್ ಬೆಲೆ 64.72 ಡಾಲರ್ ಆಗಿದೆ.

'ಕಚ್ಚಾ ತೈಲದ ಬೆಲೆಯಲ್ಲಿನ ಹೆಚ್ಚಳ, ರೂಪಾಯಿ ಮೌಲ್ಯ ಇಳಿಕೆ, ವಿದೇಶಿ ಬಂಡವಾಳದ ಹೊರಹರಿವು ಷೇರುಪೇಟೆ ಮೇಲೆ ಪರಿಣಾಮ ಬೀರಿದೆ. ಇದು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಲಾಭದ ಗಳಿಕೆಗಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದು, ಅಮೆರಿಕದ ಎಸ್‌ಇಸಿ ಯಿಂದ ಸಮನ್ಸ್ ಜಾರಿಯಾಗುವ ಸಾಧ್ಯತೆಯಿಂದ ಅದಾನಿ ಸಮೂಹದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಇದು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ತಿಳಿಸಿದ್ದಾರೆ.

ರೂಪಾಯಿ ಮೌಲ್ಯ 32 ಪೈಸೆ ಇಳಿಕೆ

ಇಲ್ಲಿನ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 32 ಪೈಸೆಯಷ್ಟು ಕುಸಿದಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹91.90 ಆಗಿದೆ. ಇದು ರೂಪಾಯಿಯ ಈವರೆಗಿನ ಕನಿಷ್ಠ ಮಟ್ಟ.

ವೇತನ ಪರಿಷ್ಕರಣೆಗೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸಾಮಾನ್ಯ ವಿಮಾ ಕಂಪನಿಗಳು ಮತ್ತು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಉದ್ಯೋಗಿಗಳ ವೇತನ ಪರಿಷ್ಕರಣೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್‌ನ ನಿವೃತ್ತ ನೌಕರರ ಪಿಂಚಣಿ ಸಹ ಪರಿಷ್ಕರಣೆ ಮಾಡಲಾಗಿದೆ.

ಈ ಪರಿಷ್ಕರಣೆಯಿಂದ 46,322 ಉದ್ಯೋಗಿಗಳು, 23,570 ಪಿಂಚಣಿದಾರರು ಮತ್ತು 23,260 ಕೌಟುಂಬಿಕ ಪಿಂಚಣಿದಾರರಿಗೆ ವೇತನ ಪರಿಷ್ಕರಣೆಯ ಪ್ರಯೋಜನ ದೊರೆಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಉದ್ಯೋಗಿಗಳಿಗೆ ಈ ಪರಿಷ್ಕರಣೆಯು 2022ರ ಆಗಸ್ಟ್ 1ರಿಂದ ಅನ್ವಯವಾಗಲಿದೆ. ನಬಾರ್ಡ್ ಸಿಬ್ಬಂದಿಗೆ 2022ರ ನ. 1ರಿಂದ ಅನ್ವಯ ಆಗಲಿದೆ.

ಅದಾನಿ ಸಮೂಹದ ಕಂಪನಿಗಳ ಷೇರಿನ ಮೌಲ್ಯ ಶೇ 14ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸೌರ ವಿದ್ಯುತ್ ಗುತ್ತಿಗೆಯ ಲಂಚ ಪ್ರಕರಣದಲ್ಲಿ ಅದಾನಿ ಸಮೂಹದ ಗೌತಮ್ ಅದಾನಿ ವಿರುದ್ಧ ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ ಕ್ರಮಕ್ಕೆ ಮುಂದಾಗಿರುವುದರಿಂದ ಶುಕ್ರವಾರದ ವಹಿವಾಟಿನಲ್ಲಿ ಅದಾನಿ ಸಮೂಹದ ಕಂಪನಿಗಳ ಷೇರಿನ ಮೌಲ್ಯ ಶೇ 14ರವರೆಗೆ ಇಳಿಕೆ ಕಂಡಿದೆ.

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್‌ನ ಷೇರಿನ ಮೌಲ್ಯ ಶೇ 14.63ರಷ್ಟು ಇಳಿಕೆ ಆಗಿದೆ. ಅದಾನಿ ಗ್ರೀನ್ ಎನರ್ಜಿ ಸೊಲ್ಯೂಷನ್ಸ್ ಶೇ 11.97, ಅದಾನಿ ಎಂಟರ್‌ಪ್ರೈಸಸ್ ಶೇ 10.76, ಅದಾನಿ ಪೋರ್ಟ್ಸ್ ಶೇ 7.52, ಅದಾನಿ ಟೋಟಲ್ ಗ್ಯಾಸ್ ಶೇ 5.71, ಅದಾನಿ ಪವರ್ ಶೇ 5.50, ಅಂಬುಜಾ ಸಿಮೆಂಟ್ಸ್ ಶೇ 5.01 ಮತ್ತು ಎಸಿಸಿ ಕಂಪನಿಯ ಷೇರಿನ ಮೌಲ್ಯ ಶೇ 3.20ರಷ್ಟು ಕಡಿಮೆ ಆಗಿದೆ.

ಅದಾನಿ ಸಮೂಹವು ಸೌರ ವಿದ್ಯುತ್ ಗುತ್ತಿಗೆ ಪಡೆಯಲು ಸರ್ಕಾರಿ ಅಧಿಕಾರಿಗಳಿಗೆ 265 ದಶಲಕ್ಷ ಡಾಲರ್ (₹2,434 ಕೋಟಿ) ಲಂಚ ನೀಡಿದೆ ಎನ್ನುವ ಆರೋಪದಡಿ ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಮತ್ತು ಅವರ ಅಣ್ಣನ ಮಗ ಸಾಗರ್ ಅದಾನಿಗೆ ಸಮನ್ಸ್ ಜಾರಿ ಮಾಡಲು ನ್ಯಾಯಾಲಯದ ಅನುಮತಿ ಕೋರಿದೆ. ಹೀಗಾಗಿ ಷೇರಿನ ಮೌಲ್ಯ ಇಳಿಕೆ ಆಗಿದೆ.

ವರದಿಗಳ ಪ್ರಕಾರ, ಸಮನ್ಸ್ ತಲುಪಿಸುವಲ್ಲಿ ಭಾರತೀಯ ಅಧಿಕಾರಿಗಳಿಂದ ಸಹಕಾರ ಸಿಗುತ್ತಿಲ್ಲ ಎಂದು ಅಮೆರಿಕದ ಎಸ್‌ಇಸಿ, ನ್ಯೂಯಾರ್ಕ್‌ನ ನ್ಯಾಯಾಲಯಕ್ಕೆ ತಿಳಿಸಿದೆ. ಗೌತಮ್ ಅದಾನಿ ಮತ್ತು ಸಾಗರ್ ಅದಾನಿಗೆ ಇ-ಮೇಲ್ ಮೂಲಕ ನೋಟಿಸ್‌ಗಳನ್ನು ಕಳುಹಿಸಲು ಅನುಮತಿ ಕೋರಿದೆ.

ಬಳ್ಳಾರಿ ಹೊರವಲಯದಲ್ಲಿರುವ ಜನಾರ್ದನ ರೆಡ್ಡಿ ಮನೆಗೆ ಬೆಂಕಿ ಹಾಕಲಾಗಿದೆ

ಜನಾರ್ದನ ರೆಡ್ಡಿ 'ಮಾಡೆಲ್ ಹೌಸ್'ಗೆ ಬೆಂಕಿ

ಒಂದನೇ ಪುಟದಿಂದ...
ಸ್ಥಳಕ್ಕೆ ಭೇಟಿ ನೀಡಿದ್ದ ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ, 'ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರೇ ಜನಾರ್ದನ ರೆಡ್ಡಿ ಮನೆಗೆ ಬೆಂಕಿ ಹಚ್ಚಿಸಿದ್ದಾರೆ. ಬ್ಯಾನರ್ ಗಲಭೆ ವೇಳೆ ರೆಡ್ಡಿಯ ಮನೆಯನ್ನು ಸುಟ್ಟು ಹಾಕುವುದಾಗಿ ಹೇಳಿದ್ದರು. ಜನಾರ್ದನ ರೆಡ್ಡಿಯ ನಿವಾಸ ಸುಟ್ಟು ಹಾಕಲು ಸಾಧ್ಯವಾಗದೇ, ಬಡಾವಣೆಯಲ್ಲಿನ ಮಾದರಿ ಮನೆಗೆ ಬೆಂಬಲಿಗರ ಮೂಲಕ ಬೆಂಕಿ ಹಚ್ಚಿಸಿದ್ದಾರೆ' ಎಂದು ದೂರಿದರು. ಮನೆಗೆ ಬೆಂಕಿ ಹಚ್ಚಿದ ಎನ್ನಲಾದ ಯುವಕನ ಚಿತ್ರವನ್ನು ಮಾಧ್ಯಮದವರಿಗೆ ತೋರಿಸಿದರು.

ಘಟನಾ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿಕುಮಾರ್ ಸೇರಿ ಪೊಲೀಸ್ ಸಿಬ್ಬಂದಿ, ವಿಧಿ ವಿಜ್ಞಾನ ತಂಡದ ಸದಸ್ಯರು ಭೇಟಿ ನೀಡಿ, ಪರಿಶೀಲಿಸಿದರು.

ಘಟನೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ನಗರದ ಗಡಿಗಿ ಚೆನ್ನಪ್ಪ (ರಾಯಲ್) ವೃತ್ತದ ಬಳಿ ಶುಕ್ರವಾರ ಪ್ರತಿಭಟನೆ ಆರಂಭಿಸಿದರು.

ಐವರು ವಶಕ್ಕೆ

ಬಳ್ಳಾರಿ: ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲಾ ಪೊಲೀಸರು ಐವರನ್ನು ವಶಕ್ಕೆ ಪಡೆದಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ. ನಗರದ ಡಿಎಆರ್ ಮೈದಾನಕ್ಕೆ ಆರೋಪಿಗಳನ್ನು ಕರೆತಂದು ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಭರತ್ ರೆಡ್ಡಿಯದ್ದೇ ಕೃತ್ಯ: ಜನಾರ್ದನ ರೆಡ್ಡಿ

'ಬಳ್ಳಾರಿಗೆ ಬೆಂಕಿ ಹಚ್ಚುವುದಾಗಿ ಶಾಸಕ ನಾರಾ ಭರತ್ ರೆಡ್ಡಿ ಹೇಳಿದ್ದರು. ಅದರಂತೆಯೇ, ನನ್ನ ಮನೆಗೆ ಬೆಂಕಿ ಹಚ್ಚಲಾಗಿದೆ. ಬೆಂಕಿ ಇಟ್ಟವರ ಚಿತ್ರವನ್ನು ಬಡಾವಣೆ ಭದ್ರತಾ ಸಿಬ್ಬಂದಿ ಕ್ಲಿಕ್ಕಿಸಿದ್ದಾರೆ. ಇವರೆಲ್ಲರೂ ಬಳ್ಳಾರಿಯ ಕೌಲ್ ಬಜಾರ್, ಗೌತಮ್ ನಗರ ಮತ್ತು ಸುತ್ತಮುತ್ತಲ ಪ್ರದೇಶದವರು. ಈ ಚಿತ್ರ ಆಧರಿಸಿ ಆರೋಪಿಗಳನ್ನು ಬಂಧಿಸಲು ಪೊಲೀಸ್ ಇಲಾಖೆಗೆ ಒಂದು ಗಂಟೆ ಸಾಕು. ಏನು ಮಾಡುತ್ತಾರೆ ನೋಡೋಣ' ಎಂದು ಶಾಸಕ ಜನಾರ್ದನ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ದೋಚಿದ್ದು ₹312 ಕೋಟಿ, ಸಿಕ್ಕಿದ್ದು ₹24 ಕೋಟಿ

ಒಂದನೇ ಪುಟದಿಂದ...
2023ರ ಜನವರಿಯಿಂದ 2025ರ ಡಿಸೆಂಬರ್‌ವರೆಗೆ ರಾಜ್ಯದಲ್ಲಿ 57,733 ವಿವಿಧ ಮಾದರಿಯ ಸೈಬರ್ ವಂಚನೆಗಳು ವರದಿ ಆಗಿದ್ದವು. ಆ ಪೈಕಿ 1,314 'ಡಿಜಿಟಲ್ ಅರೆಸ್ಟ್' ಪ್ರಕರಣಗಳಾಗಿವೆ.

'ನಿಮ್ಮ ಹೆಸರಿನಲ್ಲಿ ಬಂದಿರುವ ಕೊರಿಯರ್‌ನಲ್ಲಿ ಮಾದಕ ವಸ್ತುಗಳು ಸಾಗಣೆ ಆಗುತ್ತಿವೆ, ಅಕ್ರಮ ಹಣ ವರ್ಗಾವಣೆ ಆಗುತ್ತಿರುವ ಬ್ಯಾಂಕ್ ಖಾತೆಗೆ ನಿಮ್ಮ ಆಧಾರ್ ಕಾರ್ಡ್ ಸಂಖ್ಯೆ ಜೋಡಿಸಲಾಗಿದೆ' ಎಂದು ಮುಂಬೈ ಪೊಲೀಸರು, ಆದಾಯ ತೆರಿಗೆ ಇಲಾಖೆ ಹಾಗೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಸೋಗಿನಲ್ಲಿ ವಂಚಕರು ಕರೆ ಮಾಡಿ ಬೆದರಿಸಿ ಹಲವರನ್ನು ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸುತ್ತಿದ್ದಾರೆ. ವಂಚಕರಿಂದ ₹24.85 ಕೋಟಿಯಷ್ಟು ಹಣವನ್ನು ಜಪ್ತಿ ಮಾಡಿದ್ದೇವೆ. ಆ ಪೈಕಿ ದೂರುದಾರರಿಗೆ ₹18.33 ಕೋಟಿ ವಾಪಸ್ ಕೊಡಿಸಲು ಸಾಧ್ಯವಾಗಿದೆ' ಎಂದು ಮೂಲಗಳು ತಿಳಿಸಿವೆ.

ವಂಚನೆ ನಡೆದರೆ 'ಗೋಲ್ಡನ್ ಅವರ್'ನಲ್ಲಿ (ಒಂದು ತಾಸು) 'ರಾಷ್ಟ್ರೀಯ ಸೈಬರ್ ಸಹಾಯವಾಣಿ' (ಎನ್‌ಸಿಆರ್‌ಪಿ) ಅಥವಾ ಸಮೀಪದ ಸೈಬರ್ ಠಾಣೆಗೆ ದೂರು ನೀಡಬೇಕು.

'ಡಿಜಿಟಲ್ ಅರೆಸ್ಟ್' ಪ್ರಕರಣಗಳ ಅಂಕಿಅಂಶ

ವರ್ಷ	ಪ್ರಕರಣ	ವಂಚನೆ ಮೊತ್ತ (₹ಕೋಟಿಯಲ್ಲಿ)	ಜಪ್ತಿ (₹ಕೋಟಿ)	ವಾಪಸ್ ನೀಡಿರುವ ಮೊತ್ತ (₹ಕೋಟಿ)
2023	147	16.65	1.87	1.43
2024	874	151.24	17.22	13.46
2025	293	144.58	5.76	3.44
ಒಟ್ಟು	1,314	312.47	24.85	18.33

ವಂಚನೆಯಾದ ಕೆಲವೇ ನಿಮಿಷಗಳಲ್ಲಿ ಮಾಹಿತಿ ನೀಡಿದರೆ ವರ್ಗಾವಣೆಯಾದ ಹಣವನ್ನು ಬ್ಯಾಂಕ್‌ಗಳಲ್ಲೇ ತಡೆ ಹಿಡಿಯಲು ಸಾಧ್ಯವಾಗಲಿದೆ. ಆದರೆ, ಡಿಜಿಟಲ್ ಅರೆಸ್ಟ್‌ನಂತಹ ಪ್ರಕರಣಗಳಲ್ಲಿ ವಂಚಕರು, ದೂರುದಾರನನ್ನು ವಿಡಿಯೊ ಕರೆಗೆ ಒಳಪಡಿಸಿ ಕೊಠಡಿಯಲ್ಲಿಯೇ ಇರುವಂತೆ ನೋಡಿಕೊಳ್ಳುತ್ತಾರೆ. ಕೆಲವು ಪ್ರಕರಣಗಳಲ್ಲಿ ಎರಡರಿಂದ ಮೂರು ದಿನ ಮನೆಯಿಂದ ಹೊರಕ್ಕೆ ಬರಲು ಬಿಡುವುದಿಲ್ಲ. ಈ ಕಾರಣದಿಂದ ದೂರು ನೀಡಲು ವಿಳಂಬವಾಗುತ್ತಿದೆ. ಆರೋಪಿಗಳ ಬಂಧನ, ಹಣ ವರ್ಗಾವಣೆಗೆ ತಡೆಯೊಡ್ಡುವ ಪ್ರಕ್ರಿಯೆ ಸಹ ವಿಳಂಬವಾಗುತ್ತಿದೆ' ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಬೇರೆ ಬೇರೆ ಕಡೆಗೆ ಹಣ ವರ್ಗ: 'ಇಂದಿರಾನಗರದ 57 ವರ್ಷದ ಮಹಿಳೆಯೊಬ್ಬರಿಗೆ ಕಳೆದ ಸೆಪ್ಟೆಂಬರ್‌ನಲ್ಲಿ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿದ್ದ ವಂಚಕರು ₹31.83 ಕೋಟಿ ಸುಲಿಗೆ ಮಾಡಿದ್ದರು. ರಾಜ್ಯದಲ್ಲಿ ಈವರೆಗೆ ವರದಿಯಾದ ಅತ್ಯಧಿಕ ಮೊತ್ತ ಕಳೆದುಕೊಂಡ 'ಡಿಜಿಟಲ್ ಅರೆಸ್ಟ್' ಪ್ರಕರಣ ಇದಾಗಿತ್ತು. ಅವರು ಐ.ಟಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಗನ ಮದುವೆ, ವಿದೇಶ ಪ್ರಯಾಣ, ಅನಾರೋಗ್ಯದ ಕಾರಣ ಸಂತ್ರಸ್ತೆ ತಡವಾಗಿ ದೂರು ನೀಡಿದ್ದರು. ನವೆಂಬರ್ 14ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಹಣವು ಬೇರೆ ಬೇರೆ ಕಡೆಗೆ ವರ್ಗಾವಣೆ ಆಗಿರುವುದು ಪತ್ತೆ ಆಗಿತ್ತು. ವಿಳಂಬವಾಗಿ ದೂರು ನೀಡುತ್ತಿರುವುದು ತನಿಖೆಗೆ ತೊಡಕಾಗಿದೆ' ಎಂದು ಅವರು ಹೇಳಿದರು.

'ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ನೆರವು ನೀಡಿ'

ಬೆಂಗಳೂರು: '2025ರಲ್ಲಿ ದಕ್ಷಿಣ ಭಾರತದ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿನ ಮನೆಗಳ ಮಾರಾಟದ ಮೌಲ್ಯವು ಅಂದಾಜು ₹20 ಸಾವಿರ ಕೋಟಿ ದಾಟಿದೆ' ಎಂದು ಬ್ರಿಗೇಡ್ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ಆರ್. ಜೈಶಂಕರ್ ಹೇಳಿದ್ದಾರೆ.

ಅಖಿಲ ಭಾರತದ ಮಟ್ಟಕ್ಕೆ ಹೋಲಿಸಿದರೆ, ದಕ್ಷಿಣ ಭಾರತದ ರಿಯಲ್ ಎಸ್ಟೇಟ್ ಮಾರುಕಟ್ಟೆ ಹಿಂದುಳಿದಿದೆ. ಕೊಯಮತ್ತೂರು, ಕೊಚ್ಚಿನ್, ತಿರುವನಂತಪುರ, ವಿಶಾಖಪಟ್ಟಣಂ ವೇಗವಾಗಿ ಅಭಿವೃದ್ಧಿ ಹೊಂದುತ್ತಿವೆ. ರಿಯಲ್ ಎಸ್ಟೇಟ್ ಮಾರುಕಟ್ಟೆಯ ಅಭಿವೃದ್ಧಿಗೆ ಸರ್ಕಾರದ ನೆರವು ಅಗತ್ಯ ಎಂದು ಕ್ರೆಡಾಯ್ ಸೌತ್‌ಕಾನ್ 2026ರಲ್ಲಿ ಹೇಳಿದ್ದಾರೆ.

ದಕ್ಷಿಣ ಭಾರತದ ವಾಣಿಜ್ಯ ರಿಯಲ್ ಎಸ್ಟೇಟ್ ಮಾರುಕಟ್ಟೆಯು 2030ರ ವೇಳೆಗೆ ಸದೃಢವಾಗಿ ಬೆಳವಣಿಗೆ ಕಾಣಲಿದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲೂ ಸಹ ಎರಡು ಮತ್ತು ಮೂರನೇ ಹಂತದ ನಗರಗಳು ತ್ವರಿತವಾಗಿ ಪ್ರಗತಿ ಕಾಣುತ್ತಿವೆ. ಅಲ್ಲದೆ, ಮುಂದಿನ ದಿನಗಳಲ್ಲಿ ಈ ವಲಯದಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳು ಸೃಷ್ಟಿ ಆಗಲಿವೆ ಎಂದು ಕ್ರೆಡಾಯ್‌ನ ಕರ್ನಾಟಕದ ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ ಅವರು ಹೇಳಿದ್ದಾರೆ.

ರಿಯಲ್ ಎಸ್ಟೇಟ್ ವಲಯದಲ್ಲಿ ನಂಬಿಕೆ ಅಗತ್ಯ. ಮನೆ ಖರೀದಿ ಮಾಡುವವರ ವಿಶ್ವಾಸವನ್ನು ಪಡೆಯುವುದು ಅತಿ ಅಗತ್ಯ ಎಂದರು.

ಕಾರ್ಯಕ್ರಮದಲ್ಲಿ ಕ್ರೆಡಾಯ್‌ನ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳದ ಅಧ್ಯಕ್ಷರು ಭಾಗವಹಿಸಿದ್ದರು.

ಡಬ್ಲುಎಚ್‌ಒದಿಂದ ಅಮೆರಿಕ ಹೊರಕ್ಕೆ

ನ್ಯೂಯಾರ್ಕ್(ಎಪಿ): ವಿಶ್ವ ಆರೋಗ್ಯ ಸಂಸ್ಥೆಯಿಂದ(ಡಬ್ಲುಎಚ್‌ಒ) ಹೊರಬರುವ ಪ್ರಕ್ರಿಯೆಯನ್ನು ಅಮೆರಿಕ ಪೂರ್ಣಗೊಳಿಸಿದೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಕಳೆದ ವರ್ಷ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ವೇಳೆ, 'ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಯೊಂದಿಗೆ ಹೊಂದಿರುವ 78 ವರ್ಷಗಳ ನಂಟನ್ನು ಕೊನೆಗೊಳಿಸಲಿದೆ' ಎಂದು ಘೋಷಿಸಿದ್ದರು. ಅದು, ಈಗ ಕಾರ್ಯಗತಗೊಂಡಂತಾಗಿದೆ.

ಸಂಸ್ಥೆಗೆ ಅಮೆರಿಕ ತನ್ನ ಪಾಲಿನ ವಂತಿಗೆಯನ್ನು ಬಾಕಿ ಉಳಿಸಿಕೊಂಡಿದೆ. ಈ ಮೊತ್ತ 13 ಕೋಟಿ ಡಾಲರ್‌ಗೂ (ಅಂದಾಜು ₹1,200 ಕೋಟಿ) ಹೆಚ್ಚು ಎಂದು ಡಬ್ಲುಎಚ್‌ಒ ಹೇಳಿದೆ.

'ಈ ಬೆಳವಣಿಗೆ ಹಲವು ಸಮಸ್ಯೆಗಳಿಗೆ ಕಾರಣವಾಗಲಿದೆ. ವಿವಿಧ ದೇಶಗಳಲ್ಲಿ ಕಂಡುಬರುವ ಸೋಂಕು/ರೋಗಗಳ ಕುರಿತು ಅಧ್ಯಯನ ಕೈಗೊಳ್ಳಲು, ಔಷಧಿ/ಲಸಿಕೆ ಅಭಿವೃದ್ಧಿಪಡಿಸುವುದಕ್ಕೆ ಅಮೆರಿಕದ ವಿಜ್ಞಾನಿಗಳಿಗೆ ಹಾಗೂ ಔಷಧ ಕಂಪನಿಗಳಿಗೆ ಕಷ್ಟವಾಗಲಿದೆ' ಎಂದು ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಸಾರ್ವಜನಿಕ ಆರೋಗ್ಯ ಕಾನೂನು ತಜ್ಞ ಲಾರೆನ್ಸ್ ಗಾಸ್ಟಿನ್ ಹೇಳಿದ್ದಾರೆ.

'ಇರಾನ್: 5 ಸಾವಿರಕ್ಕೂ ಅಧಿಕ ಸಾವು'

ದುಬೈ (ಎಪಿ): ಇರಾನ್‌ನಲ್ಲಿ ಈಚೆಗೆ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಕನಿಷ್ಠ 5,002 ಮಂದಿ ಮೃತಪಟ್ಟಿದ್ದಾರೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಸಂಘಟನೆ ಶುಕ್ರವಾರ ತಿಳಿಸಿದೆ.

'ಮೃತರಲ್ಲಿ 4,716 ಪ್ರತಿಭಟನಕಾರರು, 203 ಭದ್ರತಾ ಸಿಬ್ಬಂದಿ, 43 ಮಕ್ಕಳು ಮತ್ತು 40 ನಾಗರಿಕರು ಸೇರಿದ್ದಾರೆ. 26,800ಕ್ಕೂ ಅಧಿಕ ಮಂದಿಯನ್ನು ಬಂಧಿಸಲಾಗಿದೆ' ಎಂದು ಹೇಳಿದೆ.

ಪ್ರತಿಭಟನೆಯಲ್ಲಿ 3,117 ಜನರು ಮೃತಪಟ್ಟಿದ್ದಾರೆ ಎಂದು ಇರಾನ್ ಆಡಳಿತವು ಬುಧವಾರ ಹೇಳಿತ್ತು. ಆದರೆ, ಪ್ರತಿಭಟನೆಯನ್ನು ಹತ್ತಿಕ್ಕಲು ಇರಾನ್ ಆಡಳಿತವು ಕಠಿಣ ಕ್ರಮ ಕೈಗೊಂಡಿದ್ದರಿಂದ ಸಾವಿನ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಹೇಳಿದ್ದವು.

ಇರಾನ್‌ನಲ್ಲಿ ಆರ್ಥಿಕತೆಯು ಕುಸಿತದಿಂದ ಸರ್ಕಾರದ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿತ್ತು.

ಪಶ್ಚಿಮ ಏಷ್ಯಾದತ್ತ ಅಮೆರಿಕ ಯುದ್ಧ ನೌಕೆ: ಅಮೆರಿಕ ಸೇನೆಯು ತನ್ನ ಯುದ್ಧ ನೌಕೆಗಳನ್ನು ಪಶ್ಚಿಮ ಏಷ್ಯಾ ಕಡೆಗೆ ಕಳುಹಿಸುತ್ತಿದೆ. ಪ್ರತಿಭಟನಕಾರರನ್ನು ಹತ್ಯೆ ಮಾಡಿದರೆ ಇರಾನ್ ಮೇಲೆ ದಾಳಿ ನಡೆಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದರು.

ಯುದ್ಧ ವಿಮಾನವಾಹನ ನೌಕೆ ಯುಎಸ್‌ಎಸ್ ಅಬ್ರಹಾಂ ಲಿಂಕನ್ ನೇತೃತ್ವದಲ್ಲಿ ಯುದ್ಧ ನೌಕೆಗಳ ತಂಡವು ದಕ್ಷಿಣ ಚೀನಾ ಸಮುದ್ರದಿಂದ ಪ್ರಯಾಣ ಬೆಳೆಸಿದೆ. 'ಈ ಯುದ್ಧ ನೌಕೆಗಳ ತಂಡವು ಇದೀಗ ಹಿಂದೂ ಮಹಾಸಾಗರದಲ್ಲಿದೆ' ಎಂದು ನೌಕಾಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಟ್ರಂಪ್ ಹೇಳಿಕೆ ಸುಳ್ಳು'

ತಾನು ಮಧ್ಯಪ್ರವೇಶಿಸಿದ್ದರಿಂದ ಇರಾನ್ ಸರ್ಕಾರ 800 ಪ್ರತಿಭಟನಕಾರರ ಮರಣದಂಡನೆ ನಿರ್ಧಾರವನ್ನು ಕೈಬಿಟ್ಟಿದೆ ಎಂಬ ಟ್ರಂಪ್ ಹೇಳಿಕೆಯನ್ನು ಇರಾನ್‌ನ ಪ್ರಾಸಿಕ್ಯೂಟರ್ ಅಲ್ಲಗಳೆದಿದ್ದಾರೆ.

'ಟ್ರಂಪ್ ಹೇಳಿಕೆ ಸಂಪೂರ್ಣ ಸುಳ್ಳು' ಎಂದು ಪ್ರಾಸಿಕ್ಯೂಟರ್ ಮೊಹಮ್ಮದ್ ಮೊವಾಹೆದಿ ಅವರು ಹೇಳಿರುವುದಾಗಿ ಇರಾನ್ ನ್ಯಾಯಾಂಗದ ಸುದ್ದಿ ಸಂಸ್ಥೆ 'ಮೀಜಾನ್' ವರದಿ ಮಾಡಿದೆ.

'ಟ್ರಂಪ್ ನೀಡಿರುವ ಸಂಖ್ಯೆಯಲ್ಲಿ ಯಾವುದೇ ಹುರುಳಿಲ್ಲ ಮತ್ತು ಇರಾನ್ ನ್ಯಾಯಾಂಗವು ಅಂತಹ ಯಾವುದೇ ನಿರ್ಧಾರ (ಮರಣದಂಡನೆಗೆ ತಡೆ ನೀಡುವ) ಮಾಡಿಲ್ಲ' ಎಂದಿದ್ದಾರೆ.

ವೆನೆಜುವೆಲಾ: ತೈಲ ಮಸೂದೆ ಚರ್ಚೆ

ಕರಾಕಸ್ (ಎಪಿ): ತೈಲದ ಮೇಲೆ ರಾಷ್ಟ್ರೀಯ ಹಿಡಿತ ಸಡಿಲಿಸುವ ಮಸೂದೆಯ ಕುರಿತ ಚರ್ಚೆಯನ್ನು ವೆನೆಜುವೆಲಾ ಗುರುವಾರ ಆರಂಭಿಸಿತು.

ಸಮಾಜವಾದಿ ನಾಯಕ ಹ್ಯೂಗೋ ಚಾವೆಜ್ ಅವರು 2007ರಲ್ಲಿ ತೈಲೋದ್ಯಮವನ್ನು ರಾಷ್ಟ್ರೀಕರಣಗೊಳಿಸಿದ ನಂತರ ಮೊದಲ ಬಾರಿಗೆ ಈ ಕುರಿತ ಚರ್ಚೆ ನಡೆದಿದೆ.

ಈ ಮಸೂದೆಯು ತೈಲ ಉದ್ಯಮದಲ್ಲಿ ಖಾಸಗಿ ಕಂಪನಿಗಳಿಗೆ ಹೂಡಿಕೆ ಮಾಡಲು ಮತ್ತು ಹೂಡಿಕೆ ವಿವಾದಗಳಿಗೆ ಅಂತರರಾಷ್ಟ್ರೀಯ ಮಧ್ಯಸ್ಥಿಕೆಯನ್ನು ಸ್ಥಾಪಿಸಲು ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ.

ವೆನೆಜುವೆಲಾದ ಅಧ್ಯಕ್ಷರಾಗಿದ್ದ ನಿಕೋಲಸ್ ಮಡೂರೊ ಅವರನ್ನು ಈ ತಿಂಗಳ ಆರಂಭದಲ್ಲಿ ಟ್ರಂಪ್ ಆಡಳಿತವು ಸೆರೆ ಹಿಡಿದಿತ್ತು.

ಬ್ಯಾಂಕ್ ಸಾಲದ ವಂಚನೆ ಪ್ರಕರಣದ ತನಿಖೆ

ಅನಿಲ್ ಅಂಬಾನಿ, ಎಡಿಎಜಿಗೆ 'ಸುಪ್ರೀಂ' ನೋಟಿಸ್



ಅನಿಲ್ ಅಂಬಾನಿ

ನವದೆಹಲಿ (ಪಿಟಿಐ): ಬ್ಯಾಂಕ್ ಸಾಲದ ವಂಚನೆ ಪ್ರಕರಣದ ತನಿಖೆಯನ್ನು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ನಡೆಸಬೇಕೆಂದು ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಉದ್ಯಮಿ ಅನಿಲ್ ಅಂಬಾನಿ ಮತ್ತು ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್‌ಗೆ (ಎಡಿಎಜಿ) ಸುಪ್ರೀಂ ಕೋರ್ಟ್ ಶುಕ್ರವಾರ ಹೊಸ ನೋಟಿಸ್ ಜಾರಿ ಮಾಡಿದೆ.

ಈ ಪ್ರಕರಣದ ತನಿಖೆಯ ವಸ್ತುಸ್ಥಿತಿ ವರದಿಯನ್ನು 10 ದಿನಗಳ ಒಳಗಾಗಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸುಪ್ರೀಂ ಕೋರ್ಟ್ ಸೂಚಿಸಿದೆ.

ಅರ್ಜಿದಾರ, ಕೇಂದ್ರದ ಮಾಜಿ ಕಾರ್ಯದರ್ಶಿ ಇ.ಎ.ಎಸ್ ಶರ್ಮಾ ಅವರು ಸಲ್ಲಿಸಿರುವ ಪಿಐಎಲ್‌ಗೆ ಸಂಬಂಧಿಸಿದಂತೆ ಅನಿಲ್ ಅಂಬಾನಿ ಹಾಗೂ ಎಡಿಎಜಿಗೆ ಈಗಾಗಲೇ ನೋಟಿಸ್ ಜಾರಿಗೊಳಿಸಿರುವುದನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಗಮನಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಪೀಠವು ಕಳೆದ ವರ್ಷ ನವೆಂಬರ್ 18ರಂದು ಕೇಂದ್ರ ಸರ್ಕಾರ, ಸಿಬಿಐ, ಇ.ಡಿ, ಅನಿಲ್ ಅಂಬಾನಿ ಮತ್ತು ಎಡಿಎಜಿಗೆ ನೋಟಿಸ್ ನೀಡಿದೆ.

ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗಿ ತಮ್ಮ ಪ್ರತಿಕ್ರಿಯೆ ಸಲ್ಲಿಸಲು ಅನಿಲ್ ಅಂಬಾನಿ ಮತ್ತು ಎಡಿಎಜಿಗೆ ಕೊನೆಯ ಅವಕಾಶವನ್ನು ನೀಡುತ್ತಿರುವುದಾಗಿ ಪೀಠ ಹೇಳಿದೆ. ಅನಿಲ್ ಅಂಬಾನಿ ಮತ್ತು ಎಡಿಎಜಿಗೆ ನೋಟಿಸ್ ಲಭಿಸಿರುವುದನ್ನು ಖಚಿತಪಡಿಸಿಕೊಳ್ಳಲು ಬಾಂಬೆ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿದ ಪೀಠ, 10 ದಿನಗಳ ಬಳಿಕ ಅರ್ಜಿಯನ್ನು ವಿಚಾರಣೆಗೆ ನಿಗದಿಪಡಿಸಿತು.

ಭಾರಿ ಮೊತ್ತದ ಬ್ಯಾಂಕಿಂಗ್ ವಂಚನೆಯಲ್ಲಿ ಬ್ಯಾಂಕ್‌ಗಳು ಮತ್ತು ಅದರ ಅಧಿಕಾರಿಗಳ ಕೈವಾಡವಿರುವುದರ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿಲ್ಲ ಎಂದು ಅರ್ಜಿದಾರ ಶರ್ಮಾ ಪರ ಹಾಜರಾದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಪೀಠಕ್ಕೆ ತಿಳಿಸಿದರು.

'2007-08ರಿಂದಲೇ ಈ ವಂಚನೆ ನಡೆಯುತ್ತಿದ್ದರೂ, 2025ರಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ತನಿಖೆಯ ಪ್ರಗತಿ ಬಗ್ಗೆ ವರದಿ ನೀಡುವಂತೆ ಸಿಬಿಐ ಹಾಗೂ ಇ.ಡಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

ಸುದ್ದಿ 2 ನಿಮಿಷ

ಐಎಎನ್‌ಎಸ್ ಎಲ್ಲ ಷೇರು ಅದಾನಿ ಪಾಲು

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು, ಸುದ್ದಿಸಂಸ್ಥೆಯಾದ ಐಎಎನ್‌ಎಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿನ ಉಳಿದಿರುವ ಷೇರುಗಳನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದೆ.

ಮಾಧ್ಯಮಗಳ ಉಸ್ತುವಾರಿ ಹೊತ್ತಿರುವ ಅದಾನಿ ಸಮೂಹದ ಅದಾನಿ ಎಂಟರ್‌ಪ್ರೈಸಸ್‌ನ ಎಎಂಜಿ ಮೀಡಿಯಾ ನೆಟ್‌ವರ್ಕ್ಸ್ ಲಿಮಿಟೆಡ್ (ಎಎಂಎನ್‌ಎಲ್), ಐಎಎನ್‌ಎಸ್‌ನಲ್ಲಿನ ಶೇ 50ರಷ್ಟು ಷೇರುಗಳನ್ನು 2023ರ ಡಿಸೆಂಬರ್‌ನಲ್ಲಿ ಖರೀದಿಸಿತ್ತು. 2024ರ ಜನವರಿಯಲ್ಲಿ ಷೇರಿನ ಪ್ರಮಾಣವನ್ನು ಶೇ 76ಕ್ಕೆ ಹೆಚ್ಚಿಸಿಕೊಂಡಿತ್ತು. ಇದೀಗ ಉಳಿದ ಷೇರುಗಳನ್ನು ಸಹ ಖರೀದಿಸಲಿದೆ.

ಆದರೆ, ಈ ಖರೀದಿಗೆ ಆಗುವ ಹಣಕಾಸಿನ ವಿವರವನ್ನು ಕಂಪನಿ ಬಹಿರಂಗಪಡಿಸಿಲ್ಲ.

ಐಎಎನ್‌ಎಸ್‌ನಲ್ಲಿನ ಬಾಕಿ ಷೇರುಗಳನ್ನು ಖರೀದಿಸಲು ಎಎಂಎನ್‌ಎಲ್ 2026ರ ಜನವರಿ 21ರಂದು ಷೇರು ಖರೀದಿ ಒಪ್ಪಂದವನ್ನು ಮಾಡಿಕೊಂಡಿದೆ. ಪ್ರಸ್ತಾವಿತ ವಹಿವಾಟು ಪೂರ್ಣಗೊಂಡ ನಂತರ, ಐಎಎನ್‌ಎಸ್ ತನ್ನ ಅಂಗಸಂಸ್ಥೆ ಆಗಲಿದೆ ಎಂದು ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಷೇರುಪೇಟೆಗೆ ತಿಳಿಸಿದೆ.

27ರಂದು ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರ

ನವದೆಹಲಿ (ಪಿಟಿಐ): ವಾರಕ್ಕೆ ಐದು ದಿನಗಳ ಕಾಲ ಕೆಲಸದ ನೀತಿ ಜಾರಿಗೊಳಿಸಬೇಕೆಂಬ ದೀರ್ಘಕಾಲದ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಬ್ಯಾಂಕ್ ನೌಕರರ ಒಕ್ಕೂಟವು (ಯುಎಫ್‌ಬಿಯು) ಇದೇ ಜನವರಿ 27ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಒಂದೊಮ್ಮೆ ಪ್ರತಿಭಟನೆ ನಡೆದರೆ, ಸತತ ಮೂರು ದಿನಗಳ ಕಾಲ ಸಾರ್ವಜನಿಕ ಸ್ವಾಮ್ಯದ ಬ್ಯಾಂಕ್‌ಗಳ ಸೇವೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಜನವರಿ 25 (ಭಾನುವಾರ), 26 ಗಣರಾಜ್ಯ ದಿನವಿದೆ. ಒಂದೊಮ್ಮೆ ಪ್ರತಿಭಟನೆ ನಡೆದರೆ, ಬ್ಯಾಂಕಿಂಗ್ ಸೇವೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬ್ಯಾಂಕ್ ಸಿಬ್ಬಂದಿಯು ಗ್ರಾಹಕರಿಗೆ ಈಗಾಗಲೇ ಮಾಹಿತಿ ನೀಡಿದ್ದಾರೆ.

'ಪ್ರತಿಭಟನೆಯ ನೋಟಿಸ್ ನೀಡಿದ ಬೆನ್ನಲ್ಲೇ, ಕಾರ್ಮಿಕ ಇಲಾಖೆಯ ಮುಖ್ಯ ಆಯುಕ್ತರು ಬುಧವಾರ ಹಾಗೂ ಗುರುವಾರ ರಾಜಿ ಪ್ರಕ್ರಿಯೆ ಸಭೆ ನಡೆಸಿದ್ದಾರೆ. ಆದರೆ ಧನಾತ್ಮಕವಾದ ಫಲಿತಾಂಶ ಹೊರಬಂದಿಲ್ಲ' ಎಂದು ಬ್ಯಾಂಕ್ ಅಧಿಕಾರಿಗಳು ಹಾಗೂ ಕಾರ್ಮಿಕರ 9 ಸಂಘಟನೆಗಳ ಒಕ್ಕೂಟವಾದ ಯುಎಫ್‌ಬಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಸದ್ಯ ಬ್ಯಾಂಕ್ ನೌಕರರಿಗೆ ಭಾನುವಾರ ಹೊರತುಪಡಿಸಿ ತಿಂಗಳ ಎರಡು ಹಾಗೂ ನಾಲ್ಕನೇ ಶನಿವಾರ ರಜೆಯಿದೆ.

ಹಸ್ತಾಂತರ

ವಕ್ರಪಾದ ವೈಕಲ್ಯದಿಂದ ಬಳಲುತ್ತಿರುವ 150 ಮಕ್ಕಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಅಡಿಯಲ್ಲಿ 300 ವಕ್ರಪಾದದ ಬಿಗಿಪಟ್ಟಿಗಳನ್ನು (ಕ್ಲಬ್‌ಫುಟ್ ಬ್ರೇಸ್) ನೀಡಿದೆ. ಬ್ಯಾಂಕ್‌ನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಅವರು ಎನ್‌ಜಿಒಗಳಿಗೆ ಬಿಗಿಪಟ್ಟಿಗಳನ್ನು ಹಸ್ತಾಂತರಿಸಿದರು. ಈ ವೇಳೆ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರಾದ ವಿ.ಎನ್. ಸರ್ಮಾ, ಪ್ರಫುಲ್ಲ ಕುಮಾರ್ ಜೆನಾ, ಲೇಖಾ ಮೆನನ್ ಇದ್ದರು

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

Digital ಪ್ರಜಾವಾಣಿ
ವ್ಯಾಲೆಂಟೈನ್ಸ್ ಡೇ ರೀಲ್ಸ್ ಸ್ಪರ್ಧೆಗೆ ಆಹ್ವಾನ
ವ್ಯಾಲೆಂಟೈನ್ಸ್ ಡೇ ಅಂಗವಾಗಿ 'ಪ್ರಜಾವಾಣಿ ಡಿಜಿಟಲ್' ವತಿಯಿಂದ ವಿಶೇಷ ರೀಲ್ಸ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಪ್ರೀತಿ, ಸ್ನೇಹ, ನಂಬಿಕೆ, ಸಂಬಂಧಗಳ ಮೌಲ್ಯ ಹಾಗೂ ಜೀವನದ ಸೌಂದರ್ಯವನ್ನು ಪ್ರತಿಬಿಂಬಿಸುವ ಸೃಜನಾತ್ಮಕ ರೀಲ್‌ಗಳನ್ನು ಆಹ್ವಾನಿಸಲಾಗುತ್ತಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತರು ತಮ್ಮ ಮೂಲ ಸೃಜನಾತ್ಮಕ ಮತ್ತು ಕುಟುಂಬ ಸ್ನೇಹಿ ರೀಲ್‌ಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸಬಹುದು. ಅಶ್ಲೀಲತೆ, ಹಿಂಸೆ, ದ್ವೇಷ ಭಾಷೆ, ಹಕ್ಕುಸ್ವಾಮ್ಯ ಉಲ್ಲಂಘನೆ ಅಥವಾ ಇತರರ ವಿಷಯದ ನಕಲು ಇರುವ ರೀಲ್‌ಗಳನ್ನು ಪರಿಗಣಿಸಲಾಗುವುದಿಲ್ಲ.
ಆಯ್ಕೆಯಾದ ರೀಲ್‌ಗಳನ್ನು ಪ್ರಜಾವಾಣಿ ಡಿಜಿಟಲ್‌ನ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಕಟಿಸಲಾಗುವುದು. ವಿಜೇತರಿಗೆ ವಿಶೇಷ ಗೌರವ/ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಸ್ಪರ್ಧೆಗೆ ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಾರ್ಥ್ ಕ್ಯಾಂಪಸ್ ಇವರ ಸಹಯೋಗವಿದೆ.
- ಪ್ರಥಮ ಬಹುಮಾನ ₹25 ಸಾವಿರ
- ದ್ವಿತೀಯ ಬಹುಮಾನ ₹20 ಸಾವಿರ
- ತೃತೀಯ ಬಹುಮಾನ ₹15 ಸಾವಿರ
ಜತೆಗೆ, 10 ಸಮಾಧಾನಕರ ಬಹುಮಾನಗಳು
ರೀಲ್ ಕಳುಹಿಸಲು ಫೆ.5 ಕೊನೆಯ ದಿನ
ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ಪ್ರೀತಿಯನ್ನು ಸಂಭ್ರಮಿಸಿ!
ರೀಲ್‌ಗಳನ್ನು ಕಳುಹಿಸಬೇಕಾದ ಇ-ಮೇಲ್
events.pvdigital@prajavani.co.in
ಕಳುಹಿಸುವವರು ತಮ್ಮ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು ನಮೂದಿಸಿ
ನಿಯಮ ಮತ್ತು ಷರತ್ತುಗಳಿಗೆ ಕೋಡ್ ಸ್ಕ್ಯಾನ್ ಮಾಡಿ

ಅಂಕಿತಾ ಅಮರ್

ಗಟ್ಟಿ ಕಥೆ, ಹಳಿ ತಪ್ಪಿಸಿದ ಚಿತ್ರಕಥೆ

'ಸರ್ವರಿಗೂ ಸಮಾನತೆ ಇರಬೇಕು' ಎಂಬ ಸಂವಿಧಾನದ ಮೂಲ ಆಶಯವನ್ನು ಎತ್ತಿಹಿಡಿಯುವ ಕಥೆ ಹೊಂದಿರುವ ಸಿನಿಮಾವಿದು. ಭೂ ಮಾಲೀಕರು ಮತ್ತು ಕೂಲಿ ಕಾರ್ಮಿಕ ವರ್ಗದ ನಡುವೆ ಭೂಮಿಗಾಗಿ ನಡೆಯುವ ಹೋರಾಟವೇ ಚಿತ್ರದ ಒಟ್ಟಾರೆ ಕಥೆ. 'ಕಾಂತಾರ', 'ಕಾಟೇರ' ರೀತಿಯದ್ದೇ ಎಳೆಯ ಚಿತ್ರವೆನಿಸಿದರೂ, ಇಲ್ಲಿ ಗಂಭೀರವಾದ ಕಥಾವಸ್ತುವನ್ನು ಅದೇ ಧ್ವನಿಯಲ್ಲಿಯೇ ದಾಟಿಸುವ ಯತ್ನವನ್ನು ನಿರ್ದೇಶಕ ಜಡೇಶ್ ಹಂಪಿ ಮಾಡಿದ್ದಾರೆ. ಆದರೆ ಕೆಲವಷ್ಟು ಅಮಾನವೀಯ ಘಟನೆಗಳು ಮತ್ತು ಅದಕ್ಕೆ ಉತ್ತರ ನೀಡುವ ಚಿತ್ರದ ನಾಯಕನ ಸುತ್ತಲೇ ಸುತ್ತುತ್ತ, ಹೊಸತೇನನ್ನೂ ಹುಡುಕದ ಚಿತ್ರಕಥೆ ಕೆಲವು ಕಡೆ ಜಾಳಾಗಿದೆ ಎನ್ನುವ ಭಾವನೆ ಮೂಡಿಸುತ್ತದೆ. ಪ್ರಾರಂಭದಲ್ಲಿ ಒಂದಷ್ಟು 'ವಾವ್' ಎನಿಸುವ ಅಂಶಗಳನ್ನು ಹೊಂದಿರುವ ಬರವಣಿಗೆ ಗುಣಮಟ್ಟ ಕುಸಿಯುತ್ತ ಕ್ಲೈಮ್ಯಾಕ್ಸ್ ಹೊತ್ತಿಗೆ ಹಳಿ ತಪ್ಪಿಬಿಡುತ್ತದೆ.

ಕೋಲಾರದ ಕಾಲ್ಪನಿಕ ಊರು ಹುಲಿದುರ್ಗ. ಅಲ್ಲೊಂದು ದುಡಿಯುವ ವರ್ಗ. ಅವರನ್ನು ಆಳುವ ಸಣ್ಣ ಧಣಿ. ಕುರಿ ಕದ್ದಿರುವುದಕ್ಕೆ ಕೂಲಿ ಕಾರ್ಮಿಕ ವರ್ಗದ ಹುಡುಗರನ್ನು ದಂಡಿಸುವ ಧಣಿಯ ದರ್ಪದಿಂದಲೇ ಸಿನಿಮಾ ಪ್ರಾರಂಭವಾಗುತ್ತದೆ. ಒಂದು ಸಮುದಾಯಕ್ಕೆ ಸೇರಿದ ಕೂಲಿಯವರನ್ನು ಮತ್ತೊಂದು ವರ್ಗದವರು ಅಮಾನವೀಯವಾಗಿ ನಡೆಸಿಕೊಳ್ಳುವುದು, ಅವರಿಂದ ಭೂಮಿ ಪಡೆದುಕೊಳ್ಳಲು ಈ ವರ್ಗದವರು ಹೋರಾಡುವುದೇ ಕಥೆ ಎಂಬುದು ಪ್ರಾರಂಭದಲ್ಲಿಯೇ ಗೊತ್ತಾಗಿಬಿಡುತ್ತದೆ. ಇಡೀ ಮೊದಲಾರ್ಧದ ಬರವಣಿಗೆ ಬಹಳ ಚೆಂದವಾಗಿದೆ. ಜತೆಗೆ ಅದನ್ನು ದೃಶ್ಯೀಕರಿಸಿದ ರೀತಿಯೂ ಅದ್ಭುತ. ಸಾಕಷ್ಟು ಕಡೆ ಕೂಲಿ ಕಾರ್ಮಿಕರಿಗೆ ಆಗುವ ಅವಮಾನಗಳು ನೋಡುಗನ ರಕ್ತ ಕುದಿಯುವಂತೆ ಮಾಡುತ್ತದೆ. ಕುಡುಕ ಗೋಪಾಲಕೃಷ್ಣ ದೇಶಪಾಂಡೆ, ಆತನ ಅಂಧ ಮಗಳ ಪುಟ್ಟಕಥೆ ಕಣ್ಣಂಚಿನಲ್ಲಿ ನೀರನ್ನೇ ತರಿಸುತ್ತದೆ. ಇಂಥ ಸಾಕಷ್ಟು ಸನ್ನಿವೇಶಗಳು ಚಿತ್ರದ ಮೊದಲಾರ್ಧದಲ್ಲಿ ಸಿಗುತ್ತವೆ.

ಈ ಊರಿನ ನಾಯಕ ರಾಚಯ್ಯ. ಹೆಂಡತಿ ನಿಂಗವ್ವ ಮತ್ತು ಮಗಳು ಭಾಗ್ಯಳೆ ಈತನ ಪ್ರಪಂಚ. ಕೊಡಲಿ ರಾಚಯ್ಯ ಎಂದೇ ಖ್ಯಾತಿ ಪಡೆದ ಈತನ ಕುರಿತು ಸಣ್ಣ ಧಣಿಗೂ ಒಂದು ಸಣ್ಣ ಭಯವಿರುತ್ತದೆ. ಆದರೆ ಎಷ್ಟೇ ಅವಮಾನವಾದರೂ ರಾಚಯ್ಯ ಮಾತ್ರ ಒಂದು ಹಂತದವರೆಗೂ ಸಿಡಿದೇಳುವುದಿಲ್ಲ. ಅದಕ್ಕೊಂದು ಕಾರಣವೂ ಇರುತ್ತದೆ. ಮೊದಲಾರ್ಧ ಮುಗಿಯುವ

ಲ್ಯಾಂಡ್‌ಲಾರ್ಡ್

- ನಿರ್ಮಾಣ: ಕೆ.ವಿ.ಸತ್ಯಪ್ರಕಾಶ್
- ನಿರ್ದೇಶನ: ಜಡೇಶ್ ಹಂಪಿ
- ತಾರಾಗಣ: ದುನಿಯಾ ವಿಜಯ್, ರಚಿತಾ ರಾಮ್, ರಾಜ್ ಬಿ. ಶೆಟ್ಟಿ, ರಿತನ್ಯ ವಿಜಯ್ ಮತ್ತಿತರರು

ಹೊತ್ತಿಗೆ ಶಸ್ತ್ರತ್ಯಾಗ ಮಾಡಿದ್ದ ರಾಚಯ್ಯ ಮತ್ತೆ ಕೊಡಲಿಯನ್ನು ಕೈಗೆತ್ತಿಕೊಂಡು ಸಣ್ಣ ಧಣಿಯ ವಿರುದ್ಧ ಹೋರಾಟಕ್ಕೆ ನಿಲ್ಲುತ್ತಾನೆ.

ರಾಚಯ್ಯ–ನಿಂಗವ್ವನ ಪುಟ್ಟ ಪ್ರಪಂಚ, ಇಡೀ ಊರಿನಲ್ಲಿ ಎಸ್ಸೆಸ್ಸೆಲ್ಸಿ ಪಾಸು ಮಾಡಿ ಕಾನ್‌ಸ್ಟೇಬಲ್ ಆಗಿರುವ ಭಾಗ್ಯ, ಆಕೆಯನ್ನು ಗಿಳಿಯಂತೆ ಸಾಕುವ ರಾಚಯ್ಯ, ಸಣ್ಣ ಧಣಿಯ ಐಷಾರಾಮಿ ಲೋಕ, ಭಾಗ್ಯ ಮತ್ತು ಆಕೆಯ ಪ್ರಿಯಕರ ದೇವಿಯೊಂದಿಗಿನ ಪ್ರೇಮ ಸಲ್ಲಾಪ ಮುಂತಾದವು ಮೊದಲಾರ್ಧವನ್ನು ನೋಡಿಸಿಕೊಂಡು ಹೋಗುತ್ತವೆ. ಆದರೆ ದ್ವಿತೀಯಾರ್ಧದಲ್ಲಿ ಹೋರಾಟದ ಕಿಚ್ಚು ಹೆಚ್ಚಿ, ಹೊಡೆದಾಟ, ಬಡಿದಾಟಗಳೇ ಆವರಿಸಿಕೊಂಡು ಭಾವನಾತ್ಮಕ ಅಂಶಗಳು ಕಣ್ಮರೆಯಾಗುತ್ತವೆ. ಆ ಊರಿನಲ್ಲಿ ಪೊಲೀಸ್ ಠಾಣೆಯಿದ್ದರೂ, ಅದರ ನಿಯಂತ್ರಕ ಸಣ್ಣ ಧಣಿ. ಅಂಥ ಹೊತ್ತಿನಲ್ಲೂ ತನ್ನ ಮೇಲಿನ ಅಧಿಕಾರಿಗಳ ಅನುಮತಿ ಪಡೆದು ಆತನನ್ನು ಬಂಧಿಸುವ ಭಾಗ್ಯ, ಕ್ಲೈಮ್ಯಾಕ್ಸ್‌ನಲ್ಲಿ ಪ್ರತಿಭಟಿಸಲಾಗದಂತೆ ಬಸವಿಯಾಗಲು ಕುಳಿತುಕೊಳ್ಳುವುದು ತರ್ಕರಹಿತ ಎನ್ನಿಸಿಬಿಡುತ್ತದೆ. ಖಳರ ಗುಂಪಿನಿಂದ ಮಾರಣಾಂತಿಕ ಹಲ್ಲೆಗೆ ಒಳಗಾದ ರಾಚಯ್ಯ ಕ್ಷಣಾರ್ಧದಲ್ಲಿ ಹೇಗೆ ಎದ್ದು ಬಂದ ಎಂಬುದು ತಿಳಿಯುವುದಿಲ್ಲ! ದ್ವಿತೀಯಾರ್ಧದಲ್ಲಿ ತರ್ಕವಿಲ್ಲದ ಇಂಥ ಅನೇಕ ಸಂಗತಿಗಳು ಚಿತ್ರಕಥೆಯ ಹಳಿ ತಪ್ಪಿಸಿಬಿಡುತ್ತದೆ.

ರಾಚಯ್ಯನಾಗಿ ದುನಿಯಾ ವಿಜಯ್ ಅಕ್ಷರಶಃ ತಾನೊಬ್ಬ ಅದ್ಭುತ ನಟ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಸಾಕಷ್ಟು ಅಭಿಮಾನಿಗಳನ್ನು ಹೊಂದಿರುವ ಮಾಸ್ ನಾಯಕ ಎಂಬುದನ್ನು ಪಕ್ಕಕ್ಕಿಟ್ಟು, ಪಾತ್ರವಾಗಿ ಚಪ್ಪಲಿಯಲ್ಲಿ ಏಟು ತಿನ್ನುತ್ತಾರೆ, ಚಪ್ಪಲಿ ಹಾರ ಹಾಕಿಸಿಕೊಳ್ಳುತ್ತಾರೆ. ಅಷ್ಟು ಶ್ರದ್ಧೆಯಿಂದ ಪಾತ್ರವನ್ನು ನಿಭಾಯಿಸಿದ್ದಾರೆ. ನಿಂಗವ್ವನಾಗಿ ರಚಿತಾ ರಾಮ್ ಕೂಡ ಪಾತ್ರವನ್ನು ಜೀವಿಸಿದ್ದಾರೆ. ಸಣ್ಣ ಧಣಿಯಾಗಿ ರಾಜ್ ಬಿ.ಶೆಟ್ಟಿ ನಟನೆಯಲ್ಲಿ ಶ್ರಮ ಹಾಕಿದ್ದಾರೆ. ಆದರೆ ಅವರ ಪಾತ್ರದ ಗತ್ತು, ಕೋಲಾರ ಭಾಗದ ಕನ್ನಡ ಅವರಿಗೆ ಒಗ್ಗಿಲ್ಲ. ಹೀಗಾಗಿ ಆ ಪಾತ್ರ ತುಸು ಕೃತಕ ಎಂಬ ಭಾವನೆ ಮೂಡಿಸುತ್ತದೆ. ರಾಚಯ್ಯನ ತಾಯಿಯಾಗಿ ಉಮಾಶ್ರೀ ಪಾತ್ರ ನೆನಪಿನಲ್ಲಿ ಉಳಿಯುತ್ತದೆ. ಭಾಗ್ಯ ಆಗಿ ರಿತನ್ಯ ವಿಜಯ್ ಅವರದ್ದು ಮೊದಲ ಸಿನಿಮಾ ಅನ್ನಿಸುವುದಿಲ್ಲ. ಶಿಶಿರ್ ಬೈಕಾಡಿ, ಗೋಪಾಲಕೃಷ್ಣ ದೇಶಪಾಂಡೆ ತೆರೆಯ ಮೇಲೆ ಇದ್ದಷ್ಟು ಹೊತ್ತು ತಮ್ಮ ಛಾಪು ಮೂಡಿಸುತ್ತಾರೆ.

ಸ್ವಾಮಿ ಜೆ.ಗೌಡ ಅವರ ಛಾಯಾಚಿತ್ರಗ್ರಹಣ ಸೊಗಸಾಗಿದೆ. ಅಜನೀಶ್ ಲೋಕನಾಥ್ ಅವರ ಹಿನ್ನೆಲೆ ಸಂಗೀತ ಸಾಕಷ್ಟು ಕಡೆ 'ಕಾಂತಾರ' ಚಿತ್ರದ ರಾಗಗಳನ್ನೇ ನೆನಪಿಸುತ್ತದೆ. ಭಾಗ್ಯ ಅಥವಾ ನಿಂಗವ್ವಳ ಮೇಲೆ ಕ್ಲೈಮ್ಯಾಕ್ಸ್ ಯೋಚಿಸಿ, ದ್ವಿತೀಯಾರ್ಧದ ಅವಧಿಯನ್ನು ತುಸು ತಗ್ಗಿಸಿದ್ದರೆ ಚಿತ್ರ ಇನ್ನೊಂದು ಹಂತಕ್ಕೆ ಹೋಗುವ ಸಾಧ್ಯತೆ ಇತ್ತು.

ನೋಡಬಹುದಾದ ಚಿತ್ರ

ವಿನಾಯಕ ಕೆ.ಎಸ್.

ಉದಯ ಕನ್ನಡಿಗ ಇಂದು ಪ್ರಸಾರ

ರಾಜ್ಯದ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಿದ 'ಉದಯ ಕನ್ನಡಿಗ–2025' ಪುರಸ್ಕಾರ ಕಾರ್ಯಕ್ರಮ ಉದಯ ವಾಹಿನಿಯಲ್ಲಿ ಜ.24 ಮತ್ತು ಜ.25ರ ಸಂಜೆ 6ಕ್ಕೆ ಪ್ರಸಾರವಾಗಲಿದೆ.

ನಟರಾದ ಶಿವರಾಜ್‌ಕುಮಾರ್, ಪ್ರಕಾಶ್ ರಾಜ್, ಡಾಲಿ ಧನಂಜಯ, ಶ್ರೀನಾಥ್, ಉಮಾಶ್ರೀ, ಸಾಧು ಕೋಕಿಲ, ಕವಿ ಬಿ.ಆರ್.ಲಕ್ಷ್ಮಣರಾವ್, ಪರಿಸರವಾದಿ-ಲೇಖಕ ಶಿವಾನಂದ ಕಳವೆ ಸೇರಿದಂತೆ ಹಲವರು ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಚಿತ್ರ ತಾರೆಯರಾದ ಅಂಕಿತಾ ಅಮರ್, ನಿಧಿ ಸುಬ್ಬಯ್ಯ, ರಚನಾ ಇಂದರ್, ಮೋಕ್ಷಾ ಕುಶಾಲ್, ಅನುಪಾ ರೈ, ಪೃಥ್ವಿ ಅಂಬಾರ್ ಈ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾರೆ. ಕನ್ನಡ ಭಾಷೆ, ಪರಂಪರೆ ಮತ್ತು ಕರ್ನಾಟಕದ ಅಭ್ಯುದಯಕ್ಕೆ ಕೊಡುಗೆ ನೀಡುತ್ತಿರುವ ಸಾಧಕರನ್ನು ಗೌರವಿಸುವ ಉದ್ದೇಶದಿಂದ ವಾಹಿನಿ ಈ ಪ್ರಶಸ್ತಿ ಆರಂಭಿಸಿದೆ.

ನಾವು ನೋಡಿದ ಸಿನಿಮಾ

ಅದೇ ಹಳೆ ಕಥೆ, ಹಾಡು!

ತೆಲುಗಿನ 'ಬೇಬಿ' ಮತ್ತು ಕನ್ನಡದ ಗಣೇಶ್ ನಟನೆಯ 'ಕೃಷ್ಣ' ಸಿನಿಮಾದ ಕಥೆಯ ಎಳೆ ತೆಗೆದು ಕೊಂಡು ತಮ್ಮ ಕಥೆ ಬರೆದು 'ಕಲ್ಟ್' ಸಿನಿಮಾ ತೆರೆಗೆ ತಂದಿದ್ದಾರೆ ನಿರ್ದೇಶಕರು. ಇಲ್ಲಿ ಹೊಸದೇನು ಇಲ್ಲ. ಅದೇ ಹಳೆಯ ಕಥೆ, ಅದೇ ವಿ.ವಿ ಸಾಗರ ಜಲಪಾತ! ಅದ್ದೂರಿತನ, ಮುಖಗಳಷ್ಟೇ ತೆರೆಗೆ ಹೊಸದು.



ಝೈದ್ ಖಾನ್

ಕಲ್ಟ್ (ಕನ್ನಡ)

- ನಿರ್ಮಾಣ: ಲೋಕೇಶ್ ಆರ್.
- ನಿರ್ದೇಶನ: ಅನಿಲ್ ಕುಮಾರ್
- ತಾರಾಗಣ: ಝೈದ್ ಖಾನ್, ಮಲೈಕಾ ಟಿ.ವಸುಪಾಲ್, ರಚಿತಾ ರಾಮ್, ರಂಗಾಯಣ ರಘು, ಅಚ್ಯುತ್ ಕುಮಾರ್, ಅಲೋಕ್ ಮತ್ತಿತರರು.

ಕಥೆಯುದ್ದಕ್ಕೂ ಫ್ಲ್ಯಾಶ್‌ಬ್ಯಾಕ್‌ಗಳೇ ತುಂಬಿಕೊಂಡಿದ್ದು, ಎಲ್ಲವೂ ನಿರೀಕ್ಷಿತ. 'ಮ್ಯಾಡಿ'(ಝೈದ್ ಖಾನ್) 'ಲವ್' ಎಂಬ ಪದ ಕೇಳಿದರೆ ಸಿಟ್ಟಿಗೇಳುವಾತ. ಪ್ರೀತಿಸಿದ ಹುಡುಗಿ ಕೈಕೊಟ್ಟ ಕಾರಣಕ್ಕೆ ಮದ್ಯದಲ್ಲೇ ಈಜುವಾತ. ಇಂತಹ ಸಂದರ್ಭದಲ್ಲಿ 'ಮ್ಯಾಡಿ' ಜೀವನಕ್ಕೆ 'ಚತಿಹಾಸಿನಿ'(ರಚಿತಾ ರಾಮ್) ಪ್ರವೇಶವಾಗುತ್ತದೆ. ಇದರಿಂದ 'ಮ್ಯಾಡಿ' ಕೃಷ್ಣಾಪುರ ಎಂಬ ಊರಿನಲ್ಲಿ 'ಮಾಧವ' ಎಂಬ ಕಾಲೇಜು ವಿದ್ಯಾರ್ಥಿಯಾಗಿದ್ದ ಕಾಲದ ಕಥೆ ತೆರೆದುಕೊಳ್ಳುತ್ತದೆ. 'ಗೀತಾ'ಳ (ಮಲೈಕಾ) ಪ್ರವೇಶವೂ ಆಗುತ್ತದೆ. ಇಲ್ಲಿಂದ ಕಥೆ ಭೂತಕಾಲ ಮತ್ತು ವರ್ತಮಾನದಲ್ಲಿ ಹೊರಳುತ್ತಾ ಸಾಗುತ್ತದೆ.

ಕಥೆಯ ಆರಂಭದಲ್ಲಿ ನಾಯಕನನ್ನು ಅದ್ದೂರಿಯಾಗಿ ತೋರಿಸಬೇಕು ಎನ್ನುವ ಕಾರಣಕ್ಕೆ ಅನವಶ್ಯಕ ಫೈಟ್ ಹಾಗೂ 'ಬ್ರೇಕ್ ಲವ್' ಎಂಬ ಹಾಡನ್ನು ಹಾಕಲಾಗಿದೆ. ಇದು ಸಿನಿಮಾ ಅವಧಿಯನ್ನು ಹೆಚ್ಚಿಸಿದೆ ವಿನಾ ಕಥೆಗೆ ಹೆಚ್ಚಿನ ಲಾಭವನ್ನೇನೂ ಉಂಟುಮಾಡಿಲ್ಲ. ಕಥೆಯು ಪ್ರತಿ ದೃಶ್ಯವೂ ನಿರೀಕ್ಷಿತವಾಗುತ್ತಾ ಸಿದ್ಧಸೂತ್ರದಲ್ಲೇ ಸಾಗುತ್ತದೆ. 'ಕೃಷ್ಣ', 'ಬೇಬಿ' ಸಿನಿಮಾಗಳ ದೃಶ್ಯಗಳ ಹೋಲಿಕೆಗಳ ಸರಣಿಯೇ ಇಲ್ಲಿದೆ. ನಾಯಕ ಉಡುಪಿಯಿಂದ ಮಣಿಪಾಲಕ್ಕೆ ಹೋಗುವುದನ್ನೇ ಬೇರೆ ಊರಿಗೇ ಹೋಗುವಂತೆ ತೋರಿಸಲಾಗಿದೆ. ರಚಿತಾ ರಾಮ್–ರಂಗಾಯಣ ರಘು ಪಾತ್ರದ ಕಥೆ ಚೆನ್ನಾಗಿದೆ. ಝೈದ್ ನಟನೆಯಲ್ಲಿ ಹೆಚ್ಚಿನ ಅಂಕ ಪಡೆಯುವ ಹಳ್ಳಿಯ ಕಥೆಗೆ ಜಾಸ್ತಿ ಪ್ರಾಶಸ್ತ್ಯವನ್ನೇ ನಿರ್ದೇಶಕರು ನೀಡಿಲ್ಲ. ಬರವಣಿಗೆಯಲ್ಲಿ ಇನ್ನಷ್ಟು ಗಟ್ಟಿತನವಿರಬೇಕಿತ್ತು. 'ಸರ್ಕಾರಿ ಹಿ.ಪ್ರಾ.ಶಾಲೆ ಕಾಸರಗೋಡು' ಸಿನಿಮಾದ 'ಹೇ ಶಾರದೆ' ಹಾಗೂ ಅಲ್ ಒಕೆಯ 'ಹ್ಯಾಪಿ' ಹಾಡನ್ನು ಯಥಾವತ್ತಾಗಿ ಬಳಸಿಕೊಳ್ಳಲಾಗಿದೆ.

ನಟನೆಯಲ್ಲಿ ರಚಿತಾ ರಾಮ್ 'ಚತಿಹಾಸಿನಿ' ಯಾಗಿ ಜೀವಿಸಿದ್ದಾರೆ. ಝೈದ್, ಮಲೈಕಾ, ರಂಗಾಯಣ ರಘು, ಅಚ್ಯುತ್ ಕುಮಾರ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. 'ಅಯ್ಯೋ ಶಿವನೇ' ಹಾಡು ಪಡ್ಡೆ ಪದೇ ಗುನುಗುವಂತಿದೆ. ಜೆ.ಎಸ್ ವಾಲಿ ಛಾಯಾಚಿತ್ರಗ್ರಹಣ ಈ ಹಾಡನ್ನು ಮತ್ತಷ್ಟು ಕಣ್ತುಂಬಿಕೊಳ್ಳುವಂತೆ ಮಾಡಿದೆ. ಸಿನಿಮಾ ನೋಡಿದ ಬಳಿಕ 'ಕಲ್ಟ್' ಎನ್ನುವ ಶೀರ್ಷಿಕೆ ಏಕಿಟ್ಟರು ಎನ್ನುವ ಪ್ರಶ್ನೆ ಮೂಡದೇ ಇರದು.

ಅಭಿಲಾಷ್ ಪಿ. ಎಸ್

'ಕೈ'ನಿಂದ ರಾಜಕೀಯ ನಾಟಕ

ಗವರ್ನರ್ ವಿರುದ್ಧ ಸಂಘರ್ಷ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ರಾಜ್ಯಪಾಲರ ವಿರುದ್ಧ 'ಗೋ ಬ್ಯಾಕ್ ಗವರ್ನರ್' ಸಂಘರ್ಷದಿಂದ ರಾಜ್ಯ ಕಾಂಗ್ರೆಸ್ ಏನು ಸಾಧಿಸುವುದಿಲ್ಲ. ಇದರಿಂದ ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆಯೇ? ಕೇವಲ ರಾಜಕೀಯ ನಾಟಕ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇಲ್ಲಿ ಟೀಕಿಸಿದರು.

ಎಚ್.ಡಿ. ಕುಮಾರಸ್ವಾಮಿ

ಮೇಲುಕೋಟೆ ಕ್ಷೇತ್ರದ ಶಿವಳ್ಳಿ ಗ್ರಾಮದಲ್ಲಿ ಶುಕ್ರವಾರ ಮಾರಮ್ಮ ದೇವಿ ದೇವಾಲಯ ಉದ್ಘಾಟನೆ ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

'ಕಾಂಗ್ರೆಸ್ ಈ ಹಿಂದೆ ರಾಜ್ಯಪಾಲರ ವಿಷಯದಲ್ಲಿ ಹೇಗೆ ನಡೆದುಕೊಂಡಿತ್ತು ಎಂಬುದನ್ನು ನೆನೆದರೆ ಇವರ ಬಣ್ಣ ಗೊತ್ತಾಗುತ್ತದೆ. ರಾಜ್ಯಪಾಲರು ಭಾಷಣ ಓದದಿರುವ ಮೊಟಕುಗೊಳಿಸಿದ ಘಟನೆ ಇದೇ ಮೊದಲಲ್ಲ. ಜೆ.ಎಚ್. ಪಟೇಲರು ಸಿ.ಎಂ ಆಗಿದ್ದಾಗ ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಆಗಿನ ಸಂದರ್ಭವನ್ನು ನೆನಪಿಸಿಕೊಳ್ಳಬೇಕು' ಎಂದರು.

'ಈ ಸರ್ಕಾರದಲ್ಲಿ ಹಲವು ಅಕ್ರಮಗಳು ನಡೆದಿವೆ. ಕಾನೂನು ಬಾಹಿರ ನಿರ್ಧಾರಗಳ ಬಗ್ಗೆ ಕ್ರಮ ಕೈಗೊಳ್ಳುವ ಅವಕಾಶ ಇದ್ದರೂ ಬೇರೆ ರಾಜ್ಯಗಳ ರಾಜ್ಯಪಾಲರಂತೆ ಇವರು ಸಂಘರ್ಷಕ್ಕೆ ಇಳಿದಿಲ್ಲ. ಕೇಂದ್ರ ಸರ್ಕಾರದೊಂದಿಗೆ ಈ ಸರ್ಕಾರ ವಿಶ್ವಾಸದಲ್ಲಿ ಇಲ್ಲ. ಇವರ ತಪ್ಪಿನಿಂದ ಕೆಲ ಹಣ ಹಿಂಪಡೆದಿದ್ದು ಯೋಜನೆಗಳು ವಾಪಸ್ ಹೋಗಿವೆ. ಇದಕ್ಕೆ ಹೊಣೆ ಯಾರು?' ಎಂದು ಪ್ರಶ್ನಿಸಿದರು.

ಬ್ರೋಕರ್ ಸರ್ಕಾರ: 'ರಾಜ್ಯ ಕಾಂಗ್ರೆಸ್ ಸರ್ಕಾರ ರೈತರ ಪರ ಇಲ್ಲ. ದಲ್ಲಾಳಿಗಳಿಗೆ ಲಾಭ ಮಾಡಿಕೊಡುವ ಬ್ರೋಕರ್ ಸರ್ಕಾರ. ರೈತರು ಹೆಚ್ಚು ಬೆಳೆ ಬೆಳೆದಾಗ ಸರ್ಕಾರ ಖರೀದಿ ಕೇಂದ್ರ ತೆರೆಯಲ್ಲ. ಅಂಥ ಸಂದರ್ಭದಲ್ಲಿ ಬೆಲೆ ಕುಸಿತವಾಗುತ್ತದೆ. ಖಾಸಗಿಯವರು ಬಂದು ಎಲ್ಲ ಬೆಳೆಯನ್ನೂ ಕಡಿಮೆ ಬೆಲೆಗೆ ಖರೀದಿಸಿದ ಮೇಲೆ ಖರೀದಿ ಕೇಂದ್ರಗಳನ್ನು ತೆರೆಯುತ್ತದೆ' ಎಂದು ಅವರು ಟೀಕಿಸಿದರು.

ಜನ ಬಯಸುವ ಕಡೆ ಸ್ಪರ್ಧೆ: ಎಚ್‌ಡಿಕೆ

'ರಾಜ್ಯ ರಾಜಕಾರಣಕ್ಕೆ ವಾಪಸ್ ಬರುತ್ತೀರಾ' ಎಂಬ ಪ್ರಶ್ನೆಗೆ, 'ಕರ್ನಾಟಕ ರಾಜ್ಯದ ಜನ ನನ್ನ ಪರಿವಾರ. ಜನರು ಎಲ್ಲಿ ಅಪೇಕ್ಷಿಸುತ್ತಾರೋ ಅಲ್ಲಿಂದ ಸ್ಪರ್ಧಿಸುತ್ತೇನೆ' ಎಂದು ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

'ಮಂಡ್ಯದಿಂದ ಲೋಕಸಭೆಗೆ ಸ್ಪರ್ಧಿಸುವ ಉದ್ದೇಶವಿರಲಿಲ್ಲ. ಸಿ.ಎಸ್. ಪುಟ್ಟರಾಜು ನನ್ನ ಆಯ್ಕೆಯಾಗಿದ್ದರು, ಅನಿವಾರ್ಯವಾಗಿ ಸ್ಪರ್ಧಿಸಿದೆ. ಸಂಸದನಾಗಿದ್ದೇನೆ, ಕೇಂದ್ರ ಮಂತ್ರಿ ಆಗಿದ್ದೇನೆ ಎಂದು ಗೊತ್ತಿರಲಿಲ್ಲ' ಎಂದರು.

ಮೈತ್ರಿ ಬಗ್ಗೆ ಅಂತಿಮ ತೀರ್ಮಾನ: 'ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೈತ್ರಿ ಇಲ್ಲ' ಎಂಬ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹೇಳಿಕೆಗೆ, 'ಜನರ ನಿರೀಕ್ಷೆಗೆ ತಕ್ಕಂತೆ ನಾವು ಮೈತ್ರಿ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ಹೇಳಿದರು.

ರಾಜೀವ್‌ಗೌಡ ಅಮಾನತು

ಶಿಡ್ಲಘಟ್ಟ: ನಗರಸಭೆ ಪೌರಾಯುಕ್ತೆ ಅಮೃತಾ ಅವರಿಗೆ ಬೆದರಿಕೆ ಹಾಕಿ, ಅವಾಚ್ಯ ಪದಗಳಿಂದ ನಿಂದಿಸಿದ ಆರೋಪ ಎದುರಿಸುತ್ತಿರುವ ಸ್ಥಳೀಯ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಕಾಂಗ್ರೆಸ್‌ನಿಂದ ಅಮಾನತು ಮಾಡಲಾಗಿದೆ.

ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ಶಿಫಾರಸಿನಂತೆ ಸಮಿತಿ ಅಧ್ಯಕ್ಷ ಕೆ.ರಹಮಾನ್ ಖಾನ್ ಈ ಕುರಿತು ಆದೇಶ ಹೊರಡಿಸಿದ್ದಾರೆ.

ಸಚಿವ ಜಮೀರ್ ಅಹಮದ್ ಅವರ ಪುತ್ರ ಝೈದ್ ಖಾನ್ ಅಭಿನಯದ ಕಲ್ಟ್ ಚಿತ್ರದ ಪ್ರಚಾರದ ಫ್ಲೆಕ್ಸ್ ತೆರವುಗೊಳಿಸಿದ ಹಿನ್ನೆಲೆಯಲ್ಲಿ ರಾಜೀವ್‌ಗೌಡ, ಪೌರಾಯುಕ್ತೆಗೆ ಬೆದರಿಕೆ ಹಾಕಿದ್ದರು.

ಮಾಲತಿ ಪಟ್ಟಣಶೆಟ್ಟಿ, ಸತೀಶ ಕುಲಕರ್ಣಿಗೆ ಅಂಬಿಕಾತನಯದತ್ತ ಪ್ರಶಸ್ತಿ

ಧಾರವಾಡ: ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್‌ನ 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ'ಗೆ ಸಾಹಿತಿಗಳಾದ ಧಾರವಾಡದ ಪ್ರೊ.ಮಾಲತಿ ಪಟ್ಟಣಶೆಟ್ಟಿ ಮತ್ತು ಹಾವೇರಿಯ ಸತೀಶ ಕುಲಕರ್ಣಿ ಅವರು ಆಯ್ಕೆಯಾಗಿದ್ದಾರೆ.

ಮಾಲತಿ ಪಟ್ಟಣಶೆಟ್ಟಿ

ಸತೀಶ ಕುಲಕರ್ಣಿ

ಪ್ರಶಸ್ತಿಯು ತಲಾ ₹ 50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಜ. 31ರಂದು ಬೇಂದ್ರೆ ಜನ್ಮ ದಿನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರ ಸರ್ಕಾರ ರಾಜ್ಯಪಾಲರುಗಳ ಮುಖಾಂತರ ರಾಜ್ಯಗಳ ಮೇಲೆ ದಮನಕಾರಿ ನೀತಿ ಅನುಸರಿಸುತ್ತಿದೆಯೇ?

•ಸರಿ •ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಇಂಧನ ಘಟಕ: ಸ್ವಯಂಚಾಲಿತ ಭೂಪರಿವರ್ತನೆ

ಒಂದನೇ ಪುಟದಿಂದ...

'ಇದರಿಂದ ಮಧ್ಯವರ್ತಿಗಳು ಲಾಭ ಪಡೆಯುತ್ತಿದ್ದರು. ಭ್ರಷ್ಟಾಚಾರ ಎಲ್ಲೆ ಮೀರಿತ್ತು. ಇದರಿಂದ ಅಧಿಕಾರಿಗಳು ಲಾಭ ಪಡೆದರೋ ಅಥವಾ ಮಧ್ಯವರ್ತಿಗಳು ಲಾಭ ಪಡೆದರೋ ಗೊತ್ತಿಲ್ಲ. ಆದರೆ, ಸರ್ಕಾರಕ್ಕೆ ಮಾತ್ರ ಕೆಟ್ಟ ಹೆಸರು ಬರುತ್ತಿತ್ತು' ಎಂದು ಹೇಳಿದರು.



ಕೃಷ್ಣ ಬೈರೇಗೌಡ

'ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಉದ್ದೇಶದಿಂದಲೇ ಈ ವ್ಯವಸ್ಥೆ ತರಲಾಗಿದೆ. ಪ್ರಮಾಣ ಪತ್ರದ ಆಧಾರದಲ್ಲಿ ಸ್ವಯಂಚಾಲಿತ ಭೂಪರಿವರ್ತನಾ ವ್ಯವಸ್ಥೆ ಕಾರ್ಯನಿರ್ವಹಿಸಲಿದೆ. ಇದನ್ನು ದುರುಪಯೋಗ ಮಾಡಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದೂ ನಿಯಮಗಳನ್ನು ರೂಪಿಸಲಾಗಿದೆ' ಎಂದು ವಿವರಿಸಿದರು.

'ನವೀಕರಿಸಬಹುದಾದ ಮೂಲಗಳ ವಿದ್ಯುತ್ ಉತ್ಪಾದನೆಯಲ್ಲಿ ಗುಜರಾತ್ ಮತ್ತು ರಾಜಸ್ಥಾನ ಮೊದಲ ಸ್ಥಾನದಲ್ಲಿವೆ ಎಂದು ದಾಖಲೆಗಳು ಹೇಳುತ್ತವೆ. ಅಲ್ಲಿ ಕೃಷಿ ಮತ್ತು ವಾಸ ಯೋಗ್ಯವಲ್ಲದ ಭೂಮಿಯಲ್ಲಿ ಅಂತಹ ಘಟಕಗಳನ್ನು ಸ್ಥಾಪಿಸಲಾಗಿದೆ. ಆದರೆ ಕರ್ನಾಟಕದಲ್ಲಿ ನಾವು ಕೃಷಿ ಭೂಮಿಯನ್ನು ಬಳಸಿಕೊಂಡೇ ಗಣನೀಯ ಪ್ರಮಾಣದಲ್ಲಿ ನವೀಕರಿಸಬಹುದಾದ ಮೂಲಗಳ ವಿದ್ಯುತ್ ಉತ್ಪಾದಿಸುತ್ತಿದ್ದೇವೆ' ಎಂದರು.

ವಿಡಿಯೊ ಹಂಚಿಕೆ ನೊಂದು ಆತ್ಮಹತ್ಯೆ

ಕಾರವಾರ: ಜಾಲತಾಣದಲ್ಲಿ ಹರಿದಾಡಿದ ವಿಡಿಯೊ ದೃಶ್ಯದಿಂದ ನೊಂದಿದ್ದ, ಖಾಸಗಿ ಸರ್ಕಾರಿ ಹೋಮ್‌ಗಾರ್ಡ್ ಸಿಬ್ಬಂದಿ ರಾಜೀವ ಪಿಕಳೆ (67) ಅಂಕೋಲಾ ತಾಲ್ಲೂಕಿನ ಮತಾಕೇರಿಯ ತಮ್ಮ ಮನೆ ಬಳಿ ತಲೆಗೆ ಗುಂಡುಹಾರಿಸಿ ಕೊಂಡು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ರಾಜೀವ ಪಿಕಳೆ

'ಈಚೆಗೆ ಅವರು ಮೀನಿನ ಔಷಧವನ್ನು ನೀಡಿದ್ದರು ಎಂದು ಆರೋಪಿಸಿ ವ್ಯಕ್ತಿಯೊಬ್ಬರು ರಾಜೀವ ಜೊತೆ ವಾಗ್ವಾದ ನಡೆಸಿದ್ದು, ದೃಶ್ಯವನ್ನು ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಮೃತರ ಸಹೋದರ ಡಾ.ನಿತಿನ್ ಪಿಕಳೆ ದೂರು ನೀಡಿದ್ದಾರೆ' ಎಂದು ಅಂಕೋಲಾ ಠಾಣೆ ಪೊಲೀಸರು ತಿಳಿಸಿದ್ದಾರೆ.

ನವ ವಿವಾಹಿತೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಸಿದ್ದೇಶ್ವರ ಕಾಲೊನಿ ನಿವಾಸಿ ಅನಸೂಯಾ ಆಕಡೆ (26) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅತ್ತೆಯ ಮಗ ಅವಿನಾಶ್ ಆಕಡೆ ಅವರನ್ನು ಅನಸೂಯಾ ಪ್ರೀತಿಸಿ, ಎರಡು ತಿಂಗಳ ಹಿಂದೆ ಮದುವೆಯಾಗಿದ್ದರು. ಎರಡು ಕುಟುಂಬಸ್ಥರ 2025ರ ನವೆಂಬರ್ 27ರಂದು ವಿವಾಹ ನಡೆದಿತ್ತು.

ಅನಸೂಯಾ ಆಕಡೆ

'ಕಾಲೇಜು ದಿನಗಳಿಂದಲೇ ಅವಿನಾಶನನ್ನು ಪ್ರೀತಿಸುತ್ತಿದ್ದಳು. ಎರಡು ತಿಂಗಳ ಹಿಂದೆ ಮದುವೆಯಾಗಿದ್ದಳು. ನನಗೆ ನಾಲ್ವರು ಹೆಣ್ಣು ಮಕ್ಕಳು. ಒಬ್ಬಳು ಗುಜರಾತ್, ಇನ್ನೊಬ್ಬಳು ಮುಂಬೈ, ಮತ್ತೊಬ್ಬಳು ಬೆಂಗಳೂರಿನಲ್ಲಿ ನೆಲಸಿದ್ದಾರೆ. ಸಹೋದರಿಯರು ದೊಡ್ಡ ನಗರಗಳಲ್ಲಿ ನೆಲೆಸಿದ್ದಾರೆ. ತಾನು ಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ ಎಂದು ಅನಸೂಯಾ ಬೇಸರ ವ್ಯಕ್ತಪಡಿಸಿದ್ದಳು. ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ' ಎಂದು ಅನಸೂಯಾ ಅವರ ತಂದೆ ದತ್ತು ಪಾಟೀಲ ಪ್ರತಿಕ್ರಿಯಿಸಿದ್ದಾರೆ.

22 ಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ

ವೀರಲೋಕ ಪುಸ್ತಕ ಸಂತೆಗೆ ಬೀದರ್ ಸಜ್ಜು

ಪ್ರಜಾವಾಣಿ ವಾರ್ತೆ

ಬೀದರ್: ನಗರದ ಸಾಯಿ ಶಾಲೆ ಮೈದಾನದಲ್ಲಿ ಜನವರಿ 24ರಿಂದ ಮೂರು ದಿನ 'ವೀರಲೋಕ ಪುಸ್ತಕ ಸಂತೆ' ನಡೆಯಲಿದ್ದು, 'ಜ್ಞಾನದಾಸೋಹ'ಕ್ಕೆ ಸಿದ್ಧತೆಗಳು ಪೂರ್ಣಗೊಂಡಿವೆ.

24ರಂದು ಬೆಳಿಗ್ಗೆ 10ಕ್ಕೆ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಚಾಲನೆ ನೀಡಲಿದ್ದಾರೆ. ರಾಜ್ಯದ ವಿವಿಧ ಭಾಗಗಳ ನೂರಕ್ಕೂ ಹೆಚ್ಚು ಸಾಹಿತಿಗಳು, 50ಕ್ಕೂ ಹೆಚ್ಚು ಪುಸ್ತಕ ಪ್ರಕಾಶನ ಸಂಸ್ಥೆಗಳವರು ಪಾಲ್ಗೊಳ್ಳಲಿದ್ದಾರೆ. ವೇದಿಕೆಯ ಪಕ್ಕದಲ್ಲಿ 50 ಪುಸ್ತಕ ಮಳಿಗೆಗಳು ತಲೆ ಎತ್ತಿದ್ದು, ಪುಸ್ತಕ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.



ಮೂರು ದಿನಗಳಲ್ಲಿ ಒಟ್ಟು 22 ಗೋಷ್ಠಿಗಳು ಜರುಗಲಿವೆ. 'ಮಹಿಳಾ ಸಾಹಿತ್ಯದಲ್ಲಿ ಮೌಲ್ಯಗಳು', 'ಹೊಸ ತಲೆಮಾರಿನ ಬರಹಗಾರರ ಬಿಕ್ಕಟ್ಟುಗಳು', 'ಸ್ತ್ರೀವಾದಕ್ಕೆ ಪರೀಕ್ಷೆ, ಗಳಲ್ಲಿ ಕನ್ನಡ', ವಿಜ್ಞಾನ–ತಂತ್ರಜ್ಞಾನ ಮತ್ತು ಸಾಹಿತ್ಯ', 'ಕಾಲದ ಎದುರು ನಿಂತ ಪದಗಳು' ಪ್ರಮುಖವಾದವು ಗಳು. ಗೋಷ್ಠಿ ಬಳಿಕ ಸಂವಾದ, ಚರ್ಚೆಗೂ ಅವಕಾಶ ಕಲ್ಪಿಸಲಾಗಿದೆ.

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ವಚನ ಗಾಯನ, ಜನಪದ ಗೀತ ಗಾಯನ, ಗಜಲ್ ಗಾಯನ, ಸಮೂಹ ನೃತ್ಯ ಕಾರ್ಯಕ್ರಮಗಳು ಜರುಗಲಿವೆ. ವೀರಲೋಕ ಬುಕ್ಸ್, ಭಾಲ್ಕಿ ಹಿರೇಮಠ ಸಂಸ್ಥಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

> ರಾಜ್ಯದ ಗಡಿ ಜಿಲ್ಲೆ ಬೀದರ್‌ನಲ್ಲಿ ಮೊದಲ ಬಾರಿಗೆ ಪುಸ್ತಕ ಸಂತೆ ಏರ್ಪಡಿಸಲಾಗಿದೆ. ಎಲ್ಲ ಜಿಲ್ಲೆಗಳಿಗೂ ಈ ಕಾರ್ಯಕ್ರಮ ವಿಸ್ತರಿಸುವುದು ನಮ್ಮ ಮುಖ್ಯ ಉದ್ದೇಶ
> **ವೀರಕಪುತ್ರ ಶ್ರೀನಿವಾಸ**
> ವೀರಲೋಕ ಬುಕ್ಸ್, ಬೆಂಗಳೂರು

> ಪುಸ್ತಕ ಸಂತೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಗೋಷ್ಠಿಗಳಿಗೆ ವೇದಿಕೆ, ಪುಸ್ತಕ ಮಳಿಗೆಗಳು ಸಿದ್ಧಗೊಂಡಿವೆ. ಜನ ಭಾಗವಹಿಸಿ ಜ್ಞಾನ ದಾಸೋಹ ಪಡೆಯಬೇಕು
> **ಗುರುನಾಥ ರಾಜಗೀರಾ**
> ಅಧ್ಯಕ್ಷ, ಪುಸ್ತಕ ಸಂತೆ

ನ್ಯೂಜಿಲೆಂಡ್ ವಿರುದ್ಧ ಅರ್ಧಶತಕ ದಾಖಲಿಸಿದ ಇಶಾನ್ ಕಿಶನ್ (ಎಡ) ನಾಯಕ ಸೂರ್ಯಕುಮಾರ್ ಯಾದವ್ ಎಎಫ್‌ಪಿ ಚಿತ್ರಗಳು

ಇಶಾನ್, ಸೂರ್ಯ ಅಬ್ಬರಕ್ಕೆ ಜಯ

ಟಿ20 ಕ್ರಿಕೆಟ್: ದಾಖಲೆ ವೇಗದಲ್ಲಿ ಗೆದ್ದ ಭಾರತ • ಸರಣಿಯಲ್ಲಿ 2–0 ಮುನ್ನಡೆ

ರಾಯಪುರ (ಪಿಟಿಐ): ಎಡಗೈ ಬ್ಯಾಟರ್ ಇಶಾನ್ ಕಿಶನ್ ಮಿಂಚಿನ ಇನಿಂಗ್ಸ್ ಆಡಿದರೆ, ನಾಯಕ ಸೂರ್ಯಕುಮಾರ್ ಯಾದವ್ ಅವರು ದೀರ್ಘಕಾಲದ ಬಳಿಕ ಸ್ಮರಣೀಯ ಆಟವಾಡಿದರು. ಇವರಿಬ್ಬರ ಭರ್ಜರಿ ಶತಕದ ಜೊತೆಯಾಟದ ನೆರವಿನಿಂದ ಭಾರತ ತಂಡವು ಶುಕ್ರವಾರ ನ್ಯೂಜಿಲೆಂಡ್ ವಿರುದ್ಧದ ಎರಡನೇ ಟಿ20 ಪಂದ್ಯವನ್ನು 'ದಾಖಲೆ ವೇಗದಲ್ಲಿ' ಗೆದ್ದುಕೊಂಡಿತು.

209 ರನ್‌ಗಳ ಗುರಿಯನ್ನು ಇನ್ನೂ 29 ಎಸೆತಗಳು ಉಳಿದಿರುವಂತೆ ಏಳು ವಿಕೆಟ್‌ಗಳಿಂದ ಗೆದ್ದ ಭಾರತ, ಐದು ಪಂದ್ಯಗಳ ಸರಣಿಯಲ್ಲಿ 2-0 ಮುನ್ನಡೆ ಸಾಧಿಸಿತು. ಟಿ20 ಕ್ರಿಕೆಟ್ ಇತಿಹಾಸದಲ್ಲಿ 200ಕ್ಕೂ ಅಧಿಕ ರನ್ ಗುರಿ ಇದ್ದಾಗ ಇದು ಅತಿವೇಗದ ರನ್‌ಚೇಸ್ ದಾಖಲೆ ಎನಿಸಿತು. ಅಲ್ಲದೆ, ಭಾರತದ ಯಶಸ್ವಿ ಗರಿಷ್ಠ ರನ್ ಚೇಸ್ ದಾಖಲೆಯೂ ಇದಾಗಿದೆ.

ಇಶಾನ್ (76; 32ಎ, 4x11, 6x4) ಮತ್ತು ಸೂರ್ಯಕುಮಾರ್ (ಔಟಾಗದೇ 82; 37ಎ, 4x9, 6x4) ಗೆಲುವಿನ ತೋರಣ ಕಟ್ಟಿದರು. ಮುಂಬರುವ ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಇಶಾನ್ ಅವರು ಮೂರನೇ ಕ್ರಮಾಂಕವನ್ನು ಭದ್ರಗೊಳಿಸುವ ಸಂದೇಶ ರವಾನಿಸಿದರು. ಲಯಕ್ಕೆ ಪರದಾಡುತ್ತಿದ್ದ ಸೂರ್ಯಕುಮಾರ್ 23 ಇನಿಂಗ್ಸ್‌ಗಳ ಬಳಿಕ (468 ದಿನಗಳ ನಂತರ) ಮೊದಲ ಅರ್ಧಶತಕ ದಾಖಲಿಸಿ ಸಂಭ್ರಮಿಸಿದರು.

6 ರನ್ ಗಳಿಸುವಷ್ಟರಲ್ಲಿ ಅಭಿಷೇಕ್ ಶರ್ಮಾ (0) ಮತ್ತು ಸಂಜು ಸ್ಯಾಮ್ಸನ್ (6) ಅವರನ್ನು ಕಳೆದುಕೊಂಡು ಭಾರತ ಆರಂಭದಲ್ಲೇ ಆಘಾತಕ್ಕೆ ಒಳಗಾಯಿತು. ಈ ಹಂತದಲ್ಲಿ ಇಶಾನ್ ಮತ್ತು ಸೂರ್ಯಕುಮಾರ್ ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 122 (49ಎ) ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿ ಕೊಂಡೊಯ್ದರು.

ವಿಶ್ವಾಸಭರಿತ ಆಟವಾಡಿದ ಇಶಾನ್ ಎದುರಾಳಿ ಬೌಲರ್‌ಗಳ ದಾಳಿಯನ್ನು ಪುಡಿಗಟ್ಟಿದರು. ಅವರ ನಿರ್ಗಮನದ ಬಳಿಕ ಸೂರ್ಯಕುಮಾರ್ ಅಬ್ಬರಿಸಿದರು. ಅವರು ಮತ್ತು ಶಿವಂ ದುಬೆ (ಔಟಾಗದೇ 36;18ಎ) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 81 (37ಎ) ರನ್ ಸೇರಿಸಿ ತಂಡವನ್ನು ದಡ ಸೇರಿಸಿದರು.

ಟಾಸ್ ಗೆದ್ದ ನಾಯಕ ಸೂರ್ಯ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಆರಂಭದಲ್ಲಿ ರಚಿನ್ ರವೀಂದ್ರ (44, 26 ಎಸೆತ) ಮತ್ತು ಕೊನೆಯ ಹಂತದಲ್ಲಿ ನಾಯಕ ಮಿಚೆಲ್ ಸ್ಯಾಂಟ್ನರ್ (ಅಜೇಯ 47, 27ಎಸೆತ) ಅವರ ಆಟದ ನೆರವಿನಿಂದ ನ್ಯೂಜಿಲೆಂಡ್ 6 ವಿಕೆಟ್‌ಗೆ 208 ರನ್ ಗಳಿಸಿತು.

ಡೆವಾನ್ ಕಾನ್ವೆ (19, 19ಎ) ಮತ್ತು ಬಿಗ್‌ಬ್ಯಾಷ್ ಲೀಗ್‌ನಲ್ಲಿ ಆಡಿ ಬಂದಿದ್ದ ಟಿಮ್ ಸೀಫರ್ಟ್ (24, 13ಎ) ಅವರು ಬಿರುಸಿನ ಆಟವಾಡಿ ಪ್ರವಾಸಿ ತಂಡಕ್ಕೆ ಉತ್ತಮ ಆರಂಭ ನೀಡಿದರು. ಆದರೆ ಇಬ್ಬರೂ 43ರ ಮೊತ್ತಕ್ಕೆ ನಿರ್ಗಮಿಸಿದರು.

ಬೂಮ್ರಾ ಅವರಿಗೆ ವಿಶ್ರಾಂತಿ ನೀಡಿದ ಕಾರಣ ಅವಕಾಶ ಪಡೆದ ಹರ್ಷಿತ್ ರಾಣಾ (35ಕ್ಕೆ1) ನಾಲ್ಕನೇ ಓವರಿನಲ್ಲಿ ದಾಳಿಗಿಳಿದು, ತಕ್ಷಣ ಯಶಸ್ಸು ಕಂಡರು. ವರುಣ್ ಚಕ್ರವರ್ತಿ ಮರು ಓವರಿನಲ್ಲಿ ಸೀಫರ್ಟ್ ಅವರ ವಿಕೆಟ್ ಪಡೆದರು.

ರಚಿನ್ ರವೀಂದ್ರ ಕೆಲವು ಆಕರ್ಷಕ ಹೊಡೆತಗಳನ್ನು ಪ್ರದರ್ಶಿಸಿದರು. ಆದರೆ ಕುಲದೀಪ್ ಅವರ ಸ್ಪಂಪ್‌ನಿಂದ ಆಚೆಯಿದ್ದ ಎಸೆತವನ್ನು ಆಡುವ ಭರದಲ್ಲಿ ಶಾರ್ಟ್ ಥರ್ಡ್‌ಮ್ಯಾನ್‌ನಲ್ಲಿ ಕ್ಯಾಚಿತ್ತರು. ಗಾಯಾಳು ವಾಷಿಂಗ್ಟನ್ ಸುಂದರ್ ಬದಲು ಅವಕಾಶ ಪಡೆದಿದ್ದ ಕುಲದೀಪ್ ಇದಕ್ಕೆ ಮೊದಲು ಗ್ಲೆನ್ ಫಿಲಿಪ್ಸ್ (19) ವಿಕೆಟ್ ಪಡೆದಿದ್ದರು.

ಒಂದು ಹಂತದಲ್ಲಿ 10 ಓವರುಗಳಲ್ಲಿ 3 ವಿಕೆಟ್‌ಗೆ 110 ರನ್ ಗಳಿಸಿದ್ದ ನ್ಯೂಜಿಲೆಂಡ್ ತಂಡ, ರವೀಂದ್ರ ಅವರು ನಿರ್ಗಮಿಸಿದಾಗ 5 ವಿಕೆಟ್‌ಗೆ 129 ರನ್ ಗಳಿಸಿದ್ದು, ಕುಸಿತದ ಭೀತಿಗೆ ಒಳಗಾಯಿತು. ಏಳನೇಯವರಾಗಿ ದಾಳಿಗಿಳಿದ ಶಿವಂ ದುಬೆ, ಉತ್ತಮ ಲಯದಲ್ಲಿರುವ ಡ್ಯಾರಿಲ್ ಮಿಚೆಲ್ ವಿಕೆಟ್ ಪಡೆದರು. ಆದರೆ ಸ್ಯಾಂಟ್ನರ್ ಅಜೇಯ ಆಟದಲ್ಲಿ ಒಂದು ಸಿಕ್ಸರ್, ಆರು ಬೌಂಡರಿಗಳನ್ನು ಬಾರಿಸಿದರು. ಝಾಕ್ ಫೌಲ್ಕ್ಸ್ (ಅಜೇಯ 15, 8ಎ) ಬೆಂಬಲ ನೀಡಿದರು. ಕೊನೆಯ ಐದು ಓವರುಗಳಲ್ಲಿ 57 ರನ್‌ಗಳು ಬಂದವು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರುಗಳಲ್ಲಿ 6 ವಿಕೆಟ್‌ಗೆ 208 (ಟಿಮ್ ಸೀಫರ್ಟ್ 24, ರಚಿನ್ ರವೀಂದ್ರ 44, ಮಿಚೆಲ್ ಸ್ಯಾಂಟ್ನರ್ ಔಟಾಗದೇ 47, ಹಾರ್ದಿಕ್ ಪಾಂಡ್ಯ 25ಕ್ಕೆ1, ಕುಲದೀಪ್ ಯಾದವ್ 35ಕ್ಕೆ2, ಶಿವಂ ದುಬೆ 7ಕ್ಕೆ1). ಭಾರತ: 15.2 ಓವರ್‌ಗಳಲ್ಲಿ 3 ವಿಕೆಟ್‌ಗೆ 209 (ಇಶಾನ್ ಕಿಶನ್ 76, ಸೂರ್ಯ ಕುಮಾರ್ ಯಾದವ್ ಔಟಾಗದೇ 82, ಶಿವಂ ದುಬೆ ಔಟಾಗದೇ 36). ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಗೆಲುವು. ಪಂದ್ಯದ ಆಟಗಾರ: ಇಶಾನ್ ಕಿಶನ್

ಪ್ರಜಾವಾಣಿ ಶನಿವಾರ • ಜನವರಿ 24, 2026

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

It is hereby notified that, my clients have agreed to purchase the Schedule Property from its owners namely, **Sri.P.M.RAGHU RAM S/o late P.Malleshaiah Gupta,** residing at No.27, Kesari Nilaya, Flat No.22, 2nd Floor, H.B.Samaja Road, Bangalore and his sister **Smt.P.M. ANANTHALAKSHMI,** residing at Villa No.16, NCC Urban Mistywoods, Nitte Meenakshi College Road, Vaderapura, Yelahanka, Bangalore 560064.

Apart from the said owners, if any other person/s have any manner of claim or interest or demand over the Schedule property or any part thereof by way of sale, lease, mortgage, gift, lien, charge, trust, maintenance, easement, pre-emption or otherwise howsoever, they are hereby requested to file their objection/s (along with the photocopies of the documents on which they are relying), with the undersigned within **14 days** from the date of publication of this notice. Objection/s received thereafter will not be binding on my clients.

SCHEDULE

All that piece and parcel of residential property bearing Municipal No.7 (Old No.4), PID No.49-52-7, E.PID No.6539274188, measuring on the Eastern Side 35 feet, Western side 37 feet, Northern side 97½ feet and Southern side 109½ feet, in all measuring 3726 Sq.ft., with an old house thereon, situated at Karnic Road, Shankarapuram, Bangalore and bounded on:

East by : Conservancy Lane
West by : Public Road
North by : House No.5 belonging to late Srinivasa Rao
South by : House No.3 belonging to late B.Neelakanta.

Sd/- **S.F. GOUTAM CHAND,**
Advocate,
GOUTAM ASSOCIATES,
No.60, 2nd Floor,
Old Kanakapura Road,
Basavanagudi,
Bengaluru - 560004

REAL ESTATE SELLING

Sites

Anjanapura

SALE BDA 30x40 Anjanapura 5th G Block South facing 40x60 west facing commercial site 2nd Block. 9620041313, 9945373839

Banashankari

"BANASHANKARI 6TH_STAGE 4th Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex. Call: 9845146725/ 9741466369"

BANASHANKARI 6TH Stage 10th Block 40X60 West Facing Price. 2.34 CR. Genuine Buyers: 9148914809/ 9993959099

SALE BSK 6th stage 4th B Block 40x60 west Facing 2.10Cr also 40x60 South Facing 6th Block 2.20cr Behind 100ft Road, all owners site 9945373839, 9620041313

Mysore Road

PRICE 2450SFT only. Mysore Road Near Christ College 60x90 E-Khatha Site Immediate Settlement. Call:9945173332

Hebbal

40X60
West Face SITE Sale
BBMP B KATHA
Nr Manyata Techpark
Near MANYATA TECHPARK Back Gate No.5(200m) P&T Layout, Rachenahalli. Ct: 9483114740/ 9962377428

Jakkur

JUDICIAL LAYOUT Site-For Sale 7850sft East Facing Plan Sanction 14th Main Road 22k per sft Slightly Negotiable Call:9845922769

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A Katha, Full White. Direct Owner: 9845249799/ 9845088449"

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGWODA LAYOUT 3rd Block "J"Sector Kommaghatta #2740 30x40 Site Sale.Ready to Construction ₹9750/-. 9742681666

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Hosur Road

14,200 SQ ft plot for sale Basapura village south Bangalore call Ganesh 9448477152 for info

Mysore

SALE. MUDA allotted residential sites each measuring 4000, 2400 sqft. Only serious buyers call: 8762018445

Nagarabhavi

"SALE: `D`GROUP 40`feet Road East 30x40 BDA khatha, Vishveshwaraiah 6th Block 30x40 East, 50x80 South. 9448733456/ 7259675150"

BDA G+2 House, 20x20 Pattegarapalya, Malagala, Nagarabhavi, 72 Lakhs Owner: 9739957911

Nelamangala

30X40 SITE Available Brundavana Layout Near Vishwashanti Aashram 200 Meter from Tumkur Road Arishinakunte: 9590009797

Sanjaynagar

30X40 BBMP E Katha W/F Site For Sale in Boopasandra Sanjay Nagar Price 16000/Sqft (Broker Excuse). Contact: 9620374404

Vishweshwariah Layout

VISHWESHWARAIAH LAYOUT BDA 6th Block, 20x30 West Facing, 30 Feet Road, Direct Owner Meeting: 6360050356

VISHWESHWARAIAH LAYOUT, BDA 7th Block 30x40 SF, Near RTO Office, Site No. 1476, Direct Owner Meeting: 9902956166

DIRECT OWNER Vishveswariah Layout 4th Block 30X40 N/F Full Development Area 8496030007/ 8310885235

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

BTM Layout

5888 SQFT BBMP E Katha S/F Site For Sale in BTM 4th Stage Devarchikanalli Price 11000/Sqft. Owner: 9620374404

House

Vishweshwariah Layout

"30X40 BDA ONE BHK, TWO BHK FOUR UNITS HOUSE SALE 5TH BLOCK VISHVESHWARAIAH LAYOUT. 9845143579"

Flat

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

Agricultural Land

Mysore Road

SALE CONVERTED Land 8000 Sqft, Ramangara Bangalore Mysore Highway, Just 100M, Fully Developed Ready Construction Rate 1250/ Sqft and Agriculture Land Sale 10,000/- Sqft Channapatna Rate 399/- Sqft 9845169300

Mysore

MYSORE NANJANGUDU 5acre and 10acre Land For Immediate Sale 25 Lakha only Per Acre: 9945173332

Ramanagar

AGRICULTURAL LANDS For Sale, 2-Acres on Mysore Highway Near Ramanagara 5.5Crore PerAcre. Clear Title. Contact- 9900115519

Agricultural Land Converted

Out-Station

HOSPETE (VIJAYANAGARA) For Sale 3.15Acres NA Land on Hospete-Bellary Main Road, Contact: 9448282243

Industrial & Factory

Out-Station

BUILT-TO-SUIT AVAILABLE
10 Acres Land
Fit For Warehouse / Industrial Construction
APIIC Industrial Area, Hindupur
Contact: Ravi
63662 36307

Doddabalapur

RENT PREMIUM Industrial Building at Doddaballapur Industrial Area 26,000Sft fully Insulated PEB building on 1.5 Acre plot with 1000 KVA Transformer 200 KVA power Fire Hydrant Sprinkler System & Fire Alarm Includes 4000Sft Ready to use Office Setup Security maintenance room & Canteen Open Space for Utilities and parking Ph: 9739976101/02

Magadi Road

MAGADI ROAD near RSS BHAVAN,CHANNENALLI INDUSTRIAL AREASALE 6-GUNTAS,8-GUNTAS,SITES all 40feet-road. Contact:9845059407

Peenya

SALE/ RENT. KIADB/ KSSIDC. Peenya..Commercial Building/ Industrial Shed and Land available. 'BRUNDANA REALESTATE' 9880434915

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Machines (Electrical) for sale.

Contact:
6360605636 / 8431164733

New Building with 65 Rooms For Rent
near **MANYATA TECH PARK**
for Company Guest House
for Student Hostel
for Lodging
for PG
Attached Bath and Ample Car Parking
Contact
98450 08811

Residential/ Commercial

Hoskote

SALE 6000SQFT @4000/sqft Hoskote-Malur hwy, 1Km from STRR, DC Converted, Residential area,BMTC route, Call: +918317463442

Outer Ring Road

ORR(SUMANAHALLI-LAGGARE BRIDGE) Corner Commercial Site 2,800 Sft. 'A'&'E' Khatha facing ORR at Chowdeshwarinagar Call:9980555558

Commerical

Malleshwaram

SALE/ RENT 1900sqft showroom space basement, with excellent visibility, clear titles 3.60 Cr/ 90/sft Negotiable 6th cross Malleshwaram. 9845397832.

RENTAL PROPERTIES

Accommodation Available

Commercial

FOR RENT/ SALE Fully Furnished Office 3rd Floor Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

FURNISHED OFFICE, JPNagar Ring Road (above SBI) 42-workstations, 4-cabins, Conference, Parking. Ph-8310855914, 9448482016

House

RENT: GIRINAGAR 2BHK, Puja Room, Dining, Hall. Ist Floor, with amenities. Contact: OWNER: 78925-30410/ 94488-09902.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Multiple Locations

WANTED BDA Sites Anjanapura-Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

VAARAHI VIVAREA
RERA NO: PRM/KA/RERA/1251/310/PR/261124/007247
CC & OC PROJECT | NO COMMON WALLS | 100% VASTU | 168 UNITS
2BHK 1125-1185 Sq.ft | 3BHK 1390-1665 Sq.ft | 5 Floors

For Booking Contact: 78921 99941 70191 96747
Project Address : **Near Rajarajeswari Medical College, Good Earth Malhar Villas Road,** Opp: Challagatta Metro Station, Mysore Road, Bangalore-60

Yellarigu Swagatha
Namma Karigaru, Namma Parampara
Book Your Pass
2026
Karigar Bazaar
SECOND EDITION
17–26 January | 11am - 8pm
What's New This Year?
200+ master artisans from across India • Handlooms • Folk art • Jewellery • Home décor • Live craft demonstrations • Cultural evenings • Regional food
Every piece is handmade. Every story is heartfelt. Come, experience the warmth of India's crafts.
Join us to celebrate craft, culture and community — together, once again.
Jayamahal Palace Hotel,
#1, Near Cantonment Railway Station Road, Bengaluru
Entry: ₹100 | Free Parking | Pet-Friendly | Mob: +91 87883 49654

BUSINESS

Business to Business

Finance

FINANCE
Property Collaterals Available in HYDERABAD
9154136496

Business Offers

Distributors

JNNFOODS LOOKING for Distributors & Wholesellers in Karnataka for FMCG Food products. Attractive margin. 8951344539

Finance

MSME LOAN Available for Any Start-Ups Companies And Existing Running Companies Hotels,Shops Establishments Etc. Contact- 7204995189.

JOB OPPORTUNITIES

Wanted

BE(CIVIL) GRADUATE 5 YEARS Experience Ready Mix Concrete QA/QC/MARKETING Athani Associates Shivamogga 9886721202

PERSONAL

Change of Name

CHANGE OF NAME
I, **NOOR MOHAMED MASIVEER** S/o. Late. Nazeer Ahamed R/o Mayasandra Village, Mayasandra Hobli, Turuvekere Taluk, Tumkur District, Pin- 572227 have changed my Name as **MOHAMMED TANVIR** vide affidavit dated: 23.01.2026 before Notary Shilpa.V. Turuvekere.

CHANGE OF NAME
I, **MARIYAJENNIFER D,** D/o David, resident of No. 223, B.G. Pura Hobli, Malavalli Taluk, Malliyathanahalli, Sivasamudram, Mandya Dist Pin Code - 571437, have changed my name to **MARIYA JENNIFER D** & declare that in my school records father's name & mother's name is mentioned as Jospinrabeka & Devid R & correct names are **JOSEPHINE REBECCA & DAVID R** vide affidavit dated 22-08-2025 before notary B Prasanna, Bengaluru.

CHANGE OF NAME
I, **SUSHEELA CHOWDARY NARA** and **AMILINENI SUSEELAMMA,** residing at No.11, Omkara Nilaya, Brindavan Layout, Kanaka Nagar, K Channasandra, Horamavu Post, Bengaluru –560043, declare that the above name pertain to me only. Henceforth I shall be known as **SUSHEELA CHOWDARY NARA,** vide affidavit dt. 23-01-2026 before notary B.Seshagiri, Bengaluru.

CHANGE OF NAME
I, **LAXMAN CHOWDARY NARA** and **NARLA LAXMAN CHOWDARY,** residing at No.11, Omkara Nilaya, Brindavan Layout, Kanaka Nagar, K Channasandra, Horamavu Post, Bengaluru –560043, declare that the above name pertain to me only. Henceforth I shall be known as **LAXMAN CHOWDARY NARA,** vide affidavit dt. 23-01-2026 before notary B.Seshagiri, Bengaluru.

I, HANSIKA D/o.Manjunatha Reddy R/a#136/1, Vasista Building,Old Post Office Road,KR.Puram Bangalore 560036 Have_changed my`Name_to HANSIKA MANJUNATH_REDDY vide`affidavit dated:22.1.2026 before`Notary S.Subashini, Bangalore.

I, VASUDEVAN, have changed my name to VASUDEVAN J, vide affidavit dated 23/01/2026 before notary M. Rajendra, Bangalore.

I, JACOB Kuruvilla, residing at No.209, 8th D Main, 1st Block, HRBR Layout, Banaswadi, Bangalore-560043, do hereby declare that my son's name has been changed from JOSH JACOB T to JOSH JACOB THOTTATHIL vide affidavit dated 18.11.2025, sworn before Notary Y.R. Chandrashekar, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY - ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

DH DECCAN HERALD Classifieds More value, more impact
ಪ್ರಜಾವಾಣಿ
RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 825/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9845114560
+91 9900428036
+91 9731810277
+91 9886213331
080- 45557163/164
* Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS MAX Sky Blossom
UNFOLD HAPPINESS...

UNFOLD

Accessibility, Connectivity & Luxurious Amenities
5 Mins - Singasandra Metro Station **(YELLOW LINE)**

DS MAX®

PRM/KA/RERA/1251/310/PR/210324/006724

ಡಿಎಸ್ ಮ್ಯಾಕ್ಸ್ ಸ್ಕೈ ಬ್ಲಾಸಮ್

Live At The Epicenter of Ease

Experience The Ultimate Urban Lifestyle Surrounded by Metro Stations, IT Parks, Top Universities and Premier Shopping.

Prime Living at **BEGUR**

10 MINS. FROM CENTRAL SILK BOARD & MADIWALA

SUPER-LUXURIOUS 2 & 3-BHK

BBMP APPROVED | G+14 FLOORS

2-BHK HOMES @ ₹87.62L*

3-BHK HOMES @ ₹1.04Cr*

8880 013 310

www.dsmaxproperties.com

2, 3 & 4-BHK APARTMENTS FOR SALE IN VARIOUS LOCATIONS

RERA	Location	Floors	Details	Price	Phone
PRM/KA/RERA/1251/308/PR/291225/008366	HOSUR ROAD	G+22	10 MINS. ELECTRONIC CITY	₹ 60.30 - 98.70 Lakhs*	8880 003 003
PRM/KA/RERA/1250/304/PR/251024/007179	WHITEFIELD	G+14	10 MINS. HOPE FARM METRO STN.	₹ 77.91 L - 1.32 Cr*	8880 461 461
PRM/KA/RERA/1251/472/PR/250225/007524	AIRPORT ROAD	G+14	NEAR PRESTIGE TECH IT PARK	₹ 87.89 L - 1.21 Cr*	8880 465 465
PRM/KA/RERA/1251/310/PR/150223/005721	MYSORE ROAD	G+14	NEAR CHALLAGHATTA METRO STN.	₹ 67.28 - 95.28 Lakhs*	8880 461 461
PRM/KA/RERA/1251/308/PR/281125/008287	JIGANI	G+14	5 MINS. APC CIRCLE	₹ 58.45 - 92.06 Lakhs*	8880 003 003
PRM/KA/RERA/1251/310/PR/151223/006489	BANASHANKARI	G+3	OPP. NPS SCHOOL (3 & 4-BHK)	₹ 1.45 - 2.17 Cr*	8880 461 461
PRM/KA/RERA/1250/301/PR/251024/007178	YELAHANKA	G+14	5 MINS. RAJANUKUNTE	₹ 54.85 - 97.21 Lakhs*	8880 465 465
PRM/KA/RERA/1251/308/PR/160824/006973	BANNERGHATTA RD.	G+14	NEAR KOPPA GATE	₹ 62.42 - 82.18 Lakhs*	8880 013 310
PRM/KA/RERA/1251/308/PR/290122/004660	SARJAPURA	G+4	SARJAPUR - ATTIBELE ROAD	₹ 63.60 - 83.25 Lakhs*	8880 003 003
PRM/KA/RERA/1251/308/PR/160824/006972	HOSA ROAD METRO	G+4	NEAR ELECTRONIC CITY	₹ 67.92 L - 1.34 Cr*	8880 013 310
PRM/KA/RERA/1250/304/PR/150224/006622	WHITEFIELD	G+14	SOUKYA ROAD	₹ 70.65 L - 1.06 Cr*	8880 461 461

Visit our website or talk to our advisors for the complete portfolio

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment

9164 022 000

INTERIORS

We design and style your home.

9164 056 000

REFER A DS MAX HOME

Refer a buyer to earn big

9164 043 000

REFER A LAND TO DS MAX

Offer a Land, Get a Home.

8880 463 463

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331